ವಿಶ್ವವಾಣಿ
ವಿಶ್ವಾಸವೇ ವಿಶ್ವ

ತೆಂಡುಲ್ಕರ್‌ಗೆ ಬಿಸಿಸಿಐ ಸಾರಥ್ಯ?
ಸೆ.28ರಂದು ಬಿಸಿಸಿಐ ಸರ್ವ ಸದಸ್ಯರ ಸಭೆ ನಡೆಯಲಿದ್ದು ಸಚಿನ್ ತೆಂಡುಲ್ಕರ್ ಬಿಸಿಸಿಐ ಮುಂದಿನ ಅಧ್ಯಕ್ಷರಾಗುವ ನಿರೀಕ್ಷೆಗಳಿವೆ.

ಸೊಂಪಾದ ಪುಟಗಳು



ಗೆಲ್ಲುವ ತನಕ ಹೋರಾಡದಿದ್ದರೆ, ಸೋಲುವ ಹೊತ್ತಿಗೆ ಅದಿರುವುದಿಲ್ಲ
ನೂರೆಂಟು ವಿಶ್ವ
ವಿಶ್ವೇಶ್ವರ ಭಟ್ 6

ಜೆನ್ ಝೀ ಮಕ್ಕಳಿಂದ ಒಂದು ಪ್ರೇಮ ಪತ್ರ
ಕಾಡುದಾರಿ
ಹರೀಶ್ ಕೇರ 7

ದಾರಿದೀಪೋಕ್ತಿ

ವಾದ ಮಾಡುವ ನಿಮ್ಮ ಸಾಮರ್ಥ್ಯದ ಮೇಲೆ ನಂಬಿಕೆಯಿದ್ದರೂ ಮೌನದ ಮೇಲೆ ಹೆಚ್ಚು ನಂಬಿಕೆಯಿರಲಿ. ದೇವರ ಮೇಲೆ ಅಪಾರ ನಂಬಿಕೆಯಿದ್ದರೂ ನಿಮ್ಮ ಪರಿಶ್ರಮ ಮತ್ತು ಪ್ರಯತ್ನದ ಮೇಲೆ ಹೆಚ್ಚು ನಂಬಿಕೆಯಿರಲಿ.

ವಕ್ರತುಂಡೋಕ್ತಿ

ತಾಯಿಯಾಗುವುದು ಸುಲಭವಲ್ಲ. ಸುಲಭವಾಗಿದ್ದರೆ, ತಂದೆಯರು ಅದನ್ನು ಸಂತೋಷದಿಂದ ಮಾಡುತ್ತಿದ್ದರು.

ನಿವೃತ್ತ ನ್ಯಾಯಮೂರ್ತಿ ಸುಶೀಲಾ ಕರ್ಕಿ ನಾಯಕತ್ವಕ್ಕೆ ನೆಟ್ಟಿಗರ ಬೆಂಬಲ
ಪರಿಸ್ಥಿತಿ ಶಾಂತ | ದೇಶಾದ್ಯಂತ ಕರ್ಫ್ಯೂ | ಸಾವಿನ ಸಂಖ್ಯೆ 30ಕ್ಕೆ ಏರಿಕೆ

ಸೇನೆ ವಶಕ್ಕೆ ನೇಪಾಳ

ಕಠ್ಮಂಡು: ನೇಪಾಳದ ಸೇನೆ ಅರಾಜಕತೆಯಲ್ಲಿ ಸಿಲುಕಿರುವ ದೇಶದ ಚುಕ್ಕಾಣಿಯನ್ನು ಕೈಗೆ ತೆಗೆದುಕೊಂಡಿದ್ದು, ರಾಷ್ಟ್ರಾದ್ಯಂತ ಭುಗಿಲೆದ್ದ ಹಿಂಸಾಚಾರ ಬುಧವಾರ ನಿಯಂತ್ರಣಕ್ಕೆ ಬಂದಿದೆ. ದೇಶವ್ಯಾಪಿ ಕರ್ಫ್ಯೂ ಜಾರಿಯಲ್ಲಿದೆ. ಈ ನಡುವೆ ಆನ್‌ಲೈನ್‌ನಲ್ಲಿ ಸಭೆ ನಡೆಸಿದ ಜೆನ್ ಝಿ ಹೋರಾಟಗಾರರು ಬುಧವಾರ ನೇಪಾಳದ ಸರ್ವೋಚ್ಚ ನ್ಯಾಯಾಲಯದ ನಿವೃತ್ತ ಮುಖ್ಯ ನ್ಯಾಯಮೂರ್ತಿ ಸುಶೀಲಾ ಕರ್ಕಿ (72) ಅವರನ್ನು ಮಧ್ಯಂತರ ನಾಯಕಿಯನ್ನಾಗಿ ಆಯ್ಕೆ ಮಾಡಿದ್ದಾರೆ. 5000 ಮಂದಿ ಆನ್‌ಲೈನ್‌ನಲ್ಲಿ ನಡೆಸಿದ ಸಭೆಯಲ್ಲಿ ದೇಶದ ಮಧ್ಯಂತರ ಸರಕಾರದ ಮುಖ್ಯಸ್ಥ ಹುದ್ದೆಗೆ ಕರ್ಕಿ ಅವರನ್ನು ಆಯ್ಕೆ ಮಾಡಿದ್ದಾರೆ. ಆದರೆ ಒಂದು ವೇಳೆ ಸುಶೀಲಾ ಕರ್ಕಿ ಈ ಸ್ಥಾನಕ್ಕೆ ಒಪ್ಪಿಕೊಂಡರೆ ಅವರು ಸೇನಾ ಮುಖ್ಯಸ್ಥ ಅಶೋಕ್ ಸಿಗ್ಡೆಲ್‌ರನ್ನು ಭೇಟಿ ಮಾಡಿ ಬೆಂಬಲ ಪಡೆಯಬೇಕಾಗುತ್ತದೆ. ಈ ಬಗ್ಗೆ ಇನ್ನೂ ಸಹಮತ ಮೂಡಿಲ್ಲ.

ಸಾಮಾಜಿಕ ಜಾಲ ತಾಣಗಳ ಮೇಲಿನ ನಿಷೇಧ ದಿಂದ ಶುರುವಾಗಿ, ಭ್ರಷ್ಟಾಚಾರದ ವಿರುದ್ಧ ದನಿಯಾಗಿ ಬದಲಾದ ಜೆನ್ ಝಿ ತಲೆಮಾರಿನ ಹೋರಾಟದ ತೀವ್ರತೆ ಬುಧವಾರ ತುಸು ತಗ್ಗಿತ್ತು. ಹಿಂಸಾಚಾರದಲ್ಲಿ 30ಕ್ಕೂ ಅಧಿಕ ಮಂದಿ ಮೃತಪಟ್ಟಿದ್ದಾರೆ. ರಾಜೀನಾಮೆ ನೀಡಿದ ಪ್ರಧಾನಿ ಕೆ.ಪಿ.ಶರ್ಮಾ ಓಲಿ ಅವರು ಅಡಗುದಾಣ ಸೇರಿ ಕೊಂಡಿದ್ದಾರೆ. ಸದ್ಯ ಇಡೀ ದೇಶದಲ್ಲಿ ಎಲ್ಲ ಕಡೆ ಯೋಧರು ಬಂದೂಕು ಹಿಡಿದು ತಿರುಗುತ್ತಿದ್ದಾರೆ ಎಂದು ಮೂಲಗಳು ವರದಿ ಮಾಡಿವೆ.

ಲಕ್ಷಾಂತರ ಯುವಕರು ಸೋಮವಾರ ಮತ್ತು ಮಂಗಳವಾರ ನೇಪಾಳದಲ್ಲಿ ಭಾರೀ ಪ್ರಮಾಣ ದಲ್ಲಿ ತೀವ್ರ ಹೋರಾಟ ನಡೆಸಿದ್ದರು.

→ 4



ಕನ್ನಡ ನಂಟಿನ ಮೇಯರ್‌ಗೆ ಬೆಂಬಲ

ಬೆಳಗಾವಿಯಲ್ಲಿ ಎಂಟೆಕ್ ಪಡೆದು, ಕಠ್ಮಂಡು ಮೇಯರ್ ಆಗಿರುವ ಬಲೇಂದ್ರ ಶಾ ಅವರನ್ನು ಪ್ರಧಾನಿ ಸ್ಥಾನಕ್ಕೆ ಆಯ್ಕೆ ಮಾಡಲು ಯುವಪಡೆ ಉತ್ಸಾಹ ತೋರಿಸಿದೆ. ಆದರೆ ಶಾ ನ್ಯಾಯಮೂರ್ತಿ ಕರ್ಕಿ ಅವರ ಉಮೇದುವಾರಿಕೆಗೆ ಬೆಂಬಲ ಸೂಚಿಸಿದ್ದಾರೆಂದು ಮೂಲಗಳು ಹೇಳಿವೆ. ಆರಂಭದಲ್ಲಿ ಬಲೇಂದ್ರ ಶಾ ಹೆಸರೇ ನಾಯಕತ್ವಕ್ಕೆ ಮುಂಚೂಣಿಯಲ್ಲಿತ್ತು. ಸಹಮತ ಮೂಡದಿದ್ದಾಗ ಶಾ ಅವರು ಕರ್ಕಿ ಅವರ ಬೆಂಬಲಕ್ಕೆ ನಿಂತಿದ್ದಾರೆ. ನಿವೃತ್ತ ನ್ಯಾಯಮೂರ್ತಿ ಕನಿಷ್ಠ 1000 ಮಂದಿಯ ಬೆಂಬಲವಿರುವ ಪತ್ರ ಬೇಕೆಂದು ಹೇಳಿದ್ದರು. ಆದರೆ ಆಕೆಗೆ 2500ಕ್ಕೂ ಅಧಿಕ ಮಂದಿಯ ಸಹಿ ಸಿಕ್ಕಿದೆ ಎಂದು ಹೇಳಲಾಗಿದೆ.

ಯಾರೀ ಸುಶೀಲಾ?

- ಬನಾರಸ್ ಹಿಂದೂ ವಿವಿ ಎಂ.ಎ. ಪದವೀಧರೆ
- ನೇಪಾಳ ಸುಪ್ರೀಮ್ ಕೋರ್ಟ್‌ನ ಮೊದಲ ಮಹಿಳಾ ಮುಖ್ಯ ನ್ಯಾಯಮೂರ್ತಿ
- ಚುನಾವಣೆ ವಿವಾದ ಪರಿಹಾರಕ್ಕೆ ಮಹತ್ವದ ತೀರ್ಪು ನೀಡಿದ್ದ ಜಡ್ಜ್

ಮದ್ದೂರಿನಲ್ಲಿ ಅದ್ದೂರಿ ಶೋಭಾಯಾತ್ರೆ | ಬಿಜೆಪಿ, ಜೆಡಿಎಸ್ ಸಾಥ್
ಸಾವಿರಾರು ಜನರ ಮೆರವಣಿಗೆಯೊಂದಿಗೆ ಗಣಪತಿ ವಿಸರ್ಜನೆ

ಕಲ್ಲೇಟಿಗೆ ತಿರುಗೇಟು

ಮಂಡ್ಯ: ಬೂದಿ ಮುಚ್ಚಿದ ಕೆಂಡವಾಗಿರುವ ಮದ್ದೂರಿನಲ್ಲಿ ಬುಧವಾರ ಹಿಂದೂ ಸಂಘಟನೆಗಳು ಕರೆ ನೀಡಿದ್ದ ಶೋಭಾಯಾತ್ರೆಯಲ್ಲಿ ಸಾವಿರಾರು ಹಿಂದೂ ಕಾರ್ಯಕರ್ತರು ಹಾಗೂ ಬಿಜೆಪಿ ನಾಯಕರು ಭಾಗವಹಿಸುವ ಮೂಲಕ ಶಕ್ತಿ ಪ್ರದರ್ಶನ ಮಾಡಿದರು. ಈ ಮೂಲಕ ಸೋಮವಾರ ಗಣಪತಿ ವಿಸರ್ಜನೆ ವೇಳೆ ಕಲ್ಲೆಸೆದಿದ್ದ ಕಿಡಿಗೇಡಿಗಳಿಗೆ ಸಡ್ಡು ಹೊಡೆದಿದ್ದಾರೆ.

ಬಿಗಿ ಭದ್ರತೆ ನಡುವೆ ನಡೆದ ಮದ್ದೂರು ಹಾಗೂ ಸುತ್ತಮುತ್ತಲಿನ 28ಕ್ಕೂ ಹೆಚ್ಚು ಗಣಪತಿ ವಿಸರ್ಜನೆ ನೆರವೇರಿದ್ದು, ಯಾವುದೇ ಅಹಿತಕರ ಘಟನೆ ನಡೆಯಲಿಲ್ಲ. ಮದ್ದೂರು ಪಟ್ಟಣದ ಕಾಶಿ ವಿಶ್ವನಾಥ ದೇವಸ್ಥಾನದಿಂದ ಮೆರವಣಿಗೆ ಆರಂಭವಾಗಿ ಹೊಳೆಬೀದಿ,ಪೇಟೆ ಬೀದಿ, ಟಿಬಿ ಸರ್ಕಲ್, ಹಳೆ ಬೆಂಗಳೂರು-ಮೈಸೂರು ರಸ್ತೆಯಲ್ಲಿ ಮೂರು ಕಿಲೋ ಮೀಟರ್ ಸಂಚರಿಸಿ ಕೊಲ್ಲಿ ಸರ್ಕಲ್ ಮೂಲಕ ಆಗಮಿಸಿ ಶಿಂಷಾ ನದಿಯಲ್ಲಿ ವಿಗ್ರಹಗಳನ್ನು ವಿಸರ್ಜನೆ ಮಾಡಲಾಯಿತು.

ಶೋಭಾಯಾತ್ರೆಯನ್ನು ಹಿಂದೂ ಪರ ಸಂಘಟನೆಗಳು ಸಂಘಟಿಸಿದರೂ ಬಿಜೆಪಿ-ಜೆಡಿಎಸ್ ನಾಯಕರು ಸಹ ಭಾಗವಹಿಸಿ ಬೆಂಬಲ ನೀಡಿದರು. ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ವಿಧಾನಸಭೆ ಪ್ರತಿಪಕ್ಷ ಆರ್.ಅಶೋಕ್ ಹಾಗೂ ವಿಧಾನ ಪರಿಷತ್ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಮೈಸೂರು-ಕೊಡಗು ಸಂಸದ ಯದುವೀರ್ ಒಡೆಯರ್, ಶಾಸಕ ಚನ್ನಬಸಪ್ಪ, ಮಾಜಿ ಸಚಿವರಾದ ಸಿ.ಟಿ.ರವಿ, ಪುಟ್ಟರಾಜು, ಡಾ.ಅಶ್ವತ್ಥ ನಾರಾಯಣ, ನಟಿ ಸುಮಲತಾ ಅಂಬರೀಶ್, ಮಾಜಿ ಶಾಸಕರಾದ ಪ್ರೀತಮ್ ಗೌಡ, ಸುರೇಶ್‌ಗೌಡ, ಶಾಸಕ ತಮ್ಮಣ್ಣ ಸೇರಿದಂತೆ ಎರಡೂ ಪಕ್ಷಗಳ ಪ್ರಮುಖರು ಭಾಗವಹಿಸಿದ್ದರು.

- ಹಿಂದೂ ಸಂಘಟನೆಗಳಿಂದ 'ಶೋಭಾಯಾತ್ರೆ'ಯಲ್ಲಿ ಶಕ್ತಿ ಪ್ರದರ್ಶನ
- ಕಲ್ಲು ತೂರಾಟ: ಮತ್ತೆ ಮೂವರು ವಶಕ್ಕೆ, ಬಂಧಿತರ ಸಂಖ್ಯೆ 29ಕ್ಕೆ
- ಗಾಯಾಳುಗಳ ಮನೆಗೆ ಭೇಟಿ ನೀಡಿದ ಬಿಜೆಪಿ ನಿಯೋಗ
- ಮೂರು ಕಿಮೀ ಮೆರವಣಿಗೆ, ಶಿಂಷಾ ನದಿಯಲ್ಲಿ ಗಣೇಶ ವಿಸರ್ಜನೆ
- ಪ್ರತಿಭಟನೆಯಲ್ಲಿ ಭಾಗವಹಿಸಿದ್ದ 500ಕ್ಕೂ ಹೆಚ್ಚು ಹಿಂದೂಗಳ ವಿರುದ್ಧ ಎಫ್‌ಐಆರ್

ಸರಕಾರಕ್ಕೆ ಸ್ವಲ್ಪವಾದರೂ ಮಾನ ಮರ್ಯಾದೆ ಇದ್ದರೆ, ಮಸೀದಿ ಒಳಗೆ ಕಲ್ಲು ಶೇಖರಿಸಿ ಬಿಸಾಡಿದ ಹಾಗೂ ಗೂಂಡಾವರ್ತನೆ ಪ್ರಾರಂಭಿಸಿದ ದೇಶದ್ರೋಹಿಗಳ ವಿರುದ್ಧ ಗೂಂಡಾ ಕಾಯ್ದೆ ಹಾಕಬೇಕು. ಅವರನ್ನು ಒದ್ದು ಒಳಗೆ ಹಾಕಲಿ; ಸುಮ್ಮನೆ ಅಮಾಯಕ ಹಿಂದೂ ಮಹಿಳೆಯರ ಮೇಲೆ ಎಫ್‌ಐಆರ್ ದಾಖಲಿಸಿ, ಹಿಂದೂ ಕಾರ್ಯಕರ್ತರಿಗೆ ತೊಂದರೆ ಕೊಡುವುದು ಸರಿಯಲ್ಲ
-ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

1500ಕ್ಕೂ ಹೆಚ್ಚು ಪೊಲೀಸರಿಂದ ಭದ್ರತೆ

ಬೂದಿಮುಚ್ಚಿದ ಕೆಂಡವಾಗಿರುವ ಮದ್ದೂರಿನಲ್ಲಿ ಶೋಭಾಯಾತ್ರೆ ಸಾಗುವ ಮಾರ್ಗದಲ್ಲಿ ಒಂದುವರೆ ಸಾವಿರಕ್ಕೂ ಹೆಚ್ಚು ಪೊಲೀಸರನ್ನು ನಿಯೋಜನೆ ಮಾಡಲಾಗಿತ್ತು. ಮಸೀದಿಗಳಿಗೆ ಭಾರಿ ಪೊಲೀಸ್ ಭದ್ರತೆ ಒದಗಿಸಲಾಗಿತ್ತು. ಏಳು ಎಸ್‌ಪಿ, ಮೂರು ಎಎಸ್‌ಪಿ, 10 ಡಿವೈಎಸ್‌ಪಿ, 30 ಸಿಪಿಐ, 32 ಪಿಎಸ್‌ಐ, 15 ಕೆಎಸ್‌ಆರ್‌ಪಿ ತುಕಡಿ, 10 ದಿಢೀರ್ ಪ್ರಹಾರ ದಳದ ತುಕಡಿಗೆ ಭದ್ರತೆ ಹೊಣೆ ವಹಿಸಲಾಗಿತ್ತು.

ಬುರುಡೆ: ಮತ್ತೆ ಮಹಜರು

ಮಂಗಳೂರು: ಧರ್ಮಸ್ಥಳ ಗ್ರಾಮದಲ್ಲಿ ಮೃತದೇಹಗಳನ್ನು ಹೂತು ಹಾಕಲಾಗಿದೆ ಎಂಬ ಆರೋಪದ ಹಿನ್ನೆಲೆಯಲ್ಲಿ ಎಸ್‌ಐಟಿ, ಪಾಂಗಾಳದ ವಿಠಲ ಗೌಡರನ್ನು ನೇತ್ರಾವತಿ ಸ್ನಾನಘಟ್ಟದ ಪಕ್ಕದ ಕಾಡಿನೊಳಗೆ ಬುಧವಾರ ಮತ್ತೊಮ್ಮೆ ಕರೆದೊಯ್ದು ಮಹಜರು ನಡೆಸಿತು. ಬುರುಡೆಯನ್ನು ಪೊಲೀಸರಿಗೆ ನೀಡಿದ್ದ ದೂರುದಾರ ವ್ಯಕ್ತಿ, ಅದನ್ನು ತನಗೆ ತೋರಿಸಿದ್ದೇ ವಿಠಲ ಗೌಡ ಎಂದಿದ್ದರು.

ಯುಕೆಪಿ ಭೂ ಸ್ವಾಧೀನ: ಇಂದು ದರ ನಿಗದಿ

ಬೆಂಗಳೂರು: ಕೃಷ್ಣಾ ಮೇಲ್ದಂಡೆ ಯೋಜನೆಯ ಮೂರನೇ ಹಂತಕ್ಕೆ ಸ್ವಾಧೀನಕ್ಕೊಳಪಡುವ ಭೂಮಿಗಳಿಗೆ ಗುರುವಾರದ ಸಚಿವ ಸಂಪುಟ ಸಭೆಯಲ್ಲಿ ದರ ನಿಗದಿ ಪಡಿಸಲು ತೀರ್ಮಾನಿಸಲಾಗಿದೆ. ವಿಧಾನ ಸೌಧದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ನಡೆದ ಸಭೆಯಲ್ಲಿ, ಚರ್ಚಿಸಿದ್ದು ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿ, ಬಳಿಕ ಸರ್ವಪಕ್ಷಗಳಿಗೆ ಈ ಬಗ್ಗೆ ಮಾಹಿತಿ ನೀಡಿ ದರ ನಿಗದಿ ಪಡಿಸಲು ತೀರ್ಮಾನಿಸಲಾಗಿದೆ. ಈ ಸಂಬಂಧ ಸುದ್ದಿಗಾರರೊಂದಿಗೆ ಮಾತನಾಡಿದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸೂಚಿತ ಪರಿಹಾರಕ್ಕೆ ಸರ್ವ ಪಕ್ಷಗಳೂ ಒಪ್ಪಿಗೆ ಸೂಚಿಸಬೇಕು ಎಂದರು.

ಮಾರಿಷಸ್ ಪ್ರಧಾನಿ ಕಾಶಿಗೆ

ದೆಹಲಿ: ದ್ವೀಪ ರಾಷ್ಟ್ರ ಮಾರಿಷಸ್‌ನ ಪ್ರಧಾನಿ ಡಾ.ನವೀನಚಂದ್ರ ರಾಮಗೂಲಂ ಮಂಗಳವಾರ ದೆಹಲಿಗೆ ಆಗಮಿಸಿದ್ದು, ಗುರುವಾರ ಕಾಶಿಗೆ ಪ್ರಯಾಣ ಬೆಳೆಸಲಿದ್ದಾರೆ. ಅವರು ಸೆ.16ರವರೆಗೂ ಭಾರತ ಪ್ರವಾಸದಲ್ಲಿರುವರು. ಪ್ರಧಾನಿ ಮೋದಿ ತಮ್ಮ ಲೋಕಸಭಾ ಕ್ಷೇತ್ರ ವಾರಾಣಸಿಯಲ್ಲಿ ರಾಮಗೂಲಂರೊಂದಿಗೆ ಗುರುವಾರ ದ್ವಿಪಕ್ಷೀಯ ಸಭೆ ನಡೆಸಲಿದ್ದಾರೆ.

ಫ್ರಾನ್ಸ್‌ನಲ್ಲೂ ಜನಾಕ್ರೋಶ

ಪ್ಯಾರಿಸ್: ದೇಶದಲ್ಲಿನ ಆರ್ಥಿಕ ಅವ್ಯವಸ್ಥೆ, ಹೆಚ್ಚುತ್ತಿರುವ ಜೀವನ ವೆಚ್ಚದಿಂದ ಹತಾಶರಾದ ಫ್ರಾನ್ಸ್ ದೇಶದ ಜನತೆ ಸರಕಾರದ ವಿರುದ್ಧ ಆಕ್ರೋಶಗೊಂಡಿದ್ದಾರೆ. ರಾಜಧಾನಿ ಪ್ಯಾರಿಸ್ ಸೇರಿದಂತೆ ದೇಶದ ವಿವಿಧ ನಗರಗಳಲ್ಲಿ ಸಾವಿರಾರು ಸಂಖ್ಯೆಯಲ್ಲಿ ಬೀದಿಗಿಳಿದು ಪ್ರತಿಭಟನೆ ನಡೆಸುತ್ತಿದ್ದಾರೆ. ಒಟ್ಟು 200 ಜನರನ್ನು ಬಂಧಿಸಲಾಗಿದೆ.

ಭಾರತದ ಎಲ್ಲ ಭಾಷೆಗೆ ಸಂಸ್ಕೃತವೇ ಮೂಲ ಬೇರು | ಸಂಸ್ಕೃತವಿಲ್ಲದ ಕನ್ನಡ, ತಾಯಿಯಿಲ್ಲದ ಮಗುವಿದ್ದಂತೆ: ವಿಶ್ವೇಶ್ವರ ಭಟ್

ಪಾಲಿ, ಪ್ರಾಕೃತ, ಸಂಸ್ಕೃತದ ವಿದ್ವತ್ತು ಇಂಗ್ಲಿಷ್‌ನಲ್ಲಿಲ್ಲ

ಬೆಂಗಳೂರು: ಪಾಲಿ, ಪ್ರಾಕೃತ ಹಾಗೂ ಸಂಸ್ಕೃತದಲ್ಲಿರುವ ವಿದ್ವತ್ತು ಹಾಗೂ ಭಾಷಾ ಸೌಂದರ್ಯ ಇಂಗ್ಲಿಷ್‌ನಲ್ಲಿಲ್ಲ ಎಂದು ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಅಭಿಪ್ರಾಯಪಟ್ಟರು.

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಭಗವಾನ್ ಮಹಾವೀರ ಮತ್ತು ಭಗವಾನ್ ಬುದ್ಧ ಪ್ರಾಕೃತ ಮತ್ತು ಪಾಲಿ ಅಧ್ಯಯನ ಕೇಂದ್ರಗಳ ವತಿಯಿಂದ ಆಯೋಜಿಸಲಾದ ಪಟ್ಟಾವಣ ಮಹೋತ್ಸವದಲ್ಲಿ ಮಾತನಾಡಿದ ಅವರು, ಪಾಲಿ, ಸಂಸ್ಕೃತ, ಪ್ರಾಕೃತದಲ್ಲಿರುವ ಭಾಷಾ ಸೌಂದರ್ಯ, ಸಂಪತ್ತು, ವಿದ್ವತ್ತು ಇಂಗ್ಲಿಷ್‌ನಲ್ಲಿ ಕಾಣುವುದಿಲ್ಲ. ಆದರೆ ಅದ್ಯಾವ ಮಾಯೆ, ಮೋಹ ನಮ್ಮನ್ನು ಮೂಢರನ್ನಾಗಿ ಮಾಡುತ್ತಿದೆ ಎಂಬುದು ಅರ್ಥವಾಗುತ್ತಿಲ್ಲ. ಇಂಗ್ಲಿಷ್ ಭಾಷೆಯ ಭೂತ ನಮ್ಮನ್ನು ಹೊಕ್ಕಿ ನಮ್ಮನ್ನು ವಿಚಿತ್ರವಾದ ದಾಸರನ್ನಾಗಿ ಮಾಡಿದೆ. ಇದರಿಂದಾಗಿ ನಮಗೆ ಅತ್ತ ಇಂಗ್ಲಿಷ್‌ನಲ್ಲಿಯೂ ವಿದ್ವತ್ತಿಲ್ಲ, ಇತ್ತ ಕನ್ನಡದಲ್ಲಿಯೂ ವಿದ್ವತ್ತಿಲ್ಲ ಎನ್ನುವ ಮೂಲಕ ಎಲ್ಲಿಯೂ ಸಲ್ಲದವರಾಗುತ್ತಿದ್ದೇವೆ ಎಂದರು.

ಭಾರತದ ಎಲ್ಲ ಭಾಷೆಗಳಿಗೂ ಸಂಸ್ಕೃತವೇ ಮೂಲ ಬೇರು. ಕನ್ನಡಕ್ಕೂ ಸಂಸ್ಕೃತವೇ ತಾಯಿ ಬೇರಾಗಿದೆ. ಸಂಸ್ಕೃತವಿಲ್ಲದೆ ಕನ್ನಡ ಇರಲು ಹೇಗೆ ಸಾಧ್ಯ? ಸಂಸ್ಕೃತವಿಲ್ಲದ ಕನ್ನಡ, ತಾಯಿಯಿಲ್ಲದ ಮಗು. ಸಂಸ್ಕೃತ ಕನ್ನಡಕ್ಕೆ ಆಸರೆ. ಸಂಸ್ಕೃತದ ಜ್ಞಾನವಿಲ್ಲದೆ ಕನ್ನಡವನ್ನು ಕಲಿಯುತ್ತೇನೆ. ಕನ್ನಡದ ಅಧ್ಯಯನ ಮಾಡುತ್ತೇನೆ ಎನ್ನಲು ಸಾಧ್ಯವಿಲ್ಲ ಎಂದರು.

ಸಂಸ್ಕೃತವು ಪಾಲಿ ಮತ್ತು ಪ್ರಾಕೃತಗಳಿಗೆ ಮೂಲಸೆಲೆ. ಪ್ರಾಕೃತ-ಪಾಲಿ ಸಂಸ್ಕೃತದಿಂದಲೇ ಹುಟ್ಟಿದವು. ಒಂದನ್ನು ಬಿಟ್ಟು ಇನ್ನೊಂದಿರಲು ಸಾಧ್ಯವಿಲ್ಲ. ಆದ್ದರಿಂದ ಪಾಲಿ ಮತ್ತು ಪ್ರಾಕೃತದ ಜ್ಞಾನವಿಲ್ಲದೆ ಭಾರತದ ಪ್ರಾಚೀನ ಧರ್ಮ, ಇತಿಹಾಸ, ಸಂಸ್ಕೃತಿ, ಸಂಸ್ಕಾರ ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ. ಭಾರತವನ್ನು ಅರ್ಥ ಮಾಡಿಕೊಳ್ಳಬೇಕು ಎಂದರೆ ಪ್ರಾಚೀನ ಭಾರತವನ್ನು ಅರ್ಥ ಮಾಡಿಕೊಳ್ಳಬೇಕು. ನಮ್ಮ ಧರ್ಮವನ್ನು ಅರ್ಥ ಮಾಡಿಕೊಳ್ಳಬೇಕು. ನಮ್ಮ ಸಂಸ್ಕೃತಿಯನ್ನು ಅರ್ಥ ಮಾಡಿಕೊಳ್ಳಬೇಕು ಎಂದರೆ ಪ್ರಾಕೃತ, ಸಂಸ್ಕೃತ ಎರಡೂ ಬೇಕು. ಈ ಎಲ್ಲವೂ ಒಂದಕ್ಕೊಂದು ಥಳುಕು ಹಾಕಿಕೊಂಡಿರುವ ಕರುಳ ಬಳ್ಳಿಯಿದ್ದಂತೆ. ಈ ಕರುಳ ಬಳ್ಳಿಯನ್ನು ಬೇರ್ಪಡಿಸಲು ಸಾಧ್ಯವಿಲ್ಲ ಎಂದು ಅಭಿಪ್ರಾಯಪಟ್ಟರು.

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಭಗವಾನ್ ಮಹಾವೀರ ಮತ್ತು ಭಗವಾನ್ ಬುದ್ಧ ಪ್ರಾಕೃತ ಮತ್ತು ಪಾಲಿ ಅಧ್ಯಯನ ಕೇಂದ್ರಗಳ ವತಿಯಿಂದ ಆಯೋಜಿಸಲಾಗಿದ್ದ ಪಟ್ಟಾವಣ ಮಹೋತ್ಸವವನ್ನು ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಅವರು ಉದ್ಘಾಟಿಸಿದರು. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಕುಲಪತಿ ಪ್ರೊ.ಅಹಲ್ಯಾಶರ್ಮಾ, ನಿವೃತ್ತ ಕುಲಪತಿ ಪ್ರೊ.ರಾಮಚಂದ್ರ ಜಿ.ಭಟ್ ಸೇರಿ ಹಲವರಿದ್ದರು.

> ಸಂಸ್ಕೃತ ಕೇವಲ ಭಾಷೆ ಮಾತ್ರವಲ್ಲ ಜೀವೋತ್ಕರ್ಷಿಣಿ. ನಮ್ಮ ಮೆದುಳಿನಲ್ಲಿ ಸ್ಪೀಕ್ ಸೆಲ್ ಎನ್ನುವಂತಹದ್ದಿದೆ. ಮನುಷ್ಯನ ಅತ್ಯಂತ ಸೂಕ್ಷ್ಮ ಕಾರ್ಯ ಮಾತು. ಮಾತು ನಮ್ಮ ಅಭಿವ್ಯಕ್ತಿಗೆ ಮೂಲ. ಸ್ಪೀಚ್ ಸೆಂಟರ್‌ನ ಮುಖ್ಯ ಕಾರ್ಯ ನಾವು ಯಾವ ರೀತಿಯಲ್ಲಿ ಮಾತನಾಡುತ್ತೇವೆ ಅಷ್ಟು ಮೆದುಳಿನಲ್ಲಿ ಬದಲಾವಣೆ ಬರುತ್ತದೆ. ಸಂಸ್ಕೃತವನ್ನು ಮಾತನಾಡುವವರಲ್ಲಿ, ಮಂತ್ರವನ್ನು ಉಚ್ಚಾರಣೆ ಮಾಡುವವರಲ್ಲಿ ಏನೋ ಒಂದು ವಿಶೇಷತೆಯಿದೆ. ಭಾವನಾತ್ಮಕವಾಗಿ ಸ್ಪಂದಿಸುವ ರೀತಿಯಲ್ಲಿ ಅತ್ಯಂತ ವಿಶೇಷವಿದೆ. ಇದನ್ನು ಸಂಸ್ಕೃತದ ಪರಿಣಾಮ.
> -ಪ್ರೊ.ಅಹಲ್ಯಾಶರ್ಮಾ, ಕುಲಪತಿ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ

ವೇಗವಾಗಿ ಸಾಯುತ್ತಿರುವ ಭಾಷೆ ಇಂಗ್ಲಿಷ್

ಭಾಷೆ ಜ್ಞಾನ ಭಂಡಾರವಾಗಿ ರೂಪ ತಾಳಬೇಕು. ಅದರ ಧ್ವನಿ ಬಲ, ವರ್ಣ, ಸ್ವರ, ಮಾತ್ರ, ಸಾಮ ಸಂತಾನ, ಆರು ವಂಶದಿಂದ ತುಂಬಿಕೊಂಡು ಪರಂಪರೆಯನ್ನು ಉಳಿಸಿಕೊಂಡು ಬಂದಾಗ ಜೀವಂತ ಭಾಷೆಯಾಗುತ್ತದೆ. ಸಂಶೋಧಕರೊಬ್ಬರ ಪ್ರಕಾರ, ವೇಗವಾಗಿ ಸಾಯುತ್ತಿರುವ ಭಾಷೆ ಎಂದರೆ ಅದು ಇಂಗ್ಲಿಷ್. ಇದು ತನ್ನ ಧ್ವನಿಯನ್ನು ಕಳೆದುಕೊಳ್ಳುತ್ತಿದೆ. ಅಂದು ಇಂಗ್ಲಿಷ್ ಜೀವಂತವಾಗಿತ್ತು. ಇಂದು ಈ ಭಾಷೆ ಸಂವಹನದ ಭಾಷೆಯಾಗಿದೆ ಮತ್ತು ಯಂತ್ರದ ಭಾಷೆಯಾಗಿದೆ. ಯಂತ್ರದ ಭಾಷೆಯಾಗುವಾಗ ಮಂತ್ರ ಶಕ್ತಿ ಕಳೆದುಕೊಳ್ಳುತ್ತದೆ ಎಂದು ಎಸ್.ವ್ಯಾಸ ಯೋಗ ವಿಶ್ವವಿದ್ಯಾಲಯ ನಿವೃತ್ತ ಕುಲಪತಿ ಪ್ರೊ. ರಾಮಚಂದ್ರ ಜಿ.ಭಟ್ ಅಭಿಪ್ರಾಯ ಪಟ್ಟರು.

ಎಸ್.ವ್ಯಾಸ ಯೋಗ ವಿಶ್ವವಿದ್ಯಾಲಯ ನಿವೃತ್ತ ಕುಲಪತಿ ಪ್ರೊ.ರಾಮಚಂದ್ರ ಜಿ.ಭಟ್ ಮಾತನಾಡಿ, ಒಂದು ಭಾಷೆಯನ್ನು ಹೆಚ್ಚು ಮಾತನಾಡುತ್ತಾರೆ ಎನ್ನುವ ಕಾರಣಕ್ಕೆ ಅದು ಬದುಕುತ್ತದೋ, ಸಾಯುತ್ತದೋ ಎನ್ನಲಾಗುವುದಿಲ್ಲ. ಭರತಮುನಿ ಭರತನಾಟ್ಯ ಶಾಸ್ತ್ರದಲ್ಲಿ, 'ಸಂಸ್ಕೃತ ಕೇವಲ ಭಾಷೆಯಲ್ಲ. ಅದು ಅತಿ ಭಾಷಾ' ಎಂದು ವರ್ಣಿಸಿದ್ದಾನೆ. ಸಂಸ್ಕೃತ ಹಾಗೂ ಪ್ರಾಕೃತ ಭಾಷೆ ವಿಜ್ಞಾನದಿಂದ ಪ್ರಮಾಣೀಕೃತವಾದುದು. ಸಂಸ್ಕೃತ ಹಾಗೂ ಪ್ರಾಕೃತದ ಪದಗಳು ಮನುಷ್ಯನ ದೇಹದಲ್ಲಿ ಹೇಗೆ ಕಂಪನವನ್ನು ಸೃಷ್ಟಿಸುತ್ತದೆ ಹೇಗೆ ಮಾನವನ ಮನಸ್ಸನ್ನು ಸರಿಪಡಿಸುತ್ತವೆ. ಪ್ರಭಾ ವಲಯವನ್ನು ಸಂಸ್ಕಾರಗೊಳಿಸುತ್ತವೆ ಎನ್ನುವುದಾಗಿದೆ ಎಂದರು. ಒಂದು ಭಾಷೆ ಮನುಷ್ಯನ ಹೊರ ,ಒಳ ಸೂಕ್ಷ್ಮ ಮತ್ತು ಸ್ಥೂಲ ಶರೀರ ಹಾಗೂ ಸ್ಥೂಲ ಶರೀರವನ್ನಾವರಿಸಿದ ಪ್ರಭಾ ವಲಯವನ್ನು ಹೇಗೆ ಸಂಸ್ಕಾರಗೊಳಿಸುತ್ತದೆ ಎನ್ನುವುದರ ಮೇಲೆ ಶ್ರೇಷ್ಠ ಭಾಷೆಯಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಅಹಲ್ಯಾಶರ್ಮಾ, ವಿಶ್ರಾಂತ ಕುಲಪತಿ ಪ್ರೊ. ಮಲ್ಲೇಪುರಂ ವೆಂಕಟೇಶ್, ಪ್ರಾಕೃತ ಸಂಶೋಧನಾ ಸಹಾಯಕಿ ಲತಾ ಸುದರ್ಶನ್, ವಿದ್ವಾಂಸರಾದ ಕೋಟೆಮನೆ ರಾಮಚಂದ್ರ ಭಟ್, ಕುಲಸಚಿವ ಗಿರೀಶ್ ಚಂದ್ರ, ಪ್ರಾಕೃತ ವಿಭಾಗದ ತೇಜಸ್ವಿನಿ ಮತ್ತಿತರರು ಇದ್ದರು.

ಸಂಸ್ಕೃತ ವಿದ್ವಾಂಸರಿಗೆ ಸೂಕ್ತ ಮನ್ನಣೆ ಇಲ್ಲ

ಸಂಸ್ಕೃತ ಕೇವಲ ಭಾಷೆ ಅಲ್ಲ. ಅದು ಜ್ಞಾನದ ಗಣಿ. ಜಗತ್ತಿನ ಅನೇಕ ಭಾಷೆಗಳಿಗೆ ಆಧಾರಸ್ತಂಭ. ಆದರೆ ನಮ್ಮಲ್ಲಿ ಸಂಸ್ಕೃತದಲ್ಲಿ ವಿದ್ವಾಂಸರಾಗಿದ್ದರೂ, ಅವರಿಗೆ ಸೂಕ್ತ ರೀತಿಯ ಮನ್ನಣೆ ಹಾಗೂ ನೌಕರಿ ಸಿಗುವುದಿಲ್ಲ ಎಂದು ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಬೇಸರ ವ್ಯಕ್ತಪಡಿಸಿದರು. ಸಾಮಾನ್ಯವಾಗಿ ಸಂಸ್ಕೃತ, ಪ್ರಾಕೃತ ಮತ್ತು ಪಾಲಿ ಭಾಷೆಯ ವಿಷಯ ಬಂದಾಗ ಮೃತ ಭಾಷೆ ಎನ್ನುವ ಟೀಕೆ ಕೇಳಿ ಬರುತ್ತದೆ. ಕಳೆದ 25 ವರ್ಷಗಳಿಂದೀಚೆಗೆ ಸಂಸ್ಕೃತದ ಮಹತ್ವವೇನು ಎಂಬುದು ಅನೇಕರಿಗೆ ಮನವರಿಕೆಯಾಗಿದೆ. ಸಂಸ್ಕೃತದ ಬಗ್ಗೆ ಮೊದಲಿದ್ದ ಕೀಳು ಭಾವನೆ ದೂರವಾಗಿದೆ. ಸಂಸ್ಕೃತವನ್ನು ಮಾತನಾಡುವ, ಬಳಸುವ, ಸಂಸ್ಕೃತದ ಮಹತ್ವವನ್ನು ಅರ್ಥ ಮಾಡಿಕೊಳ್ಳುವಂತಹ ಪ್ರಯತ್ನ ನಡೆಯುತ್ತಿರುವುದನ್ನು ಕಂಡಿದ್ದೇವೆ ಎಂದು ಅಭಿಪ್ರಾಯಪಟ್ಟರು.

ಸಮಾಚಾರ ಸಣ್ಣದಲ್ಲ

ದಸರಾಗೆ ಬಾನು: ಹೈಕೋರ್ಟ್‌ನಲ್ಲಿ ಮತ್ತೆರಡು ಪಿಐಎಲ್

ಬೆಂಗಳೂರು: ವಿಶ್ವ ಪ್ರಸಿದ್ದ ಐತಿಹಾಸಿಕ ಮೈಸೂರು ದಸರಾ ಉದ್ಘಾಟನೆಗೆ ಬುಕರ್ ಪ್ರಶಸ್ತಿ ಪುರಸ್ಕೃತ ಲೇಖಕಿ ಬಾನು ಮುಷ್ತಾಕ್ ಅವರನ್ನು ಮುಖ್ಯ ಅತಿಥಿಯನ್ನಾಗಿ ಆಹ್ವಾನಿಸಿರುವ ರಾಜ್ಯ ಸರಕಾರದ ಕ್ರಮ ಪ್ರಶ್ನಿಸಿ ಹೈಕೋರ್ಟ್‌ಗೆ ಮತ್ತೆರಡು ಪ್ರತ್ಯೇಕ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳು ಸಲ್ಲಿಕೆಯಾ ಗಿವೆ. ಹಿಂದೂ ಧರ್ಮದವರಲ್ಲದ ಬಾನು ಮುಷ್ತಾಕ್ ಅವರನ್ನು ದಸರಾ ಉದ್ಘಾಟನೆಗೆ ಆಹ್ವಾನಿಸಿರುವ ನಿರ್ಧಾರ ವಾಪಸ್ ಪಡೆಯುವಂತೆ ರಾಜ್ಯ ಸರಕಾರಕ್ಕೆ ನಿರ್ದೇಶನ ನೀಡಬೇಕು. ಅದೇ ರೀತಿ ದಸರಾ ಉದ್ಘಾಟನೆಯು ಹಿಂದೂ ಧಾರ್ಮಿಕ ಸಂಪ್ರದಾಯದ ಅವಿಭಾಜ್ಯ ಭಾಗ ಎಂದು ಘೋಷಿಸಿ ಅದನ್ನು ಹಿಂದೂ ಗಣ್ಯರಿಂದ ಉದ್ಘಾಟಿಸಬೇಕು. ಭಕ್ತಾದಿಗಳ ಭಾವನೆಗಳಿಗೆ ಧಕ್ಕೆ ಆಗದಂತೆ ಹಿಂದೂ ಆಗಮಿಕ ಪದ್ಧತಿ ಪ್ರಕಾರವೇ ಕಟ್ಟುನಿಟ್ಟಾಗಿ ದಸರಾ ಉದ್ಘಾಟನೆ ನಡೆಸಲು ಸರಕಾರಕ್ಕೆ ನಿರ್ದೇಶನ ನೀಡಬೇಕು ಎಂದು ಬೆಂಗಳೂರಿನ ನಿವಾಸಿ ಎಚ್.ಎಸ್. ಗೌರವ್ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿ ದ್ದಾರೆ. ಇದಲ್ಲದೆ, ಇದೇ ವಿಚಾರವಾಗಿ ಬೆಂಗಳೂರಿನ ಉದ್ಯಮಿ ಟಿ.ಗಿರೀಶ್ ಕುಮಾರ್ ಹಾಗೂ ಅಭಿನವ ಭಾರತ್ ಪಾರ್ಟಿಯ ರಾಷ್ಟ್ರೀಯ ಉಪಾಧ್ಯಕ್ಷೆ ಆರ್.ಸೌಮ್ಯ ಅವರು ಸಹ ಮತ್ತೊಂದು ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದಾರೆ. ಈ ಎರಡೂ ಅರ್ಜಿಗಳು ಇನ್ನಷ್ಟೇ ವಿಚಾರಣೆಗೆ ಬರಬೇಕಿದೆ. ಈಗಾಗಲೇ ಇದೇ ವಿಷಯವಾಗಿ ಮಾಜಿ ಸಂಸದ ಪ್ರತಾಪ್ ಸಿಂಹ ಹೈಕೋರ್ಟ್ ಮೆಟ್ಟಿಲೇರಿದ್ದಾರೆ. ಅದರಂತೆ ದಸರಾ ಉದ್ಘಾಟನೆ ವಿವಾದಕ್ಕೆ ಸಂಬಂಧಿಸಿದಂತೆ ಹೈಕೋರ್ಟ್‌ಗೆ ಮೂರು ಅರ್ಜಿಗಳು ಸಲ್ಲಿಕೆಯಾದಂತಾಗಿದೆ.

ವಿರಾಮ
ಪ್ರತಿ ಭಾನುವಾರ

3 ಕೋಟಿ ವಂಚನೆ ಪ್ರಕರಣ | ಆರೋಪ ಪಟ್ಟಿ ಸಲ್ಲಿಸದಂತೆ ಪೊಲೀಸರಿಗೆ ಸೂಚನೆ

ಧ್ರುವ ಸರ್ಜಾಗೆ ಕೋರ್ಟ್ ತಾತ್ಕಾಲಿಕ ರಿಲೀಫ್

ಬೆಂಗಳೂರು: ನಟ ಧ್ರುವ ಸರ್ಜಾ ಅವರ ವಿರುದ್ಧ ಮುಂಬೈನಲ್ಲಿ ಬಹುಕೋಟಿ ವಂಚನೆ ಪ್ರಕರಣ ದಾಖಲಾಗಿತ್ತು. ನಿರ್ಮಾಪಕ ರಾಘವೇಂದ್ರ ಹೆಗಡೆ ಮುಂಬೈನಲ್ಲಿ ನಟ ಧ್ರುವ ಸರ್ಜಾ ವಿರುದ್ಧ ದೂರು ದಾಖಲಿಸಿದ್ದರು. ಪೊಲೀಸರು ಧ್ರುವ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಿಕೊಂಡಿದ್ದರು. ಆದರೆ ಇದೀಗ ನ್ಯಾಯಾಲಯದ ಆದೇಶವು ಪ್ರಕರಣ ದಲ್ಲಿ ಧ್ರುವ ಸರ್ಜಾಗೆ ತಾತ್ಕಾಲಿಕ ರಿಲೀಫ್ ನೀಡಿದೆ. ಧ್ರುವ ಸರ್ಜಾ ಅವರು, ಸಿನಿಮಾ ಮಾಡಿ ಕೊಡುವುದಾಗಿ ಹೇಳಿ 3.10 ಕೋಟಿ ರು. ಹಣ ಪಡೆದು, ಸಿನಿಮಾ ಮಾಡಲು ಸಮಯ ನೀಡದೆ ವಂಚನೆ ಮಾಡಿದ್ದಾರೆ ಎಂದು ರಾಘವೇಂದ್ರ ಹೆಗಡೆ ಎಂಬುವರು ಮುಂಬೈನ ಅಂಬೋಲಿ ಪೊಲೀಸ್ ಠಾಣೆಯಲ್ಲಿ ಆಗಸ್ಟ್‌ನಲ್ಲಿ ಸಲ್ಲಿಸಿದ್ದ ದೂರಿನ ಆಧಾರದಲ್ಲಿ ಸರ್ಜಾ ವಿರುದ್ಧ ಎಫ್‌ಐಆರ್ ಆಗಿತ್ತು. ಪ್ರಕರಣದ ಸಂಬಂಧ ಧ್ರುವ ಸರ್ಜಾ ಪರ ವಕೀಲರು ಬಾಂಬೆ ಹೈಕೋರ್ಟ್ ಮೊರೆ ಹೋಗಿ ದ್ದರು. ವಿಚಾರಣೆ ನಡೆಸಿರುವ ನ್ಯಾಯಾಲಯ ಧ್ರುವ ಸರ್ಜಾ ವಿರುದ್ಧ ಆರೋಪ ಪಟ್ಟಿ ಸಲ್ಲಿಸದಂತೆ ಪೊಲೀಸರಿಗೆ ಸೂಚನೆ ನೀಡಿದೆ. ಅಲ್ಲದೆ, ಇದೊಂದು ಸಿವಿಲ್ ಮೊಕದ್ದಮೆ ಆಗಿದ್ದು ಪೊಲೀಸರು ಕ್ರಿಮಿನಲ್ ಪ್ರಕರಣ ದಾಖಲಿಸಿದ್ದಾರೆ ಎಂದು ಸಹ ಅಭಿಪ್ರಾಯ ವ್ಯಕ್ತಪಡಿಸಿದೆ. ಆ ಮೂಲಕ ಧ್ರುವ ಸರ್ಜಾ ಅವರು ಮುಂಬೈ ಪೊಲೀಸರ ವಿಚಾರಣೆಯಿಂದ ತಪ್ಪಿಸಿಕೊಂಡಂತಾಗಿದೆ. ಆದರೆ ನ್ಯಾಯಾಲಯವು, ಮುಂದಿನ ವಿಚಾರಣೆ ವರೆಗೆ ಮಾತ್ರವೇ ಆರೋಪ ಪಟ್ಟಿ ಸಲ್ಲಿಸದಂತೆ ಪೊಲೀಸರಿಗೆ ಸೂಚಿಸಿದೆ.

ಸೋಲ್ಜರ್ ಸಿನಿಮಾಗೆ ಮುಂಗಡ ಹಣ

ಧ್ರುವ ಸರ್ಜಾ ಸೋಲ್ಜರ್ ಹೆಸರಿನ ಸಿನಿಮಾ ಮಾಡಲು ಮುಂಗಡವಾಗಿ 3 ಕೋಟಿ ರು. ಹಣ ಪಡೆದಿದ್ದರು. ರಾಘವೇಂದ್ರ ಅವರು ಅದನ್ನು ವಿವಿಧೆಡೆ ಸಾಲ ಮಾಡಿ ಧ್ರುವ ಅವರಿಗೆ ನೀಡಿದ್ದರು. ಆ ಬಳಿಕ ಸಿನಿಮಾದ ಚಿತ್ರಕತೆ ಬರೆಯುವವರಿಗೆ ಮತ್ತು ಪ್ರಚಾರಕ್ಕೆಂದು 28 ಲಕ್ಷ ರು. ಪಡೆದರು. ಆರಂಭದಲ್ಲಿ ಚಿತ್ರಕತೆ ಮಾತುಕತೆ ವಿಚಾರವಾಗಿ ಸಂಪರ್ಕದಲ್ಲಿದ್ದ ಧ್ರುವ ಸರ್ಜಾ ಆ ಬಳಿಕ ರಾಘವೇಂದ್ರ ಅವರ ಸಂಪರ್ಕಕ್ಕೆ ಸಿಗಲಿಲ್ಲ. ಸಿನಿಮಾ ಡೇಟ್ಸ್ ಸಹ ನೀಡಲಿಲ್ಲವಂತೆ. ಇದೇ ಕಾರಣಕ್ಕೆ ರಾಘವೇಂದ್ರ ಅವರು ಧ್ರುವ ವಿರುದ್ಧ ವಂಚನೆ ಪ್ರಕರಣ ದಾಖಲಿಸಿದ್ದಾರೆ. ಆದರೆ ಧ್ರುವ ಸರ್ಜಾ ಅವರ ಆಪ್ತರು ಈ ಆರೋಪ ತಳ್ಳಿ ಹಾಕಿದ್ದು, 2018 ರಲ್ಲಿ ರಾಘವೇಂದ್ರ ಅವರು ಸಿನಿಮಾ ಮಾಡಲು ಬಂದಿದ್ದು, ಹಾಗೂ ಮುಂಗಡ ನೀಡಿದ್ದು ಸತ್ಯವೇ ಆದರೆ ನಾವು ಅವರನ್ನು ದೂರ ತಳ್ಳಿಲ್ಲ. ಅವರು ತೆಲುಗು ಹಾಗೂ ತಮಿಳಿನಲ್ಲಿ ಸಿನಿಮಾ ಮಾಡೋಣ ಎಂದರು. ಧ್ರುವ ಸರ್ಜಾ ಅವರು ಕನ್ನಡದಲ್ಲಿಯೇ ಸಿನಿಮಾ ಮಾಡೋಣ ಎಂದು ಹೇಳಿದರು. ಆ ನಂತರ ಅವರೇ ಅಚಾನಕ್ಕಾಗಿ ನಮ್ಮ ಸಂಪರ್ಕದಿಂದ ತಪ್ಪಿ ಹೋದರು. ಬಳಿಕ ನ್ಯಾಯಾಲಯದ ನೋಟೀಸ್ ಕಳಿಸಿದ್ದಾರೆ. ಅದಕ್ಕೆ ನಾವು ನ್ಯಾಯಾಲಯದ ಮೂಲಕವೇ ಉತ್ತರ ನೀಡುತ್ತೇವೆ ಎಂದಿದ್ದಾರೆ.

- ಧ್ರುವ ಸರ್ಜಾ ವಿರುದ್ಧ ಮುಂಬೈನಲ್ಲಿ ದಾಖಲಾಗಿದ್ದ ವಂಚನೆ ಪ್ರಕರಣ
- ಪ್ರಕರಣ ಸಂಬಂಧ ಬಾಂಬೆ ಹೈಕೋರ್ಟ್ ಮೊರೆ ಹೋಗಿದ್ದ ಧ್ರುವ ಸರ್ಜಾ
- ಸಿವಿಲ್ ಮೊಕದ್ದಮೆಗೆ ಪೊಲೀಸರು ಕ್ರಿಮಿನಲ್ ಪ್ರಕರಣ ದಾಖಲೆಂದು ಅಭಿಪ್ರಾಯ

ಬಹರೇನ್ ಕನ್ನಡ ಸಂಘಕ್ಕೆ ನೂತನ ಆಡಳಿತ ಮಂಡಳಿ

ಬೆಂಗಳೂರು: ಕನ್ನಡ ಸಂಘ ಬಹರೇನ್‌ನ 2025-2026ನೇ ಸಾಲಿನ ನೂತನ ಆಡಳಿತ ಮಂಡಳಿಯ ಪದಗ್ರಹಣ ಸಮಾರಂಭ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ಸ್ಥಳೀಯ ಬಹರೈನ್ ಕಲ್ಚರಲ್ ಹಾಲ್‌ನಲ್ಲಿ ಸೆ.5ರಂದು ನಡೆಯಿತು. ಸುಮಾರು 800 ಕ್ಕೂ ಹೆಚ್ಚು ಪ್ರೇಕ್ಷಕರ ಸಮ್ಮುಖದಲ್ಲಿ ಸಂಘದ ನೂತನ ಅಧ್ಯಕ್ಷರಾಗಿ ಅಜಿತ್ ಬಂಗೇರ ಹಾಗೂ ಆಡಳಿತ ಸಮಿತಿಯ ಸದಸ್ಯರು ವಿದ್ಯುಕ್ತವಾಗಿ ಪದಗ್ರಹಣ ಮಾಡಿದರು.

ಕಾರ್ಯಕ್ರಮಕ್ಕೆ ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿ ಬಸವರಾಜ ಹೊರಟ್ಟಿ, ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಅನಿವಾಸಿ ಕನ್ನಡಿಗರ ವೇದಿಕೆಯ ಉಪಾಧ್ಯಕ್ಷೆ ಡಾ. ಆರತಿ ಕೃಷ್ಣ ಗೌರವಾನ್ವಿತ ಅತಿಥಿಗಳಾಗಿ ಆಗಮಿಸಿದ್ದರು.

ಕಾರ್ಯಕ್ರಮದಲ್ಲಿ ವಿಶೇಷ ಅತಿಥಿಗಳಾಗಿ ತಾಯ್ನಾಡಿನ ಉದ್ಯಮಿಗಳಾದ ಗೋವಿಂದ ಬಾಬು ಪೂಜಾರಿ, ಪ್ರವೀಣ್ ಶೆಟ್ಟಿ ಪುತ್ತೂರು, ದಿನೇಶ್ ಶೆಟ್ಟಿ ಕಳತ್ತೂರು, ಶಾರ್ಜಾ ಕನ್ನಡ ಸಂಘದ ಅಧ್ಯಕ್ಷ ಸತೀಶ್ ಪೂಜಾರಿ, ಮಸ್ಕತ್ (ಒಮಾನ್) ಕನ್ನಡ ಸಂಘದ ಅಧ್ಯಕ್ಷ ಮಂಜುನಾಥ ಸಂಗಟಿ ಸೇರಿದಂತೆ, ಸ್ಥಳೀಯ ಗಣ್ಯರಾದ ನವೀನ್ ಶೆಟ್ಟಿ (ವ್ಯವಸ್ಥಾಪಕ ನಿರ್ದೇಶಕರು - ಔಮಾ), ಸಾರಾ ಗ್ರೂಪ್ ಸ್ಥಾಪಕ ಉದ್ಯಮಿ ಮೊಹಮ್ಮದ್ ಮನ್ಸೂರ್, ಯಕ್ಷಧ್ರುವ ಪಟ್ಲ ಫೌಂಡೇಶನ್ ಗೌರವಾಧ್ಯಕ್ಷ ಸುಭಾಶ್ಚಂದ್ರ, ಉಪಾಧ್ಯಕ್ಷ ನಿತಿನ್ ಶೆಟ್ಟಿ ಮುಂತಾದವರು ಉಪಸ್ಥಿತರಿದ್ದರು.

ಅಧ್ಯಕ್ಷ ಅಜಿತ್ ಬಂಗೇರ ಹಾಗೂ ಆಡಳಿತ ಮಂಡಳಿ ಎಲ್ಲಾ ಅತಿಥಿ ಗಣ್ಯರಿಗೆ ಗೌರವ ಸನ್ಮಾನ ಸಲ್ಲಿಸಿದರು. ಪ್ರಧಾನ ಕಾರ್ಯದರ್ಶಿ ರಾಮ್ ಪ್ರಸಾದ್ ಅಮ್ಮೆನಡ್ಕ ಸ್ವಾಗತಿಸಿ ವಂದಿಸಿದರು. ಮಾಜಿ ಪ್ರಧಾನ ಕಾರ್ಯದರ್ಶಿ ಕಿರಣ್ ಉಪಾಧ್ಯಾಯ ಪದಗ್ರಹಣ ಕಾರ್ಯಕ್ರಮ ನಿರ್ವಹಿಸಿದರೆ, ರೂಪೇಶ್ ಹಾಗೂ ಸುರಕ್ಷಾ ಸಾಂಸ್ಕೃತಿಕ ಕಾರ್ಯಕ್ರಮ ನಿರೂಪಿಸಿದರು.



ಕನ್ನಡ ಸಂಘ ಬಹರೇನ್‌ನ 2025-2026ನೇ ಸಾಲಿನ ನೂತನ ಆಡಳಿತ ಮಂಡಳಿಯ ಪದಗ್ರಹಣ ಸಮಾರಂಭ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ಸ್ಥಳೀಯ ಬಹರೈನ್ ಕಲ್ಚರಲ್ ಹಾಲ್‌ನಲ್ಲಿ ನಡೆಯಿತು.

PUBLIC NOTICE

This is to inform the General Public that **SRI. ANKISETTY ANJIKUMAR** is the owner of immovable property mentioned in the schedule hereunder and he has lost the original Sale Deed dated 12/3/1993 bearing Document No.2647 / 1992-93, Book-I, Volume 1610 at page 125 to 128 executed by Smt.Harjit Kaur W/o. M.S .Sachideva rep by her GPA Holder Sri. A.H. Rajanna in favour of Smt.Veena S. Rao W/o. Sadananda Rao registered on 06/04/1993 in the office of sub registrar, Ramanagara. In case anybody having any claims or in possession of the said document, shall inform the under singed and handover the same within **SEVEN DAYS** from the date of publication of this notice.

SCHEDULE PROPERTY

All that piece and parcel of the immovable property bearing Site No.14, Kanushmari Khatha No.979/131/14, Old Kanushmari Khatha No.131 /14, PID No.8207573446, ward No.8, formed in converted Sy.No.26/2, duly converted land for Residential Purpose vide Official Memorandum dated 20/05/1992 bearing No.BDIS .ALN. SR:1/1991-93 issued by Sub Divisional Officer, Ramanagara, situated at Kethiganahalli Village, Bidadi Hobli, Ramanagara Taluk, Ramanagara District, measuring east to west 40 feet and north to south 30 feet, totally measuring 1200 Square feet, now comes under the limits of Bidadi Purasabhe and bounded on: **East by:** Road, **West by:** Site No.13, **North By:** Road, **South by:** Site No.15,

N. JAGADEESH KUMAR, Advocate
No.30/1, 2nd Floor, 7th Cross, Near NR Colony
Bus Stand,Opp. Hotel Dwaraka, Bangalore-560019.
Cell # 9341261700

ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಧಿಕರಣ, ಬೆಂಗಳೂರು ಪೀಠ ಸಮ್ಮುಖದಲ್ಲಿ

ಮತ್ತು

ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 52 ಮತ್ತು ಸೆಕ್ಷನ್ 66 ಮತ್ತು ಇನ್ನಿತರ ಸಂಬಂಧಿತ ನಿಯಮಗಳೊಂದಿಗೆ ಸೆಕ್ಷನ್ 230 ಅನ್ನು ಓದಿಕೊಂಡಂತೆ ಪ್ರದತ್ತವಾದ ನಿಯಮಗಳ ವಿಷಯದಲ್ಲಿ

ಮತ್ತು

ಲಗ್ಸುರಿ ಹೈಡ್‌ಅವೇಸ್ ಪ್ರೈವೇಟ್ ಲಿಮಿಟೆಡ್ ಜೊತೆಗೆ **ಪೌಲ್ ರೆಸಾರ್ಟ್ಸ್ ಅಂಡ್ ಹೋಟೆಲ್ಸ್ ಪ್ರೈವೇಟ್ ಲಿಮಿಟೆಡ್** ಮತ್ತು ಅವರವರ ಷೇರುದಾರರ ವಿಲೀನ ಯೋಜನೆಯ ವಿಷಯದಲ್ಲಿ

ಸಿಪಿ (ಸಿಎಎ) ನಂ. 31/ಬಿಬಿ/2025

ಸಿ/ಡಬ್ಲ್ಯು

ಸಿಎ (ಸಿಎಎ) ನಂ. 14/ಬಿಬಿ/2025

ಲಗ್ಸುರಿ ಹೈಡ್‌ಅವೇಸ್ ಪ್ರೈವೇಟ್ ಲಿಮಿಟೆಡ್
ಸಿಐಎನ್ : U63040KA2013PTC069174
ನೋಂದಾಯಿತ ಕಚೇರಿ: ನಂ. 139/28
3ನೇ ಮುಖ್ಯರಸ್ತೆ, ಅಮರಜ್ಯೋತಿ ವೆಸ್ಟ್ ವಿಂಗ್
ದೊಮ್ಮಲೂರು ಬಡಾವಣೆ
ಬೆಂಗಳೂರು - 560 071.

...ಅರ್ಜಿದಾರ ಕಂಪನಿ ನಂ. 1 / ಟ್ರಾನ್ಸ್‌ಫೆರರ್ ಕಂಪನಿ

ಪೌಲ್ ರೆಸಾರ್ಟ್ಸ್ & ಹೋಟೇಲ್ಸ್ ಪ್ರೈವೇಟ್ ಲಿಮಿಟೆಡ್
ಸಿಐಎನ್ : U55101KA2003PTC032853
ನೋಂದಾಯಿತ ಕಚೇರಿ: ನಂ. 139/28
3ನೇ ಮುಖ್ಯರಸ್ತೆ, ಅಮರಜ್ಯೋತಿ ವೆಸ್ಟ್ ವಿಂಗ್
ದೊಮ್ಮಲೂರು ಬಡಾವಣೆ
ಬೆಂಗಳೂರು - 560 071.

...ಅರ್ಜಿದಾರ ಕಂಪನಿ ನಂ. 2 / ಟ್ರಾನ್ಸ್‌ಫೆರೀ ಕಂಪನಿ

ನೋಟಿಸ್

ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 230 ಮತ್ತು 232ರ ಅಡಿಯಲ್ಲಿ 01-08-2025 ರಂದು ಒಂದು ಅರ್ಜಿ ಸಲ್ಲಿಕೆಯಾಗಿದ್ದು, ಸದರಿ ಅರ್ಜಿಯಲ್ಲಿ ಪೌಲ್ ರೆಸಾರ್ಟ್ಸ್ & ಹೋಟೇಲ್ಸ್ ಪ್ರೈವೇಟ್ ಲಿಮಿಟೆಡ್ (ಟ್ರಾನ್ಸ್‌ಫೆರೀ ಕಂಪನಿ) ಜೊತೆಗೆ ಲಗ್ಸುರಿ ಹೈಡ್‌ಅವೇಸ್ ಪ್ರೈವೇಟ್ ಲಿಮಿಟೆಡ್ (ಟ್ರಾನ್ಸ್‌ಫೆರರ್ ಕಂಪನಿ) ಹಾಗೂ ಅವರವರ ಷೇರುದಾರರ ವಿಲೀನ ಯೋಜನೆಯನ್ನು ಮಂಜೂರು ಮಾಡಬೇಕೆಂದು ಅರ್ಜಿದಾರರು ಕೋರಿರುತ್ತಾರೆ ಮತ್ತು ಸದರಿ ಅರ್ಜಿಯು 08-08-2025 ರಂದು ಪ್ರವೇಶಾರ್ಹತೆ ಪಡೆದಿರುತ್ತದೆ ಹಾಗೂ 26-09-2025 ರಂದು ಮಾನ್ಯ ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಾಧಿಕರಣ, ಬೆಂಗಳೂರು ಪೀಠ ರವರ ಸಮ್ಮುಖದಲ್ಲಿ ವಿಚಾರಣೆಗೆ ನಿಗದಿಯಾಗಿರುತ್ತದೆ.

ಸದರಿ ಅರ್ಜಿಯನ್ನು ಬೆಂಬಲಿಸಲು ಅಥವಾ ವಿರೋಧಿಸಲು ಬಯಸುವ ಯಾವುದೇ ವ್ಯಕ್ತಿಯು, ತನ್ನ ಸಂಪೂರ್ಣ ಹೆಸರು ಮತ್ತು ವಿಳಾಸವನ್ನು ನಮೂದಿಸಿರುವ, ತನ್ನ ಅಥವಾ ತನ್ನ ವಕೀಲರ ಸಹಿ ಹಾಕಿರುವ ತನ್ನ ಉದ್ದೇಶದ ನೋಟಿಸ್‌ನ್ನು, ಲಿಖಿತ ರೂಪದಲ್ಲಿನ ನೋಟಿಸ್‌ನ್ನು ಅರ್ಜಿ ವಿಚಾರಣೆಗೆ ನಿಗದಿಯಾಗಿರುವ ದಿನಾಂಕಕ್ಕೆ ಎರಡು ದಿನ ಮುಂಚಿತವಾಗಿ, ಅರ್ಜಿದಾರರ ಪರ ವಕೀಲರ ಕೆಳಕಂಡ ವಿಳಾಸಕ್ಕೆ ತಲುಪುವಂತೆ ರವಾನಿಸಬೇಕು. ಒಂದು ವೇಳೆ ಸದರಿ ಅರ್ಜಿಯನ್ನು ವಿರೋಧಿಸಲು ಬಯಸುವುದಾದಲ್ಲಿ, ತನ್ನ ನೋಟಿಸ್ ಜೊತೆಗೆ, ವಿರೋಧದ ಹಿನ್ನೆಲೆಗಳನ್ನು ನಮೂದಿಸಬೇಕು ಅಥವಾ ಒಂದು ಅಫಿಡವಿಟ್ ಪ್ರತಿಯನ್ನು ಲಗತ್ತಿಸಬೇಕು. ಅರ್ಜಿಯ ಪ್ರತಿಯನ್ನು ಅಗತ್ಯವಿರುವವರಿಗೆ ಕೆಳಕಂಡ ಸಹಿದಾರರು ಒದಗಿಸುತ್ತಿದ್ದು, ಅವಶ್ಯವಿದ್ದವರು ನಿಗದಿತ ಶುಲ್ಕ ಪಾವತಿಸಿ ಪಡೆಯಬಹುದಾಗಿರುತ್ತದೆ.

ದಿನಾಂಕ: 11-09-2025
ಸ್ಥಳ: ಬೆಂಗಳೂರು

ಸಾಜಿ ಪಿ ಜಾನ್
ಎಸ್‌ಪಿಜೆ ಲೀಗಲ್
ಅಡ್ವೊಕೇಟ್ಸ್
ಯೂನಿಟ್ ನಂ. 306, 3ನೇ ಮಹಡಿ, ನಂ. 30
ಪ್ರೆಸ್ಟೀಜ್ ಮೆರಿಡಿಯನ್ 2, ಎಂ ಜಿ ರಸ್ತೆ
ಬೆಂಗಳೂರು - 560 001
ಫೋನ್: +91 98452 09798
ಇಮೇಲ್: saji@spjlegal.com

ಸ್ವಾಧೀನತೆಯ ಪ್ರಕಟಣೆ
(ಸ್ಥಿರಾಸ್ತಿಗಳಿಗೆ)

ಕೆಳಸಹಿದಾರರು ಸಿಎಫ್‌ಎಮ್ ಅಸೆಟ್ ರಿಕನ್‌ಸ್ಟ್ರಕ್ಷನ್ ಪ್ರೈವೇಟ್ ಲಿಮಿಟೆಡ್ (ಸಿಎಫ್‌ಎಮ್‌ಎಆರ್‌ಸಿ) **CIN:U67100GJ2015PTC083994)** (ಇದರ ಅಧಿಕೃತ ಅಧಿಕಾರಿಯಾಗಿದ್ದು, ಸೆಕ್ಯುರಿಟೈಜೇಶನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಶಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಕಾಯಿದೆ 2002, ನಿಯಮ 13(12) ರ ನಿಯಮ 3 ನ್ನು ಓದಿಕೊಂಡಂತೆ ಭದ್ರತಾ ಹಿತಾಸಕ್ತಿ (ಅನುಷ್ಠಾನ) ನಿಯಮಗಳು 2002ರ ಅನ್ವಯ ಈ ಕೆಳಗಿನ ಸಾಲಗಾರರಿಗೆ ದಿನಾಂಕ 29.12.2021 ರಂದು ತಗಾದೆ ಸೂಚನೆಯನ್ನು ನೀಡಿದ್ದು, ಸಾಲಗಾರರಾದ ಕುಮುದ ಸಿ ಮತ್ತು ಯೋಗೇಶ್ ಪೂಣಚ್ಚ ಇವರುಗಳು ಈ ನೋಟಿಸಿನಲ್ಲಿ ತಿಳಿಸಿರುವಂತೆ 24.12.2021ರವರೆಗೆ ಬಾಕಿ ಮೊತ್ತ ರೂ.1,88,585.65/- (ಒಂದು ಲಕ್ಷ ಎಂಭತ್ತೆಂಟು ಸಾವಿರದ ಐನೂರ ಎಂಭತ್ತೈದು ರೂಪಾಯಿಗಳು ಮತ್ತು ಪೈಸೆ ಅರುವತ್ತೈದು ಮಾತ್ರ) ವನ್ನು ಸಾಲದ ಖಾತಾ ಸಂ. **HHEBAN00453553** ರಲ್ಲಿ ಹಾಗೂ ಬಡ್ಡಿ, ವೆಚ್ಚ ಮತ್ತು ಖರ್ಚುಗಳನ್ನು ಈ ನೋಟೀಸ್ ನೀಡಿದ 60 ದಿನಗಳ ಒಳಗಾಗಿ ಪಾವತಿಸುವಂತೆ ಸೂಚನೆ ನೀಡಲಾಗಿತ್ತು.

ಸಾಲಗಾರರು ಹಣವನ್ನು ಮರುಪಾವತಿ ಮಾಡಲು ವಿಫಲರಾಗಿದ್ದು, ಸಾಲಗಾರರು ಹಾಗೂ ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ, ಕೆಳಸಹಿದಾರರು ಈ ಕೆಳಗೆ ವಿವರಿಸಿರುವ ಸ್ಥಿರಾಸ್ತಿಗಳನ್ನು ಸೆಕ್ಷನ್ 13 ರ ಸಬ್ ಸೆಕ್ಷನ್(4)ರ ಕಾಯಿದೆಯಂತೆ ನಿಯಮ 8 ರ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು 2002ರ ಅನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ 08.09.2025 ರಂದು ಸಾಂಕೇತಿಕವಾಗಿ ಸ್ವಾಧೀನ ಪಡಿಸಿಕೊಂಡಿರುತ್ತಾರೆ.

ಸಾಲಗಾರರು ಹಾಗೂ ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ, ಈ ಸ್ವತ್ತುಗಳ ಬಗ್ಗೆ ಯಾರೂ ವ್ಯವಹರಿಸಕೂಡದು, ಒಂದು ವೇಳೆ ವ್ಯವಹರಿಸಿದ್ದೇ ಆದಲ್ಲಿ ಅಸೆಟ್ ರಿಕನ್‌ಸ್ಟ್ರಕ್ಷನ್ ಪ್ರೈವೇಟ್ ಲಿಮಿಟೆಡ್ (ಸಿಎಫ್‌ಎಮ್‌ಎಆರ್‌ಸಿ) ಬರಬೇಕಾದ ಬಾಕಿ ಹಣ 24.12.2021 ರವರೆಗೆ ಬಾಕಿ ಮೊತ್ತ ರೂ.1,88,585.65/- (ಒಂದು ಲಕ್ಷ ಎಂಭತ್ತೆಂಟು ಸಾವಿರದ ಐನೂರ ಎಂಭತ್ತೈದು ರೂಪಾಯಿಗಳು ಮತ್ತು ಪೈಸೆ ಅರುವತ್ತೈದು ಮಾತ್ರ) ವನ್ನು ಹಾಗೂ ನಂತರದ ಬಡ್ಡಿಯನ್ನು ಪಾವತಿಸಬೇಕಾಗುವುದು.

ಸೆಕ್ಷನ್ 13(8) ರ ಸರ್ಫೇಸಿ ಕಾಯಿದೆ ಹಾಗೂ ನಿಯಮಾನುಸಾರ ಭದ್ರತಾ ಆಸ್ತಿಗಳನ್ನು ನೀವು ಮರುಪಡೆಯಲು ಅವಕಾಶವಿದೆ ಎಂಬುದನ್ನು ನಿಮ್ಮ ಗಮನಕ್ಕೆ ತರುತ್ತಿದ್ದೇವೆ.

ಸ್ಥಿರ ಆಸ್ತಿಯ ವಿವರ

ಫ್ಲ್ಯಾಟ್ ನಂ. ಎಂ-31ನೇ ಮಹಡಿ, ಮಿರಾಕಲ್ ಮೆಡೋಸ್ ಸೈಟ್ ನಂ. 220, ಕೊಡಿಗೆಹಳ್ಳಿ ಗ್ರಾಮ, ಬೆಂಗಳೂರು, ಕರ್ನಾಟಕ-560092.

ಸಹಿ/-ಅಧಿಕೃತ ಅಧಿಕಾರಿ
ಸಿಎಫ್‌ಎಮ್ ಅಸೆಟ್ ರಿಕನ್‌ಸ್ಟ್ರಕ್ಷನ್ ಪ್ರೈವೇಟ್ ಲಿಮಿಟೆಡ್
ಆಕ್ಟಿಂಗ್ ಇನ್‌ಕೆಪಾಸಿಟಿ ಆಸ್ ಟ್ರಸ್ಟೀ ಆಫ್ ಸಿಎಫ್‌ಎಮ್‌ಎಆರ್‌ಸಿ ಟ್ರಸ್ಟ್-1 ಐಹೆಚ್‌ಎಫ್‌ಎಲ್

ದಿನಾಂಕ: 08.09.2025
ಸ್ಥಳ: ಬೆಂಗಳೂರು

POSSESSION NOTICE
(for immovable property)

Whereas, The undersigned being the Authorized Officer of the **CFM ASSET RECONSTRUCTION PRIVATE LIMITED (CFMARC) (CIN:U67100GJ2015PTC083994)** under the Securitization and Reconstruction of Financial Assets and Enforcement of Security Interest Act, 2002 and in exercise of powers conferred under Section 13 (12) read with Rule 3 of the Security Interest (Enforcement) Rules, 2002 issued **Demand Notice dated 29.12.2021 calling upon the Borrowers KUMUDA C and YOGESH POONACHA to repay the amount mentioned in the Notice being Rs. 1,88,585.65/- (Rupees One Lakh Eighty Eight Thousand Five Hundred Eighty Five and Paise Sixty Five Only) against Loan Account No. HHEBAN00453553 as on 24.12.2021** and interest thereon within 60 days from the date of receipt of the said Notice.

The Borrower having failed to repay the amount, Notice is hereby given to the Borrower and the public in general that the undersigned has taken **symbolic possession** of the property described herein below in exercise of powers conferred on him under Sub-Section (4) of Section 13 of the Act read with Rule 8 of the Security Interest (Enforcement) Rules, 2002 **on 08.09.2025.**

The Borrower in particular and the public in general is hereby cautioned not to deal with the property and any dealings with the property will be subject to the charge of the **CFM ASSET RECONSTRUCTION PRIVATE LIMITED (CFMARC) for an amount of Rs. 1,88,585.65/- (Rupees One Lakh Eighty Eight Thousand Five Hundred Eighty Five and Paise Sixty Five Only)** as on 24.12.2021 and interest thereon.

The Borrower's attention is invited to provisions of Sub-Section (8) of Section 13 of the Act in respect of time available, to redeem the secured assets.

DESCRIPTION OF THE IMMOVABLE PROPERTY

FLAT NO M-3 1ST FLOOR, MIRACLE MEADOWS SITE NO 220, KODIGEHALLI VILLAGE, BENGALURU, KARNATAKA - 560092.

Place: BENGALURU
Date: 08/09/2025

Sd/- Authorized Officer
CFM ASSET RECONSTRUCTION PRIVATE LIMITED
acting in its capacity as Trustee of CFMARC Trust-I IHFL



ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ನೂತನ ನಿರ್ದೇಶಕರಾಗಿ ಬುಧವಾರ ಡಾ.ಬಿ.ದಿನೇಶ್ ಅವರು ಅಧಿಕಾರ ಸ್ವೀಕಾರ ವಹಿಸಿಕೊಂಡರು. ಆಸ್ಪತ್ರೆಯ ಹಿಂದಿನ ನಿರ್ದೇಶಕ ಡಾ. ಕೆ.ಎಸ್ ರವೀಂದ್ರನಾಥ್ ಹಾಗೂ ಸಿಬ್ಬಂದಿಗಳಿದ್ದರು.

ದೂರು ನೀಡಿದ್ದಕ್ಕೆ ಬೆತ್ತಲೆಗೊಳಿಸಿ ವಿಕೃತಿ

ಆನೇಕಲ್: ದ್ವಿತೀಯ ಪಿಯುಸಿ ವಿದ್ಯಾರ್ಥಿಗಳು 10 ತರಗತಿ ವಿದ್ಯಾರ್ಥಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಿರುವ ಬನ್ನೇರುಘಟ್ಟ ಪೊಲೀಸ್ ಠಾಣಾ ವ್ಯಾಪ್ತಿಯ ಖಾಸಗಿ ಶಾಲಾ ಹಾಸ್ಟೆಲ್‌ನಲ್ಲಿ ನಡೆದಿದೆ.

10 ಕ್ಲಾಸ್ ವಿದ್ಯಾರ್ಥಿಯೊಬ್ಬನ ಮೇಲೆ ಸೀನಿಯರ್‌ಗಳು ರ್‍ಯಾಗಿಂಗ್ ಮಾಡಿದ್ದಾರೆ. ಇದರಿಂದ ನೊಂದ ವಿದ್ಯಾರ್ಥಿ, ವಾರ್ಡನ್ ಹಾಗೂ ಪ್ರಿನ್ಸಿಪಾಲ್‌ಗೆ ದೂರು ನೀಡಿದ್ದಾನೆ. ಇದಕ್ಕೆ ಕೋಪಗೊಂಡ ಸೀನಿಯರ್ ವಿದ್ಯಾರ್ಥಿಗಳು, ಹೊಸ ವಿದ್ಯಾರ್ಥಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ. ಈ ಸಂಬಂಧ ಐವರು ವಿದ್ಯಾರ್ಥಿಗಳು, ಶಾಲೆಯ ಪ್ರಿನ್ಸಿಪಾಲ್ ಮತ್ತು ವಾರ್ಡನ್ ವಿರುದ್ಧ ಎಫ್‌ಐಆರ್ ದಾಖಲಾಗಿದೆ. ಸಂತ್ರಸ್ತ ವಿದ್ಯಾರ್ಥಿಯ ತಂದೆ ನೀಡಿದ ದೂರನ್ನು ಆಧರಿಸಿ ತನಿಖೆ ನಡೆಸಲಾಗುತ್ತಿದೆ.

ವಿಚ್ಛೇದಿತ ಹೆಂಡತಿ ಗಂಡನ ಮೇಲೆಯೇ ಅವಲಂಬನೆ ಸಲ್ಲ

ಬೆಂಗಳೂರು: ವಿಚ್ಛೇದನ ಪ್ರಕರಣದಲ್ಲಿ ಹೆಂಡತಿ ಉದ್ಯೋಗ ಪಡೆಯಲು ಮುಂದಾಗದೇ ಶಾಶ್ವತವಾಗಿ ಗಂಡನ ಮೇಲೆ ಅವಲಂಬಿತಳಾಗುವು ದಕ್ಕೆ ಅವಕಾಶವಿಲ್ಲ ಎಂದು ಅಭಿಪ್ರಾಯಪಟ್ಟಿರುವ ಹೈಕೋರ್ಟ್, ಮುಂದಿನ ಆರು ತಿಂಗಳಲ್ಲಿ ಉದ್ಯೋಗ ಪಡೆದುಕೊಳ್ಳಬೇಕು ಎಂದು ಪ್ರಕರಣವೊಂದರಲ್ಲಿ ವಿಚ್ಛೇದಿತ ಪತ್ನಿಗೆ ಸಲಹೆ ನೀಡಿದೆ.

ದೂರುದಾರೆ ಪತ್ನಿ ಉನ್ನತಮಟ್ಟದ ಶಿಕ್ಷಣ ಪಡೆದಿದ್ದರೂ ತೀವ್ರ ಒತ್ತಡದಲ್ಲಿದ್ದೇನೆ, ಉದ್ಯೋಗ ಸಿಗುತ್ತಿಲ್ಲ ಎಂಬ ಕಾರಣಗಳನ್ನು ನೀಡಿ ಪತಿಯಿಂದ ಜೀವನಾಂಶ ಪಡೆಯಲು ಆಧಾರವಾಗುವುದಿಲ್ಲ ಎಂದು ಪೀಠ ತನ್ನ ಆದೇಶದಲ್ಲಿ ತಿಳಿಸಿದೆ. ವಿಚ್ಛೇದನದ ಬಳಿಕ ಮಾಸಿಕ 20 ಸಾವಿರ ರು. ಜೀವನಾಂಶ ನೀಡಲು ಆದೇಶಿಸಿದ್ದ ವಿಚಾರಣಾ ನ್ಯಾಯಾಲಯದ ಆದೇಶ ಪ್ರಶ್ನಿಸಿ ಪತಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಲಲಿತಾ ಕನ್ನೆಗಂಟ್ಟಿ ಅವರಿದ್ದ ನ್ಯಾಯಪೀಠ ಈ ಮೇಲಿನಂತೆ ಹೇಳಿದೆ.

ಪ್ರಕರಣ ಸಂಬಂಧ ದಾಖಲೆಗಳನ್ನು ಪರಿಶೀಲಿಸಿದ ನ್ಯಾಯಪೀಠ, ಪ್ರತಿವಾದಿಯಾಗಿರುವ ಪತ್ನಿ ಜೈವಿಕ ತಂತ್ರಜ್ಞಾನದಲ್ಲಿ ಎಂ.ಟೆಕ್ ಪದವೀಧರೆಯಾಗಿದ್ದು, ಉದ್ಯೋಗ ಪಡೆಯುವುದಕ್ಕೆ ಅರ್ಹರಾಗಿದ್ದಾರೆ. ವಿವಾಹಕ್ಕೂ ಮುನ್ನ ಕೆಲಸಕ್ಕೆ ಹೋಗುತ್ತಿದ್ದರು. ಆದರೆ, ವಿಚ್ಛೇದನದ ಬಳಿಕ ಮಾನಸಿಕ ಒತ್ತಡದಿಂದ ಉದ್ಯೋಗ ಪಡೆಯಲು ಪ್ರಯತ್ನ ಮಾಡಿಲ್ಲ ಎಂಬ ಅಂಶ ದಾಖಲೆಗಳ ಮೂಲಕ ತಿಳಿದು ಬಂದಿದೆ. ಉದ್ಯೋಗ ಪಡೆದು ದುಡಿಯಲು ಅರ್ಹರಿದ್ದರೂ ಮನೆಯಲ್ಲಿ ಕುಳಿತು ಪತಿಯನ್ನು ಅವಲಂಬಿಸುವುದಕ್ಕೆ ಸಾಧ್ಯವಿಲ್ಲ ಎಂದು ನ್ಯಾಯಪೀಠ ಹೇಳಿದೆ.

ಜತೆಗೆ, ವಿಚಾರಣಾ ನ್ಯಾಯಾಲಯದ ಆದೇಶ ಮಾರ್ಪಡಿಸಿರುವ ನ್ಯಾಯಪೀಠ, ಮುಂದಿನ 6 ತಿಂಗಳಲ್ಲಿ ಪತ್ನಿ ಉದ್ಯೋಗವನ್ನು ಪಡೆದುಕೊಳ್ಳುವುದಕ್ಕೆ ಎಲ್ಲ ಪ್ರಯತ್ನಗಳನ್ನು ಮಾಡಬೇಕು. ಅಲ್ಲಿಯವರೆಗೂ ಮಾಸಿಕ 10 ಸಾವಿರ ರು.ಗಳನ್ನು ಪತಿ ಪಾವತಿಸಬೇಕು. ಆರು ತಿಂಗಳ ಬಳಿಕ (ಪತ್ನಿಗೆ ಕೆಲಸ ಸಿಕ್ಕ ನಂತರ) 10 ಸಾವಿರ ರು.ಪಾವತಿಸಲು ನಿರ್ದೇಶನ ನೀಡಿರುವ ಆದೇಶವನ್ನು ಮರು ಪರಿಶೀಲನೆ ನಡೆಸಲು ಕೌಟುಂಬಿಕ ನ್ಯಾಯಾಲಯಕ್ಕೆ ಹೈಕೋರ್ಟ್ ಸೂಚಿಸಿತು.

ಪತ್ರಿಕಾ ವಿತರಕ ಎಂ.ಸತೀಶ್ ನಿಧನ

ಯಲಹಂಕ: ಯಲಹಂಕ ಉಪನಗರ ವಾರ್ಡ್ 4ರ ಬಿಬಿಎಂಪಿ ಮಾಜಿ ಸದಸ್ಯರು, ಯಲಹಂಕ ನಗರ ಮಂಡಲ ಬಿಜೆಪಿ ಅಧ್ಯಕ್ಷರು, ಯಲಹಂಕ ದಿನಪತ್ರಿಕೆ ವಿತರಕರ ಸಂಘದ ಅಧ್ಯಕ್ಷರಾಗಿದ್ದ ಎಂ.ಸತೀಶ್ (56) ಅವರು ಬುಧವಾರ ಸಂಜೆ ನಿಧನರಾಗಿದ್ದಾರೆ. ಕಳೆದ ಕೆಲ ತಿಂಗಳಿಂದ ಎಂ. ಸತೀಶ್ ರವರು ಆರೋಗ್ಯ ಸಮಸ್ಯೆಯಿಂದ ಬಳಲುತ್ತಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು, ಚಿಕಿತ್ಸೆ ಫಲಕಾರಿಯಾಗದೆ ಬುಧವಾರ ಸಂಜೆ ಮೃತರಾಗಿದ್ದು, ಸತೀಶ್ ಅವರು ಪತ್ನಿ ಯಶೋಧ ಮತ್ತು ಪುತ್ರನನ್ನು ಅಗಲಿದ್ದಾರೆ. ಯಲಹಂಕ ಉಪನಗರದಲ್ಲಿನ ಅವರ ಸ್ವಗೃಹದ ಬಳಿ ಗುರುವಾರ 11.30ರವರೆಗೆ ಅಂತಿಮ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿದ್ದು, ಅಂತ್ಯಕ್ರಿಯೆ 3.30ಕ್ಕೆ ಅವರ ಸ್ವಗ್ರಾಮ ದೊಡ್ಡಬಳ್ಳಾಪುರ ತಾಲೂಕು, ತೂಬಗೆರೆ ಹೋಬಳಿಯ ಮಾರಹಳ್ಳಿಯಲ್ಲಿ ನಡೆಯಲಿದೆ ಎಂದು ಅವರ ಕುಟುಂಬಸ್ಥರು ತಿಳಿಸಿದ್ದಾರೆ. ಸತೀಶ್ ಅವರ ಅಗಲಿಕೆಗೆ ಯಲಹಂಕ ಶಾಸಕ ಎಸ್.ಆರ್ ವಿಶ್ವನಾಥ್, ಯುವ ಮುಖಂಡ ಅಲೋಕ್ ವಿಶ್ವನಾಥ್, ಆರ್‌ಎಸ್‌ಎಸ್ ಎನ್ ಬ್ಯಾಂಕ್ ಅಧ್ಯಕ್ಷೆ ಡಾ.ವಾಣಿಶ್ರೀ ವಿಶ್ವನಾಥ್, ಬಿಜೆಪಿ ಮುಖಂಡರಾದ ದಿಬ್ಬೂರು ಜಯಣ್ಣ, ಎಸ್.ಎನ್. ರಾಜಣ್ಣ, ಮುರಾರಿರಾಮು, ಎಂ.ಜಿ. ರಾಮಮೂರ್ತಿ, ಸತೀಶ್ ಕಡತನಮಲೆ, ವಿ.ಪವನ್ ಕುಮಾರ್, ಈಶ್ವರ್, ಸೋಮಶೇಖರ್ ಸೇರಿದಂತೆ ಯಲಹಂಕ ಕ್ಷೇತ್ರದ ಹಲವು ಬಿಜೆಪಿ ಮುಖಂಡರು, ಯಲಹಂಕ ದಿನಪತ್ರಿಕೆ ವಿತರಕರ ಸಂಘದ ಪದಾಧಿಕಾರಿಗಳು ಸಂತಾಪ ಸೂಚಿಸಿದ್ದು, ಸತೀಶ್ ಅವರ ಅಗಲಿಕೆಯ ದುಃಖವನ್ನು ಸಂತೈಸಿಕೊಳ್ಳುವ ಶಕ್ತಿಯನ್ನು ದೇವರು ಅವರ ಕುಟುಂಬ ವರ್ಗಕ್ಕೆ ನೀಡಲೆಂದು ಪ್ರಾರ್ಥಿಸಿದ್ದಾರೆ.

ಹಿರಿಯ ವಕೀಲ ಸಿ.ಎಚ್.ಜಾಧವ್ ಬರೆದಿರುವ ರಿಲೇಟಿಂಗ್ ಟು ಕರಪ್ಷನ್ ಆ್ಯಂಡ್ ಪೊಸ್ಸೆಷನ್ ಆಫ್ ಡಿಸ್ ಪ್ರೊಪೋರ್ಷನೇಟ್ ಆಸ್ಸೆಟ್ಸ್ 2ನೇ ಆವೃತ್ತಿಯನ್ನು ಬುಧವಾರ ಲೋಕಾರ್ಪಣೆ ಮಾಡಲಾಯಿತು. ಈ ವೇಳೆ ಕಾನೂನು ಸಚಿವ ಎಚ್.ಕೆ.ಪಾಟೀಲ್, ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್ ಪಾಟೀಲ್, ಅಗ್ನಿಶಾಮಕ ಇಲಾಖೆಯ ಡಿಜಿಪಿ ಪ್ರಶಾಂತ್ ಕುಮಾರ್ ಠಾಕೂರ್, ಹಿರಿಯ ವಕೀಲ ಸಿ .ಎಚ್. ಜಾದವ್ ರಾಜಶೇಖರ್ ಟಿ.ಬಿ ಹಾಗೂ ಹೆಚ್ಚುವರಿ ಪಬ್ಲಿಕ್ ಪ್ರಾಸಿಕ್ಯೂಟರ್ ರಶ್ಮಿ ಜಾದವ್ ಇದ್ದರು.

ಸಮಾಚಾರ ಸಣ್ಣದಲ್ಲ

ವಿದ್ಯುತ್ ವ್ಯತ್ಯಯ ನಾಳೆ

ಬೆಂಗಳೂರು: ಕೆಪಿಟಿಸಿಎಲ್ ವತಿಯಿಂದ ತುರ್ತು ನಿರ್ವಹಣಾ ಕಾಮಗಾರಿನ ಹಿನ್ನೆಲೆ ಸೆ.12ರಂದು ಬೆಳಗ್ಗ 10.00 ರಿಂದ 2.00 ಗಂಟೆಯವರೆಗೆ 66/11 ಕೆವಿ ಗ್ಲೋಬಲ್ ಟೆಕ್ ಪಾರ್ಕ್‌ನ ದೇವರಬಸನಹಳ್ಳಿ, ಆದರ್ಶ ಸಾಯಿ ಸೃಷ್ಟಿ, ಸ್ಟರ್ಲಿಂಗ್ ಅಸೆಂಟಿನಾ, ಸಾಮಿ ಜೆ.ವಿ. ಹೋಟೆಲ್ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಸಿಜಿಕೆ-75 ಮಾಸದ ನೆನಪು ಕಾರ್ಯಕ್ರಮ

ಬೆಂಗಳೂರು: ಮಲ್ಲತಹಳ್ಳಿ ಕಲಾಗ್ರಾಮದಲ್ಲಿ ಸೆ.11ರ ಸಂಜೆ 6.30 ಗಮಟೆಗೆ ಸಂಚಲನ ಮೈಸೂರು ಗಂಧರ್ವ ಸಾಂಸ್ಕೃತಿಕ ಕಲಾವೇದಿಕೆ ಯಿಂದ ಒಡನಾಡಿ ಬಂಧು ಸಿಜಿಕೆ-75 ಮಾಸದ ನೆನಪು ಸರಣಿ ಕಾರ್ಯ ಕ್ರಮ 03ನ್ನು ಆಯೋಜಿಸಿದೆ. ಕಾರ್ಯಕ್ರಮಕ್ಕೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಬಲವಂತ ರಾವ್ ಪಾಟೀಲ್ ಮುಖ್ಯ ಅತಿಥಿಯಾಗಿ ಆಗಮಿಸಲಿದ್ದಾರೆ. ಸಂಚಲನ ಮೈಸೂರು ರಂತ ತಂಡದಿಂದ ಡಾ. ಚಂದ್ರಶೇಖರ ಕಂಬಾರರ ಹರಕೆಯ ಕುರಿ ನಾಟಕ ಪ್ರದರ್ಶನವಿರಲಿದೆ. ಟಿಕೆಟ್ ಬುಕ್ ಮೈಶೋನಲ್ಲಿ ಲಭ್ಯವಿರಲಿದ್ದು, ಪ್ರೋತ್ಸಾಹ ಧನ 100 ರು. ಇರಲಿದೆ.

ಅದಿರು ಕಳ್ಳತನ ಪ್ರಕರಣ | ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಆದೇಶ

ಶಾಸಕ ಸತೀಶ್ ಸೈಲ್ 2 ದಿನ ಇಡಿ ಕಸ್ಟಡಿಗೆ

ಬೆಂಗಳೂರು: ಕಬ್ಬಿಣ ಅದಿರು ಕಳ್ಳತನ ಮತ್ತು ಅಕ್ರಮ ಸಾಗಣೆ ಪ್ರಕರಣದಲ್ಲಿ ಅಕ್ರಮ ಹಣ ವರ್ಗಾವಣೆಯ ಆರೋಪದಡಿ ಬಂಧಿತ ರಾಗಿರುವ ಕಾರವಾರ, ಅಂಕೋಲಾ ಕ್ಷೇತ್ರದ ಕಾಂಗ್ರೆಸ್ ಶಾಸಕ ಸತೀಶ್ ಸೈಲ್ ಅವರನ್ನು ಸೆಪ್ಟೆಂಬರ್ 12ರವರೆಗೂ ಇ.ಡಿ ಕಸ್ಟಡಿಗೆ ನೀಡಿ ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸಂತೋಷ್ ಗಜಾನನ ಭಟ್ ಅವರು ಆದೇಶಿಸಿದ್ದಾರೆ.

ಬಂಧಿತ ಸತೀಶ್ ಸೈಲ್ ಅವರನ್ನು ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಬುಧವಾರ ಜನಪ್ರತಿನಿಧಿಗಳ ವಿಶೇಷ ಕೋರ್ಟ್‌ಗೆ ಹಾಜರುಪಡಿಸಿದ್ದರು. ಈ ವೇಳೆ ನ್ಯಾಯಾಧೀಶ ಸಂತೋಷ್ ಗಜಾನನ ಭಟ್, ಸೈಲ್ ಅವರನ್ನು ಸೆ.12ರವರೆಗೆ ಎರಡು ದಿನ ಇ.ಡಿ ಕಸ್ಟಡಿಗೆ ವಹಿಸಿ ಆದೇಶಿಸಿದ್ದಾರೆ. ಉತ್ತರ ಕನ್ನಡ ಜಿಲ್ಲೆಯ ಬೇಲೇಕೇರಿ ಬಂದರಿನಲ್ಲಿ ವಶಕ್ಕೆ ಪಡೆದು ಸಂಗ್ರಹಿಸಲಾಗಿದ್ದ ಸಾವಿರಾರು ಟನ್‌ಗಳಷ್ಟು ಕಬ್ಬಿಣದ ಅದಿರನ್ನು ಅಕ್ರಮವಾಗಿ ಸಾಗಣೆ ಮಾಡಿದ ಪ್ರಕರಣದಲ್ಲಿ ಶಾಸಕ ಸತೀಶ್ ಸೈಲ್ ಅವರಿಗೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ 7 ವರ್ಷಗಳ ಕಾಲ ಜೈಲು ಶಿಕ್ಷೆ ವಿಧಿಸಿತ್ತು. ಈ ತೀರ್ಪು ಪ್ರಶ್ನಿಸಿ ಸತೀಶ್ ಸೈಲ್ ಮತ್ತಿತರರು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ವಿಚಾರಣೆ ನಡೆಸಿದ್ದ ಹೈಕೋರ್ಟ್ ಶಿಕ್ಷೆಯನ್ನು ಅಮಾನತಿನಲ್ಲಿಟ್ಟಿತ್ತು.

ವಿಚಾರಣೆಗೆ ಹಾಜರಾಗಿದ್ದ ವೇಳೆ ಬಂಧನ

ಪ್ರಕರಣದಲ್ಲಿ ಅಕ್ರಮವಾಗಿ ಹಣದ ವರ್ಗಾವಣೆ ಸಹ ಕಂಡುಬಂದ ಹಿನ್ನೆಲೆಯಲ್ಲಿ, ಇಸಿಐಆರ್ ದಾಖಲಿಸಿಕೊಂಡಿದ್ದ ಇ.ಡಿ ಅಧಿಕಾರಿಗಳು ಪ್ರತ್ಯೇಕ ತನಿಖೆ ಆರಂಭಿಸಿದ್ದರು. ಆಗಸ್ಟ್ 13 ಮತ್ತು 14ರಂದು ಸತೀಶ್ ಸೈಲ್ ಅವರ ಕಾರವಾರ ಮತ್ತು ಬೆಂಗಳೂರಿನ ಮನೆಗಳ ಮೇಲೆ ದಾಳಿ ನಡೆಸಿದಾಗ ನಗದು, ಚಿನ್ನಾಭರಣ ಸಹಿತ 13 ಕೋಟಿ ಮೌಲ್ಯದ ವಸ್ತುಗಳು ಪತ್ತೆಯಾಗಿವೆ ಎಂದು ಇ.ಡಿ ಅಧಿಕಾರಿಗಳು ತಿಳಿಸಿದ್ದರು. ಬಳಿಕ ಈ ಸಂಬಂಧ ವಿಚಾರಣೆಗೆ ಹಾಜರಾಗುವಂತೆ ಇ.ಡಿ ಅಧಿಕಾರಿಗಳು ಸತೀಶ್ ಸೈಲ್ ಅವರಿಗೆ ನೋಟಿಸ್ ನೀಡಿದ್ದರು. ಮಂಗಳವಾರ ಶಾಂತಿ ನಗರದ ಜಾರಿ ನಿರ್ದೇಶನಾಲಯದ ಕಚೇರಿಗೆ ಆಗಮಿಸಿದ್ದ ಸತೀಶ್ ಸೈಲ್ ಅವರನ್ನು ಅಧಿಕಾರಿಗಳು ಹಲವು ಗಂಟೆಗಳ ಕಾಲ ವಿಚಾರಣೆ ನಡೆಸಿದ್ದರು. ಬಳಿಕ ಅವರನ್ನು ಬಂಧನ ಮಾಡಲಾಗಿದೆ.

ನೆಲಮಂಗಲ ನಗರದ ಹರ್ಷ ಇಂಟರ್‌ನ್ಯಾಷನಲ್ ಶಾಲಾ ಸಭಾಂಗಣದಲ್ಲಿ ನಡೆದ ಶಿಕ್ಷಕರ ದಿನಾಚರಣೆಯನ್ನು ರುದ್ರಮುನಿ ಶಿವಾಚಾರ್ಯ ಸ್ವಾಮೀಜಿ ಉದ್ಘಾಟಿಸಿದರು. ಈ ವೇಳೆ ತಾಲೂಕಿನ 41 ಖಾಸಗಿ ಶಾಲೆಗಳಲ್ಲಿ ಹೆಚ್ಚು ವರ್ಷ ಸೇವೆ ಸಲ್ಲಿಸಿದ ಶಿಕ್ಷಕರಿಗೆ ಹರ್ಷ ಶಿಕ್ಷಣರತ್ನ, ಹರ್ಷ ವಿಭೂಷಣ, ಹರ್ಷ ಭೂಷಣ ಪ್ರಶಸ್ತಿಯನ್ನು ರುದ್ರಮುನಿ ಶಿವಾಚಾರ್ಯ ಸ್ವಾಮೀಜಿಗಳು ನೀಡಿ ಗೌರವಿಸಿದರು. ಈ ವೇಳೆ ಖಾಸಗಿ ಶಾಲೆಗಳ ಒಕ್ಕೂಟದ ಅಧ್ಯಕ್ಷ ಟಿ.ಕೆ. ನರಸೇಗೌಡ ಹಾಗೂ ಖಾಸಗಿ ಶಾಲಾ ಶಿಕ್ಷಕರು, ಹರ್ಷ ಶಾಲೆ ಪ್ರಾಂಶುಪಾಲೆ ಸೇರಿದಂತೆ ಮತ್ತಿತರರಿದ್ದರು.

ಇಂದು ಬೆಂಗಳೂರಲ್ಲಿ ಕಾಮನ್‌ವೆಲ್ತ್ ಸಂಸದೀಯ ಸಭೆ

ಬೆಂಗಳೂರು: ಕಾಮನ್‌ವೆಲ್ತ್ ಸಂಸದೀಯ ಸಂಘದ (ಸಿಪಿಎ) ಭಾರತ ವಿಭಾಗದ 11ನೇ ಸಮ್ಮೇಳನ ಗುರುವಾರದಿಂದ ಸೆ.13ರವರೆಗೆ ನಡೆಯಲಿದೆ ಎಂದು ವಿಧಾನಸಭೆ ಸ್ಪೀಕರ್ ಯು.ಟಿ.ಖಾದರ್ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿಧಾನಸೌಧದ ಮೆಟ್ಟಿಲುಗಳ ಮೇಲೆ ಸಂಜೆ 5.30ಕ್ಕೆ ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಸಮ್ಮೇಳನ ಉದ್ಘಾಟಿಸಲಿದ್ದಾರೆ. ಲೋಕಸಭೆಯ ಮಾರ್ಗದರ್ಶನದಂತೆ ಆಯೋಜನೆ ಮಾಡಲಾಗಿದ್ದು, ಜಾಹೀರಾತಿನಿಂದ ಹಿಡಿದು ಪ್ರತಿಯೊಂದು ಅವರ ಅನುಮತಿ ಮೇರೆಗೆ ಮಾಡಲಾಗುತ್ತಿದೆ. ಗುರುವಾರ ಮಧ್ಯಾಹ್ನ 3ಕ್ಕೆ ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಲೋಕಸಭೆ ಸ್ಪೀಕರ್ ಓಂಬಿರ್ಲಾ ಅಧ್ಯಕ್ಷತೆಯಲ್ಲಿ ಸಿಪಿಎ ಕಾರ್ಯಕಾರಣಿ ಸಭೆ ನಡೆಯಲಿದೆ. ಸಂಜೆ 5ಕ್ಕೆ ಫೋಟೋಸೆಷನ್ ಇರಲಿದೆ ಎಂದು ವಿವರಿಸಿದರು. ಸೆ.12 ಮತ್ತು 13 ರಂದು ತಾಜ್ ವೆಸ್ಟ್ ಎಂಡ್ ಹೋಟೆಲ್‌ನಲ್ಲಿ ಸಮ್ಮೇಳನ ನಡೆಯಲಿದ್ದು, ಸಮ್ಮೇಳನದಲ್ಲಿ ಲೋಕಸಭೆಯ ಸಭಾಧ್ಯಕ್ಷರು, ರಾಜ್ಯಸಭೆಯ ಉಪ ಸಭಾಪತಿಯವರು. ಭಾರತ ದೇಶದ ಎಲ್ಲ ರಾಜ್ಯಗಳ ವಿಧಾನಸಭೆಯ ಸಭಾಧ್ಯಕ್ಷರುಗಳು/ಉಪ ಸಭಾಧ್ಯಕ್ಷರುಗಳು, ವಿಧಾನ ಪರಿಷತ್ತಿನ ಸಭಾಪತಿಗಳು/ಉಪ ಸಭಾಪತಿಗಳು, ಲೋಕಸಭಾ ಸದಸ್ಯರು, ವಿದೇಶಿ ಗಣ್ಯರುಗಳು, ಲೋಕಸಭೆ/ರಾಜ್ಯಸಭೆಯ ಮಹಾ ಕಾರ್ಯದರ್ಶಿಗಳು ಹಾಗೂ ಎಲ್ಲಾ ರಾಜ್ಯಗಳ ವಿಧಾನಮಂಡಲದ ಕಾರ್ಯದರ್ಶಿಗಳು ಭಾಗವಹಿಸಲಿದ್ದಾರೆ. ವಿಧಾನಸಭೆ, ವಿಧಾನಪರಿಷತ್‌ನಲ್ಲಿ ಜನಸಾಮಾನ್ಯರ ವಿಶ್ವಾಸ ಗಳಿಸುವಿಕೆ ಮತ್ತಿತರ ವಿಷಯಗಳ ಕುರಿತು ಚರ್ಚೆ ನಡೆಯಲಿದೆ. ಸೆ.14 ರಂದು ಗಣ್ಯರಿಗೆ ಮೈಸೂರು ಮತ್ತು ಸುತ್ತಮುತ್ತಲಿನ ಸ್ಥಳಗಳಿಗೆ ಪ್ರವಾಸ ಆಯೋಜಿಸಲಾಗಿದೆ ಎಂದು ಹೇಳಿದರು.

ಹಳದಿ ಮಾರ್ಗ: 19 ನಿಮಿಷಕ್ಕೆ ರೈಲು

ಬೆಂಗಳೂರು: ನಮ್ಮ ಮೆಟ್ರೋ ಹಳದಿ ಮಾರ್ಗದಲ್ಲಿ ನಾಲ್ಕನೇ ರೈಲಿನ ಸಂಚಾರವು ಬುಧವಾರದಿಂದ ಆರಂಭವಾಗಿದ್ದು, ರೈಲುಗಳ ನಡುವಿನ ಅಂತರವು 25ನಿಮಿಷದಿಂದ 19 ನಿಮಿಷಗಳಿಗೆ ಇಳಿಸಲಾಗಿದೆ. ನಾಲ್ಕನೇ ರೈಲಿನ ಸಂಚಾರದೊಂದಿಗೆ ರೈಲು ಸಂಚಾರದ ವೇಳಾಪಟ್ಟಿಯು ಬದಲಾಗಿದ್ದು, ಮೊದಲ ರೈಲು ಸೇವೆಯು ಸೋಮವಾರದಿಂದ ಶನಿವಾರದವರೆಗೆ ಬೆಳಗ್ಗ 6 ಗಂಟೆಗೆ ಪ್ರಾರಂಭವಾಗುತ್ತದೆ. ಹಾಗೂ ಭಾನುವಾರದಂದು ಮೊದಲ ರೈಲು ಬೆಳಗ್ಗ 7 ಗಂಟೆಗೆ ಪ್ರಾರಂಭವಾಗಲಿದೆ. ಕೊನೆಯ ರೈಲಿನ ಸಮಯ ಆರ್.ವಿ ರಸ್ತೆಯಿಂದ ರಾತ್ರಿ 11:55 ಕ್ಕೆ, ಬೊಮ್ಮಸಂದ್ರದಿಂದ ರಾತ್ರಿ 10:42 ಕ್ಕೆ ಹೊರಡಲಿದೆ. ನಮ್ಮ ಮೆಟ್ರೋದ ನಾಲ್ಕನೇ ರೈಲು ಮೂರು ವಾರದ ಹಿಂದೆ ಕೊಲ್ಕತ್ತಾದ ಟಿಟಾಗಢ್ ರೈಲು ಫ್ಯಾಕ್ಟರಿಯಿಂದ ಈ ರೈಲು ಸೆಟ್‌ಗಳು ಬೆಂಗಳೂರಿಗೆ ಬಂದು ಹೆಬ್ಬಗೋಡಿ ಡಿಪೋದಲ್ಲಿ ಜೋಡಣೆ ಮಾಡಲಾಗಿದೆ. ಕಳೆದ ವಾರದಿಂದ ರಾತ್ರಿ ರೈಲುಗಳ ಪ್ರಾಯೋಗಿಕ ಸಂಚಾರ ನಡೆಸಿ ಇದೀಗ ಪ್ರಯಾಣಿಕರ ಸಂಚಾರಕ್ಕೆ ಮುಕ್ತಗೊಳಿಸಲಾಗಿದೆ. ಹಳದಿ ಮಾರ್ಗ ಆರಂಭವಾದ ದಿನದಿಂದ ಕೇವಲ 3 ರೈಲುಗಳು ಮಾತ್ರ ಸಂಚಾರ ನಡೆಸುತ್ತಿವೆ. ಪ್ರಯಾಣಿಕರಿಗೆ ಪ್ರತಿ 25 ನಿಮಿಷಕ್ಕೊಂದು ರೈಲು ಲಭ್ಯವಾಗುತ್ತಿತ್ತು. ಈ ಮಾರ್ಗದಲ್ಲಿ ಪ್ರಯಾಣಿಕರ ಸಂಖ್ಯೆ ಭಾರೀ ಹೆಚ್ಚಿದ್ದ ಕಾರಣ ದಟ್ಟಣೆ ಹೆಚ್ಚಿತ್ತು. ಸದ್ಯ ನಾಲ್ಕನೇ ರೈಲಿನ ಸೇರ್ಪಡೆಯಿಂದಾಗಿ ಒಂದು ರೈಲಿನಿಂದ ಮತ್ತೊಂದು ರೈಲಿನ ಅಂತರವು 19 ನಿಮಿಷಕ್ಕೆ ಇಳಿಕೆಯಾಗಿದೆ. ಇದರಿಂದ ಪ್ರಯಾಣಿಕರು ಕೊಂಚ ನಿರಾಳರಾಗಿದ್ದಾರೆ.

30x40 ನಿವೇಶನದ ಕಟ್ಟಡಗಳಿಗೆ ಒಸಿ ವಿನಾಯ್ತಿ

ಬೆಂಗಳೂರು: ಗ್ರೇಟರ್ ಬೆಂಗಳೂರು ವ್ಯಾಪ್ತಿಯಲ್ಲಿ 1,200 ಚದರಡಿ ವಿಸ್ತೀರ್ಣ ಮೀರದಂತಹ ನಿವೇಶನಗಳಲ್ಲಿ ನೆಲ ಮತ್ತು 2 ಅಂತಸ್ತು ಅಥವಾ ಸ್ಟಿಲ್ಟ್ ಮತ್ತು 3 ಅಂತಸ್ತಿನ ಕಟ್ಟಡಗಳಿಗೆ ಸ್ವಾಧೀನಾನುಭವ ಪತ್ರದಿಂದ (ಒಸಿ) ವಿನಾಯಿತಿ ನೀಡಿ ರಾಜ್ಯ ಸರಕಾರ ಆದೇಶ ಹೊರಡಿಸಿದೆ.

ಗ್ರೇಟರ್ ಬೆಂಗಳೂರು ಆಡಳಿತ ಕಾಯಿದೆ -2024ರ ಕಲಂ 241(7)ರಂತೆ ಸರಕಾರಕ್ಕೆ ಪ್ರದತ್ತವಾದ ಅಧಿಕಾರದ ಅನ್ವಯ ಈ ವಸತಿ ಕಟ್ಟಡಗಳಿಗೆ ಒಸಿಯಿಂದ ವಿನಾಯಿತಿ ನೀಡಿ ಆದೇಶ ಹೊರಡಿಸಿದ್ದು, 1,200 ಚದರ ಅಡಿ ನಿವೇಶನದಲ್ಲಿ ನೆಲ ಹಾಗೂ 2 ಅಂತಸ್ತು ಅಥವಾ ಸ್ಟಿಲ್ಟ್ ಹಾಗೂ ಮೂರು ಅಂತಸ್ತಿನ ಕಟ್ಟಡಗಳಿಗೆ ಒಸಿಯಿಂದ ವಿನಾಯಿತಿ ನೀಡಲಾಗಿದೆ. ಜಿಬಿಎ ಮುಖ್ಯ ಆಯುಕ್ತರ ಪ್ರಸ್ತಾವವನ್ನು ಕೂಲಂಕಷವಾಗಿ ಪರಿಶೀಲಿಸಿ ಸಣ್ಣ ಪ್ರಮಾಣದ ಕಟ್ಟಡಗಳಿಗೆ ಒಸಿ ವಿನಾಯಿತಿ ನೀಡುವುದರಿಂದ, ಸಾರ್ವಜನಿಕರಿಗೆ ಸಕಾಲದಲ್ಲಿ ಸೇವೆ ಒದಗಿಸಲು ಸಹಕಾರಿಯಾದಂತಾಗುತ್ತದೆ ಎಂದು ನಗರಾಭಿವೃದ್ಧಿ ಇಲಾಖೆ ಆದೇಶದಲ್ಲಿ ತಿಳಿಸಿದೆ. ಪ್ರತಿ ವರ್ಷ 1,200 ಚದರಡಿಗಿಂತ ಕಡಿಮೆ ವಿಸ್ತೀರ್ಣದ ನಿವೇಶನಗಳಲ್ಲಿ ಸುಮಾರು ನಾಲ್ಕು ಸಾವಿರ ಕಟ್ಟಡಗಳಿಗೆ ನಕ್ಷೆ ಮಂಜೂರು ಮಾಡಲಾಗುತ್ತಿದ್ದು, ಜಿಬಿಎ ವ್ಯಾಪ್ತಿಯಲ್ಲಿ ಕಟ್ಟಡ ನಕ್ಷೆಯನ್ನು ಇದೀಗ ನಂಬಿಕೆ ನಕ್ಷೆ ವ್ಯವಸ್ಥೆಯಡಿ ಆಟೋಮೇಟೆಡ್ ಆನ್‌ಲೈನ್ ತಂತ್ರಾಂಶದ ಮೂಲಕ ನೀಡಲಾಗುತ್ತಿದೆ. ಈ ಯೋಜನೆಯಲ್ಲಿ ಅರ್ಜಿ ಸಲ್ಲಿಸಿದ ದಿನದಂದೇ ಕರಡು ನಕ್ಷೆ ಮತ್ತು 15 ದಿನದಲ್ಲಿ ಅಂತಿಮ ನಕ್ಷೆ ಮಂಜೂರು ಮಾಡಿ, ಸಾರ್ವಜನಿಕರಿಗೆ ಪಾರದರ್ಶಕ ಹಾಗೂ ಕಾಲಮಿತಿಯಲ್ಲಿ ನಕ್ಷೆ ಮಂಜೂರು ಮಾಡಲಾಗುತ್ತಿದೆ.

ಸ್ವಾಧೀನಾನುಭವ ಪ್ರಮಾಣ ಪತ್ರ ನೀಡುವ ಪ್ರಕ್ರಿಯೆಯು ಸ್ಥಳ ಪರಿಶೀಲನೆ, ನಿರ್ಮಾಣ ಮಾಡಿರುವ ಕಟ್ಟಡ ಹಾಗೂ ಅನುಮೋದಿತ ಕಟ್ಟಡ ನಕ್ಷೆಯ ತುಲನಾತ್ಮಕ ಪರಿಶೀಲನೆಯನ್ನು ಒಳಗೊಂಡಿದ್ದು, ಸ್ಥಳೀಯ ಸಂಸ್ಥೆಗಳ ಮೇಲೆ ಹೆಚ್ಚುವರಿ ಹೊರೆಯುಂಟಾಗುತ್ತದೆ. ಸಾರ್ವಜನಿಕರಿಗೆ ಸೇವೆ ನೀಡುವಲ್ಲಿ ವಿಳಂಬವಾಗುವ ಸಾಧ್ಯತೆಗಳಿವೆ. ನಂಬಿಕೆ ನಕ್ಷೆ ವ್ಯವಸ್ಥೆಯಲ್ಲಿ ತ್ವರಿತವಾಗಿ ನಕ್ಷೆ ಮಂಜೂರು ಮಾಡುವುದನ್ನು ಗಮನದಲ್ಲಿರಿಸಿಕೊಂಡು ಸಣ್ಣ ಪ್ರಮಾಣದ ಕಟ್ಟಡಗಳಿಗೆ ಒಸಿಯಿಂದ ವಿನಾಯಿತಿ ನೀಡುವುದು ಸೂಕ್ತವಾಗಿರುತ್ತದೆ ಎಂದು ಆದೇಶದಲ್ಲಿ ವಿವರಿಸಲಾಗಿದೆ.



ಸಂತಾಪ

ಎಂ. ಸತೀಶ್

ಯಲಹಂಕ ಉಪನಗರ ವಾರ್ಡ್-4ರ ಬಿಬಿಎಂಪಿ ಮಾಜಿ ಸದಸ್ಯರು,
ಯಲಹಂಕ ನಗರ ಮಂಡಲ ಬಿಜೆಪಿ ಅಧ್ಯಕ್ಷರು,
ಯಲಹಂಕ ದಿನಪತ್ರಿಕೆ ವಿತರಕರ ಸಂಘದ ಅಧ್ಯಕ್ಷರಾದ ಎಂ. ಸತೀಶ್ ಅವರು ಬುಧವಾರ ಸಂಜೆ ದೈವಾಧೀನರಾಗಿದ್ದಾರೆಂದು ತಿಳಿಸಲು ವಿಷಾದಿಸುತ್ತೇವೆ.
ಸತೀಶ್ ಅವರ ಅಗಲಿಕೆಯಿಂದ ನಮ್ಮ ಬಹುದೊಡ್ಡ ಶಕ್ತಿ ಕುಂದಿದಂತಾಗಿದ್ದು, ತುಂಬಲಾರದ ನಷ್ಟವಾಗಿದೆ. ಸತೀಶ್ ಅವರ ಅಗಲಿಕೆಯ ದುಃಖ ಮತ್ತು ನೋವನ್ನು ಸಹಿಸಿಕೊಳ್ಳುವ ಶಕ್ತಿಯನ್ನು ನಮ್ಮ ಕುಟುಂಬ ವರ್ಗಕ್ಕೆ ಮತ್ತು ಬಂಧು ಬಾಂಧವರಿಗೆ ದೇವರು ಕರುಣಿಸಲೆಂದು ಪ್ರಾರ್ಥಿಸುತ್ತೇವೆ.

ಇಂತಿ ದುಃಖತಪ್ತರು

ಶ್ರೀಮತಿ ಯಶೋಧ ಸತೀಶ್ ಹಾಗೂ ಕುಟುಂಬಸ್ಥರು,
ಅಸಂಖ್ಯಾತ ಬಿಜೆಪಿ ಮುಖಂಡರು
ಮತ್ತು ಕಾರ್ಯಕರ್ತರು, ಯಲಹಂಕ ಕ್ಷೇತ್ರ

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಸಮಾಜ ಕಲ್ಯಾಣ ಇಲಾಖೆ

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು

ಪರಿಶಿಷ್ಟ ಜಾತಿಯ ಚರ್ಮ ಕುಶಲಕರ್ಮಿಗಳ ಅಭಿವೃದ್ಧಿಯ ಸದಾವಕಾಶ
ಕೆಳಕಂಡ ಯೋಜನೆಗಳಿಗೆ ಅರ್ಜಿ ಅಹ್ವಾನ

ಚರ್ಮ ಕುಶಲಕರ್ಮಿಗಳ ಕುಟುಂಬಗಳ ಯುವಜನರಿಗೆ ಹೊಸ ತಂತ್ರಜ್ಞಾನ, ವಿನ್ಯಾಸಗಳು ಹಾಗೂ ಮಾರುಕಟ್ಟೆ ಬೇಡಿಕೆಗಳ ಬಗ್ಗೆ ದೆಹಲಿ, ತಮಿಳುನಾಡು, ಮಹಾರಾಷ್ಟ್ರ, ಉತ್ತರಪ್ರದೇಶ ಮತ್ತು ಪಶ್ಚಿಮ ಬಂಗಾಳದಲ್ಲಿ ತರಬೇತಿ ಪಡೆಯಲು ಅಧ್ಯಯನ ಪ್ರವಾಸ ಯೋಜನೆ.

ಚರ್ಮಕಾರರ ಕಿರು ಆರ್ಥಿಕ ಚಟುವಟಿಕೆಗಳಿಗಾಗಿ ನೇರ ಸಾಲ ಯೋಜನೆ

ಕಚ್ಚಾ ಮಾಲು ಖರೀದಿ, ಚರ್ಮೋತ್ಪನ್ನಗಳ ಉತ್ಪಾದನೆ, ರಿಪೇರಿ ಮತ್ತು ಮಾರಾಟ ಮಾಡುವ ಅಂಗಡಿ ತೆರೆಯುವುದು/ಲಘು ವಾಹನದ ಮೂಲಕ ವ್ಯಾಪಾರ ಮಾಡುವವರಿಗೆ ಇತ್ಯಾದಿ.
ಘಟಕದ ವೆಚ್ಚ ರೂ. 1,00,000/- (ರೂ. 50,000/- ಸಹಾಯಧನ ಮತ್ತು ರೂ. 50,000/- ಸಾಲ)

ಚರ್ಮಕಾರರ ವಸತಿ ಯೋಜನೆ

ಚರ್ಮ ಕುಶಲಕರ್ಮಿಗಳು ಖಾಲಿ ನಿವೇಶನ ಹೊಂದಿದ್ದಲ್ಲಿ ಚರ್ಮಕಾರರಿಗೆ ವಾಸಕ್ಕೆ ಮತ್ತು ಉದ್ಯೋಗ ಮುಂದುವರೆಸಲು ಅನುಕೂಲವಾಗುವಂತೆ ವಸತಿ ಕಾರ್ಯಾಗಾರಗಳನ್ನು ನಿರ್ಮಿಸಿಕೊಳ್ಳಲು ನಿಗಮದ ಮೂಲಕ ರೂ.2.20 ಲಕ್ಷ ಧನಸಹಾಯ. (ಮೆ. ರಾಜೀವ್ ಗಾಂಧಿ ವಸತಿ ನಿಗಮದ ಮೂಲಕ ಯೋಜನೆಯ ಜಾರಿ)

ವಿಶೇಷ ಸೂಚನೆ: ಈ ಹಿಂದಿನ ಸಾಲಿನಲ್ಲಿ ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸಿರುವವರು ಮತ್ತೊಮ್ಮೆ ಅರ್ಜಿ ಸಲ್ಲಿಸುವ ಅವಶ್ಯಕತೆ ಇರುವುದಿಲ್ಲ.

ಅರ್ಜಿಗಳನ್ನು https://sevasindhu.karnataka.gov.in / https://sevasindhuservices.karnataka.gov.in ಪೋರ್ಟಲ್ ಮೂಲಕ ಸಲ್ಲಿಸುವುದು. ಬೆಂಗಳೂರು ಒನ್, ಕರ್ನಾಟಕ ಒನ್ ಮತ್ತು ಗ್ರಾಮ ಒನ್ ಕೇಂದ್ರಗಳಲ್ಲಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ನಿಗಮದ ಎಲ್ಲಾ ಜಿಲ್ಲೆಯ ಜಿಲ್ಲಾ ಸಂಯೋಜಕರುಗಳ ಕಛೇರಿ ಅಥವಾ ಕಲ್ಯಾಣಮಿತ್ರ ಏಕೀಕೃತ ಎಸ್.ಸಿ/ಎಸ್.ಟಿ ಸಹಾಯವಾಣಿ 9482300400 ಸಂಪರ್ಕಿಸುವುದು.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : 08-10-2025

ವಿಶೇಷ ಸೂಚನೆ: ನಿಗಮದ ವಿವೇಚನಾ ಕೋಟಾ ಅಥವಾ ಸರ್ಕಾರದ ಸಾಂಸ್ಥಿಕ ಕೋಟಾದಡಿ ಸ್ವೀಕರಿಸುವ ಅರ್ಜಿಗಳನ್ನು ಸಹ ಸೇವಾಸಿಂಧು ಪೋರ್ಟಲ್ ಮೂಲಕವೇ ಸಲ್ಲಿಸುವುದು

ಪ್ರಕಟಣೆ :
ಡಾ. ಬಾಬು ಜಗಜೀವನ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ಸನ್ಮಾನ್ಯ ಮುಖ್ಯಮಂತ್ರಿಯವರು ಹಾಗೂ ಸಮಾಜ ಕಲ್ಯಾಣ ಇಲಾಖೆಯ ಮಾನ್ಯ ಸಚಿವರೊಡನೆ ನಿಗಮದ ಅಧ್ಯಕ್ಷರಾದ ಶ್ರೀ ಮುಂಡ್ರಗಿ ನಾಗರಾಜ್ ರವರು ಫಲಾನುಭವಿಗಳಿಗೆ ಸವಲತ್ತು ವಿತರಿಸುತ್ತಿರುವುದು.

ಸಾರ್ವಜನಿಕ ಆಸ್ತಿ ಪಾಸ್ತಿ ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು - ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

ವಿದ್ಯುತ್ ತಂತಿ ಬೇಲಿಗೆ ಸಿಲುಕಿ ಹೆಣ್ಣಾನೆ ಸಾವು

ಗುಂಡ್ಲುಪೇಟೆ: ಅಕ್ರಮ ವಿದ್ಯುತ್ ತಂತಿ ಬೇಲಿಗೆ ಸಿಲುಕಿ ಹೆಣ್ಣಾನೆಯೊಂದು ಮೃತಪಟ್ಟಿರುವ ಘಟನೆ ತಾಲೂಕಿನ ಬಂಡೀಪುರ ರಾಷ್ಟ್ರೀಯ ಉದ್ಯಾನ ವ್ಯಾಪ್ತಿಯ ಮಂಗಲ ಗ್ರಾಮದಲ್ಲಿ ನಡೆದಿದೆ.

ತಾಲೂಕಿನ ಗೋಪಾಲಸ್ವಾಮಿ ಬೆಟ್ಟ ಅರಣ್ಯ ವಲಯ ವ್ಯಾಪ್ತಿಗೆ ಬರುವ ಮಂಗಲ ಗ್ರಾಮದ ಪುಟ್ಟಬಸಪ್ಪ ಬಿನ್ ರುದ್ರಪ್ಪ ಎಂಬುವರಿಗೆ 40/1ರ ಜಮೀನಿನ ಹಂಚಿನಲ್ಲಿಸೇರಿದ ಸರ್ವೆ ನಂ ಬೆಳೆ ರಕ್ಷಣೆಗೆ ಹಾಕಿರುವ ತಂತಿ ಬೇಲಿ ಮೇಲೆ ಬಿದ್ದು ಸುಮಾರು 15 ವರ್ಷದ ಪ್ರಾಯದ ಹೆಣ್ಣಾನೆ ಮೃತಪಟ್ಟಿದೆ ಎನ್ನಲಾಗುತ್ತಿದೆ. ಮಾಹಿತಿ ಅರಿತ ಬಂಡೀಪುರ ಹುಲಿ ಯೋಜನೆ ನಿರ್ದೇಶಕ ಪ್ರಭಾಕರನ್, ಎಸಿಎಫ್ ನವೀನ್ ಕುಮಾರ್, ವಲಯ ಅರಣ್ಯಾಧಿಕಾರಿ ಮಲ್ಲೇಶ್ ಸ್ಥಳಕ್ಕೆ ದೌಡಾಯಿಸಿ, ಪರಿಶೀಲಿಸಿ ಮರಣೋತ್ತರ ಪರೀಕ್ಷೆ ನಡೆಸಿ ಜಮೀನು ಮಾಲೀಕರ ವಿರುದ್ಧ ಕ್ರಮಕ್ಕೆ ಮುಂದಾಗಿದ್ದಾರೆ ಎಂದು ಅರಣ್ಯ ಇಲಾಖೆ ಮೂಲಗಳಿಂದ ಮಾಹಿತಿ ದೊರೆತಿದೆ.

ಪಾಕ್ ಧ್ವಜ ಪ್ರದರ್ಶನ: ಅಪ್ರಾಪ್ತನ ವಿರುದ್ಧ ಕೇಸ್

ಗದಗ: ಕಾರಿನ ಮೇಲೆ ಪಾಕ್ ಧ್ವಜವನ್ನು ಪ್ರದರ್ಶಿಸಿದ ಫೋಟೊವನ್ನು ಸಾಮಾಜಿಕ ಜಾಲತಾಣದಲ್ಲಿ ಹರಿಬಿಟ್ಟ ಅಪ್ರಾಪ್ತನ ವಿರುದ್ಧ ಗದಗ ಶಹರ ಪೊಲೀಸರು ಸ್ವಯಂಪ್ರೇರಿತ ಕೇಸ್ ದಾಖಲಿಸಿಕೊಂಡಿ ದ್ದಾರೆ. ಈದ್ ಮಿಲಾದ್ ಹಬ್ಬದಂದು ಅಪ್ರಾಪ್ತ ಬಾಲಕ ಇನ್ಸ್ಟಾಗ್ರಾಮ್‌ನಲ್ಲಿ ಕಾರಿನ ಬೋನೆಟ್ ಮೇಲೆ ಪಾಕಿಸ್ತಾನ ಧ್ವಜವನ್ನು ಹಾಕಿದ್ದ ಫೋಟೊವನ್ನು ಪೋಸ್ಟ್ ಮಾಡಿದ್ದ. ಸಮಾಜದ ಐಕ್ಯತೆಗೆ ಧಕ್ಕೆ ತರುವ ಹಾಗೂ ಸೌಹಾರ್ದತೆಗೆ ಭಾದಕವಾಗುವ ಕೃತ್ಯವನ್ನು ಎಸಗಿದ್ದಾನೆ ಎಂದು ಅಪ್ರಾಪ್ತ ಬಾಲಕನ ವಿರುದ್ಧ ಸುಮೋಟೋ ಪ್ರಕರಣ ದಾಖಲಾಗಿದೆ.

ಇಳಯರಾಜರಿಂದ ಕೊಲ್ಲೂರು ಶ್ರೀ ಮೂಕಾಂಬಿಕಾ ದೇವಿಗೆ ವಜ್ರ ಕಿರೀಟ ಸಮರ್ಪಣೆ

ಬಹುಭಾಷಾ ಖ್ಯಾತ ಸಂಗೀತ ನಿರ್ದೇಶಕ ಇಳಯರಾಜ ಅವರು ಹರಕೆ ರೂಪದಲ್ಲಿ ಕೊಲ್ಲೂರು ಶ್ರೀ ಮೂಕಾಂಬಿಕಾ ದೇವಿಗೆ ಸುಮಾರು 4 ಕೋಟಿ ರು. ಮೌಲ್ಯದ ವಜ್ರ ಖಚಿತ ಕಿರೀಟವನ್ನು ಬುಧವಾರ ಸಮರ್ಪಿಸಿದ್ದಾರೆ. ಇಳಯರಾಜ ಅವರು ಕೊಲ್ಲೂರು ಶ್ರೀ ಮೂಕಾಂಬಿಕಾ ದೇವಸ್ಥಾನದ ಶ್ರೀ ದೇವಿಗೆ ವಜ್ರ ಕಿರೀಟ ಸಹಿತ ಆಭರಣಗಳು ಹಾಗೂ ವೀರಭದ್ರ ಸ್ವಾಮಿಗೆ ರಜತ ಕಿರೀಟ ಸಹಿತ ಖಡ್ಗ ಸಮರ್ಪಣೆ ಮಾಡಿದರು. ಈ ಸಂದರ್ಭದಲ್ಲಿ ಅವರ ಕುಟುಂಬ ಸದಸ್ಯರು ಹಾಜರಿದ್ದರು.

ಬಿಜೆಪಿ ನಾಯಕರ ವಿರುದ್ಧ ಸಚಿವ ಶರಣಬಸಪ್ಪ ದರ್ಶನಾಪುರ ವಾಗ್ದಾಳಿ

ಸಮಸ್ಯೆ ಸೃಷ್ಟಿ ಮಾಡುವುದೇ ಬಿಜೆಪಿ ಕೆಲಸ

ಯಾದಗಿರಿ: ಜಾತಿ, ಧರ್ಮದ ಹೆಸರಿನಲ್ಲಿ ಸಾಮರಸ್ಯ ಹಾಳು ಮಾಡುತ್ತಿರುವ ಬಿಜೆಪಿಗರಿಗೆ ರಾಜ್ಯದಲ್ಲಿ ಸಮಸ್ಯೆ ಹುಟ್ಟುಹಾಕುವುದೇ ಕಾಯಕ ವಾಗಿದೆ ಎಂದು ಸಚಿವ ಶರಣಬಸಪ್ಪ ದರ್ಶನಾಪುರ ವಾಗ್ದಾಳಿ ನಡೆಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ಬಿಜೆಪಿ ಅವರು ಯಾವುದೇ ಅಭಿವೃದ್ಧಿ ಕುರಿತು ವಿಧಾನಸೌಧದ ಒಳಗೂ, ಹೊರಗೂ ಚರ್ಚೆ ಮಾಡಿಯೇ ಇಲ್ಲ. ಕೇವಲ ಸಮಾಜದಲ್ಲಿ ಶಾಂತಿ ಕೆಡಿಸುವ ಕೆಲಸಗಳಿಗೆ ಹೆಚ್ಚಿನ ಆಸಕ್ತಿ ಹೊಂದಿದ್ದಾರೆ.ಧರ್ಮಸ್ಥಳದಲ್ಲಿ ನಡೆಯುತ್ತಿರುವ ಬೆಳವಣಿಗೆಯ ಪಾತ್ರಧಾರಿಗಳು ಸಹ ಬಿಜೆಪಿ ಮೂಲದವರಲ್ಲವೇ ಹಾಗೂ ಮದ್ದೂರಿನಲ್ಲಿನ ಕಲ್ಲು ತೂರಾಟ ಪ್ರಕರಣದಲ್ಲಿಯೂ ಆಗಿದ್ದು, ಅದೇ ಅಲ್ವಾವೇ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಯಾರೊಬ್ಬ ಬಿಜೆಪಿ ನಾಯಕರ ಮಕ್ಕಳು ಗಲಾಟೆಯಲ್ಲಿ ಕಲ್ಲೇಟು ತಿಂದಿಲ್ಲ. ಅಲ್ಲಿ ತಿಂದವರು ಎಲ್ಲರೂ ಅಮಾಯಕರೇ, ಹಿಂದೂಗಳನ್ನು ಕಾಂಗ್ರೆಸ್ ವಿರುದ್ಧ ಎತ್ತಿ ಕಟ್ಟುವ ಕೆಲಸ ಸರಿಯಲ್ಲ. ಬಿಜೆಪಿಗೆ ನಾಯಕತ್ವದ ಕೊರತೆಯಿದೆ ಎಂದು ಕಿಡಿಕಾರಿದರು.

ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು ಸತ್ಯ ಹರಿಶ್ಚಂದ್ರ ಬಿಟ್ಟರೆ ನಂತರ ನಾನೇ ಎನ್ನುವಂತೆ ಆಡುತ್ತಿದ್ದಾರೆ. ಇಲ್ಲಿಯವರೆಗೂ ಎದುರಿಸಿದ ಚುನಾವಣೆಗೆ ದುಡ್ಡು, ಯಾವ ಹೊಲ ಮಾರಿ ತಂದಿದ್ದಾರೆ, ನಿಖಿಲ್ ಕುಮಾರಸ್ವಾಮಿ ಸಹ ಅವರ ತಂದೆ ಹಾದಿಯಲ್ಲಿ ಸುಳ್ಳು ಹೇಳುವುದನ್ನು ಕಲಿತಿದ್ದಾರೆ. ಇದನ್ನು ಡಿ.ಕೆ ಶಿವಕುಮಾರ್ ಭೂ ವಿಷಯದಲ್ಲಿ ಸಾಕ್ಷಿ ಸಮೇತ ಬಯಲು ಮಾಡಿದ್ದಾರೆ.

- ಶರಣಬಸಪ್ಪ ದರ್ಶನಾಪುರ, ಸಚಿವ

ಸೇನೆ ವಶಕ್ಕೆ ನೇಪಾಳ

← ಮೊದಲಪುಟದಿಂದ

ರಾಜಧಾನಿ ಕಠ್ಮಂಡುವಿನಲ್ಲಿ ರೊಚ್ಚಿಗೆದ್ದ ಯುವಕರು ಸಂಸತ್ತು, ಸರ್ವೋಚ್ಚ ನ್ಯಾಯಾಲಯ, ರಾಷ್ಟ್ರಪತಿ, ಪ್ರಧಾನಿ ನಿವಾಸಗಳಿಗೆ ಬೆಂಕಿಯಿಟ್ಟಿದ್ದರು. ಹಲವು ಸೇನಾ ವಾಹನಗಳು ಸುಟ್ಟು ಕರಕಲಾಗಿದ್ದವು. ವಿತ್ತ ಮಂತ್ರಿಗೆ ಬೀದಿಯಲ್ಲೇ ಥಳಿಸಿದ್ದರೆ, ಮಾಜಿ ಪ್ರಧಾನಿ ಪತ್ನಿ ಚಿತ್ರಾಕರ್ ಬೆಂಕಿಗೆ ಸಿಕ್ಕಿ ಮೃತಪಟ್ಟಿದ್ದರು. ಸದ್ಯ ನಾಯಕತ್ವವೇ ಇಲ್ಲದ ಸ್ಥಿತಿಯಲ್ಲಿರುವ ನೇಪಾಳದಲ್ಲಿ ಸೇನೆ ತಾತ್ಕಾಲಿಕ ಉಸ್ತುವಾರಿ ವಹಿಸಿದೆ. ಕಠ್ಮಂಡುವಿನ ತ್ರಿಭುವನ ವಿಮಾನ ನಿಲ್ದಾ ಣದಲ್ಲಿ ಅತಂತ್ರರಾಗಿದ್ದ ನೂರಾರು ಭಾರತೀಯ ರನ್ನು ಭಾರತೀಯ ರಾಯಭಾರ ಕಚೇರಿ ಸುರಕ್ಷಿತ ಸ್ಥಳಕ್ಕೆ ರವಾನಿಸಿದೆ. ಹಲವರು ಗಡಿದಾಟಿ ಭಾರತವನ್ನು ತಲುಪಿಕೊಂಡಿದ್ದಾರೆ.

ಬನಾರಸ್ ವಿವಿ ಪದವೀಧರೆ ಸುಶೀಲಾ: 1952, ಜೂ.7ರಂದು ನೇಪಾಳದ ಬಿರಾಟನಗರದಲ್ಲಿ ಜನಿಸಿದ ಸುಶೀಲಾ ಕರ್ಕಿ ರಾಜ್ಯಶಾಸ್ತ್ರ ಮತ್ತು ಕಾನೂನು ಪದವೀಧರೆ. ಬಿರಾಟನಗರದಲ್ಲಿ ಬಿಎ ಮುಗಿಸಿ, ಭಾರತದ ವಾರಾಣಸಿಯ ಬನಾರಸ್ ಹಿಂದೂ ವಿಶ್ವವಿದ್ಯಾಲಯದಲ್ಲಿ 1975ರಲ್ಲಿ ಎಂಎ ಪದವಿ ಪಡೆದರು. ನೇಪಾಳದಲ್ಲಿ ತ್ರಿಭುವನ ವಿವಿಯಲ್ಲಿ 1978ರಂದು ಕಾನೂನು ಪದವಿ ಪಡೆದರು. ನೇಪಾಳ ಸರ್ವೋಚ್ಚ ನ್ಯಾಯಾಲಯದ ಮೊದಲ ಮಹಿಳಾ ಮುಖ್ಯ ನ್ಯಾಯಮೂರ್ತಿಯೆನ್ನುವುದು ಅವರ ಹೆಗ್ಗಳಿಕೆ. 2016 ಜು.11ರಿಂದ 2017 ಜೂ.7ರವರೆಗೆ ಈ ಸ್ಥಾನ ನಿಭಾಯಿಸಿದ್ದರು.

ತಮ್ಮ ಅವಧಿಯಲ್ಲಿ ಅವರು ಹಲವು ಮಹತ್ತರ ತೀರ್ಪುಗಳನ್ನು ನೀಡಿ ಇಡೀ ನೇಪಾಳದ ಗಮನ ಸೆಳೆದಿದ್ದರು. ಚುನಾವಣಾ ವಿವಾದಗಳನ್ನು ಬಗೆಹರಿಸಿದ್ದರು. 2017, ಏ.30ರಂದು ಅಂದಿನ ಮಾವೋವಾದಿ ನೇಪಾಳಿ ಸರ್ಕಾರ ಸುಶೀಲಾ ವಿರುದ್ಧ ಸಂಸತ್ತಿನಲ್ಲಿ ವಾಗ್ದಂಡನೆ ನಡೆಸಲು ಸಿದ್ಧವಾಗಿತ್ತು. ಅದರ ವಿರುದ್ಧ ಎದ್ದ ಭಾರೀ ಹೋರಾಟದ ಪರಿಣಾಮ ಈ ನಿರ್ಧಾರವನ್ನು ಸರ್ಕಾರ ವಾಪಸ್ ಪಡೆದಿತ್ತು.

50ಕ್ಕೂ ಅಧಿಕ ಕನ್ನಡಿಗರು ಅತಂತ್ರ: ನೆರವಿಗೆ ಮೊರೆ

ಕಠ್ಮಂಡು ವಿಮಾನ ನಿಲ್ದಾಣದಲ್ಲಿ 100ಕ್ಕೂ ಅಧಿಕ ಕನ್ನಡಿಗರು ಅತಂತ್ರರಾಗಿದ್ದು ನೆರವಿಗೆ ಮೊರೆ ಇಟ್ಟಿದ್ದಾರೆ. ಆನೇಕಲ್‌ನಿಂದ ಪ್ರವಾಸಕ್ಕೆ ತೆರಳಿದ್ದ 27 ಮಂದಿಯ ತಂಡ ಶನಿವಾರ ವಾಪಸಾಗುವ ನಿರೀಕ್ಷೆಯಿದೆ. ರಾಜ್ಯದಿಂದ ಸೆ.1ರಿಂದ 14ರವರೆಗೆ ಮಾನಸ ಸರೋವರಕ್ಕೆ ಯಾತ್ರೆ ಹೊರಟಿದ್ದ 36 ಮಂದಿಯಲ್ಲಿ 6 ಮಂದಿ ಸಂಕಷ್ಟಕ್ಕೆ ಸಿಲುಕಿದ್ದಾರೆ. ಅವರೂ ನೆರವು ಯಾಚಿಸಿದ್ದಾರೆ. ಕರ್ಫ್ಯೂ ಜಾರಿಯಾಗಿರುವು ದರಿಂದ ಸಂಚಾರಕ್ಕೆ ಅಡ್ಡಿಯಾಗಿದೆ. ಸಂತ್ರಸ್ತರ ರಕ್ಷಣೆಗೆ ಕ್ರಮ ಕೈಗೊಳ್ಳುವಂತೆ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್‌ಗೆ ಸಿಎಂ ಸಿದ್ದರಾಮಯ್ಯ ಸೂಚನೆ ನೀಡಿದ್ದಾರೆ.

ವಿಮಾನ ನಿಲ್ದಾಣ ಕಾರ್ಯಾರಂಭ

ತ್ರಿಭುವನ ವಿಮಾನ ನಿಲ್ದಾಣ ಕಾರ್ಯಾಚರಣೆ ಶುರು ಮಾಡಿದೆ. ಇದರಿಂದ ವಿದೇಶಿ ಪ್ರಯಾಣಿಕರು ನಿಟ್ಟುಸಿರು ಬಿಟ್ಟಿದ್ದಾರೆ. ತ್ರಿಭುವನ ನಿಲ್ದಾಣದಲ್ಲೇ ನಿಂತಿದ್ದ ವಿಮಾನಗಳು ಮತ್ತೆ ಹಾರಲಿವೆ. ಪ್ರಯಾಣಿಕರು ತಾವು ಟಿಕೆಟ್ ಬುಕಿಂಗ್ ಮಾಡಿರುವ ವಿಮಾನಯಾನ ಕಂಪನಿಗಳನ್ನು ಸಂಪರ್ಕಿಸಬಹುದು ಎಂದು ತ್ರಿಭುವನದ ಅಧಿಕಾರಿಗಳು ತಿಳಿಸಿದ್ದಾರೆ.

ಕರ್ನಾಟಕ ಸರ್ಕಾರ
ಬೆಂಗಳೂರು ನಗರ ಜಿಲ್ಲಾ ಪಂಚಾಯತಿ
ಕಾರ್ಯಪಾಲಕ ಅಭಿಯಂತರರವರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ
ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಜಿಲ್ಲಾ ಪಂಚಾಯತಿ ಕಟ್ಟಡ, ಮೊದಲನೇ ಮಹಡಿ, ಎಸ್. ಕರಿಯಪ್ಪ ರಸ್ತೆ, (ಬನಶಂಕರಿ ದೇವಸ್ಥಾನದ ಹತ್ತಿರ) ಬನಶಂಕರಿ, ಬೆಂಗಳೂರು–560070.
ಸಂಖ್ಯೆ:ಕಾಅ/ಪಂರಾಇವಿ/ಬೆಂನ/ಜೆಇ–1/ಟೆಂಡರ್/15/2025–26 ದಿನಾಂಕ: 09.09.2025
ಕೆ.ಪಿ.ಪಿ.ಪಿ ಪೋರ್ಟಲ್ ಟೆಂಡರ್ ಪ್ರಕಟಣೆ ನೋಟಿಸ್, ಏಕ–ಲಕೋಟೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಕಛೇರಿಯಿಂದ Deposit Grants & SCP/TSP Grants/2023-24 ಅನುಮೋದನೆಯಾಗಿರುವ ಕಾಮಗಾರಿಗಳಿಗೆ ಏಕ–ಲಕೋಟೆಯಲ್ಲಿ ಕೆ.ಪಿ.ಪಿ.ಪಿ ಪೋರ್ಟಲ್ ಮುಖಾಂತರ ಟೆಂಡರ್ ಅನ್ನು ಕರೆಯಲಾಗಿದೆ. ವೆಬ್ ಸೈಟ್ ಮೂಲಕ ಟೆಂಡರ್ ಫಾರಂಗಳನ್ನು **ದಿನಾಂಕ: 25.09.2025 ರ ಸಂಜೆ 4.00 ಗಂಟೆಯವರೆಗೆ** ಪಡೆದು ಸಲ್ಲಿಸಬಹುದಾಗಿರುತ್ತದೆ. ಕಾಮಗಾರಿವಾರು ವಿವರಗಳನ್ನು ವೆಬ್ ಸೈಟ್ ಮೂಲಕ ಪಡೆಯಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ಕಛೇರಿಯನ್ನು ಸಂಪರ್ಕಿಸಲು ಅಥವಾ ವೆಬ್ ಸೈಟ್ http://www.KPPP.karnataka.gov.in ನಲ್ಲಿ ವಿವರಗಳನ್ನು ಪಡೆಯಬಹುದಾಗಿರುತ್ತದೆ.
ಸಹಿ/–
ಕಾರ್ಯಪಾಲಕ ಅಭಿಯಂತರರು
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ
ಬೆಂಗಳೂರು ನಗರ, ಬೆಂಗಳೂರು
ವಾಸಾಸಂಇ/ವಾಪ್ರ/ಶಿರಡಿ ಸಾಯಿ/2758/2025–26

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿ
ಮುಖ್ಯ ಅಭಿಯಂತರವರ ಕಾರ್ಯಾಲಯ, ಧಾರವಾಡ
ಸರ್.ಎಂ. ವಿಶ್ವೇಶ್ವರಯ್ಯ ರಸ್ತೆ, ಜಲಮಂಡಳಿ ಆವರಣ, ಧಾರವಾಡ–580001.
ದೂರವಾಣಿ: 0836–2447090 ಇ–ಮೇಲ್ : kwbcen@ gmail.com
ಟೆಂಡರ್ ಪ್ರಕಟಣೆ (ಎಲೆಕ್ಟ್ರಾನಿಕ್ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)
ಈ ಕೆಳಗಿನ ಕಾಮಗಾರಿಗೆ ತಾಂತ್ರಿಕ ಮತ್ತು ಆರ್ಥಿಕ ಅರ್ಹತಾ ಅಗತ್ಯತೆಗಳನ್ನು ತೃಪ್ತಿಕರವಾಗಿ ಅರ್ಹರಿರುವ ಸಂಸ್ಥೆ/ಗುತ್ತಿಗೆದಾರರಿಂದ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ (https://kppp.karnataka.gov.in) ಮೂಲಕ (ದ್ವಿ–ಟೆಂಡರ್ ದಾಖಲೆ ಪದ್ಧತಿಯಲ್ಲಿ) ಟೆಂಡರ್ ಆಹ್ವಾನಿಸಲಾಗಿದೆ. ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ:1350 ದಿನಾಂಕ: 09–09–2025. ಮಾನ್ಯ ರಾಷ್ಟ್ರೀಯ ಹಸಿರು ನ್ಯಾಯಾಧೀಕರಣ ಕಾರ್ಯಕ್ರಮದಡಿಯಲ್ಲಿ ಕಾರವಾರ ನಗರಕ್ಕೆ ಅಲ್ಪಾವಧಿ ಒಳಚರಂಡಿ ವ್ಯವಸ್ಥೆ ಕಲ್ಪಿಸುವುದು ಹಾಗೂ ಒಂದು ವರ್ಷದ ದೋಷ ಮತ್ತು ಹೊಣೆಗಾರಿಕೆ ಸೇರಿ 5 ವರ್ಷಗಳಿಗೆ ನಿರ್ವಹಣೆ ಮತ್ತು ದುರಸ್ತಿ ಕಾಮಗಾರಿ (ಇಡುಗಂಟು ಟೆಂಡರ್). (CALL-10) INDENT NO.KUWSDB/2024-25/WS/WORK_INDENT/303/CALL-4. ಹೆಚ್ಚಿನ ವಿವರಗಳಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಡುವುದು ಅಥವಾ ಮುಖ್ಯ ಅಭಿಯಂತರು, ಕನನೀಸ ಮತ್ತು ಒಚ ಮಂಡಳಿ, ಧಾರವಾಡ ಕಚೇರಿಯನ್ನು ಸಂಪರ್ಕಿಸಬಹುದು.
ಸಹಿ/– ಮುಖ್ಯ ಅಭಿಯಂತರು,
ಕನನೀಸ ಮತ್ತು ಒಚ ಮಂಡಳಿ, ಧಾರವಾಡ.
ವಾ.ಸಾ.ಇ./ಧಾ/650/ದೇಶಪಾಂಡೆಪಬ್ಲಿಸಿಟಿ/2025–26

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಅಭಿಯಂತರರವರ ಕಛೇರಿ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಮೈಸೂರು–570 006.
ಸಂ.ಕಾಅ/ಗ್ರಾಕುನೀ&ನೈವಿ/ಮೈ/ಇ–ಪ್ರಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ
ಇ–ಟೆಂಡರ್ ಪ್ರಕಟಣೆ ಸಂಖ್ಯೆ.11/2025–26 ದಿನಾಂಕ:09.09.2025
ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಮೈಸೂರು ರವರು ಕರ್ನಾಟಕ ಸರ್ಕಾರದ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಬೆಂಗಳೂರುರವರ ಸಹಯೋಗದೊಂದಿಗೆ, ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ/ಎನ್‌ರೋಲ್ ಮಾಡಿದ 3ನೇ ದರ್ಜೆ ಗುತ್ತಿಗೆದಾರರು ಮತ್ತು ಮೇಲ್ಪಟ್ಟು , ಟೆಂಡರ್ ನಮೂನೆ KW-3ರೀತ್ಯಾ (ದ್ವಿ ಲಕೋಟೆ ಪದ್ಧತಿಯಂತೆ), ಸಾಲಿಗ್ರಾಮ ತಾಲ್ಲೂಕಿನ, ಲಕ್ಷ್ಮಿಪುರ ಗ್ರಾಮ ಪಂಚಾಯತಿಯ, ಬಳ್ಳೂರು ಗ್ರಾಮದ 3KLD FSTP ಕಾಮಗಾರಿ (KW-3) ಅಂದಾಜು ಮೊತ್ತ ರೂ.(89.38 ಲಕ್ಷ) ಇ–ಪ್ರಕ್ಯೂರ್‌ಮೆಂಟ್ ಮೂಲಕ ಇ–ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಫಾರಂಗೆ ಅರ್ಜಿ ಸಲ್ಲಿಸಲು ಮತ್ತು ಭರ್ತಿ ಮಾಡಿದ ಫಾರಂಗಳನ್ನು ಆನ್‌ಲೈನ್ ನಲ್ಲಿ ಸಲ್ಲಿಸಲು ನಿಗಧಿತ ಅವಧಿ ದಿ: 09.09.2025 ರ ಸಂಜೆ 5.30 ಘಂಟೆ ಇಂದ 16.09.2025 ರ ಸಂಜೆ 5.30 ಘಂಟೆಯ ರವರೆಗೆ, ಟೆಂಡರ್ ತೆರೆಯುವ ದಿ: 17.09.2025ರ ಸಂಜೆ 5.30 ಘಂಟೆಯ ನಂತರ.. ಹೆಚ್ಚಿನ ವಿವರಗಳಿಗೆ ಕರ್ನಾಟಕ ಸರ್ಕಾರದ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ (KPPP portal) ವೆಬ್ ಸೈಟ್‌ನಲ್ಲಿ ಪಡೆಯಬಹುದು. https://kppp.karnataka.gov.inಈ ಬಗ್ಗೆ ಇನ್ನೂ ಹೆಚ್ಚಿನ ವಿವರಗಳಿಗಾಗಿ ಕಾರ್ಯಪಾಲಕ ಅಭಿಯಂತರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಮೈಸೂರು (ಪೋನ್ ನಂ.0821–2460495) ರವರ ಕಛೇರಿಯ ವೇಳೆಯಲ್ಲಿ ಪಡೆಯಬಹುದು.
ಸಹಿ/– ಕಾರ್ಯಪಾಲಕ ಅಭಿಯಂತರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ, ವಿಭಾಗ, ಮೈಸೂರು.
DIPR/DDMYS/945/KSMCA/509/2025-26

ಕರ್ನಾಟಕ ಸರ್ಕಾರ
ಕ್ರ.ಸಂ. ಬಿಜಿಎಂಡಿಯುಡಿಸಿ:5:ಸಿಆರ್–25:2021–22
ಜಿಲ್ಲಾಧಿಕಾರಿಗಳ ಕಾರ್ಯಾಲಯ
ಜಿಲ್ಲಾ ನಗರಾಭಿವೃದ್ಧಿ ಕೋಶ ಬೆಳಗಾವಿ
ದಿನಾಂಕ:09–09–2025
ಟೆಂಡರ್ ಅಧಿಸೂಚನೆ
ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಬೆಳಗಾವಿ ರವರು ಬೆಳಗಾವಿ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳ ನಗರೋತ್ಥಾನ (ಮುನಿಸಿಪಾಲಿಟಿ) ಹಂತ–4 ಯೋಜನೆಯಡಿ ಈ ಕೆಳಕಂಡ ಕಾಮಗಾರಿಗಳಿಗೆ KW–4 ಡಾಕುಮೆಂಟ್ ಉಪಯೋಗಿಸಿ ಟೆಂಡರ್ ಆಹ್ವಾನಿಸಲಾಗಿದೆ, ಬಿಡ್‌ದಾರರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ https://kppp.karnataka.gov.in ಮೂಲಕ ಟೆಂಡರ್ ಡೌನ್‌ಲೋಡ್ ಹಾಗೂ ಸಲ್ಲಿಸಬಹುದಾಗಿರುತದೆ. ಇ.ಎಂ.ಡಿ ಹಾಗೂ ಟೆಂಡರ್ ಪ್ರೋಸೆಸಿಂಗ್ ಫೀ ಯನ್ನು ಸಹ ವಿದ್ಯುನ್ಮಾನ ಮೂಲಕ ಸಲ್ಲಿಸುವುದು. ವಿವರ ಈ ಕೆಳಗಿನಂತಿದೆ.
(ರೂ. ಲಕ್ಷಗಳಲ್ಲಿ)

ಕ್ರ.ಸಂ	ಕಾಮಗಾರಿಗಳ ವಿವರ	ಟೆಂಡರಗಿಟ್ಟ ಮೊತ್ತ (GST ಹೊರತುಪಡಿಸಿ)	ಇ.ಎಂ.ಡಿ ಮೊತ್ತ	ಕಾಮಗಾರಿ ಪೂರ್ಣ ಗೊಳಿಸುವ ಅವದಿ
2	ಕಿತ್ತೂರ ಪಟ್ಟಣ ಪಂಚಾಯತ ವ್ಯಾಪ್ತಿಯಲ್ಲಿ ರಸ್ತೆ ಮತ್ತು ಚರಂಡಿ ಕಾಮಗಾರಿ ನಿರ್ಮಿಸುವುದು. (Tender No. DMA/2025-26/RD/WORK_INDENT48424)	94.70	1.89	6 ತಿಂಗಳು

ಟೆಂಡರ್ ವೇಳಾಪಟ್ಟಿ

ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	:	25–09–2025ರಂದು 17–00 ಘಂಟೆ ವರೆಗೆ
ಟೆಂಡರ್ ತೆರೆಯುವ ದಿನಾಂಕ (ತಾಂತ್ರಿಕ ಬಿಡ್)	:	26–09–2025ರಂದು 17–01 ಘಂಟೆ ನಂತರ

ಅವಧಿ ವಿಸ್ತರಣೆ ಇದ್ದಲ್ಲಿ KPP Portal ಮೂಲಕ ಮಾತ್ರ ತಿಳಿಸಲಾಗುವುದು. ದಿನಪತ್ರಿಕೆಯಲ್ಲಿ ಪ್ರಕಟಿಸಲಾಗುವುದಿಲ್ಲ.
ಕಾರ್ಯಪಾಲಕ ಅಭಿಯಂತರರು
ಜಿಲ್ಲಾ ನಗರಾಭಿವೃದ್ಧಿ ಕೋಶ, ಬೆಳಗಾವಿ
DIPR/ BGM/ RO-NO- 995– 2025–26

ನಗರಸಭಾ ಕಾರ್ಯಾಲಯ, ನೆಲಮಂಗಲ
ನೆಲಮಂಗಲ, ಬೆಂಗಳೂರು ಗ್ರಾಮಾಂತರ ಜಿಲ್ಲೆ–562123, ದೂ.: 080–27722735, ಸಹಾಯವಾಣಿ: 080–27722135, Web : www.nelamangala.mrc.gov.in, Email : itstaff_ulb_nelamangala@yahoo.com
ಸಂಖ್ಯೆ: ನಸನೆ/ತಾಂತ್ರಿಕ(ವಿ)/ಟೆಂಡರ್/19/2025–26 ದಿನಾಂಕ: 08.09.2025
ಟೆಂಡರ್ ಪ್ರಕಟಣೆ (ಕೆಪಿಪಿಪಿ ಪೋರ್ಟಲ್ ಮೂಲಕ ಮಾತ್ರ)
(ಸ್ಟ್ಯಾಂಡರ್ಡ್ ಡಾಕ್ಯುಮೆಂಟ್ KW1&2 ರ ನಿಬಂಧನೆಗಳಂತೆ ಅರ್ಜಿ ಆಹ್ವಾನಿಸಲಾಗಿದೆ)
ಪೌರಾಯುಕ್ತರು ನಗರಸಭೆ ನೆಲಮಂಗಲ ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರಿಂದ 2025–26ನೇ ಸಾಲಿನ ನಗರಸಭಾ ನಿಧಿ ಅನುದಾನದಡಿ ಕಾಮಗಾರಿಗಳ ಟೆಂಡರ್ ಹಾಗೂ ಟೆಂಡರ್ ಕಾಮಗಾರಿಗಳನ್ನು ಕೈಗೊಳ್ಳಲು ಒಟ್ಟು ಮೊತ್ತ ರೂ: 129.94 ಲಕ್ಷಗಳ ಕಾಮಗಾರಿಗಳ ಐಟಂವಾರು ಇ–ಪ್ರೊಕ್ಯೂರ್‌ಮೆಂಟ್ ನ ಕೆಪಿಪಿ ಪೋರ್ಟಲ್‌ನ ಏಕ ಲಕೋಟೆ ಹಾಗೂ ದ್ವಿ, ಲಕೋಟೆ ಪದ್ಧತಿಯಡಿ ಅರ್ಹ ದರ್ಜೆಯ ನೋಂದಾಯಿತ ಗುತ್ತಿಗೆದಾರರಿಂದ ಟೆಂಡರ್ ಕರೆಯಲಾಗಿದೆ.
ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ತೆರೆಯುವ ದಿನಾಂಕ ಮುಂತಾದ ಹೆಚ್ಚಿನ ವಿವರಗಳಿಗಾಗಿ ವೆಬ್‌ಸೈಟ್: https://kppp.karnataka.gov.in/ ಹಾಗೂ ನಗರಸಭೆಯ ತಾಂತ್ರಿಕ ಶಾಖೆಯನ್ನು ಸಂಪರ್ಕಿಸುವುದು.

ಸಹಿ/–	ಸಹಿ/–	ಸಹಿ/–	ಸಹಿ/–
ಶ್ರೀ ಗಣೇಶ ಎನ್ ಮಾನ್ಯ ಅಧ್ಯಕ್ಷರು ನಗರಸಭೆ, ನೆಲಮಂಗಲ	ಶ್ರೀ ಆನಂದ್ ಜಿ ಮಾನ್ಯ ಉಪಾಧ್ಯಕ್ಷರು ನಗರಸಭೆ, ನೆಲಮಂಗಲ	ಶ್ರೀ ಬಿ. ಪದ್ಮನಾಭ್ ಮಾನ್ಯ ಸ್ಥಾಯಿ ಸಮಿತಿ ಅಧ್ಯಕ್ಷರು ನಗರಸಭೆ, ನೆಲಮಂಗಲ	ಶ್ರೀ ಗಂಗಾಧರ ಹೆಚ್ ಪೌರಾಯುಕ್ತರು ನಗರಸಭೆ, ನೆಲಮಂಗಲ

ವಾ.ಸಾ.ಸಂ.ಇ/ವಾಪ್ರ/2748/ಎಸ್‌ಎಸ್‌ಸಿ/2025–26

ಕರ್ನಾಟಕ ಸರ್ಕಾರ
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು – 560001.
ದೂರವಾಣಿ: 080–22215601, 22211246, ಫ್ಯಾಕ್ಸ್ : 22215602
ಸಂಖ್ಯೆ: DYES/WELFARE/ದ.ಕ್ರೀ.ಕೂ.ಆ/08/2025–26 ದಿನಾಂಕ : 09.09.2025
ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)
ವಿಷಯ: ಉಪ–ನಿರ್ದೇಶಕರು (ಆಡಳಿತ), ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು–560001 ಕರ್ನಾಟಕ, ಇವರು, ಮೈಸೂರಿನಲ್ಲಿ ಆಯೋಜಿಸಲಾಗುವ ದಸರಾ ಕ್ರೀಡಾಕೂಟ ಸಿಎಂ ಕಪ್–2025 ರ ಸಂದರ್ಭದಲ್ಲಿ ವಾಹನಗಳನ್ನು ಬಾಡಿಗೆ ರೂಪದಲ್ಲಿ ಒದಗಿಸಲು 07 ದಿನಗಳ ಅಲ್ಪಾವದಿ ಇ–ಟೆಂಡರ್ ಅನ್ನು ಕೆಪಿಪಿ ಪೋರ್ಟಲ್ ಮೂಲಕ ಅರ್ಹ ಟೆಂಡರ್‌ದಾರರಿಂದ ಟೆಂಡರ್ ನ್ನು ಆಹ್ವಾನಿಸಿದೆ.
ವಿವರಗಳು : ಮೈಸೂರಿನಲ್ಲಿ ಆಯೋಜಿಸಲಾಗುವ ದಸರಾ ಕ್ರೀಡಾಕೂಟ ಸಿಎಂ ಕಪ್ – 2025 ರ ಸಂದರ್ಭದಲ್ಲಿ ವಾಹನಗಳನ್ನು ಬಾಡಿಗೆ ರೂಪದಲ್ಲಿ ಒದಗಿಸಲು ಟೆಂಡರ್ ಆಹ್ವಾನಿಸುವ ಕುರಿತು. ಅಂದಾಜು ಮೊತ್ತ : ರೂ.16.00 ಲಕ್ಷಗಳು/–, ಇಎಂಡಿ ಮೊತ್ತ : ರೂ.32,000/–.
ಆಸಕ್ತ ಟೆಂಡರ್‌ದಾರರು ಇ–ಪ್ರೊಕ್ಯೂರ್ಮೆಂಟ್ ಪೋರ್ಟಲ್ (https://kppp.karnataka.gov.in/) ಮೂಲಕ ತಮ್ಮ ಬಿಡ್‌ಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬಹುದು. ಟೆಂಡರ್ ದಾಖಲೆಗಳನ್ನು ಉಚಿತವಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ವೀಕ್ಷಿಸಬಹುದು.
1) ಬಿಡ್ ಸಲ್ಲಿಸಲು ಕೊನೆಯ ದಿನಾಂಕ : 17–09–2025 ಸಮಯ 11.00 ಗಂಟೆ. 2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 18–09–2025 ಸಮಯ 11.30 ಗಂಟೆ. 3) ಹಣಕಾಸು ಬಿಡ್ ತೆರೆಯುವ ದಿನಾಂಕ: ನಂತರ ತಿಳಿಸಲಾಗುವುದು.
ಹೆಚ್ಚಿನ ಮಾಹಿತಿಗಾಗಿ ಮೇಲ್ಕಾಣಿಸಿದ ವಿಳಾಸ ಸಂಪರ್ಕಿಸಬಹುದು
ಸಹಿ/–
ಉಪ ನಿರ್ದೇಶಕರು (ಆಡಳಿತ)
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
DIPR/CP/2738/NR/2025-26

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಹಾರಂಗಿ ಪುನರ್ವಸತಿ ವಿಭಾಗ, ಕುಶಾಲನಗರ–571234, ಸೋಮವಾರಪೇಟೆ ತಾ॥ ಕೊಡಗು ಜಿಲ್ಲೆ
ದೂರವಾಣಿ ಸಂಖ್ಯೆ : 08276 – 274365
ಫ್ಯಾಕ್ಸ್ ಸಂಖ್ಯೆ : 08276 – 274365
ಇಮೇಲ್: eehrdksh@gmail.com
ಕರ್ನಾಟಕ
ಸಂ:ಕಾ.ಇಂ/ಕಾ.ನೀ.ನಿ.ನಿ/ಹಾಪುವಿ/ಪಿಬಿಸಿ/ಟೆಂಡರ್ ಪ್ರಕಟಣೆ ಸಂಖ್ಯೆ: 7/2025–26, Date: 8–9–2025
ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಅಲ್ಪಾವದಿ ಕರೆ)
(ಐಟಂವಾರು : ಇ–ಪ್ರೊಕ್ಯೂರ್‌ಮೆಂಟ್ ಪೋರ್ಟ್‌ಲ್ ಪದ್ಧತಿ ಮೂಲಕ ಮಾತ್ರ)
ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರು ರವರ ಪರವಾಗಿ ಸೂಚಿತ ದರ್ಜೆ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟ್‌ಲ್ ಪದ್ಧತಿ ಮುಖಾಂತರ **ಐಟಂವಾರು** ದರದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ದಿನಾಂಕ:**12–9–2025** ರಿಂದ ಟೆಂಡರ್ ದಸ್ತಾವೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಡೌನ್ ಲೋಡ್ ಮಾಡಿಕೊಳ್ಳಬಹುದಾಗಿದ್ದು, ಭರ್ತಿ ಮಾಡಿದ ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ದಿನಾಂಕ: **25–9–2025** ಅಪರಾಹ್ನ 4.30 ಗಂಟೆಯವರೆಗೆ ಸಲ್ಲಿಸಬಹುದಾಗಿದೆ. ತಾಂತ್ರಿಕ ಬಿಡ್ಡನ್ನು ದಿನಾಂಕ **26–9–2025** ರ ಅಪರಾಹ್ನ 05.00 ಗಂಟೆಗೆ ತೆರೆಯಲಾಗುವುದು. ಆರ್ಥಿಕ ಬಿಡ್ಡನ್ನು ತಾಂತ್ರಿಕ ಬಿಡ್ಡು ಅನುಮೋದನೆಯಾದ ನಂತರ ತೆರೆಯಲಾಗುವುದು. ಹೆಚ್ಚಿನ ವಿವರಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್ ಸೈಟ್ ವಿಳಾಸ: http://kppp.Karnataka.gov.in ರಲ್ಲಿ ಪಡೆಯಬಹುದಾಗಿದೆ. ಕಾಮಗಾರಿಗಳ ವಿವರ: RE-MODELLING OF PERIYAPATNA LIFT IRRIGATION CANAL FROM CH: 0.000 KM TO52.200 KM UNDER HARANGI RESERVOIRPROJECT ಟೆಂಡರ್‌ಗಿಟ್ಟ ಅಂದಾಜು ಮೊತ್ತ **ರೂ. 19800.00** ಲಕ್ಷಗಳು; ಈ ಕಾಮಗಾರಿಗೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟ್‌ಲ್‌ನಲ್ಲಿ ತಿಳಿಸಿರುವಂತೆ ಟೆಂಡರ್ ಪ್ರೊಸೆಸಿಂಗ್ ಶುಲ್ಕ ನಿಗದಿಯಾಗಿದ್ದು, ಕಾಮಗಾರಿ ಪೂರ್ಣಗೊಳಿಸಲು ಕಾಲಮಿತಿ 24 ತಿಂಗಳು (Including monsoon season & watering period) ಹೆಚ್ಚಿನ ಮಾಹಿತಿಯನ್ನು ಕಛೇರಿ ವೇಳೆಯಲ್ಲಿ ಕೆಳಸಹಿದಾರರನ್ನು ಸಂಪರ್ಕಿಸಿ ಪಡೆಯಬಹುದಾಗಿರುತ್ತದೆ.
ಕಾರ್ಯಪಾಲಕ ಇಂಜಿನಿಯರ್,
ಹಾರಂಗಿ ಪುನರ್ವಸತಿ ವಿಭಾಗ,
ಕಾವೇರಿ ನೀರಾವರಿ ನಿಗಮ ನಿಯಮಿತ
ಕುಶಾಲನಗರ, ಸೋಮವಾರಪೇಟೆ ತಾ.,
ಕೊಡಗು ಜಿಲ್ಲೆ – 571234

ಕರ್ನಾಟಕ ಸರ್ಕಾರ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿರವರ ಕಛೇರಿ, ಜಿಲ್ಲಾ ಪಂಚಾಯತ್, ಮಂಡ್ಯ.
ಇ–ಮೆಲ್–:dho.mandya@gmail.com,
ದೂರವಾಣಿ ಸಂಖ್ಯೆ:08232–224027
ಸಂಖ್ಯೆ:ಸರಬ/18/2025–26 ದಿ:06.09.2025
ಇ–ಟೆಂಡರ್ ಪ್ರಕಟಣೆ – ಕೆಪಿಪಿಪಿ ಪೋರ್ಟಲ್ ಮುಖಾಂತರ
ಕರ್ನಾಟಕ ಪಾರದರ್ಶಕತೆ ಸಾರ್ವಜನಿಕ ಸಂಗ್ರಹಣೆ ಕಾಯ್ದೆ 1999 ರ ಪ್ರಕಾರ 06 ತಾಲ್ಲೂಕು ಆಸ್ಪತ್ರೆಗಳಿಗೆ 06 ಮಂದಿ ಕಾರ್ಯ/ಕ್ಲೇಮ್ ನಿರ್ವಾಹಕರುಗಳು, ಶ್ರೀರಂಗಪಟ್ಟಣ ತಾಲ್ಲೂಕಿನ 02 ಆರೋಗ್ಯ ವಿಸ್ತರಣಾ ಕೇಂದ್ರಗಳಿಗೆ 02 ಸಂಖ್ಯೆ ಶುಶ್ರೂಷಕರು ಮತ್ತು 02 ಸಂಖ್ಯೆ ಗ್ರೂಪ್ ಡಿ ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿಗೆ 03 ಸಂಖ್ಯೆ ಕಂಪ್ಯೂಟರ್ ಆಪರೇಟರ್ಸ್‌ರವರನ್ನು ಸೇರಿ ಒಟ್ಟು 13 ಸಂಖ್ಯೆ ವಿವಿಧ ವೃಂದದ ಸಿಬ್ಬಂದಿಗಳ ಸೇವೆಯನ್ನು ಪಡೆಯಲು ಟೆಂಡರ್ ಆಹ್ವಾನಿಸಲಾಗಿದೆ. (ಟೆಂಡರ್ ಅಂದಾಜು ಮೊತ್ತ:36,50,000/– ಹಾಗೂ ಇಎಂಡಿ ಮೊತ್ತ:92,000/–)
ಟೆಂಡರ್ ದಾಖಲೆಗಳನ್ನು ಕೆಪಿಪಿಪಿ ಪೋರ್ಟಲ್ ವೆಬ್‌ಸೈಟ್ www.kppp.kar.gov.in ಯಿಂದ ದಿನಾಂಕ:06.09.2025 ರಿಂದ ಡೌನ್ ಲೋಡ್ ಮಾಡಬಹುದು ಮತ್ತು ಕೆಪಿಪಿಪಿ ಪೋರ್ಟಲ್ ಮೂಲಕ ಟೆಂಡರ್‌ನ್ನು ದಿನಾಂಕ: 24.09.2025 ಸಂಜೆ–5.00 ಗಂಟೆಯವರೆಗೆ ಸಲ್ಲಿಸಬಹುದು. ಇಎಂಡಿಯೊಂದಿಗೆ ಸಲ್ಲಿಸದ ಟೆಂಡರ್‌ನ್ನು ತಿರಸ್ಕರಿಸಲಾಗುವುದು. ಹೆಚ್ಚಿನ ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ಅಥವಾ ಕಛೇರಿಯಿಂದ ಪಡೆಯಬಹುದು.
ಸಹಿ/–ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ, ಮಂಡ್ಯ ಜಿಲ್ಲೆ ಮಂಡ್ಯ.
ವಾಸಾಸಂಇ/ಸನಿ–ಮಂ/ಕೆಎಸ್‌ಎಂಸಿ&ಎ/425/2025–26

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.
ನಂ:ಬೆಂಅಪ್ರಾ/ನಯೋಸ/CLU–181/2247/2025–26 ದಿನಾಂಕ:10.09.2025
ಪ್ರಕಟಣೆ
(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14–A ರನ್ವಯ)
Smt. AASSA SAJI ರವರು ಬೆಂಗಳೂರು ಉತ್ತರ ತಾಲ್ಲೂಕು, ಯಶವಂತಪುರ ಹೋಬಳಿ, ಮ್ಯಾದರಹಳ್ಳಿ ಗ್ರಾಮದ ಸರ್ವೆ ನಂ.33ರಲ್ಲಿನ 1ಎ–03ಗುಂ ವಿಸ್ತೀರ್ಣದ ಪೈಕಿ 0ಎ–39ಗುಂ ವಿಸ್ತೀರ್ಣದ ಜಮೀನನ್ನು RMP-2015 ರಲ್ಲಿ ಜಲಾವೃತ ಪ್ರದೇಶ ಎಂದು Cartographical Error ಆಗಿ ಗುರುತಿಸಲಾಗಿದ್ದು, ಗ್ರಾಮ ನಕ್ಷೆಯಂತೆ ಹಾಗೂ ಕಂದಾಯ ದಾಖಲೆಗಳಂತೆ ಪ್ರಶ್ನಿತ ಜಮೀನು ಜಲಾವೃತ ಪ್ರದೇಶ ಆಗಿಲ್ಲದೇ ಇರುವುದರಿಂದ ವಸತಿ ಉದ್ದೇಶಕ್ಕಾಗಿ ಭೂಉಪಯೋಗ ಬದಲಾವಣೆಗೆ ಕೋರಿರುತ್ತಾರೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14–A ರಲ್ಲಿನ Cartographical Error ಅವಕಾಶದಡಿಯಲ್ಲಿ ತಿದ್ದುಪಡಿ ಮಾಡಲು ಪರಿಶೀಲಿಸಬಹುದಾಗಿರುತ್ತದೆ. ಬೆಂಗಳೂರು ಉತ್ತರ ತಾಲ್ಲೂಕು, ಯಶವಂತಪುರ ಹೋಬಳಿ, ಮ್ಯಾದರಹಳ್ಳಿ ಗ್ರಾಮದ ಸರ್ವೆ ನಂ.33ರಲ್ಲಿನ 1ಎ–03 ಗುಂ ವಿಸ್ತೀರ್ಣದ ಪೈಕಿ 0ಎ–39ಗುಂ ಪ್ರದೇಶವನ್ನು RMP-2015 ರಲ್ಲಿ Cartographical Error ನಿಂದಾಗಿ ಭಾಗಶಃ ಜಲಾವೃತ ಭೂಉಪಯೋಗದಲ್ಲಿ ಗುರುತಿಸಲಾಗಿರುತ್ತದೆ. ಗ್ರಾಮ ನಕ್ಷೆಯಂತೆ ಪ್ರಶ್ನಿತ ಜಮೀನು ಜಲಾವೃತ ಪ್ರದೇಶ ಆಗಿಲ್ಲದೇ ಇರುವುದರಿಂದ, ಅರ್ಜಿದಾರರ ಜಮೀನನ್ನು ಜಲಾವೃತ ಪ್ರದೇಶ ವಲಯದಿಂದ ವಸತಿ ಉದ್ದೇಶಕ್ಕೆ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.
ಸಹಿ/– ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಕಲಬುರಗಿ ವಿಭಾಗ, ಕಲಬುರಗಿ
ಸಂ.ಕಾನಿಅ/ಲೋಇ/ಕವಿ/ತಾಶಾ–2/ಟೆಂಡರ್ ಅಧಿಸೂಚನೆ/2025–26/3400 ದಿನಾಂಕ:10.09.2025
ಅಲ್ಪಾವಧಿ ಟೆಂಡರ್ ಅಧಿಸೂಚನೆ
1) **ಕಾಮಗಾರಿ ವಿವರ :** ಕಾರ್ಯನಿರ್ವಾಹಕ ಇಂಜೀನಿಯರರು, ಲೋಕೋಪಯೋಗಿ, ಇಲಾಖೆ, ಕಲಬುರಗಿ ವಿಭಾಗ ಕಾರ್ಯಾಲಯದಿಂದ **(ಕೆ.ಕೆ.ಆರ್.ಡಿ.ಬಿ.ಯೋಜನೆಯಡಿಯಲ್ಲಿ ಮಂಜುರಾದ (ಒಟ್ಟು 02)** ಕಾಮಗಾರಿಗಳಿಗೆ ಟೆಂಡರ ಕರೆಯಲಾಗಿದೆ. ಇಂಡೆಂಟ್ ಸಂಖ್ಯೆ 23530, 23531. 2) **ಕಾಮಗಾರಿ ಅಂದಾಜು ಮೊತ್ತ : ರೂ. 950.00 ಲಕ್ಷಗಳು.** 3) ಗುತ್ತಿಗೆದಾರರ ಅರ್ಹತೆ ವಿವರ: ಈ ಕಾಮಗಾರಿಗೆ ಟೆಂಡರ ಸಲ್ಲಿಸುವವರು, ಲೋಕೋಪಯೋಗಿ ಇಲಾಖೆಯಲ್ಲಿ ಒಂದನೇ ದರ್ಜೆ ಮೇಲ್ಪಟ್ಟ ಗುತ್ತಿಗೆದಾರರಾಗಿರಬೇಕು. 4) ಇ.ಎಮ್.ಡಿ. ಮೊತ್ತ **9,00,000.00**. 5) ಪ್ರೀ ಬಿಡ್ ಮೀಟಿಂಗ್ ದಿನಾಂಕ: 08.10.2025 (11.00 ಗಂಟೆ). 6) ಟೆಂಡರ ಬಗ್ಗೆ ಮಾಹಿತಿ ಹಾಗು ಸ್ಪಷ್ಟೀಕರಣ ಕೋರುವ ಕೊನೆಯ ದಿನಾಂಕ : **09.10.2025 (17.30 ಗಂಟೆ)**. 7) ಟೆಂಡರ ಸಲ್ಲಿಸುವ ಕೊನೆಯ ದಿನಾಂಕ : **10.10.2025 (16.00 ಗಂಟೆ)**. 8) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **13.10.2025 (16.30 ಗಂಟೆ)**. 9) ಆರ್ಥಿಕ ಬಿಡ್ ತೆರೆಯುವ ದಿನಾಂಕ : **15.10.2025 (11.30 ಗಂಟೆ)**. 10) ಹೆಚ್ಚಿನ ವಿವರಗಳಿಗೆ ಕಾರ್ಯನಿರ್ವಾಹಕ ಇಂಜೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಕಲಬುರಗಿ ಕಚೇರಿ. 11) **ಸೂಚನೆ : ಜಿ.ಎಸ್.ಟಿ ಪ್ರತ್ಯೇಕವಾಗಿ ನೀಡಲಾಗುವುದು**. 12) ಅಂತರ್ಜಾಲ ತಾಣದ ವಿಳಾಸ:website: www.e-proc.karnataka.gov.in 13) **ಗಮನಿಸಬೇಕಾದ ಅಂಶಗಳು : ಟಿಪ್ಪಣಿ 1) ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಯನ್ನು ಮುಂದೂಡುವಿಕೆ/ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ/ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ. 2) ಇನ್ನು ಮುಂದೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಬದಲಾಗಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.**
ಸಹಿ/– ಕಾರ್ಯನಿರ್ವಾಹಕ ಇಂಜೀನಿಯರರು,
ಲೋಕೋಪಯೋಗಿ ಇಲಾಖೆ ವಿಭಾಗ, ಕಲಬುರಗಿ
ವಾ.ಸಾ.ಸಂ.ಇ.ಕಲಬುರಗಿ/492/2025–26/ದೇಶಪಾಂಡೆ ಪಬ್ಲಿಸಿಟಿ

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ
ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಯಾದಗಿರ.
ಸಂಖ್ಯೆ:ಕಾಪಾಅ/ಪಂರಾಇಂ/ವಿಯಾ/5050/ಎಸ್‌ಸಿಪಿ&ಟಿಎಸ್‌ಪಿ/ಟೆ.ಪ್ರ/ತಾಸ–1/2025–26/1017 ದಿ:09.09.2025
ಸಂಕ್ಷಿಪ್ತ ಟೆಂಡರ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)
1) ಕಾಮಗಾರಿಗಳ ವಿವರ.: (1) ಸುರಪೂರ ತಾಲೂಕಿನ ಬೈಲಕುಂಟಿ ಗ್ರಾಮದ ದಾಸಯ್ಯಮುತ್ಯಾ ಗುಡಿಯಿಂದ ಹಣಮಸಾಗರ ದೊಡ್ಡಿಯ ವರೆಗೆ ಸಿ.ಸಿ. ರಸ್ತೆ ನಿರ್ಮಾಣ (2)ಸುರಪೂರ ತಾಲೂಕಿನ ಕಡದರಾಳ ಕ್ರಾಸ್ ದಿಂದ ಸೇದಿಭಾವಿವರೆಗೆ ಸಿ.ಸಿ. ರಸ್ತೆ ನಿರ್ಮಾಣ. ಇಂಟೆಂಡರ್ ಸಂಖ್ಯೆ:–RDPR/2025-26/RD/WORK_INDENT17647/CALL-3 2) ಲೆಕ್ಕ ಶೀರ್ಷಿಕೆ:2024–25ನೇ ಸಾಲಿನ 5054 ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಯೋಜನೆ 3) ಟೆಂಡರಿಗಿಟ್ಟ ಅಂದಾಜು ಮೊತ್ತ :ಕನಿಷ್ಠ ಮತ್ತು ಗರಿಷ್ಠ ರೂ. 50.00 ಲಕ್ಷ 4) ಗುತ್ತಿಗೆದಾರರ ದರ್ಜೆ: 3ನೇ ಮೇಲ್ಪಟ್ಟು ದರ್ಜೆ ಮೇಲ್ಪಟ್ಟು 5) ಟೆಂಡರ ಫಾರಂ ಪಡೆಯಲು ಕೊನೆಯ ದಿನಾಂಕ:09.09.2025 ರಿಂದ 16.09.2025 ಸಾಯಂಕಾಲ 4:00 ಗಂಟೆವರೆಗೆ 6) ಟೆಂಡರ ಅರ್ಜಿ ಬೆಲೆ ಮತ್ತು ಇ.ಎಂ.ಡಿ. ಮೊತ್ತ: ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ನಮೂದಿಸಿದಂತೆ (ಅರ್ಜಿ ಶುಲ್ಕು ಹಿಂದಿರುಗಿಸಲಾಗುವುದಿಲ್ಲಾ) 7) ಟೆಂಡರ ಫಾರಂ ಸಲ್ಲಿಸುವ ಅಂತಿಮ ದಿನಾಂಕ: 16.09.2025 ಸಾಯಂಕಾಲ 4:00 ಗಂಟೆವರೆಗೆ 8) ಟೆಂಡರ ತೆರೆಯುವ ದಿನಾಂಕ ಆರ್ಥಿಕ:18.09.2025 ಬೆಳ್ಳಿಗೆ 11:00 ನಂತರ 9) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ (ಕಛೇರಿ ಅವಧಿಯಲ್ಲಿ): ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಯಾದಗಿರ. 10) ಅಂತರಜಾಲ ತಾಣದ ವಿಳಾಸ: https://kppp.karnataka.gov.in
ಸೂಚನೆ :– ಟೆಂಡರರಿಗೆಸಂಬಂದಿಸಿದ ಮಾಹಿತಿಗಳನ್ನು ಈ ಕಛೇರಿಯಿಂದ ಕಛೇರಿ ಅವಧಿಯಲ್ಲಿ ಅಥವಾ https://kppp.karnataka.gov.in/ ವೆಬ್‌ಸೈಟ್‌ನಲ್ಲಿ ಪಡೆಯಬಹುದು (ರಜಾದಿನಗಳು ಹೊರತುಪಡಿಸಿ).
ಸಹಿ/–ಕಾರ್ಯಪಾಲಕ ಇಂಜೀನೀಯರರು,
ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಯಾದಗಿರ.
ವಾ.ಸಾ.ಸಂ.ಇ/ಯಾದಗಿರಿ/275/ಕೆ.ಎಸ್.ಎಂ.ಸಿ.ಎ/2025–26

ಸಮಾಚಾರ ಸಣ್ಣದಲ್ಲ

ಇರ್ಫಾನ್‌ನನ್ನು ಗಡಿಪಾರು ಮಾಡಿ

ದಾವಣಗೆರೆ: ಮದ್ದೂರಿನಲ್ಲಿ ಯುವಕರ ತಲೆಕೆಡಿಸಿ ಗಣಪತಿ ಉತ್ಸವದಲ್ಲಿ ಕಲ್ಲು ಎಸೆಯಲು ಪ್ರೇರಣೆ ನೀಡಿದ ಚನ್ನಪಟ್ಟಣದ ಇರ್ಫಾನ್ ಎಂಬ ಮತಾಂಧನನ್ನು ಪೊಲೀ ಸರು ಕೂಡಲೇ ಬಂಧಿಸಿ ರಾಜ್ಯದಿಂದ ಗಡಿಪಾರು ಮಾಡ ಬೇಕು ಎಂದು ಮಾಜಿ ಸಚಿವ ಎಂ.ಪಿ. ರೇಣುಕಾ ಚಾರ್ಯ ಹೇಳಿದ್ದಾರೆ. ಸುದ್ದಿಗಾರ ರೊಂದಿಗೆ ಮಾತನಾಡಿ, ಈ ಘಟನೆಯ ತನಿಖೆಯನ್ನು ರಾಷ್ಟ್ರೀಯ ತನಿಖಾ ಸಂಸ್ಥೆಗೆ ವಹಿಸಬೇಕು. ಮದ್ದೂರು ಪಟ್ಟಣದಲ್ಲಿ ಹಿಂದೂ ಗಣಪತಿ ಮೂರ್ತಿ ವಿಸರ್ಜನೆ ವೇಳೆ ಕಲ್ಲು ತೂರಾಟ ನಡೆಸಿರುವುದು ಪೂರ್ವನಿಯೋಜಿತ ಕೃತ್ಯವಾಗಿದ್ದು ಒಂದು ವಾರದ ಹಿಂದೆಯೇ ಮಸೀದಿಯಲ್ಲಿ ಮತಾಂಧ ಜಿಹಾದಿ ಶಕ್ತಿಗಳು ಕಲ್ಲು ಸಂಗ್ರಹಿಸಿಟ್ಟುಕೊಂಡಿದ್ದರು. ವಿಧಾನ ಸೌಧದಲ್ಲಿ ಪಾಕಿಸ್ತಾನ್ ಜಿಂದಾಬಾದ್ ಎಂದಿದ್ದ ವರನ್ನು ಹೆಡೆಮುರಿ ಕಟ್ಟಿ ಜೈಲಿಗೆ ಅಟ್ಟಿದ್ದರೆ ಮದ್ದೂ ರಿನಲ್ಲಿ ಈ ಮತಾಂಧ ಶಕ್ತಿಗಳು ಗಣೇಶ ಮೆರವಣಿಗೆ ಮೇಲೆ ಕಲ್ಲು ಎಸೆಯುತ್ತಿರಲಿಲ್ಲ. ಹಿಂದೂಗಳು ಸುಮ್ಮನಿದ್ದರೆ ಕಾಂಗ್ರೆಸ್ ನವರು ಮುಂದೊಂದು ದಿನ ಚಾಮುಂಡಿ ಬೆಟ್ಟವೂ ವಕ್ಫ್ ಬೋರ್ಡ್ ಆಸ್ತಿ ಮಾಡಿ ಬಿಡುತ್ತಾರೆ ಎಂದು ಕಿಡಿಕಾರಿದರು.

ಅನಾರೋಗ್ಯದಿಂದ ಯೋಧ ಸಾವು

ಬಾಗಲಕೋಟೆ: ಭಾರತೀಯ ಸೇನೆಯ ಗಡಿ ಭದ್ರತಾ ಪಡೆಯಲ್ಲಿ (ಬಿಎಸ್‌ಎಫ್) ಸೇವೆ ಸಲ್ಲಿಸುತ್ತಿದ್ದ ತಾಲೂಕಿನ ಶಿರೂರ ಪಟ್ಟಣದ ಯೋಧ ರಮೇಶ ನಾಗಪ್ಪ ಬದಾಮಿ (42) ಮೃತಪಟ್ಟಿದ್ದಾರೆ. ಜಮ್ಮು ಕಾಶ್ಮೀರದ ಶ್ರೀನಗರ ದಲ್ಲಿ 80ನೇ ಬಿಎಸ್‌ಎಫ್ ಬಟಾಲಿಯನ್‌ನಲ್ಲಿ ಕಳೆದ 18 ವರ್ಷಗಳಿಂದ ದೇಶ ಸೇವೆ ಮಾಡುತ್ತಿದ್ದ ರಮೇಶ ಬದಾಮಿ ಅವರಿಗೆ ಮೂರು ತಿಂಗಳಿಂದ ಬ್ರೇನ್ ಟ್ಯೂಮರ್‌ಗೆ ಒಳಗಾಗಿ ಮಿಲಿಟರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಚಿಕಿತ್ಸೆ ಫಲಕಾರಿಯಾಗದೇ ಸೋಮವಾರ ನಿಧನರಾಗಿ ದ್ದಾರೆ. ರಮೇಶ ಅವರಿಗೆ ತಂದೆ, ತಾಯಿ, ಪತ್ನಿ, ಪುತ್ರಮ ಸಹೋದರ ಹಾಗೂ ಸಹೋದರಿಯರು ಸೇರಿದಂತೆ ಅಪಾರ ಬಂಧು ಬಳಗವನ್ನು ಹೊಂದಿದ್ದಾರೆ. ಗುರುವಾರ ಬೆಳಗ್ಗೆ ಸಕಲ ಸರಕಾರಿ ಗೌರವದೊಂದಿಗೆ ಅಂತ್ಯಕ್ರಿಯೆ ನೆರವೇ ರಲಿದೆ ಎಂದು ಕುಟುಂಬ ಮೂಲಗಳು ತಿಳಿಸಿವೆ.

ಕೇರಳಕ್ಕೆ ಸಾಗಿಸುತ್ತಿದ್ದ 34 ಎಮ್ಮೆ, ಕೋಣ ವಶಕ್ಕೆ

ಮಡಿಕೇರಿ: ಕೇರಳಕ್ಕೆ ಸಾಗಣೆ ಮಾಡಲಾಗುತ್ತಿದ್ದ 34 ಎಮ್ಮೆ, ಕೋಣಗಳನ್ನು ಪೊಲೀಸರು ಪೊನ್ನಂಪೇಟೆ ತಾಲೂಕಿನ ಗೋಣಿಕೊಪ್ಪಲು ಸಮೀಪ ವಶಪಡಿಸಿಕೊಂಡಿದ್ದಾರೆ. ರಾತ್ರಿ ವೇಳೆ ಸಾಗಣೆ ಮಾಡಲಾಗುತ್ತಿದೆ ಎಂಬ ಮಾಹಿತಿ ಆಧರಿಸಿ ಕಾರ್ಯಾಚರಣೆ ಕೈಗೊಳ್ಳಲಾಗಿತ್ತು. ಗೋಣಿಕೊಪ್ಪಲು ಸಮೀಪದ ಮತ್ತಿಗೋಡು ಆನೆ ಶಿಬಿರದ ಬಳಿ ನಮ್ಮನ್ನು ನೋಡುತ್ತಲೇ ವಾಹನ ನಿಲ್ಲಿಸಿ ಚಾಲಕ ಪರಾರಿಯಾದ. 19 ದೊಡ್ಡ ಕೋಣ, ಎಮ್ಮೆ, 15 ಎಮ್ಮೆ ಕರುಗಳು ಪತ್ತೆಯಾದವು. ವಾಹನದ ಮಾಲೀಕ, ಚಾಲಕನಿಗಾಗಿ ಶೋಧ ನಡೆದಿದೆ' ಎಂದು ಪೊಲೀಸರು ತಿಳಿಸಿದ್ದಾರೆ. ಪ್ರಕರಣ ದಾಖಲಾಗಿದೆ.

ವಿಶ್ವವಾಣಿ ಕ್ಲಬ್ ಹೌಸ್
11.09.2025
ಗುರುವಾರದ ಅತಿಥಿ

ಶ್ರೀಮತಿ ಜಲಜಾಕ್ಷಿ ಕೆ. ಡಿ
ವಿಷಯ
ವಿದ್ಯಾರ್ಥಿಗಳಿಗಾಗಿ, ಚಾಲಕಿಯೂ ಆದ ಶಿಕ್ಷಕಿ
vishwavani.news

ನಾಡ ಸಮಸ್ಯೆಗೆ ಸಿಎಂ ಪರಿಹಾರ

- **ಸ್ಥಳ:** ಬೋಧನಹೊಸಹಳ್ಳಿ, ಬೆಂಗಳೂರು ಗ್ರಾಮಾಂತರ
- **ಸಮಸ್ಯೆಯೇನು?** ಮುತ್ಸಂದ್ರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬೋಧನಹಸೊಳ್ಳಿ ಗ್ರಾಮಕ್ಕೆ ನೀರು ಶುದ್ಧೀಕರಿಸದೆ ಸಮೇತನಹಳ್ಳಿಗೆ ಕೆರೆಗೆ ಬಿಡುತ್ತಿರುವ ಬಗ್ಗೆ.
- **ಪರಿಹಾರ:** ಮುತ್ಸಂದ್ರ ಗ್ರಾಪಂ ಡಿವ್ಯಾಪ್ತಿಯ ಬೋಧನಹೊಸಹಳ್ಳಿ ನೀರನ್ನು ಶುದ್ಧೀಕರಿಸದೇ ಸಮೇತನಹಳ್ಳಿ ಕೆರೆಗೆ ಬಿಡಲಾಗುತ್ತಿದೆ ಎಂದು ಸ್ಥಳೀಯರೊಬ್ಬರು ದೂರು ಸಲ್ಲಿಸಿದ್ದು, ಈ ಕುರಿತು ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿದ್ದಾರೆ. ಬೂದು ನೀರು ನಿರ್ವಹಣಾ ವ್ಯವಸ್ಥೆಯಲ್ಲಿ ಸಮುದಾಯ ಇಂಗು ಗುಂಡಿ ನಿರ್ಮಿಸಲು ಗ್ರಾಪಂನಿಂದ 4 ಲಕ್ಷ ರು. ಅನುದಾನದಲ್ಲಿ ಕೈಗೊಂಡಿದೆ.

ಗಣೇಶ ವಿಗ್ರಹಗಳ ಸಾಮೂಹಿಕ ವಿಸರ್ಜನೆ | ಖಾಕಿ ಸರ್ಪಗಾವಲಿನಲ್ಲಿ ಶೋಭಾ ಯಾತ್ರೆ | ಬಿಜೆಪಿ ಹಾಗೂ ಜೆಡಿಎಸ್ ನಾಯಕರ ಸಾಥ್

ಮದ್ದೂರಿನಲ್ಲಿ ಮೊಳಗಿದ ಕೇಸರಿ ರಣ ಕಹಳೆ

ಮದ್ದೂರು: ಕೋಮು ಸಂಘರ್ಷದಿಂದ ಕಳೆದ ಮೂರು ದಿನಗಳಿಂದ ಬೂದಿ ಮುಚ್ಚಿದ ಕೆಂಡದಂತಿದ್ದ ಮಂಡ್ಯ ಜಿಲ್ಲೆಯ ಮದ್ದೂರು ನಗರದಲ್ಲಿ ಬುಧವಾರ 28 ಗಣೇಶಮೂರ್ತಿಗಳ ಸಾಮೂಹಿಕವಾಗಿ ವಿಸರ್ಜನೆ ಕಾರ್ಯಕ್ರಮ ಖಾಕಿ ಸರ್ಪಗಾವಲಿನಲ್ಲಿ ಯಶಸ್ವಿಯಾಗಿ ನಡೆಯಿತು.

ಶೋಭಾ ಯಾತ್ರೆ ಹೆಸರಿನಲ್ಲಿ ಗಣಪತಿ ವಿಸರ್ಜನೆ ಕಾರ್ಯಕ್ರಮಕ್ಕೆ ಬಂದ ವಿಪಕ್ಷ ನಾಯಕ ಆರ್.ಅಶೋಕ್, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಶಾಸಕರಾದ ಅಶ್ವತ್ಥ್ ನಾರಾಯಣ, ಸಿ.ಟಿ.ರವಿ ಸೇರಿದಂತೆ ಇನ್ನು ಹಲವು ನಾಯಕರು ದೊಡ್ಡರಸಿನಕೆರೆ ಬಸಪ್ಪನ ಆಶೀರ್ವಾದ ಪಡೆದು ಗಣೇಶಮೂರ್ತಿ ಮೆರವಣಿಗೆಗೆ ಚಾಲನೆ ನೀಡಿದರು. ಸಾವಿರಾರು ಮಂದಿ ಜನಸಾಗರದಲ್ಲಿ ಈ ಎಲ್ಲಾ ನಾಯಕರು ಹೆಜ್ಜೆ ಹಾಕಿದರು.

ಮೆರವಣಿಗೆ ಆರಂಭ: ಪ್ರತಿಭಟನೆ ನಡೆದ ಸೋಮವಾರವೇ ಹಿಂದೂಪರ ಕಾರ್ಯಕರ್ತರು ಬುಧವಾರ ಸಾಮೂಹಿಕವಾಗಿ ಗಣಪತಿ ವಿಸರ್ಜನೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತೇವೆ ಎಂದು ಘೋಷಿಸಿದ್ದರು. ಅದರಂತೆ ಬೆಳಗ್ಗೆ 11ಗಂಟೆಯಿಂದಲೇ ಪೂರ್ವ ತಯಾರಿ ನಡೆಸಿ, ಸಾವಿರಾರು ಹಿಂದೂ ಕಾರ್ಯಕರ್ತರು, ಜೆಡಿಎಸ್ ಮತ್ತು ಬಿಜೆಪಿ ಕಾರ್ಯಕರ್ತರು ಜಮಾವಣೆ ಗೊಂಡಿದ್ದರು. ಸಾಮೂಹಿಕ ಗಣಪತಿ ವಿಸರ್ಜನೆ ಕಾರ್ಯಕ್ರಮಕ್ಕೆ ಮದ್ದೂರು ನಗರವಲ್ಲದೇ ಗ್ರಾಮೀಣ ಪ್ರದೇಶ ಮತ್ತು ಮಂಡ್ಯ, ಮಳವಳ್ಳಿ ಕಡೆಯಿಂದಲೂ ಹಿಂದೂಪರ ಕಾರ್ಯಕರ್ತರು ಭಾಗವಹಿಸಿದ್ದರು. ಕೆಲ ಯುವಕ ಮತ್ತು ಯುವತಿಯರು ಮೆರವಣಿಗೆ ಸಾಗುವಾಗ ತಮ್ಮ ಮನೆಯ ಮಹಡಿಯ ಮೇಲೆ ನಿಂತು ಗಣಪತಿ ವೀಕ್ಷಿಸುತ್ತಾ ಹಾಡಿಗೆ ನೃತ್ಯ ಮಾಡುತ್ತಿದ್ದ ದೃಶ್ಯಗಳು ಕಂಡು ಬಂದವು. ಅದರಲ್ಲೂ ಪೇಟೆ ಬೀದಿ ಬಳಿಯ ಮಸೀದಿ ಬಳಿಗೆ ಮೆರವಣಿಗೆ ಆಗಮಿಸುತ್ತಿ ದ್ದಂತೆಯೇ ಕರ್ಪೂರ ಹಚ್ಚಿ, ಮೆರವಣಿಗೆಯಲ್ಲಿ ಸಾಗಿದರು.

ಶಿಂಷಾ ನದಿಯಲ್ಲಿ ಸಾಮೂಹಿಕವಾಗಿ ಗಣಪತಿ ವಿಸರ್ಜನೆ: ಮಳವಳ್ಳಿ ರಸ್ತೆಯಿಂದ ಆರಂಭವಾದ ಗಣೇಶಮೂರ್ತಿ ಮೆರವಣಿಗೆ ಟಿ.ಬಿ.ವೃತ್ತ, ಹಳೇ ಬೆಂಗಳೂರು- ಮೈಸೂರು ಹೆದ್ದಾರಿ, ಕೊಲ್ಲಿ ವೃತ್ತ, ಪೇಟೆ ಬೀದಿ ಮಾರ್ಗವಾಗಿ ಹೊಳೆ ಆಂಜನೇಯಸ್ವಾಮಿ ದೇಗುಲದ ಬಳಿಗೆ ಬಂದು ಅಲ್ಲಿ ಶಿಂಷಾ ನದಿಯಲ್ಲಿ ಸಾಮೂಹಿಕವಾಗಿ ಗಣಪತಿ ವಿಸರ್ಜನೆ ಮಾಡಲಾಯಿತು. ಈ ಸಂದರ್ಭದಲ್ಲಿ ಹಿಂದೂಪರ ಕಾರ್ಯಕರ್ತರು, ವಿದ್ಯಾರ್ಥಿ, ವಿದ್ಯಾರ್ಥಿನಿಯರು ಭಾಗಿಯಾಗಿದ್ದರು.

ಮದ್ದೂರು ಪಟ್ಟಣದಲ್ಲಿ ಬುಧವಾರ ಸಾಮೂಹಿಕ ಗಣೇಶ ವಿಸರ್ಜನಾ ಮಹೋತ್ಸವದಲ್ಲಿ ವಿರೋಧ ಪಕ್ಷದ ನಾಯಕ ಆರ್.ಅಶೋಕ್, ಶಾಸಕ ಅಶ್ವತ್ಥನಾರಾಯಣ, ಹಿಂದೂ ಕಾರ್ಯಕರ್ತರು ಪಾಲ್ಗೊಂಡಿದ್ದರು.

ನಾವೆಲ್ಲ ಜೈಲಿಗೂ ಹೋಗಲು ಸಿದ್ಧ

ಮಾಜಿ ಶಾಸಕ ಡಿ.ಸಿ.ತಮ್ಮಣ್ಣ ಮಾತನಾಡಿ, ಈ ಘಟನೆಗೆ ಕಾಂಗ್ರೆಸ್ ಸರಕಾರವೇ ಕಾರಣ. ಕಲ್ಲು ತೂರಾಟ ನಡೆಸಿದವರ ವಿರುದ್ಧ ಕಠಿನ ಕ್ರಮ ಕೈಗೊಳ್ಳುವ ಬದಲು 500 ಮಂದಿ ಹಿಂದೂಗಳ ಮೇಲೆ ಪ್ರಕರಣ ದಾಖಲಿಸಿದ್ದಾರೆ. ನಮ್ಮೆಲ್ಲರ ಮೇಲೆ ಕೇಸ್ ದಾಖಲಿಸಿ, ನಾವೆಲ್ಲ ಜೈಲಿಗೂ ಹೋಗಲು ಸಿದ್ಧ, ಕೋರ್ಟ್ ಗೆ ಹೋಗಲೂ ಸಿದ್ಧ. ಮಂಡ್ಯ ,ಸಂಸದ , ಕೇಂದ್ರ ಸಚಿವ ಎಚ್.ಡಿ.ಕುಮಾರ ಸ್ವಾಮಿ ಅವರೂ ಮದ್ದೂರಿಗೆ ಆಗಮಿಸಲಿದ್ದಾರೆ ಎಂದರು.

ಸಮರ್ಥ ನಾಯಕತ್ವದ ಕೊರತೆಯಿಂದ ಈ ರೀತಿಯ ಘಟನೆಗಳು ನಡೆಯುತ್ತಿದೆ. ಬಿಟ್ಟಿ ಭಾಗ್ಯಗಳಿಗೆ ಮರುಳಾದ ಕಾರಣ ಈ ಪರಿಸ್ಥಿತಿ ಎದುರಾಗಿದೆ.
-ಸುಮಲತಾ ಅಂಬರೀಶ್ , ಮಾಜಿ ಸಂಸದೆ

ಭದ್ರಾವತಿಯಲ್ಲಿ ಪಾಕಿಸ್ತಾನ ಜಿಂದಾಬಾದ್ ಎಂದು ಘೋಷಣೆ ಕೂಗಲಾಗಿದೆ. ಅಲ್ಲಿಯ ಶಾಸಕ ಸಂಗಮೇಶ್ ಹೇಳುತ್ತಾರೆ, ನಾನು ಮುಂದಿನ ಜನ್ಮದಲ್ಲಿ ಮುಸ್ಲಿಂ ಆಗಿ ಹುಟ್ಟುತ್ತೇನೆ ಎಂದು. ಇಸ್ಲಾಂ ನಲ್ಲಿ ಪುನರ್ ಜನ್ಮ ಇಲ್ಲ. ಬಸವಣ್ಣನವರಿಗೆ ಅವಮಾನ ಮಾಡಬೇಡಿ. ಸನಾತನ ಧರ್ಮಕ್ಕೆ ಅವಮಾನ ಮಾಡಬೇಡಿ. ಈ ಜನ್ಮದಲ್ಲೇ ಮುಸ್ಲಿಂ ಆಗಿಬಿಡಿ.
-ಸಿ.ಟಿ.ರವಿ, ವಿಧಾನಪರಿಷತ್ ಸದಸ್ಯ

ಮಂಡ್ಯದ ಜನರ ಶಕ್ತಿ ಏನು ಎಂದು ನಾವು ತೋರಿಸಲು ಇಲ್ಲಿ ಸೇರಿದ್ದೇವೆ. ಕಾಂಗ್ರೆಸ್ ಸರಕಾರ ಮುಸ್ಲಿಂ ತುಷ್ಟೀಕರಣದಲ್ಲಿ ನಿರತವಾಗಿದ್ದು, ಅದನ್ನು ಕಿತ್ತೊಗೆಯಲು ನಾವು ಒಂದಾಗಿದ್ದು, ಇನ್ನು ಮುಂದೆ ನಮ್ಮದೇ ಹವಾ. ಮಹಿಳೆಯರು ದುರಾಡಳಿತದ ವಿರುದ್ಧ ಬೀದಿಗೆ ಇಳಿಯುವ ಸ್ಥಿತಿ ನಿರ್ಮಾಣವಾಗಿದೆ. ಸಿದ್ದರಾಮಯ್ಯ ಅವರು ಅಧಿಕಾರದಲ್ಲಿ ಮುಂದುವರಿದರೆ ಗಣೇಶನ ಹಬ್ಬವನ್ನೇ ಬ್ಯಾನ್ ಮಾಡುತ್ತಾರೆ. ನಾವು ವಿಧಾನಸಭೆಯ ಒಳಗೂ ಹೋರಾಟ ಮಾಡುತ್ತೇವೆ.
ಆರ್.ಅಶೋಕ್, ವಿಪಕ್ಷ ನಾಯಕ

ಕಲ್ಲೆಸೆದವರನ್ನು ಗೂಂಡಾ ಕಾಯಿದೆಯಡಿ ಜೈಲಿಗಟ್ಟಿ

ಮಸೀದಿಯಲ್ಲಿ ಕಲ್ಲು ಶೇಖರಿಸಿ ಗಣೇಶ ಮೂರ್ತಿ ಮೆರವಣಿಗೆ ಮೇಲೆ ಕಲ್ಲೆಸೆಯುವ ದುಷ್ಕರ್ಮಿಗಳನ್ನು ಪತ್ತೆ ಹಚ್ಚಿ ಗೂಂಡಾ ಕಾಯಿದೆಯಡಿ ಜೈಲಿಗಟ್ಟುವ ಜತೆಗೆ ಮದ್ದೂರು ಪಟ್ಟಣದ ದುಷ್ಕೃತ್ಯ ಸಂಬಂಧ ನ್ಯಾಯಾಂಗ ತನಿಖೆಗೆ ಒಪ್ಪಿಸುವಂತೆ ರಾಜ್ಯ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ರಾಜ್ಯ ಸರಕಾರವನ್ನು ಆಗ್ರಹಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿ, ಪೊಲೀಸ್ ಅಥವಾ ಆಡಳಿತ ವೈಫಲ್ಯ ಎದ್ದು ಕಾಣುತ್ತಿದ್ದು ಕಾಣದ ಕೈಗಳು ಮದ್ದೂರು ಪಟ್ಟಣಕ್ಕೆ ಕೈ ಜೋಡಿಸುವ ಅನುಮಾನವಿದ್ದು ಎಲ್ಲಾ ಪ್ರಕ್ರಿಯೆಗಳಿಗೆ ತೆರೆ ಎಳೆಯುವ ಸಂಬಂಧ ನ್ಯಾಯಾಂಗ ತನಿಖೆಯೇ ಸೂಕ್ತ. ಮುಖ್ಯಮಂತ್ರಿ ಮತ್ತು ಜಿಲ್ಲಾ ಉಸ್ತುವಾರಿ ಸಚಿವರು ಕೋಮು ಸೌಹಾರ್ದ ಕೆಡುವಲ್ಲಿ ಬಿಜೆಪಿ ಕಾರ್ಯಕರ್ತರೇ ಕಾರಣವೆಂಬ ಉಡಾಫೆ ಹೇಳಿಕೆ ನೀಡುತ್ತಿದ್ದು ಇದಕ್ಕೆ ಭದ್ರಾವತಿ ಶಾಸಕ ಸೇರಿದಂತೆ ಇನ್ನಿತರ ಕಾಂಗ್ರೆಸ್ ಮುಖಂಡರು ದನಿಗೂಡಿಸುತ್ತಿರುವುದು ಸಲ್ಲದ ವಿಚಾರವೆಂದರು.

ಗಾಯಾಳು ಮನೆಗಳಿಗೆ ವಿಪಕ್ಷ ನಾಯಕ ಅಶೋಕ್ ಭೇಟಿ

ಜಿಲ್ಲಾಧಿಕಾರಿ ಡಾ.ಕುಮಾರ ಮತ್ತು ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ಅವರೊಂದಿಗೆ ಮದ್ದೂರು ಪ್ರವಾಸಿ ಮಂದಿರದಲ್ಲಿ ವಿಪಕ್ಷ ನಾಯಕ ಆರ್.ಅಶೋಕ್ ನೇತೃತ್ವದಲ್ಲಿ ಸಭೆ ನಡೆಸಿದ ಬಿಜೆಪಿ ನಿಯೋಗ ಘಟನೆಯ ಬಗ್ಗೆ ಸಂಪೂರ್ಣ ಮಾಹಿತಿ ಪಡೆದುಕೊಂಡರು. ಮುಂದೆ ಮಂಡ್ಯ ಜಿಲ್ಲೆಯಲ್ಲಿ ಇಂತಹ ಘಟನೆಗಳು ಪುನರಾವರ್ತಿಸದಂತೆ ಕ್ರಮ ಕೈಗೊಳ್ಳಿ ಎಂದು ಅಧಿಕಾರಿಗಳಿಗೆ ವಿಪಕ್ಷ ನಾಯಕ ಆರ್.ಅಶೋಕ್ ಸೂಚನೆ ನೀಡಿದರು. ಕಲ್ಲು ತೂರಾಟದ ವೇಳೆ ಗಾಯಗೊಂಡಿದ್ದವರ ಮನೆಗಳಿಗೆ ಭೇಟಿ ನೀಡಿ ಸಾಂತ್ವನ ಹೇಳಿದರು.

ಬಿಜೆಪಿ, ಜೆಡಿಎಸ್ ನಾಯಕರ ವಿರುದ್ಧ ಸಚಿವ ಕಿಡಿ

ಗಣಪತಿ ಮೆರವಣಿಗೆಗೆ ಕಲ್ಲು ಹಿಂದೂಗಳ ಮೇಲೆ ಕೇಸ್ ಇಲ್ಲ

ಚಿಕ್ಕಮಗಳೂರು: ಸಾಮೂಹಿಕ ಗಣಪತಿ ವಿಸರ್ಜನೆಯನ್ನು ಬೇಕಂತಲೇ ಹೆಚ್ಚಿಸಲಾ ಗುತ್ತಿದೆ. ಬಿಜೆಪಿ ಮತ್ತು ಜೆಡಿಎಸ್ ನಾಯಕರು ಇದಕ್ಕೆ ಕುಮ್ಮಕ್ಕು ನೀಡುತ್ತಿದ್ದಾರೆ ಎಂದು ಸಚಿವ ಚಲುವರಾಯಸ್ವಾಮಿ ಆರೋಪಿಸಿದರು.

ಮಂಡ್ಯ ಜಿಲ್ಲೆಯ ಮದ್ದೂರಿನಲ್ಲಿ ಗಣಪತಿ ವಿಸರ್ಜನೆಯ ವೇಳೆ ನಡೆದ ಗಲಭೆ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿ ರುವ ಅವರು, ಗಲಭೆ ಪ್ರಕರಣದಲ್ಲಿ ಹಿಂದೂಗಳನ್ನು ಬಂಧಿ ಸಿಲ್ಲ. ಯಾರ ಮೇಲೂ ಎಫ್‌ಐಆರ್ ಹಾಕಿಲ್ಲ. ಮುಸ್ಲಿಂ ಸಮುದಾಯದ ಕಡೆಯಿಂದಲೇ ಗಲಾಟೆ ಆಗಿದೆ ಎಂಬ ಬಗ್ಗೆ ಮಾಹಿತಿ ಇದೆ. ಇದರ ಹಿಂದೆ ಯಾರೇ ಇದ್ದರೂ ಕ್ರಮ ಜರುಗಿಸಲಾಗುವುದು ಎಂದು ತಿಳಿಸಿದರು.

ರಾಜ್ಯದಲ್ಲಿ ಕಾನೂನು ವ್ಯವಸ್ಥೆ ಹಾಳಾಗಿದೆ ಎಂದು ರಾಜ್ಯ ಬಿಜೆಪಿಯು ಕೇಂದ್ರ ಗೃಹ ಸಚಿವರಿಗೆ ಪತ್ರ ಬರೆದಿದೆ. ಬಿಜೆಪಿಯವರಿಗೆ ನಾಚಿಕೆ ಆಗಬೇಕು. ಅವರ ಕಾಲದಲ್ಲಿ ಈ ರೀತಿಯ ಘಟನೆಗಳು ಆಗಿವೆ. ಕಾಂಗ್ರೆಸ್ ಅಧಿ ಕಾರಕ್ಕೆ ಬಂದಾಗಲೇ ಹೀಗಾಗುತ್ತೆ ಎನ್ನುವುದು ಸುಳ್ಳು. ಅವರು ಒಮ್ಮೆ ಹಿಂದೆ ತಿರುಗಿ ನೋಡಲಿ. ಆಡಳಿತ ವೈಫಲ್ಯದ ಅನುಮಾನ ಇದೆ. ತನಿಖೆ ನಡೆಯುತ್ತಿದೆ. ಆದಾಗ್ಯೂ ರಾಜ ಕೀಯ ಮಾಡುವುದು ಸರಿಯಲ್ಲ ಎಂದರು.

ಬಂಧಿತರಲ್ಲಿ ಇಬ್ಬರು ಚನ್ನಪಟ್ಟಣದವರು. ಉಳಿದವರೆಲ್ಲ ಮದ್ದೂರು ನಗರದವರು. ಪ್ರಕರಣದ ಬಗ್ಗೆ ಇಂದು-ನಾಳೆ ವರದಿ ತರಿಸಿಕೊಳ್ಳುತ್ತೇನೆ. ಇಂತಹ ಗಲಭೆಗಳು ನಡೆಯದಂತೆ ತಡೆಯಲು ಸರಕಾರ ಪ್ರಯತ್ನಿಸುತ್ತದೆ. ಇದಕ್ಕೆ ಯಾರೂ ಪುಷ್ಟಿ ನೀಡುವುದಿಲ್ಲ. ಬಿಜೆಪಿ ಮತ್ತು ಜೆಡಿಎಸ್ ವಿನಾಕಾರಣ ರಾಜಕೀಯ ಮಾಡುತ್ತಿದ್ದಾರೆ.
-ಚಲುವರಾಯಸ್ವಾಮಿ, ಸಚಿವ

ಬುರುಡೆ ಪ್ರಕರಣ: ಧರ್ಮಸ್ಥಳದಲ್ಲಿನ ನೇತ್ರಾವತಿ ಸ್ನಾನಘಟ್ಟದ ಪಕ್ಕದ ಕಾಡಿನಲ್ಲಿ ಶೋಧ

ಬಂಗ್ಲಗುಡ್ಡದಲ್ಲಿ ವಿಠಲ ಗೌಡನ ಕರೆದೊಯ್ದು ಮಹಜರು

ಮಂಗಳೂರು: ಧರ್ಮಸ್ಥಳ ಗ್ರಾಮದಲ್ಲಿ ಅಪರಾಧ ಕೃತ್ಯಗಳಿಗೆ ಸಂಬಂಧಿಸಿದ ಮೃತದೇಹಗಳನ್ನು ಹೂತು ಹಾಕಲಾಗಿದೆ ಎಂದು ಆರೋಪಿಸಲಾದ ಪ್ರಕರಣ ಸಂಬಂಧ ವಿಶೇಷ ತನಿಖಾ ತಂಡವು (ಎಸ್‌ಐಟಿ) ಸಾಕ್ಷಿ ದೂರುದಾರ ತಂದೊಪ್ಪಿಸಿದ್ದ ಬುರುಡೆ ಇದ್ದ ಜಾಗವನ್ನು ತೋರಿಸಿದ್ದ ಪಾಂಗಾಳದ ವಿಠಲ ಗೌಡ ಅವರನ್ನು ನೇತ್ರಾವತಿ ಸ್ನಾನಘಟ್ಟ ಪಕ್ಕದ ಕಾಡಿನೊಳಗೆ ಬುಧವಾರ ಮತ್ತೊಮ್ಮೆ ಕರೆದೊಯ್ದು ಮಹಜರು ನಡೆಸಿತು.

ವಿಠಲ ಗೌಡ ಬುಧವಾರ ಬೆಳಗ್ಗೆ ಎಸ್‌ಐಟಿ ಕಚೇರಿಗೆ ಹಾಜರಾಗಿದ್ದರು. ಅವರಿಂದ ಹೇಳಿಕೆ ದಾಖಲಿಸಿ ಕೊಂಡ ಎಸ್‌ಐಟಿ ಅಧಿಕಾರಿಗಳು ಎಸ್.ಪಿ. ಸೈಮನ್ ನೇತೃತ್ವದಲ್ಲಿ ವಿಠಲ ಗೌಡನನ್ನು ಬುರುಡೆ ಸಿಕ್ಕಿದ್ದ ಜಾಗಕ್ಕೆ ಕರೆದೊಯ್ದರು. ನೇತ್ರಾವತಿ ಸ್ನಾನಘಟ್ಟದ ಪಕ್ಕದ ಕಾಡಿನಲ್ಲಿ ಬುರುಡೆ ಇದ್ದ ಜಾಗವನ್ನು ವಿಠಲ ಗೌಡ ಅವರೇ ಸಾಕ್ಷಿದೂರುದಾರನಿಗೆ ತೋರಿಸಿದ್ದರು. ಅಲ್ಲಿಂದ ತೆಗೆದ ಬುರುಡೆಯನ್ನೇ ಸಾಕ್ಷಿ ದೂರುದಾರ ಪೊಲೀಸರ ವಶಕ್ಕೆ ಒಪ್ಪಿಸಿದ್ದ. ಆ ಜಾಗವನ್ನು ಎಸ್‌ಐಟಿ ಅಧಿಕಾರಿಗಳು ಸೆ.6ರಂದು ಸಂಜೆ ಮಹಜರು ನಡೆಸಿದ್ದರು. ಈ ವೇಳೆ ಆ ಪ್ರದೇಶದಲ್ಲಿ ಮೃತದೇಹ ಅವಶೇಷಗಳು ನೆಲದ ಮೇಲೆಯೇ ಕಂಡು ಬಂದಿದ್ದವು.



ವಿಠಲ ಗೌಡ ಅವರನ್ನು ನೇತ್ರಾವತಿ ಸ್ನಾನಘಟ್ಟ ಪಕ್ಕದ ಕಾಡಿನೊಳಗೆ ಬುಧವಾರ ಎಸ್‌ಐಟಿ ಅಧಿಕಾರಿಗಳು ಕರೆದೊಯ್ದು ಮಹಜರು ನಡೆಸಿದರು.

ಧರ್ಮಸ್ಥಳದ ಇತಿಹಾಸ ಹೇಳಿದ್ದೇನೆ

ಕೇರಳದ ಯೂಟ್ಯೂಬರ್ ಮನಾಫ್ ಮಾತನಾಡಿ, ಧರ್ಮಸ್ಥಳದ ವಿಚಾರವಾಗಿ ನ್ಯಾಯ ಬೇಕೆಂದು ನಾನು ಯೂಟ್ಯೂಬ್‌ನಲ್ಲಿ ವಿಡಿಯೊ ಮಾಡಿ ಅಪ್ಲೋಡ್ ಮಾಡಿದೆ. ನನ್ನ ವಿಡಿಯೊಗಳಿಂದ ಯಾರಿಗೋ ಸಮಸ್ಯೆ ಆಗಿರಬೇಕು. ಹೀಗಾಗಿ ವಿಚಾರಣೆಗೆ ಕರೆದಿದ್ದಾರೆ. ಧರ್ಮಸ್ಥಳಕ್ಕೆ ಯಾಕೆ ಮತ್ತು ಹೇಗೆ ಬಂದಿದ್ದು ಎಂದು ಕೇಳುತ್ತಿದ್ದಾರೆ. ಯೂಟ್ಯೂಬರ್‌ಗಳನ್ನು ಬಿಟ್ಟು ನನ್ನನ್ನೆ ಕರೆದಿದ್ದು ಯಾಕೆ ಗೊತ್ತಿಲ್ಲ. ನಾನು ಮಾಡುತ್ತಿದ್ದ ಸುದ್ದಿ ಯಾರಿಗೋ ಸಮಸ್ಯೆಯನ್ನುಂಟು ಮಾಡಿರಬಹುದು. 42 ವರ್ಷದ ನನಗೆ ಗೊತ್ತಿರುವ ಧರ್ಮಸ್ಥಳದ ಇತಿಹಾಸವನ್ನು ನಾನು ಎಸ್‌ಐಟಿ ಮುಂದಿಟ್ಟಿದ್ದೇನೆ ಎಂದು ಹೇಳಿದರು.

ನಾನು ಖುಷಿಯಾಗಿದ್ದೇನಲ್ಲಾ ಅದರಲ್ಲೇ ಅರ್ಥ ಮಾಡಿ ಕೊಳ್ಳಿ . ಎಸ್‌ಐಟಿ ತನಿಖೆಗೆ ಪೂರಕವಾಗಿ ಸಹಕಾರ ನೋಡುತ್ತಿದ್ದೇನೆ. ನನ್ನ ಮೂರು ಮೊಬೈಲ್ ಕೂಡಾ ಎಸ್‌ಐಟಿ ಅಧಿಕಾರಿಗಳಿಗೆ ಕೊಟ್ಟಿದ್ದೇನೆ.
-ಜಯಂತ್

ವೀರಶೈವ ಮಹಾಸಭಾಕ್ಕೂ ನಮಗೂ ಸಂಬಂಧವಿಲ್ಲ

ಹರಿಹರ ಪಂಚಮಸಾಲಿ ಪೀಠದ ವಚನಾನಂದ ಶ್ರೀಗಳು ಹೇಳಿಕೆ

ಬಾಗಲಕೋಟೆ: ಸಾಮಾಜಿಕ ಹಾಗೂ ಶೈಕ್ಷಣಿಕ ಗಣತಿ ವಿಚಾರದಲ್ಲಿ ಅಖಿಲ ಭಾರತ ವೀರಶೈವ ಮಹಾಸಭಾಕ್ಕೂ ಹಾಗೂ ಪಂಚಮಸಾಲಿಗೂ ಯಾವುದೇ ಸಂಬಂಧವಿಲ್ಲ. ಪಂಚಮಸಾಲಿ ಪೀಠ ಹಾಗೂ ಸಂಘದ ನಿರ್ಣಯದಂತೆಯೇ ಧರ್ಮ ಹಾಗೂ ಜಾತಿ ಕಾಲಂನಲ್ಲಿ ನಮೂದಿಸಬೇಕು ಎಂದು ಹರಿಹರ ಪಂಚಮಸಾಲಿ ಪೀಠದ ಜಗದ್ಗುರು ವಚನಾನಂದ ಸ್ವಾಮೀಜಿ ಸ್ಪಷ್ಟ ಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗಣತಿ ವಿಷಯಕ್ಕೆ ಸಂಬಂಧಿಸಿದಂತೆ ಹರಿಹರ ಪೀಠದಲ್ಲಿ ಸೆ.16 ರಂದು ಮಹತ್ವದ ಸಭೆ ನಡೆಯಲಿದೆ. ನಂತರ 17 ರಿಂದ 20ರ ವರೆಗೆ ಬೆಂಗಳೂರಿನಲ್ಲಿ ಸಮುದಾಯದ ಎಲ್ಲ ಮುಖಂಡರು, ಶಾಸಕರುಗಳು ಹಾಗೂ ಸಚಿವರ ಸಭೆ ನಡೆಸಿ ಧರ್ಮ ಹಾಗೂ ಜಾತಿ ಕುರಿತು ಅಂತಿಮ ನಿರ್ಣಯ ಪ್ರಕಟಿಸುತ್ತೇವೆ ಎಂದು ತಿಳಿಸಿದರು.

ಸೆಪ್ಟೆಂಬರ್ 22 ರಿಂದ ಅಕ್ಟೋಬರ್ 7ರ ವರೆಗೆ ಸಮೀಕ್ಷೆ ನಡೆಯಲಿದೆ. ಈ ಹಿನ್ನೆಲೆಯಲ್ಲಿ ಸಮುದಾಯದವರು ಏನು ನಮೂದಿಸಬೇಕು ಎಂಬ ಬಗ್ಗೆ ಆಯಾ ಜಿಲ್ಲೆಗೆ ತೆರಳಿ ಸಮುದಾಯದ ಮುಖಂಡರ ಸಲಹೆ ಸ್ವೀಕರಿಸಲಾಗುತ್ತಿದೆ. ರಾಜ್ಯದ ಎಲ್ಲ ಜಿಲ್ಲೆಯಲ್ಲಿ ಸಂಚರಿಸಿ, ಬೆಂಗಳೂರಿನಲ್ಲಿ ಅಂತಿಮ ನಿರ್ಧಾರ ಪ್ರಕಟ ಮಾಡಲಿದ್ದೇವೆ. ಸಮು ದಾಯದವರು ಬೇರೆ ಯಾರು ಏನು ಹೇಳಿದರೂ ಕೇಳಬೇಡಿ ಎಂದು ಮನವಿ ಮಾಡಿದರು.

ಬಸವ ಸಂಸ್ಕೃತಿ ಅಭಿಯಾನ ಯಾತ್ರೆಯಲ್ಲಿ ಜ್ಞಾನಿಗಳಾದ ಸ್ವಾಮೀಜಿಗಳು ಪಾಲ್ಗೊಳ್ಳಲಿದ್ದಾರೆ. ಆ ವೇದಿಕೆಗೆ ನಾವು ಹೋಗುವುದಿಲ್ಲ. ವೇದಿಕೆಯಲ್ಲಿನ ಒಳ್ಳೆಯ ವಿಚಾರಗಳನ್ನು ಜನರಿಗೆ ತಿಳಿಸುತ್ತೇನೆ. ಗೊಂದಲ ವಿಷಯಗಳಿದ್ದರೇ ತೀಕ್ಷ್ಣವಾಗಿ ಖಂಡಿಸುತ್ತೇನೆ.
- ವಚನಾನಂದ ಸ್ವಾಮೀಜಿ,
ಹರಿಹರ ಪಂಚಮಸಾಲಿ ಪೀಠದ ಜಗದ್ಗುರುಗಳು

ಎಲ್ಲದರಲ್ಲೂ ಮಧ್ಯ ಪ್ರವೇಶಿಸಲ್ಲ

ಕೂಡಲಸಂಗಮ ಪಂಚಮಸಾಲಿ ಪೀಠಕ್ಕೆ ಬೀಗ ಹಾಕಿದ ವಿಚಾರದಲ್ಲಿ ನಾವು ಬಹಿರಂಗವಾಗಿ ಹೇಳಿಕೆ ನೀಡಲು ಸಾಧ್ಯವಿಲ್ಲ. ಬಸವಜಯ ಮೃತ್ಯುಂಜಯ ಸ್ವಾಮೀಜಿ ಹಾಗೂ ವಿಜಯಾನಂದ ಕಾಶಪ್ಪನವರ ಅವರು ಸಮುದಾಯಕ್ಕೆ 2ಎ ಮೀಸಲಾತಿಗಾಗಿ ಪಾದಯಾತ್ರೆ ಮಾಡಿದವರು. ನಾವಿಬ್ಬರು ಪೀಠಕ್ಕೆ ಬರುವ ಮೊದಲಿನಿಂದಲೂ ಅಂದರೆ 31 ವರ್ಷಗಳಿಂದ ಸಂಘ ಚಾಲ್ತಿಯಲ್ಲಿದೆ. ಎಲ್ಲ ವಿಷಯದಲ್ಲಿ ಮಧ್ಯ ಪ್ರವೇಶಿಸುವುದಿಲ್ಲ. ನಾವು ವಿವಾದ ಮಾಡುವ ಸ್ವಾಮೀಜಿ ಅಲ್ಲ ಎಂದು ಹರಿಹರ ಪಂಚಮಸಾಲಿ ಪೀಠದ ಜಗದ್ಗುರು ವಚನಾನಂದ ಸ್ವಾಮೀಜಿ ಹೇಳಿದರು.

ಬಿಜೆಪಿ ವಿರುದ್ಧ ಸಚಿವ ಪ್ರಿಯಾಂಕ್ ಖರ್ಗೆ ವಾಗ್ದಾಳಿ

ಶಾಂತಿ ಸಭೆಗೆ ಬಾರದವರು ಹೋರಾಡುವುದು ಯಾಕೆ

ಕಲಬುರಗಿ: ರಾಜ್ಯ ಬಿಜೆಪಿ ಹಮ್ಮಿಕೊಂಡಿದ್ದ ಮದ್ದೂರು ಚಲೋ ಹೋರಾಟದ ಕುರಿತು ಬುಧವಾರ ಕಲಬುರಗಿಯಲ್ಲಿ ಜಿಲ್ಲಾ ಉಸ್ತು ವಾರಿ ಸಚಿವ ಪ್ರಿಯಾಂಕ್ ಖರ್ಗೆ ಪ್ರತಿಕ್ರಿಯೆ ನೀಡಿ, ಬಿಜೆಪಿಯವರಿಗೆ ನಾಚಿಕೆ, ಮಾನ, ಮರ್ಯಾದೆ ಇಲ್ಲ ಎಂದು ಕಿಡಿಕಾರಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಬಿಜೆಪಿ ಯವರಿಗೆ ನಾಚಿಕೆ, ಮಾನ, ಮರ್ಯಾದೆ ಇಲ್ಲ. ಉರಿಗೌಡನಂಜೇಗೌಡ ಕಥೆ ಕಟ್ಟಿದವರು ಈಗ ಎಲ್ಲಿ ಹೋದರು. ಒಂದೆಡೆ ಹೆಗ್ಗಡೆಯವರಿಗೆ ಜೈ ಅಂತಾರೆ, ಮತ್ತೊಂದೆಡೆ ಸೌಜನ್ಯ ಮನೆಗೆ ಹೋಗುತ್ತಾರೆ. ಎರಡೂ ದೋಣಿಯ ಮೇಲೆ ಕಾಲಿಡುತ್ತಿದ್ದಾರೆ ಎಂದು ವಾಗ್ದಾಳಿ ನಡೆಸಿದರು.

ಮದ್ದೂರಿನಲ್ಲಿ ನಡೆದ ಕಲ್ಲು ತೂರಾಟದ ಬಗ್ಗೆ ಸರಕಾರ ಶಾಂತಿ ಸಭೆ ಕರೆದಾಗ ಹಾಜರಾಗದ ಬಿಜೆಪಿಗರು ಈಗ 'ಮದ್ದೂರು ಚಲೋ' ಎನ್ನುತ್ತಿದ್ದಾರೆ. ಅವರಿಗೆ ಶಾಂತಿ ಬೇಕಾಗಿಲ್ಲ. ಬಡವರ ಮಕ್ಕಳು ರಸ್ತೆಗೆ ಇಳಿದು ಹೋರಾಟ ಮಾಡುವುದು, ಕೋಮುಗಲಭೆ ಸೃಷ್ಟಿಸಲು ಮುಂದಾಗಿದ್ದಾರೆ ಎಂದು ಕಿಡಿಕಾರಿದರು.

ನಿಮ್ಮ ಮಕ್ಕಳನ್ನು ವಿದೇಶದಿಂದ ಕರೆಸಿ ಮಾಡಿ: ಅಮಾಯಕರನ್ನು ಮುಂದಿಟ್ಟು ಪ್ರತಿಭಟನೆ ಮಾಡಬೇಡಿ. ನಿಮ್ಮ ಮಕ್ಕಳನ್ನು ವಿದೇಶದಿಂದ ಕರೆಸಿ ಮದ್ದೂರು ಚಲೋ ಮಾಡಿ. ಬಡವರ ಮಕ್ಕಳನ್ನು ಏಕೆ ಬಳಕೆ ಮಾಡಿ ಕೊಳ್ಳುತ್ತೀರಿ. ಧರ್ಮ ಜಾತಿ ಹೆಸರಲ್ಲಿ ಬಡವರ ಮಕ್ಕಳು, ಹಿಂದುಳಿದವರು, ದಲಿತರ ಮಕ್ಕಳನ್ನು ಬಲಿಪಶು ವನ್ನಾಗಿಸುತ್ತಿದ್ದೀರಿ. ಅದನ್ನು ಬಿಟ್ಟು ನಿಮ್ಮ ಮಕ್ಕಳನ್ನು ಮುಂದೆ ಬಿಡಿ ಎಂದು ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಬಜಾಜ್ ಗ್ರೂಪ್ ಜತೆಗಿನ ಸಹಭಾಗಿತ್ವದ ಮುಕುಂದ ಸುಮಿ ಕಂಪನಿ ಜತೆ ಜಪಾನ್ ಸಂಸ್ಥೆ ಒಪ್ಪಂದ

ಕೊಪ್ಪಳದಲ್ಲಿ 2,345 ಕೋಟಿ ವೆಚ್ಚದ ಉಕ್ಕು ಘಟಕ ಸ್ಥಾಪನೆ

ಕೊಪ್ಪಳ: ಬಜಾಜ್ ಗ್ರೂಪ್ ಜತೆಗಿನ ಸಹಭಾಗಿತ್ವದ ಮುಕುಂದ ಸುಮಿ ಕಂಪನಿ ಮೂಲಕ ಕೊಪ್ಪಳದಲ್ಲಿನ ಉಕ್ಕು ತಯಾರಿಕಾ ಘಟಕದಲ್ಲಿ 2,345 ಕೋಟಿ ರು.ಬಂಡವಾಳ ಹೂಡಿಕೆ ಮಾಡುವುದನ್ನು ಸುಮಿಟೊಮೊ ಖಚಿತಪಡಿಸಿದೆ.

ಈ ಕುರಿತು ಬೃಹತ್ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ಅವರು ಮಾಹಿತಿ ನೀಡಿದ್ದು, ಈ ಘಟಕವು 2028ರ ವೇಳೆಗೆ ಕಾರ್ಯಾರಂಭ ಮಾಡಲಿದೆ. ವಾರ್ಷಿಕ 3,50,000 ಟನ್‌ಗಳಷ್ಟು ಕಬ್ಬಿಣ, ಉಕ್ಕು ತಯಾರಿಸುವ ಸಾಮರ್ಥ್ಯ ಹೊಂದಿದೆ. ಶೀಘ್ರದಲ್ಲಿಯೇ ರಾಜ್ಯದಲ್ಲಿ ಬಯೊಮಾಸ್ ಘಟಕವನ್ನು ಸ್ಥಾಪಿಸುವ ಬಗ್ಗೆಯೂ ಸುಮಿಟೊಮೊ ಆಸಕ್ತಿ ವ್ಯಕ್ತಪಡಿಸಿದೆ ಎಂದು ಸಚಿವರು ವಿವರಿಸಿದ್ದಾರೆ.

ಬೆಂಗಳೂರಿನಲ್ಲಿ ತನ್ನ ಮೋಷನ್ ಕಂಟ್ರೋಲ್ ಮತ್ತು ವೇರಿಯೇಬಲ್ ಫ್ರಿಕ್ವೆನ್ಸಿ ಡ್ರೈವ್ಸ್ ಘಟಕ ಸ್ಥಾಪಿಸುವ ಸಂಬಂಧದ ಬಂಡವಾಳ ಹೂಡಿಕೆಯನ್ನು ಯಸ್ಕಾವಾ ಕಂಪನಿಯು ರಾಜ್ಯದ ನಿಯೋಗಕ್ಕೆ ಖಚಿತಪಡಿಸಿದೆ. ಇದು ಅತ್ಯಾಧುನಿಕ ತಯಾರಿಕಾ ತಂತ್ರಜ್ಞಾನದ ಕೇಂದ್ರವಾಗಿ ಬೆಳೆಯುವ ಮೂಲಕ ಕರ್ನಾಟಕದ ಸ್ಥಾನವನ್ನು ಬಲಪಡಿಸಲಿದೆ ಎಂದು ತಿಳಿಸಿದ್ದಾರೆ.

ಪಾಲುದಾರಿಕೆಯಡಿ ಹುಬ್ಬಳ್ಳಿಯಲ್ಲಿರುವ ಪ್ರತಿಷ್ಠಿತ ಎನ್ ಜಿಇಎಫ್ ಕಾರ್ಖಾನೆ ಪುನ:ಶ್ಚೇತನದ ಸಾಧ್ಯತೆಗಳ ಕುರಿತು ಜಪಾನಿನ ಜೆಎಫ್‌ಇ ಷೋಜಿ ಕಂಪನಿ ಜತೆ ಸಚಿವರು ಮಾತುಕತೆ ನಡೆಸಿದ್ದು, ಕಾರ್ಖಾನೆಗೆ ಆಹ್ವಾನ ನೀಡಿದ್ದಾರೆ.

ಕೊಪ್ಪಳದಲ್ಲಿ ಉಕ್ಕು ತಯಾರಿಕಾ ಘಟಕ ಸ್ಥಾಪನೆ ಸಂಬಂಧ 2,345 ಕೋಟಿ ರು.ಬಂಡವಾಳ ಹೂಡಿಕೆಗೆ ಉದ್ಯಮಿಗಳ ಜತೆ ಜಪಾನ್ ಪ್ರವಾಸದಲ್ಲಿರುವ ಸಚಿವ ಎಂ.ಬಿ. ಪಾಟೀಲ್ ಒಡಂಬಡಿಕೆ ಮಾಡಿಕೊಂಡರು.

ಸಚಿವರ ಜತೆಗಿನ ಸಭೆಯಲ್ಲಿ ಕಂಪನಿಯ ಜೆಎಫ್‌ಇ ಷೋಜಿ ಕಂಪನಿಯ ಯಂತ್ರೋಪಕರಣಗಳ ವಿಭಾಗದ ಜನರಲ್ ಮ್ಯಾನೇಜರ್ ಹಿರೋಶಿ ಲಿಜಿಮಾ, ಎಲೆಕ್ಟ್ರಿಕಲ್ ಅಪ್ಲೈಯನ್ಸಸ್ ಸ್ಟೀಲ್ ಪ್ಲ್ಯಾನಿಂಗ್ ವಿಭಾಗದ ಮ್ಯಾನೇಜರ್ ಹಿಡೆಕಸು ಯೋಶಿಒಕೊ ಮತ್ತಿತರರು ಭಾಗವಹಿಸಿದ್ದರು. ಉನ್ನತ ಮಟ್ಟದ ನಿಯೋಗದಲ್ಲಿ ಕೈಗಾರಿಕಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ಡಾ.ಎಸ್.ಸೆಲ್ವಕುಮಾರ್, ಕೈಗಾರಿಕಾ ಇಲಾಖೆ ಆಯುಕ್ತರಾದ ಗುಂಜನ್ ಕೃಷ್ಣ, ಮತ್ತಿತರರು ಇದ್ದರು.

ಎನ್‌ಜಿಇಎಫ್ ಪುನಶ್ಚೇತನಕ್ಕೆ ಮಾತುಕತೆಗೆ ಆಹ್ವಾನ

ಬಂಡವಾಳ ಹೂಡಿಕೆ ಆಕರ್ಷಿಸಲು ಜಪಾನ್‌ಗೆ ಭೇಟಿ ನೀಡಿರುವ ರಾಜ್ಯ ಉನ್ನತ ಮಟ್ಟದ ನಿಯೋಗದ ನೇತೃತ್ವ ವಹಿಸಿರುವ ಸಚಿವರು, ಕಂಪನಿಯ ಉನ್ನತಾಧಿಕಾರಿಗಳ ಜತೆ ಬುಧವಾರ ನಡೆದ ಸಭೆಯಲ್ಲಿ ಹುಬ್ಬಳ್ಳಿ ಎನ್ ಜಿಇಎಫ್ ಪುನಶ್ಚೇತನದ ಪ್ರಸ್ತಾವ ಮುಂದಿಟ್ಟಿದ್ದಾರೆ. ವಿದ್ಯುತ್ ಪರಿವರ್ತ ಕಗಳ ತಯಾರಿಕೆಯಲ್ಲಿ ಜೆಎಫ್‌ಇ ಮುಂಚೂಣಿಯಲ್ಲಿದೆ. ಹುಬ್ಬಳ್ಳಿಯಲ್ಲಿ ಇರುವ ರಾಜ್ಯ ಸರಕಾರಿ ಸ್ವಾಮ್ಯದ ಉದ್ಯಮವಾಗಿರುವ ನ್ಯೂ ಗವರ್ನಮೆಂಟ್ ಎಲೆಕ್ಟ್ರಿಕಲ್ ಫ್ಯಾಕ್ಟ ರಿಯನ್ನು (ಎನ್ ಜಿಇಎಫ್) ರಾಜ್ಯ ಸರಕಾರದ ಪಾಲುದಾರಿಕೆ ಯಡಿ ಪುನಶ್ಚೇತನಗೊಳಿಸುವ ಸಂಬಂಧ ಪೂರ್ವಭಾವಿ ಮಾತುಕತೆ ನಡೆಸಲು ಕಂಪನಿಯ ಉನ್ನತಾಧಿಕಾರಿಗಳು ಹುಬ್ಬಳ್ಳಿಯ ಘಟಕಕ್ಕೆ ಭೇಟಿ ನೀಡಲು ಆಹ್ವಾನಿಸಲಾಗಿದೆ ಎಂದು ತಿಳಿಸಿದ್ದಾರೆ.

ವಿಶ್ವವಾಣಿ

ಸಂಪಾದಕೀಯ

ಸುತ್ತಲು ಬೆಂಕಿ ಕಿಡಿ; ಮಧ್ಯೆ ಭಾರತ

ಸದ್ಯ ಭಾರತದ ಸ್ಥಿತಿ 'ಸೆರಗಿನಲ್ಲಿ ಕಟ್ಟಿಕೊಂಡಿರುವ ಕೆಂಡ'ದಂತಾಗಿದೆ. ಭಾರತ ನೆರೆ ರಾಷ್ಟ್ರಗಳಲ್ಲಿ ಪಾಕಿಸ್ತಾನ ಮೊದಲಿನಿಂದಲೂ ವೈರಿ ರಾಷ್ಟ್ರದ ಪಟ್ಟಿಯಲ್ಲಿತ್ತು. ಈ ಎರಡು ರಾಷ್ಟ್ರ ಗಳನ್ನು ಹೊರತುಪಡಿಸಿದರೆ ಇನ್ನುಳಿದ ಶ್ರೀಲಂಕಾ, ನೇಪಾಲ, ಭೂತಾನ್, ಮ್ಯಾನ್ಮಾರ್, ಬಾಂಗ್ಲಾದೇಶ, ಮಾಲ್ಡೀವ್ಸ್ ನಮ್ಮೊಂದಿಗೆ ಉತ್ತಮ ಬಾಂಧವ್ಯ ವನ್ನೇ ಹೊಂದಿದ್ದವು. ಆದರೆ ಇತ್ತೀಚಿನ ವರ್ಷಗಳಲ್ಲಿ ಈ ನೆರೆ ರಾಷ್ಟ್ರಗಳಲ್ಲಿ ನಡೆಯುತ್ತಿರುವ ರಾಜಕೀಯ ಅಸ್ಥಿರತೆ, ಆಂತರಿಕ ಧಂಗೆ ಸೇರಿದಂತೆ ಹಲವು ಕಾರಣಗಳಿಂದ ಈ ಎಲ್ಲ ರಾಷ್ಟ್ರಗಳಲ್ಲಿ ಅರಾಜಕತೆ ಸೃಷ್ಟಿಯಾಗಿದೆ. ಭಾರತದ ಮಿತ್ರ ರಾಷ್ಟ್ರಗಳ ಪಟ್ಟಿಯಲ್ಲಿದ್ದ ಬಹುತೇಕ ನೆರೆ ರಾಷ್ಟ್ರಗಳನ್ನು ಅಸ್ಥಿರಗೊಳಿಸುವ ಅಥವಾ ಭಾರತದೊಂದಿಗೆ ಅಂತರ ಕಾಯ್ದುಕೊಳ್ಳುವಂತೆ ಮಾಡುವ ಮೂಲಕ ಭಾರತದಲ್ಲಿ ಒಂಟಿಯನ್ನಾಗಿ ಮಾಡುವ ತಂತ್ರವನ್ನು ಅಮೆರಿಕ ಹಾಗೂ ಚೀನಾ ಮಾಡಿಕೊಂಡೇ ಬಂದಿವೆ. ಅರಾಜಕತೆ ಆಯಾ ದೇಶಗಳ ಆಂತರಿಕ ಸಮಸ್ಯೆಯಾಗಿದ್ದರೆ ಭಾರತಕ್ಕೆ ಬಹುದೊಡ್ಡ ತಲೆಬಿಸಿಯಾಗಿರುತ್ತಿರಲಿಲ್ಲ. ಆದರೆ, ಈ ಆಂತರಿಕ ದಂಗೆಯ ಹಿಂದೆ ವಿದೇಶಿ ಕೈವಾಡವಿರುವ ಹಾಗೂ ಹೋರಾಟಗಾರರಿಗೆ ಭಾರಿ ಪ್ರಮಾಣದಲ್ಲಿ 'ಫಂಡಿಂಗ್' ಆಗಿರುವ ಅನುಮಾನಗಳು ಅಂತಾ ರಾಷ್ಟ್ರೀಯ ಮಟ್ಟದಲ್ಲಿ ಹರಿದಾಡುತ್ತಿವೆ. ಬಾಂಗ್ಲಾದೇಶದಲ್ಲಿನ ಅಸ್ಥಿರತೆಯಲ್ಲಿ ಅಮೆರಿಕದ ನೇರ ಕೈವಾಡವಿದ್ದ ವಿಷಯ ಈಗ ಬಯಲಾಗಿದೆ. ಇದೀಗ ನೇಪಾಳದಲ್ಲಿನ ಆಂತರಿಕ ದಂಗೆಗೆ ಸಾಮಾಜಿಕ ಜಾಲತಾಣಗಳ ನಿಷೇಧ, ಸ್ಥಳೀಯ ಸರಕಾರದ ಸ್ವಜನಪಕ್ಷಪಾತ, ಭ್ರಷ್ಟಾಚಾರ ಹಾಗೂ ಯುವಕರಿಗೆ ನಿರುದ್ಯೋಗ ಸಮಸ್ಯೆ ಕಾರಣವೆಂದು ಹೇಳಲಾಗುತ್ತಿದೆ. ಆದರೆ ಸ್ಥಾಪಿತ ಸರಕಾರದ ವಿರುದ್ಧ ಹೋರಾಡುವಲ್ಲಿ ಬಾಹ್ಯ ಶಕ್ತಿಗಳ ಬೆಂಬಲವಿದೆ ಎನ್ನಲಾ ಗಿದೆ. ಒಂದು ಕಾಲದ ಭಾರತದ ಆಪ್ತಮಿತ್ರ ದೇಶದಲ್ಲಿ ಸೃಷ್ಟಿಯಾಗಿರುವ ಅನಿಶ್ಚಿತತೆಯಿಂದ ಭಾರತದ ಹಿತಾಸಕ್ತಿಗೆ ಧಕ್ಕೆ ಬಾರದಂತೆ ನೋಡಿಕೊಳ್ಳಬೇಕಾಗಿದೆ.

ಸೊಂಪಾದಕೀಯ

ಏನ್ ಆಟ ಆಡ್ತಾ ಇದ್ದೀರಾ?

ಮಾತು ಆಡಿದ್ರೆ ಹೋಯ್ತು, ಮುತ್ತು ಒಡೆದ್ರೆ ಹೋಯ್ತು ಅನ್ನೋ ಮಾತಿದೆ. ಆದರೆ ಈಗೀಗ ಜನಕ್ಕೆ ಮಾತಿನ ವಿಷಯದಲ್ಲಂತೂ ನಿಗಾ ಇಲ್ಲ. ಈಗ ಒಂದು ಮಾತು, ಇನ್ನೈದು ನಿಮಿಷಕ್ಕೆ ಅದಕ್ಕೆ ಉಲ್ಟಾ ಮಾತು. ಆದರೆ ಇದು ಕೇವಲ ರಾಜಕಾರಣಿಗಳಿಗೆ ಮಾತ್ರ ಅನ್ವಯ ಆಗುತ್ತೆ ಅಂತ ನೀವಂದುಕೊಂಡ್ರೆ, ಅದು ತಪ್ಪಾಗುತ್ತೆ. ಈ ಮಾತು ಹೇಳ್ತಾ ಇರೋದು ಇಂಡಿಯಾ ಮತ್ತು ಪಾಕಿಸ್ತಾನದ ನಡುವಿನ ಸಂಬಂಧ ಮತ್ತು ಎರಡು ದೇಶಗಳ ನಡುವಿನ ಕ್ರಿಕೆಟ್ ಆಟಕ್ಕೆ ಸಂಬಂಧಪಟ್ಟಿದ್ದು. ಪೆಹಲ್ಗಾಮ್ ಅಟ್ಯಾಕ್ ಆದಮೇಲೆ ಭಾರತ ಪಾಕಿಸ್ತಾನದ ನಡುವೆ ಮಿನಿ ಯುದ್ಧ ಆಗಿದ್ದು ಎಲ್ಲರಿಗೂ ಗೊತ್ತು. ಈ ಕಾರಣಕ್ಕೆ ಪಾಕಿಸ್ತಾನದ ಜೊತೆ ಕ್ರಿಕೆಟ್ ಆಡಲ್ಲ ಅಂತ ಭಾರತ ವರಾತ ತೆಗೆದಿತ್ತು. ಅದರಂತೆ ಇತ್ತೀಚೆಗೆ ನಡೆದ ಲೆಜೆಂಡ್ಸ್ ಲೀಗ್ ಕ್ರಿಕೆಟ್ ಪಂದ್ಯಾವಳಿಯಲ್ಲಿ ಪಾಕಿಸ್ತಾನದ ವಿರುದ್ಧ ಆಡಬೇಕಾಗಿ ಬಂದಾಗ ಪಂದ್ಯ ಆಡದೆಯೇ ನಾವು ಸೋತಿದ್ದೇವೆ ಎಂದು ಒಪ್ಪಿಕೊಂಡು ಅದರಿಂದ ಹೊರಬಂದು ಪಾಕಿಸ್ತಾನ ಮುಂದಿನ ಹಂತಕ್ಕೆ ಹೋಗುವಂತೆ ಮಾಡಿತ್ತು. ಇದನ್ನು ನೋಡಿ, ಆಹಾ, ಇನ್ಮೇಲೆ ಇಂಡಿಯಾ ಪಾಕಿಸ್ತಾನದ ಜೊತೆ ಕ್ರಿಕೆಟ್ ಆಡಲ್ಲ, ಹಾಗಾಗಿ ಪಾಕಿಗಳಿಗೆ ಸರಿಯಾಗಿ ಬಿಸಿ ಮುಟ್ಟಿಸಿದ್ದೇವೆ ಅಂತ ಅಂದು ಕೊಂಡವರೇ ಎಲ್ಲ. ಆದರೆ ಈಗ ಆಗ್ತಾ ಇರೋದೇನು? ಸದ್ಯ ಶುರು ಆಗಿರುವ ಏಷ್ಯಾಕಪ್ ಕ್ರಿಕೆಟ್ ಪಂದ್ಯಾವಳಿಯಲ್ಲಿ ಭಾರತ ಪಾಕಿಸ್ತಾನದ ಜೊತೆ ಕ್ರಿಕೆಟ್ ಆಡಲು ಒಪ್ಪಿಗೆ ನೀಡಿ ಪಂದ್ಯ ಆಡಲು ಸಜ್ಜಾಗಿದೆ. ಹಾಗಾದ್ರೆ ಮೊನ್ನೆ ತಾನೇ ಆಡಿದ ಮಾತಿಗೆ ಬೆಲೆ ಇಲ್ವಾ ? ಅಂದಿನ ನಿಲುವು ಇಂದು ಬದಲಾಗೋಕೆ ಕಾರಣ ಏನು ಅಂದ್ರೆ, ಅದಕ್ಕೆ ಸರಿಯಾದ ಉತ್ತರ ಇಲ್ಲ. ಅವತ್ತು ಆಡಲ್ಲ ಅಂದ್ರಿ, ಇವತ್ತು ಆಡ್ತೀವಿ ಅಂತಿದ್ದೀರಾ, ಏನ್ ಆಟ ಆಡ್ತಾ ಇದ್ದೀರಾ ಅಂತ ಯಾರೂ ಕೇಳೋ ಹಾಗಿಲ್ಲ. ಒಟ್ಟಿನಲ್ಲಿ ಇಂಡೋ ಪಾಕ್ ಕ್ರಿಕೆಟ್ ಮತ್ತೆ ಶುರು ಆಗಿದೆ ಅಂತ ಅಪ್ಪಟ ಕ್ರಿಕೆಟ್ ಪ್ರೇಮಿಗಳು ಸಂತಸ ಪಡಬೇಕು ಅಷ್ಟೇ.

ಸಂಪಾದಕರ ಸದ್ಯಶೋಧನೆ

ಪ್ರಯಾಣಿಕರ ಸ್ಥಳಾಂತರ

ವಿಮಾನಯಾನದಲ್ಲಿ ಎಲ್ಲ ನಿಯಮಗಳನ್ನೂ ಕಡ್ಡಾಯವಾಗಿ ಪಾಲಿಸಲೇಬೇಕು. ಯಾವ ನಿಯಮವನ್ನು ಲಘುವಾಗಿ ಪರಿಗಣಿಸುವಂತಿಲ್ಲ. ವಿಮಾನಯಾನದಲ್ಲಿ ನಿಗದಿಪಡಿಸಿದ ಸಮಯದೊಳಗೆ ಪ್ರಯಾಣಿಕರನ್ನು ಕಡ್ಡಾಯವಾಗಿ ವಿಮಾನದಿಂದ ಸ್ಥಳಾಂತರಿಸಬೇಕು ಎಂಬ ನಿಯಮವಿದೆ. ನಮಗೆಲ್ಲರಿಗೂ ಗೊತ್ತಿರುವ ಅಂಶವೆಂದರೆ, ವಿಮಾನಯಾನ ಸುರಕ್ಷತೆಯು ಅತ್ಯಂತ ಪ್ರಮುಖ ವಿಷಯ. ಯಾವುದೇ ತುರ್ತು ಪರಿಸ್ಥಿತಿಯಲ್ಲಿ, ಪ್ರಯಾಣಿಕರ ಜೀವ ಉಳಿಸುವುದು ಮೊದಲ ಆದ್ಯತೆ. ಇದಕ್ಕಾಗಿಯೇ ಅಂತಾರಾಷ್ಟ್ರೀಯ ಮತ್ತು ರಾಷ್ಟ್ರೀಯ ವಿಮಾನಯಾನ ಸಂಸ್ಥೆಗಳು ನಿರ್ದಿಷ್ಟ ನಿಯಮಗಳನ್ನು ರೂಪಿಸಿವೆ. ಇದರಲ್ಲಿ ಒಂದು ಪ್ರಮುಖ ನಿಯಮವೆಂದರೆ, ತುರ್ತು ಸಂದರ್ಭದಲ್ಲಿ ವಿಮಾನದಲ್ಲಿದ್ದ ಎಲ್ಲ ಪ್ರಯಾಣಿಕರನ್ನು ಒಂದು ನಿಗದಿತ ಸಮಯದೊಳಗೆ ಸುರಕ್ಷಿತವಾಗಿ ಹೊರಹಾಕಬೇಕು. ಎಲ್ಲ ಪ್ರಯಾಣಿಕ ವಿಮಾನಗಳ ವಿನ್ಯಾಸ ಮತ್ತು ನಿರ್ಮಾಣದಲ್ಲಿ ಈ ನಿಯಮವನ್ನು ಕಡ್ಡಾಯವಾಗಿ ಪಾಲಿಸಬೇಕು. ಒಂದು ವೇಳೆ ವಿಮಾನದಲ್ಲಿ ಬೆಂಕಿ, ತಾಂತ್ರಿಕ ದೋಷ ಅಥವಾ ಇನ್ಯಾವುದೇ ತುರ್ತು ಪರಿಸ್ಥಿತಿ ಉಂಟಾದರೆ, ಪೂರ್ಣ ಸಾಮರ್ಥ್ಯದೊಂದಿಗೆ ವಿಮಾನದಲ್ಲಿರುವ ಎಲ್ಲ ಪ್ರಯಾಣಿಕರನ್ನು (ಮಕ್ಕಳು, ವೃದ್ಧರು, ಅಂಗವಿಕಲರು ಸೇರಿದಂತೆ) ಕೇವಲ 90 ಸೆಕೆಂಡುಗಳೊಳಗೆ ಸುರಕ್ಷಿತವಾಗಿ ಸ್ಥಳಾಂತರಿಸಬೇಕು. ವಿಮಾನ ತಯಾರಕರು ಹೊಸ ವಿಮಾನ ಮಾದರಿಗಳನ್ನು ತಯಾರಿಸಿದಾಗ, ಈ 90 ಸೆಕೆಂಡುಗಳ ಸ್ಥಳಾಂತರ ಪರೀಕ್ಷೆಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಬೇಕು. ಈ ಪರೀಕ್ಷೆಯಲ್ಲಿ, ವಿಮಾನದ ಒಟ್ಟು ತುರ್ತು ನಿರ್ಗಮನ ದ್ವಾರಗಳಲ್ಲಿ (Emergency Exits) ಕೇವಲ ಅರ್ಧದಷ್ಟು ದ್ವಾರಗಳನ್ನು ಮಾತ್ರ ಬಳಸಿ ಪ್ರಯಾಣಿಕರನ್ನು ಹೊರಹಾಕುವ ಪರೀಕ್ಷೆಯನ್ನು ನಡೆಸಲಾಗುತ್ತದೆ. ಇದು ಒಂದು ದ್ವಾರದಲ್ಲಿ ತೊಂದರೆ ಉಂಟಾದರೆ ಏನು ಮಾಡಬೇಕು ಎಂಬುದನ್ನು ಪರೀಕ್ಷಿಸಲು ಸಹಾಯ ಮಾಡುತ್ತದೆ. ಹಾಗಾದರೆ ಈ ನಿಯಮದ ಹಿಂದಿನ ಉದ್ದೇಶಗಳೇನು? ವಿಮಾನದಂಥ ಸಣ್ಣ ಜಾಗದಲ್ಲಿ ಬೆಂಕಿ ಅಥವಾ ಇತರ ಅಪಾಯಕಾರಿ ವಸ್ತುಗಳ ಹೊಗೆ ತುಂಬಿದಾಗ, ಆಮ್ಲಜನಕದ ಕೊರತೆ ಉಂಟಾಗುವ ಸಾಧ್ಯತೆ ಹೆಚ್ಚು. ಆದ್ದರಿಂದ, ಪ್ರಾಣ ಹಾನಿಯನ್ನು ತಡೆಗಟ್ಟಲು ಸಾಧ್ಯವಾದಷ್ಟು ವೇಗವಾಗಿ ಜನರನ್ನು ಹೊರಹಾಕಬೇಕು. 90 ಸೆಕೆಂಡುಗಳು ಈ ತುರ್ತು ಪರಿಸ್ಥಿತಿಗಳಿಂದ ಬಚಾವಾಗಲು ಒಂದು ನಿರ್ಣಾಯಕ ಸಮಯವಾಗಿದೆ. ಈ ನಿಯಮವು ವಿಮಾನಯಾನ ಸಿಬ್ಬಂದಿಗೆ (Cabin Crew) ಸರಿಯಾದ ತರಬೇತಿ ನೀಡಲು ಮಾನದಂಡಗಳನ್ನು ಒದಗಿಸುತ್ತದೆ. ತುರ್ತು ಸಮಯದಲ್ಲಿ ವಿಮಾನದ ಸಿಬ್ಬಂದಿ ಎಷ್ಟು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಬೇಕು ಎಂಬುದನ್ನು ಇದು ನಿರ್ಧರಿಸುತ್ತದೆ. ಸ್ಥಳಾಂತರದ ಸಮಯದಲ್ಲಿ ಕ್ಯಾಬಿನ್ ಸಿಬ್ಬಂದಿಯ ನಿರ್ದೇಶನಗಳನ್ನು ಪಾಲಿಸುವುದು ಅತ್ಯಂತ ಮಹತ್ವದ ವಿಷಯ. ಈ ನಿಯಮವು ವಿಮಾನದ ವಿನ್ಯಾಸ, ಸೀಟುಗಳ ಅಂತರ, ನಿರ್ಗಮನ ದ್ವಾರಗಳ ಸಂಖ್ಯೆ ಮತ್ತು ಅವುಗಳ ಸ್ಥಾನ ಹಾಗೂ ತುರ್ತು ಸ್ಲೈಡ್‌ಗಳ (Emergency Slides) ವಿನ್ಯಾಸವನ್ನು ಪ್ರಭಾವಿಸುತ್ತದೆ. ಯಾವುದೇ ಹೊಸ ವಿಮಾನವು ವಾಣಿಜ್ಯ ಸೇವೆಗೆ ಪ್ರವೇಶಿಸುವ ಮೊದಲು ಈ ಮಾನದಂಡಗಳನ್ನು ಪೂರೈಸುವುದನ್ನು ಖಚಿತಪಡಿಸಿಕೊಳ್ಳಬೇಕಾಗುತ್ತದೆ. ಭಾರತದಲ್ಲಿ ನಾಗರಿಕ ವಿಮಾನಯಾನ ಮಹಾನಿರ್ದೇಶನಾಲಯ (Directorate General of Civil Aviation - DGCA) ವಿಮಾನಯಾನ ಸುರಕ್ಷತೆಯ ಬಗ್ಗೆ ಕಟ್ಟುನಿಟ್ಟಿನ ನಿಯಮಗಳನ್ನು ಹೊಂದಿದೆ. ಡಿಜಿಸಿಎ ನಿಯಮಗಳು ಅಂತಾರಾಷ್ಟ್ರೀಯ ನಾಗರಿಕ ವಿಮಾನಯಾನ ಸಂಸ್ಥೆಯ (International Civil Aviation Organization - ICAO) ಮಾನದಂಡಗಳ ಆಧಾರದ ಮೇಲೆ ರಚಿತವಾ ಗಿವೆ. ಭಾರತದಲ್ಲಿಯೂ ಸಹ, ಎಲ್ಲ ವಿಮಾನಯಾನ ಸಂಸ್ಥೆಗಳು ತಮ್ಮ ವಿಮಾನಗಳಲ್ಲಿ ಈ ಸ್ಥಳಾಂತರ ನಿಯಮಗಳನ್ನು ಪಾಲಿಸುವುದು ಕಡ್ಡಾಯ. ಡಿಜಿಸಿಎ ಪ್ರಕಾರ, ಪ್ರತಿ ಕ್ಯಾಬಿನ್ ಸಿಬ್ಬಂದಿ ತುರ್ತು ಪರಿಸ್ಥಿತಿಗಳಲ್ಲಿ ಹೇಗೆ ಕಾರ್ಯನಿರ್ವಹಿಸಬೇಕು ಮತ್ತು ಸ್ಥಳಾಂತರ ಪ್ರಕ್ರಿಯೆಯನ್ನು ಹೇಗೆ ನಿರ್ವಹಿಸಬೇಕು ಎಂಬುದರ ಬಗ್ಗೆ ನಿಯಮಿತವಾಗಿ ತರಬೇತಿ ಪಡೆಯಬೇಕು. ಪ್ರಯಾಣಿಕರು ತಮ್ಮ ಸೀಟಿನ ಪಕ್ಕದಲ್ಲಿರುವ ಸುರಕ್ಷತಾ ಕಾರ್ಡ್ (Safety Card) ಅನ್ನು ಗಮನವಿಟ್ಟು ಓದಬೇಕು. ಇದು ತುರ್ತು ನಿರ್ಗಮನ ದ್ವಾರಗಳ ಸ್ಥಳ ಮತ್ತು ತುರ್ತು ಪರಿಸ್ಥಿತಿಯಲ್ಲಿ ಅನುಸರಿಸಬೇಕಾದ ಕ್ರಮಗಳ ಬಗ್ಗೆ ಮಾಹಿತಿ ನೀಡುತ್ತದೆ. ಸ್ಥಳಾಂತರದ ಸಮಯದಲ್ಲಿ, ಲಗೇಜ್ ಮತ್ತು ಬ್ಯಾಗ್ ಗಳನ್ನು ಬಿಟ್ಟುಬಿಡಬೇಕು. ಏಕೆಂದರೆ, ಅವು ಹೊರ ಹೋಗುವ ದಾರಿಗೆ ಅಡ್ಡಿಯಾಗಬಹುದು ಮತ್ತು ಅಮೂಲ್ಯವಾದ ಸಮಯವನ್ನು ವ್ಯರ್ಥ ಮಾಡಬಹುದು. ತುರ್ತು ಸಮಯದಲ್ಲಿ 90 ಸೆಕೆಂಡುಗಳೊಳಗೆ ವಿಮಾನದಿಂದ ಪ್ರಯಾಣಿಕರನ್ನು ಹೊರಹಾಕುವ ನಿಯಮವು ವಿಮಾನಯಾನ ಸುರಕ್ಷತೆಯ ಒಂದು ಪ್ರಮುಖ ಭಾಗ. ಇದು ವಿಮಾನದ ವಿನ್ಯಾಸ, ಸಿಬ್ಬಂದಿ ಯ ತರಬೇತಿ ಮತ್ತು ವಿಮಾನಯಾನ ಸಂಸ್ಥೆಗಳ ಕಾರ್ಯವಿಧಾನಗಳಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತದೆ. ಇದು ಜಗತ್ತಿನಾದ್ಯಂತ ಲಕ್ಷಾಂತರ ಜನರ ಜೀವವನ್ನು ರಕ್ಷಿಸಲು ಸಹಾಯ ಮಾಡುವ ಒಂದು ಮೂಲಭೂತ ನಿಯಮವಾಗಿದೆ.

ಗೆಲ್ಲುವ ತನಕ ಹೋರಾಡದಿದ್ದರೆ, ಸೋಲುವ ಹೊತ್ತಿಗೆ ಅದಿರುವುದಿಲ್ಲ!

ನೂರೆಂಟು ವಿಶ್ವ
ವಿಶ್ವೇಶ್ವರ ಭಟ್
vbhat@me.com

Gaza was a land without people for a people without land.

– ಇಸ್ರೇಲ್ ಜಾಂಗ್ವಿಲ್, ಜಿಯೋನಿಸಂ ಪ್ರತಿಪಾದಕ

ಅಂದು ಜಗತ್ತಿನಲ್ಲಿಯೇ ಅತ್ಯಂತ ಆಯಕಟ್ಟಿನ, ಅತಿ ಸೂಕ್ಷ್ಮ ಪ್ರದೇಶದಲ್ಲಿದ್ದೆ!

ಅಲ್ಲಿಂದ ಕೇವಲ ನೂರಿನ್ನೂರು ಮೀಟರ್ ಸನಿಹದಲ್ಲಿ ನಿಂತು ಗಾಜಾ ಕಡೆ ದೃಷ್ಟಿ ನೆಟ್ಟಿದ್ದೆ. ದೃಷ್ಟಿಹಾಯುವ ಆರಂಭದಲ್ಲಿ, ಭೂಮಿ ಮರುಭೂಮಿಯ ಚಾದರ ಹೊದ್ದು ಮಲಗಿರುವಂತೆ ಕಾಣುವ, ನಂತರ ಅಲ್ಲಲ್ಲಿ ಕಟ್ಟಡಗಳು, ಜನವಸತಿ ಪ್ರದೇಶಗಳು ಇರುವಂತೆ ಗೋಚರಿಸುವ, ಮರ-ಗಿಡಗಳಿಲ್ಲದ, ಸಪಾಟು ಮೈದಾನದಂತೆ ಕಾಣುವ ಮೆಡಿಟರೇನಿಯನ್ ಸಮುದ್ರದ ಪೂರ್ವ ಕರಾವಳಿಯಲ್ಲಿರುವ ಒಂದು ಕಿರಿದಾದ ಭೂಪ್ರದೇಶವದು. ಗಾಜಾ-ಇಸ್ರೇಲ್ ಗಡಿಗುಂಟ ಎತ್ತರದ ಗೋಡೆ ಮತ್ತು ಅದರ ಮೇಲೆ ಸುರುಳಿ ಸುತ್ತಿದ ತಂತಿ ಸಾಲು. ಅದರ ಪಕ್ಕದಲ್ಲಿಯೇ ಹಾದುಹೋಗುವ ಹೆದ್ದಾರಿ. ಗಾಜಾಕ್ಕೆ ಹೊಂದಿಕೊಂಡಿರುವ ಇಸ್ರೇಲಿನ ಸೆಡೆರಾಟ್ ಪಟ್ಟಣದ ಒಂದು ದಿಬ್ಬದ ಮೇಲೆ ನಿಂತು ಗಾಜಾವನ್ನು ದಿಟ್ಟಿಸುತ್ತಿದ್ದರೆ, ಅತ್ತ ದಟ್ಟವಾದ ಹೊಗೆ ಮುಗಿಲಿಗೆ ಮೋಡಕಟ್ಟಿತ್ತು. ಅಂದು ಗಾಜಾದಿಂದ ಯಾವ ರಾಕೆಟ್ ಅಥವಾ ಕ್ಷಿಪಣಿ ದಾಳಿಗಳು ನಡೆದಿರಲಿಲ್ಲ. ಇತ್ತ ಇಸ್ರೇಲಿ ಸೇನೆ ದಾಳಿಯನ್ನು ಮುಂದುವರಿಸಿತ್ತು. ಒಂದು ವೇಳೆ ಗಾಜಾದಿಂದ ಕ್ಷಿಪಣಿ ದಾಳಿಯಾಗುತ್ತಿದ್ದರೆ, ನಾವು ಆ ದಿಬ್ಬದ ಮೇಲೆ ನಿಂತು ಗಾಜಾವನ್ನು ನೋಡುವುದು ಸಹ ಸಾಧ್ಯವಿರಲಿಲ್ಲ.

ಗಾಜಾದಿಂದ ಯಾವಾಗ ಕ್ಷಿಪಣಿ, ರಾಕೆಟ್ ದಾಳಿಗಳಾಗುತ್ತವೆ ಎಂಬುದನ್ನು ಊಹಿಸುವುದು ಸಾಧ್ಯವಿಲ್ಲ. 2023ರ ಅಕ್ಟೋಬರ್ 7ರಿಂದ ದಿನವೂ ಎರಡೂ ಕಡೆಗಳಿಂದ ಚಕಮಕಿಗಳಾಗುತ್ತಿರುವುದು ದಿಟ. ಗಾಜಾದಿಂದ ಹಾರಿದ ರಾಕೆಟ್ ಇಸ್ರೇಲಿನ ಸೆಡೆರಾಟ್ ನಗರಕ್ಕೆ ಬಂದು ಬೀಳಲು ನಾಲ್ಕರಿಂದ ಎಂಟು ಸೆಕೆಂಡುಗಳು ಸಾಕು. ಆದರೆ ಇಸ್ರೇಲಿನ ಐರನ್ ಡೋಮ್‌ಗಳು ಅವುಗಳನ್ನು ಹೊಡೆದುರುಳಿಸುತ್ತಿರುವುದರಿಂದ ಇಸ್ರೇಲಿಗಳು ಬಚಾವ್. ಆದರೆ ಈ ಐರನ್ ಡೋಮ್‌ಗಳ ಕಣ್ಣು ತಪ್ಪಿಸಿಯೂ ಕ್ಷಿಪಣಿಗಳು ಇಸ್ರೇಲಿನ ನಗರಗಳ ಮೇಲೆ ಬಂದು ಬಿದ್ದಿವೆ.

ಗಾಜಾ ಪಟ್ಟಿಯ ನಲವತ್ತು ಕಿಮೀ ಉದ್ದದವರೆಗೂ ಇಸ್ರೇಲಿ ಪಡೆಗಳ ಸೈನಿಕರು ಕಣ್ಣಲ್ಲಿ ಕಣ್ಣಿಟ್ಟು ಕಾಯುತ್ತಾ ಇದ್ದರೂ, ಗಾಜಾದಲ್ಲಿರುವ ಹಮಾಸ್ ಉಗ್ರಗಾಮಿಗಳು ಯಾವಾಗ ಬೇಕಾದರೂ ಬಾಲ ಬಿಚ್ಚಬಹುದು. ಹಮಾಸ್ ದಾಳಿ ಮಾಡಿದಾಗಲೆಲ್ಲ ಇಸ್ರೇಲಿ ಪಡೆ ಪ್ರತೀಕಾರ ತೀರಿಸಿಕೊಳ್ಳದೇ ಹೋಗಿಲ್ಲ. ಗಾಜಾದಿಂದ ಹತ್ತು ಕ್ಷಿಪಣಿ ಬಂದು ಬಿದ್ದರೆ, ಇಸ್ರೇಲಿಗಳು ನೂರು ಕ್ಷಿಪಣಿ ಹಾರಿಸದೇ ಬಿಟ್ಟಿಲ್ಲ. ಇಸ್ರೇಲಿ ಸಚಿವರೊಬ್ಬರು ಹೇಳಿದಂತೆ I prefer one thousand Palestinian mothers crying than letting one Jewish mother cry. ಇದು ಇಸ್ರೇಲಿಗಳ ವರಸೆ. ಎಲ್ಲಿ ತನಕ ಹಮಾಸ್‌ಗಳು ಕಾಲುಕೆರೆದು ಯುದ್ಧ ನಿಲ್ಲಿಸುವುದಿಲ್ಲವೋ, ಅಲ್ಲಿ ತನಕ ಇಸ್ರೇಲ್ ಶಾಂತಿಮಂತ್ರವನ್ನು ಪಠಿಸುವ ಮಾತೇ ಇಲ್ಲ. ಹೀಗಾಗಿ ಯುದ್ಧ ಸದ್ಯಕ್ಕೆ ನಿಲ್ಲುವ ಯಾವ ಸೂಚನೆಯೂ ಕಾಣುತ್ತಿಲ್ಲ.

ಹೀಗಾಗಿ ಗಾಜಾ ನಿತ್ಯವೂ ಸುದ್ದಿಯಲ್ಲಿದೆ. ಇಸ್ರೇಲಿನ ನೈಋತ್ಯಕ್ಕೆ ಈಜಿಪ್ಟ್ ಮತ್ತು ಉತ್ತರ ಹಾಗೂ ಪೂರ್ವಕ್ಕೆ ಇಸ್ರೇಲ್‌ನೊಂದಿಗೆ ಗಡಿಯನ್ನು ಹಂಚಿಕೊಂಡಿರುವ, ಸುಮಾರು 41 ಕಿಲೋಮೀಟರ್ ಉದ್ದ ಮತ್ತು 6ರಿಂದ 12 ಕಿಮೀ ಅಗಲವಿರುವ ಗಾಜಾ, ವಿಶ್ವದ ಅತಿ ಹೆಚ್ಚು ಜನಸಾಂದ್ರತೆಯುಳ್ಳ ಪ್ರದೇಶಗಳಲ್ಲಿ ಒಂದಾಗಿದೆ. ಗಾಜಾ ಪಟ್ಟಿಯು ಸುಮಾರು 365 ಚದರ ಕಿಲೋಮೀಟರ್ ವಿಸ್ತೀರ್ಣವನ್ನು ಹೊಂದಿದೆ. ಇಲ್ಲಿನ ಜನಸಂಖ್ಯೆ ಸುಮಾರು ಇಪ್ಪತ್ತೈದು ಲಕ್ಷ. ಅವರಲ್ಲಿ ಹೆಚ್ಚಿನವರು ಪ್ಯಾಲೆಸ್ತೀನಿ ಅರಬ್ಬರು. ಜನಸಂಖ್ಯೆಯ ಬಹುಪಾಲು ಸುನ್ನಿ ಮುಸ್ಲಿಮರು. ಗಾಜಾ ನಗರವು ಈ ಪ್ರದೇಶದ ಅತಿದೊಡ್ಡ ನಗರ ಮತ್ತು ಆಡಳಿತ ಕೇಂದ್ರವೂ ಹೌದು.

ಐತಿಹಾಸಿಕವಾಗಿ, ಗಾಜಾಪಟ್ಟಿಯು ವಿವಿಧ ಸಾಮ್ರಾಜ್ಯಗಳ ಮತ್ತು ಆಡಳಿತಗಳ ನಿಯಂತ್ರಣದಲ್ಲಿತ್ತು. 1948ರ ಅರಬ್-ಇಸ್ರೇಲಿ ಯುದ್ಧದ ನಂತರ, ಇದನ್ನು ಈಜಿಪ್ಟ್ ಆಕ್ರಮಿಸಿಕೊಂಡಿತು. 1967ರ ಆರು ದಿನಗಳ ಯುದ್ಧದಲ್ಲಿ ಇಸ್ರೇಲ್ ಗಾಜಾ ಪಟ್ಟಿಯನ್ನು ವಶಪಡಿಸಿಕೊಂಡಿತು. 2005ರಲ್ಲಿ, ಇಸ್ರೇಲ್ ಏಕಪಕ್ಷೀಯವಾಗಿ ತನ್ನ ಸೈನ್ಯವನ್ನು ಮತ್ತು ವಸಾಹತುಗಳನ್ನು ಗಾಜಾಪಟ್ಟಿಯಿಂದ ಹಿಂತೆಗೆದುಕೊಂಡಿತು. 2007ರಲ್ಲಿ, ಹಮಾಸ್ ಮತ್ತು ಫತಾಹ್ ಬಣಗಳ ನಡುವಿನ ಸಂಘರ್ಷದ ನಂತರ, ಹಮಾಸ್ ಗಾಜಾಪಟ್ಟಿಯ ಸಂಪೂರ್ಣ ನಿಯಂತ್ರಣವನ್ನು ತೆಗೆದುಕೊಂಡಿತು. ಅಂದಿನಿಂದ, ಈ ಪ್ರದೇಶವು ಹಮಾಸ್‌ನ ಆಡಳಿತದಲ್ಲಿದೆ.

ಗಾಜಾಪಟ್ಟಿಯ ಆರ್ಥಿಕತೆಯು ಕೃಷಿ, ಸಣ್ಣ ಪ್ರಮಾಣದ ಕೈಗಾರಿಕೆಗಳು ಮತ್ತುಮೀನುಗಾರಿಕೆಯನ್ನು ಅವಲಂಬಿಸಿದೆ. ಆದರೆ ಇಸ್ರೇಲ್ ಮತ್ತು ಈಜಿಪ್ಟ್ ವಿಧಿಸಿರುವ ದಿಗ್ಬಂಧನಗಳಿಂದಾಗಿ ಈ ಪ್ರದೇಶದ ಆರ್ಥಿಕತೆಯು ತೀವ್ರವಾಗಿ ಕುಂಠಿತಗೊಂಡಿದೆ. ನಿರುದ್ಯೋಗ ಮತ್ತು ಬಡತನದ ಪ್ರಮಾಣವು ಅತ್ಯಂತ ಹೆಚ್ಚಾಗಿದೆ. ಇಸ್ರೇಲಿಗಳನ್ನು ಕೇಳಿದರೆ, ಭಯೋತ್ಪಾದನೆಯೇ ಅವರ ಪರಮ ಕಸುಬು ಮತ್ತು ಪೂರ್ಣಾವಧಿ ಉದ್ಯೋಗ ಅಂತಾರೆ. ಇಸ್ರೇಲನ್ನು ದುರ್ಬಲಗೊಳಿಸುವುದು ಮತ್ತು ಸದಾ ಯುದ್ಧಸನ್ನದ್ಧ ಸ್ಥಿತಿಯಲ್ಲಿಡುವುದು ಹಮಾಸ್ ಉಗ್ರರ ಉದ್ದೇಶ. ಹರಿದು ತಿನ್ನುವ ಬಡತನವಿದ್ದರೂ ಗಾಜಾದಲ್ಲಿರುವವರೂ ಯುದ್ಧ ಮಾಡುವ ಸ್ಥಿತಿಯಲ್ಲಿ ಇಲ್ಲವೇ ಇಲ್ಲ. ಆದರೆ ಸಿರಿಯಾದ ಹಿಜ್ಬುಲ್ಲಾ ಉಗ್ರ ಸಂಘಟನೆ ಮತ್ತುಇರಾನ್, ಹಮಾಸ್‌ಗಳಿಗೆ ನೆರವು ನೀಡುತ್ತಿವೆ. ಎರಡು ವರ್ಷಗಳ ನಿರಂತರ ಯುದ್ಧದಿಂದ ಗಾಜಾ ಹಣ್ಣುಗಾಯಿ ನೀರುಗಾಯಿಯಾಗಿದ್ದರೂ ಹಮಾಸ್ ಉಗ್ರರಿಗೆ ಯುದ್ಧವೇ ಕಸುಬಾಗಿರುವುದರಿಂದ, ಅದನ್ನು ಮುಂದುವರಿಸುವುದು ಅನಿವಾರ್ಯವಾಗಿರುವುದು ದುರ್ದೈವ.

ಅಂದು ಹೆಣ ಬೀಳದಿದ್ದರೆ ಅದನ್ನು ಸುಡುವವ ಇಂದು ಉಪವಾಸ ಬೀಳುವಂತೆ, ಹಮಾಸ್ ಉಗ್ರರ ಸ್ಥಿತಿಯಾಗಿದೆ. ಅವರು ಯುದ್ಧ ನಿಲ್ಲಿಸಿದರೆ ನಿರುದ್ಯೋಗಿಗಳು. ಇರಾನ್ ಮತ್ತು ಇಸ್ರೇಲಿ ವಿರೋಧಿ ಶಕ್ತಿಗಳು ಈ ಯುದ್ಧವನ್ನು ಜಾರಿಯಲ್ಲಿಡಲು ನಿರಂತರ ಶ್ರಮಿಸುತ್ತಿವೆ. ನಿರಂತರ ಕದನದಿಂದ ಇಸ್ರೇಲ್ ತುಸು ಬಸವಳಿದಿದ್ದರೂ, ಅದು ಕೈಚೆಲ್ಲಿಲ್ಲ. ಈ ಯುದ್ಧ ಹೀಗೆ ಎಷ್ಟು ದಿನ ಮುಂದುವರಿದರೂ, ಅದನ್ನು ಎದುರಿಸುವುದು ಇಸ್ರೇಲಿಗೂ ಅನಿವಾರ್ಯ. ಇಸ್ರೇಲ್ ಮೇಲೆ ಯುದ್ಧ ಸಾರಲು ಹಮಾಸ್ ಉಗ್ರರಿಗೆ ಕುಮ್ಮಕ್ಕು ನೀಡುತ್ತಿರುವುದು ಇರಾನ್ ಮತ್ತು ಕತಾರ್. ಇಸ್ರೇಲಿ ಸಚಿವ ಹೇಳಿದಂತೆ, ತಿನ್ನಲು ಗತಿಯಿಲ್ಲದ ಹಮಾಸ್‌ಗಳಿಗೆ ಯುದ್ಧ ಬೇರೆ ಕೇಡು. ಆದರೆ ಅವರನ್ನು ಬಳಸಿಕೊಂಡು ಇರಾನ್ ಮತ್ತು ಕತಾರ್, ಇಸ್ರೇಲ್ ಮೇಲೆ ಯುದ್ಧವನ್ನು ಚಾಲ್ತಿಯಲ್ಲಿಟ್ಟಿದೆ. ಗಾಜಾದಲ್ಲಿ ಪ್ರಸ್ತುತ ನಡೆಯುತ್ತಿರುವ ಕದನವು ಇಸ್ರೇಲ್ ಮತ್ತು ಹಮಾಸ್ ನಡುವಿನ ದೀರ್ಘಕಾಲದ ಸಂಘರ್ಷದ ಅತ್ಯಂತ ವಿನಾಶಕಾರಿ ಅಧ್ಯಾಯಗಳಲ್ಲಿ ಒಂದಾಗಿದೆ. ಈ ದಾಳಿಯನ್ನು ತನ್ನ ಮೇಲಿನ ಯುದ್ಧ ಘೋಷಣೆ ಎಂದು ಪರಿಗಣಿಸಿದ ಇಸ್ರೇಲ್, ಹಮಾಸ್ ಅನ್ನು ಸಂಪೂರ್ಣವಾಗಿ ನಾಶಮಾಡುವ ಮತ್ತು ಎಲ್ಲ ಒತ್ತೆಯಾಳುಗಳನ್ನು ಬಿಡುಗಡೆ ಮಾಡುವ ಗುರಿಯೊಂದಿಗೆ ಆಪರೇಷನ್ ಸ್ವೋರ್ಡ್ಸ್ ಆಫ್ ಐರನ್ (Operation Swords of Iron) ಎಂಬ ಬೃಹತ್ ಸೇನಾ ಕಾರ್ಯಾಚರಣೆಯನ್ನು ಪ್ರಾರಂಭಿಸಿದೆ.

ಇಸ್ರೇಲಿ ರಕ್ಷಣಾ ಪಡೆಗಳು (IDF) ಗಾಜಾ ಪಟ್ಟಿಯಾದ್ಯಂತ, ವಿಶೇಷವಾಗಿ ಗಾಜಾ ನಗರ, ಖಾನ್ಯೂನಿಸ್ ಮತ್ತು ರಫಾಹ್ ನಂಥ ಪ್ರಮುಖ ಪ್ರದೇಶಗಳಲ್ಲಿ ತೀವ್ರವಾದ ವಾಯುದಾಳಿಗಳನ್ನು ನಿರಂತರ ನಡೆಸುತ್ತಿವೆ. ಇದರ ಜತೆಗೆ, ಭೂಸೇನೆಗಳು ಗಾಜಾದೊಳಗೆ ಪ್ರವೇಶಿಸಿ ಹಮಾಸ್‌ನ ನೆಲೆಗಳು, ಸುರಂಗ ಜಾಲ ಮತ್ತು ನಾಯಕರನ್ನು ಗುರಿಯಾಗಿಸಿಕೊಂಡು ಹೋರಾಡುತ್ತಿವೆ. ಇಸ್ರೇಲ್ ಸೇನೆಯು ಗಾಜಾ ನಗರದ ಬಹುತೇಕ ಭಾಗವನ್ನು ತನ್ನ ನಿಯಂತ್ರಣಕ್ಕೆ ತೆಗೆದುಕೊಂಡಿದೆ ಮತ್ತು ಉತ್ತರ ಗಾಜಾದಿಂದ ದಕ್ಷಿಣದ ಕಡೆಗೆ ತನ್ನ ಕಾರ್ಯಾಚರಣೆಯನ್ನು ವಿಸ್ತರಿಸುತ್ತಿದೆ. ಹಮಾಸ್ ಮತ್ತು ಇತರ ಸಶಸ್ತ್ರ ಗುಂಪುಗಳು ಇಸ್ರೇಲಿ ಪಡೆಗಳ ವಿರುದ್ಧ ಗೆರಿಲ್ಲಾ ಮಾದರಿಯ ಯುದ್ಧತಂತ್ರಗಳನ್ನು ಬಳಸುತ್ತಿವೆ. ನಗರ ಪ್ರದೇಶಗಳಲ್ಲಿ ಮತ್ತು ವ್ಯಾಪಕವಾದ ಭೂಗತ ಸುರಂಗ ಜಾಲಗಳಲ್ಲಿ ಹೊಂಚುಹಾಕಿ ದಾಳಿಗಳನ್ನು ನಡೆಸುತ್ತಿವೆ.

2023ರ ಅಕ್ಟೋಬರ್ 7ರಂದು ಹಮಾಸ್ ಉಗ್ರರು ಇಸ್ರೇಲಿ ಬೇಹುಗಾರರ ಕಣ್ಣು ತಪ್ಪಿಸಿ, ಗಡಿಯೊಳಗೆ ನುಸುಳಲು ಸಾಧ್ಯವಿಲ್ಲದಿದ್ದರೂ ಪ್ಯಾರಾ ಗ್ಲೈಡರ್ ನೆರವಿನಿಂದ ಆಕಾಶದಿಂದ ಧರೆಗಿಳಿದು ಇಸ್ರೇಲ್ ಒಳಗೆ ಬಂದು, ಗಾಜಾ

ಪಟ್ಟಿಯಿಂದ ಮೂರ್ನಾಲ್ಕು ಕಿಮೀ ಸನಿಹದಲ್ಲಿ ನಡೆಯುತ್ತಿದ್ದ ಸಂಗೀತಗೋಷ್ಠಿಯಲ್ಲಿ ಭಾಗವಹಿಸಿದ್ದ ಅಮಾಯಕ ಜನರ ಮೇಲೆ ಏಕಾಏಕಿ ಗುಂಡುಹಾರಿಸಿ 378 ಮಂದಿಯನ್ನು ಸಾಯಿಸಿದರು. ಇದು ಇತ್ತೀಚಿನ ವರ್ಷಗಳಲ್ಲಿ ಇಸ್ರೇಲಿನ ಮಣ್ಣಿನಲ್ಲಿ ನಡೆದ ಅತಿ ದೊಡ್ಡ ಮಾರಣಹೋಮವಾಗಿತ್ತು. ಗಾಜಾ ಪಟ್ಟಿಗೆ ಹೊಂದಿಕೊಂಡ ಹತ್ತಕ್ಕೂ ಹೆಚ್ಚು ಗ್ರಾಮಗಳಲ್ಲಿ ಮತ್ತು ಕಿಬುಟ್ಸ್‌ಗಳ ಮೇಲೂ ಹಮಾಸ್ ಉಗ್ರರು ಏಕಾಏಕಿ ದಾಳಿ ಮಾಡಿ ನೂರಾರು ಅಮಾಯಕರನ್ನು ಕೊಂದು ಹಾಕಿದರು. ಇಷ್ಟೇ ಅಲ್ಲ, ಈ ಘಟನೆಯಲ್ಲಿ ಹಮಾಸ್ ಉಗ್ರರು 44 ಮಂದಿಯನ್ನು ಅಪಹರಿಸಿಕೊಂಡು ಒತ್ತೆಯಾಳುಗಳನ್ನಾಗಿರಿಸಿಕೊಂಡರು. ಇದು ಇತ್ತೀಚಿನ ದಿನಗಳಲ್ಲಿ ಇಸ್ರೇಲಿನ ಪಾಲಿಗೆ ಸಹಿಸಿಕೊಳ್ಳಲು ಆಗದ ದೊಡ್ಡ ಅವಮಾನ ಮತ್ತು ಬಹುದೊಡ್ಡ ಬೇಹುಗಾರಿಕೆ ವೈಫಲ್ಯ.

ಸಾವಿರಾರು ಉಗ್ರರು ಇಸ್ರೇಲ್ ಗಡಿಯನ್ನು ಭೇದಿಸಿ ಒಳ ಬಂದು, ಬೇಕಾಬಿಟ್ಟಿ ದಾಳಿ ನಡೆಸಿ ಅಮಾಯಕರನ್ನು ಕೊಂದು ಹಾಕಿದ್ದು ಇಸ್ರೇಲಿ ಸೇನೆಗೆ ಇಂದಿಗೂ ನುಂಗಲಾರದ ಬಿಸಿತುಪ್ಪ. ಒತ್ತೆಯಾಳುಗಳನ್ನು ಬಿಡಿಸಿಕೊಂಡು ಬರಲೇಬೇಕಾದ ಅನಿವಾರ್ಯತೆ ಬೇರೆ. ಅಂದಿನಿಂದ ಇಂದಿನವರೆಗೆ ಇಸ್ರೇಲಿನ Bring them home now ಎಂಬ ಅಭಿಯಾನ ದೇಶಾದ್ಯಂತ ವ್ಯಾಪಿಸಿಬಿಟ್ಟಿದೆ. ಹಮಾಸ್‌ಗಳು ಈ ಒತ್ತೆಯಾಳುಗಳನ್ನು ಮಾನವ ಕವಚಗಳನ್ನಾಗಿ ಬಳಸಿಕೊಂಡಿದ್ದಾರೆ. ಇಸ್ರೇಲ್ ತನ್ನ ಮೇಲೆ ದಾಳಿಯನ್ನು ತೀವ್ರಗೊಳಿಸಿದರೆ, ಒತ್ತೆಯಾಳುಗಳ ಪೈಕಿ ಒಬ್ಬರನ್ನು ಸಾಯಿಸಿ ಇಸ್ರೇಲಿಗರ ಕೋಪಾಗ್ನಿಗೆ ತುಪ್ಪ ಸುರಿಯುತ್ತಿದೆ. ಒಂದೆಡೆ ಎಲ್ಲ ಒತ್ತೆಯಾಳುಗಳನ್ನು ಬಿಡಿಸಿಕೊಂಡು ಬರಲೇಬೇಕಾದ ಒತ್ತಡ ಇಸ್ರೇಲಿ ರಕ್ಷಣಾ ಪಡೆಗಳ ಮೇಲೆ ಮತ್ತು ಸರಕಾರದ ಮೇಲೆ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ.

ಒಂದು ಅಂದಾಜಿನ ಪ್ರಕಾರ ನಲವತ್ತಾಲ್ಕು ಮಂದಿ ಪೈಕಿ ಈಗ ಕೇವಲ ಇಪ್ಪತ್ತು ಒತ್ತೆಯಾಳುಗಳು ಮಾತ್ರ ಬದುಕಿದ್ದಾರೆ. ಒಬ್ಬೊಬ್ಬ ಒತ್ತೆಯಾಳನ್ನು ಸಾಯಿಸಿದಾಗಲೂ ಇಸ್ರೇಲಿಗಳ ಸಹನೆಯ ಕಟ್ಟೆ ಒಡೆಯುತ್ತಾ ಹೋಗುತ್ತಿದೆ. ಒಂದು ವೇಳೆ ಹಮಾಸ್ ಉಗ್ರರು ಎಲ್ಲ ಇಸ್ರೇಲಿ ಒತ್ತೆಯಾಳುಗಳನ್ನು ಸಾಯಿಸಿದರೆ, ಅದು ಗಾಜಾದ ಶವಪೆಟ್ಟಿಗೆಗೆ ಅಂತಿಮ ಮೊಳೆ ಹೊಡೆದಂತೆ. ಅಂಥ ದುಸ್ಸಾಹಸಕ್ಕೆ ಹಮಾಸ್‌ಗಳು ಮುಂದಾದರೆ, ಭೂಪಟದಲ್ಲಿ ಗಾಜಾ ಇರುವುದಿಲ್ಲ ಎಂದು ಈಗಾಗಲೇ ಇಸ್ರೇಲ್ ಖಡಕ್ ಎಚ್ಚರಿಕೆ ನೀಡಿದೆ. ಈಗಾಗಲೇ ಗಾಜಾವನ್ನು ಎಲ್ಲ ದಿಕ್ಕುಗಳಿಂದ ಸುತ್ತುವರಿದಿರುವ ಇಸ್ರೇಲಿ ರಕ್ಷಣಾ ಪಡೆಗಳು, ಗಾಜಾವನ್ನು ಎರಡು ಭಾಗಗಳಾಗಿ ಹೋಳು ಮಾಡಿದೆ. ಅಷ್ಟೇ ಅಲ್ಲ, ಗಾಜಾಕ್ಕೆ ಹೊಂದಿಕೊಂಡಿರುವ ಮೆಡಿಟರೇನಿಯನ್ ಸಮುದ್ರ ಪ್ರದೇಶವನ್ನು ವಶಪಡಿಸಿಕೊಂಡಿದೆ. ಹಮಾಸ್‌ಗೆ ಶಸ್ತ್ರಾಸ್ತ್ರ ಮತ್ತು ಆಹಾರಗಳನ್ನು ಸಾಗಿಸುತ್ತಿದ್ದ ಸುರಂಗ ಮಾರ್ಗವನ್ನೇ ಇಸ್ರೇಲಿ ಸೇನೆ ಬಂದ್ ಮಾಡಿಬಿಟ್ಟಿದೆ.

ಗಾಜಾ ಪಟ್ಟಿಯಲ್ಲಿ ನಡೆಯುವ ವಿದ್ಯಮಾನವನ್ನು ಟಿವಿಗಳಲ್ಲಿ ನೋಡುವುದು, ಪತ್ರಿಕೆಗಳಲ್ಲಿ ಓದುವುದೇ ಬೇರೆ, ಸಾಕ್ಷಾತ್ ಗಾಜಾ ಗಡಿಯಲ್ಲಿ ನಿಂತು ನೋಡುವುದು ಬೇರೆ. ಸೆಡೆರಾಟ್ ನಗರ ಸತತ ದಾಳಿಗೆ ಜರ್ಜರಿತವಾಗಿದೆ. ನಾನು ಟೆಲ್ ಅವಿವ್‌ನಲ್ಲಿ ಉಳಿದುಕೊಂಡ ಹೋಟೆಲಿನಲ್ಲಿ ಮಧ್ಯ ವಯಸ್ಸಿನ ಹೆಂಗಸೊಬ್ಬಳು ತನ್ನ ಮೂರು ಮಕ್ಕಳೊಂದಿಗೆ ಎರಡು ತಿಂಗಳಿನಿಂದ ವಾಸಿಸುತ್ತಿದ್ದಳು. ಹಮಾಸ್ ದಾಳಿಗೆ ಸೆಡೆರಾಟ್‌ನಲ್ಲಿರುವ ಅವಳ ಮನೆ ನೆಲಸಮ ಆಗಿತ್ತು. ಇಂಥ ಹೃದಯವಿದ್ರಾವಕ ಗೋಳಿನ ಕಥೆಗಳು ಅಸಂಖ್ಯ. ತಮ್ಮ ಪಾಡಿಗೆ ತಾವಿದ್ದ ಅಮಾಯಕ ಕುಟುಂಬಗಳನ್ನು ಸುಟ್ಟು ಹಾಕಿ ಕೊಂದು ಹಾಕಿದವರ ಗೋಳಿನ ಕಥೆಗಳನ್ನು ಕೇಳಲಾಗದು.

ಪ್ರಸ್ತುತ, ಗಾಜಾ ಪಟ್ಟಿಯು ತೀವ್ರ ರಾಜಕೀಯ ಮತ್ತು ಮಾನವೀಯ ಬಿಕ್ಕಟ್ಟನ್ನು ಎದುರಿಸುತ್ತಿದಂತೂ ನಿಜ. ಇಸ್ರೇಲ್ ಮತ್ತು ಹಮಾಸ್ ನಡುವಿನ ಪುನರಾವರ್ತಿತ ಸಂಘರ್ಷಗಳು ಅಪಾರ ಸಾವುನೋವು ಮತ್ತು ವಿನಾಶಕ್ಕೆ ಕಾರಣವಾಗಿವೆ. ಮೂಲಭೂತ ಸೌಕರ್ಯಗಳಾದ ವಿದ್ಯುತ್, ನೀರು ಮತ್ತು ವೈದ್ಯಕೀಯ ಸೇವೆಗಳ ಕೊರತೆಯಿಂದ ಗಾಜಾ ಜನರ ಜೀವನ ಹೈರಾಣಾಗಿದೆ. ಅಂತಾರಾಷ್ಟ್ರೀಯ ಸಂಸ್ಥೆಗಳು ಮಾನವೀಯ ನೆರವು ನೀಡಲು ಪ್ರಯತ್ನಿಸುತ್ತಿದ್ದರೂ, ರಾಜಕೀಯ ಅಸ್ಥಿರತೆಯು ಈ ಪ್ರಯತ್ನಗಳಿಗೆ ಅಡ್ಡಿಯಾಗಿದೆ. ಯಾರ ಮಾತನ್ನು ಯಾರೂ ಕೇಳುವ ಸ್ಥಿತಿಯಲ್ಲಿಲ್ಲ. ಇಸ್ರೇಲ್ ಪಾಲಿಗೆ ಸ್ವಾತಂತ್ರ್ಯ ಗಳಿಸಿದ ಬಳಿಕ ಇದು ಅತಿ ದೀರ್ಘಯುದ್ಧ. ಯಹೂದಿ, ಕ್ರಿಶ್ಚಿಯನ್ ಮತ್ತು ಮುಸ್ಲಿಂ ಧರ್ಮೀಯರಿಗೆ ಪವಿತ್ರಭೂಮಿಯಾದ ಇಸ್ರೇಲ್ ಅಂತರಂಗದಲ್ಲಿ ಅಕ್ಷರಶಃ ಬೇಯುತ್ತಿದೆ. ತಮ್ಮ ತಾಯ್ನಾಡನ್ನು ರಕ್ಷಿಸಿಕೊಳ್ಳುವುದು ಹೇಗೆ ಎಂಬುದು ಇಸ್ರೇಲಿಗಳಿಗೆ ಯಾರೂ ಹೇಳಿಕೊಡಬೇಕಿಲ್ಲ. ತಮ್ಮನ್ನು ಕೆಣಕಿದವರನ್ನು ಅವರು ಹುಟ್ಟಡಗಿಸದೇ ಬಿಟ್ಟ ನಿದರ್ಶನವೇ ಇಲ್ಲ. ಯಹೂದಿಯರ ಧರ್ಮದಲ್ಲೊಂದು ಮಾತಿದೆ – ಒಬ್ಬ ಮನುಷ್ಯನ ಜೀವ ಉಳಿಸಿದರೆ ಜಗತ್ತನ್ನು ಉಳಿಸಿದಂತೆ. ಒಬ್ಬನ ಜೀವ ತೆಗೆದರೆ, ಇಡೀ ಜಗತ್ತನ್ನು ನಾಶಪಡಿಸಿದಂತೆ. ಈ ಹಿನ್ನೆಲೆಯಲ್ಲಿ ಒತ್ತೆಯಾಳುಗಳನ್ನು ಕರೆತರುವ ಇಸ್ರೇಲ್ ಪ್ರಯತ್ನವನ್ನು ನೋಡಬೇಕು. ಗೆಲ್ಲುವ ತನಕ ಹೋರಾಡದಿದ್ದರೆ, ಸೋಲುವ ಹೊತ್ತಿಗೆ ಇಸ್ರೇಲ್ ಇರುವುದಿಲ್ಲ!

ಅಮೃತಕ್ಕೆ ಸಮಾನ ರಾಮ ಮತ್ತು ಕೃಷ್ಣನ ಕತೆಗಳು

ರಾಮಚರಿತ ಮಾನಸ ಮತ್ತು ಶ್ರೀಮದ್ ಭಾಗವತದಿಂದ ನಮ್ಮ ಯುವಕರು ಕಲಿಯಬೇಕಿರುವುದು ಬಹಳಷ್ಟಿದೆ. ಪುರಾಣ ಪುರುಷರ ಕತೆಗಳನ್ನು ಮುಂದಿನ ತಲೆಮಾರಿನ ಯುವಕ, ಯುವತಿಯರಿಗೆ ದಾಟಿಸಿದರೆ ಅದರಲ್ಲಿರುವ ಜೀವನ ಮೌಲ್ಯಗಳು ಅವರನ್ನು ಒಳ್ಳೆಯ ದಾರಿಯಲ್ಲಿ ಮುನ್ನಡೆಸುತ್ತವೆ.

ಹಿರಿಯ ಪತ್ರಿಕೋದ್ಯಮಿ
ಡಾ.ವಿಜಯ್ ದರಡಾ
vveditoped@gmail.com

ನಮ್ಮ ಪುರಾಣಗಳಲ್ಲಿ ಆಸಕ್ತಿಕರ ಕತೆಗಳಿವೆ. ಒಂದು ದಿನ ಮಹರ್ಷಿ ವಾಲ್ಮೀಕಿಗಳು ನಾರದ ಮುನಿಯ ಬಳಿ ಕೇಳಿದರಂತೆ. ಭೂಮಿಯಲ್ಲಿ ಎಲ್ಲಾ ಗುಣಗಳನ್ನೂ ಹೊಂದಿರುವ, ಮರ್ಯಾದಾ ಪುರುಷೋತ್ತಮ ಎಂದು ಕರೆಯಬಹುದಾದ ಯಾರಾದರೂ ಒಬ್ಬ ವ್ಯಕ್ತಿ ಇದ್ದಾನಾ? ಅವನಲ್ಲಿ ಯಾವ ದುಷ್ಟ ಗುಣಗಳೂ ಇರಬಾರದು. ಒಳ್ಳೆಯ ಗುಣಗಳೇ ಮೈವೆತ್ತಂತೆ ಇರಬೇಕು. ಅಂಥವನು ಇದ್ದಾನಾ? ನಾರದರು ಮೂರು ಲೋಕಗಳನ್ನೂ ಸಂಚರಿಸುವವರು. ಅವರನ್ನು ಜಗತ್ತಿನ ಮೊದಲ ಪತ್ರಕರ್ತ ಎಂದೂ ಕರೆಯುತ್ತಾರೆ. ಅವರು ವಾಲ್ಮೀಕಿಗಳ ಪ್ರಶ್ನೆಗೆ ಥಟ್ಟನೆ ಉತ್ತರಿಸಿದರಂತೆ. 'ಒಬ್ಬ ಇದ್ದಾನೆ. ಅವನ ಹೆಸರು ಶ್ರೀರಾಮ. ಇಕ್ಷ್ವಾಕು ವಂಶದವನು. ಅದೇ ಶ್ರೀರಾಮ ಲಕ್ಷಾಂತರ ವರ್ಷಗಳಿಂದ ನಮ್ಮ ಹೃದಯಗಳಲ್ಲಿ ನೆಲೆಸಿದ್ದಾನೆ. ಅವನು ಅಸಂಖ್ಯ ಜನರಿಗೆ ಎಂದೂ ಬತ್ತದ ಸ್ಫೂರ್ತಿಯ ಸೆಲೆಯಾಗಿದ್ದಾನೆ.

ನಾನೇಕೆ ಇದ್ದಕ್ಕಿದ್ದಂತೆ ರಾಮನ ಕತೆ ಹೇಳುತ್ತಿದ್ದೇನೆಂದು ನಿಮಗೆ ಆಶ್ಚರ್ಯವಾಗಬಹುದು. ವಿಷಯ ಏನೆಂದರೆ, ಈಗ ನನ್ನ ಹುಟ್ಟೂರಾದ ಮಹಾರಾಷ್ಟ್ರದ ಯವತ್ಮಾಲ್‌ನಲ್ಲಿ ಪ್ರಸಿದ್ಧ ವಿದ್ವಾಂಸ ಹಾಗೂ 'ಕಥಾಕಾರ ಶ್ರೀ ಮುರಾರಿ ಬಾಪು ಅವರು ರಾಮಕಥೆಯನ್ನು ಹೇಳುತ್ತಿದ್ದಾರೆ. ಆ ಭವ್ಯ ಸಮಾರಂಭದ ಸಿದ್ಧತೆಯಲ್ಲಿ ನಾನೂ ತೊಡಗಿಕೊಂಡಿದ್ದೆ. ಆಗ ಕೆಲವರು ಬಂದು ನನ್ನನ್ನು ಕೇಳಿದರು: 'ನೀವು ಜೈನಧರ್ಮವನ್ನು ಅನುಸರಿಸುವವರು. ಆದರೆ ಇಲ್ಲಿ ನೋಡಿದರೆ ರಾಮಾಯಣ ಕಥಾ ಪಾರಾಯಣದ ಆಯೋಜನೆಯಲ್ಲಿ ತೊಡಗಿದ್ದೀರಿ. ಏನು ನಿಮ್ಮ ಕತೆ?

ನನಗೆ ಇಂತಹ ಪ್ರಶ್ನೆಗಳ ಮೂಲ ಅರ್ಥವಾಗುತ್ತದೆ. ಇಂದು ಧರ್ಮವೆಂಬುದು ಎಷ್ಟು ಛಿದ್ರಗೊಂಡಿದೆ ಅಂದರೆ, ಜನರಿಗೆ ಧರ್ಮದ ಮೂಲ ರೂಪ ಯಾವುದು ಎಂಬುದೇ ಮರೆತುಹೋಗಿದೆ. ಎಲ್ಲಾ ಧರ್ಮಗಳ ಆಶಯವೂ ಒಂದೇ. ಹೀಗಾಗಿ ನಾನು ಬಹಳ ಸರಳವಾಗಿ ಅವನಿಗೆ ಹೇಳಿದೆ. 'ಧರ್ಮದ ಅರ್ಥವನ್ನು ನೀವು ನಿಜವಾದ ರೂಪದಲ್ಲಿ ಗ್ರಹಿಸಿದರೆ ಒಬ್ಬ ಜೈನಧರ್ಮದ ಅನುಯಾಯಿ ಕೂಡ ಭಗವಾನ್ ಶ್ರೀರಾಮನಿಂದ ಏನನ್ನು ಕಲಿಯಲು ಬಯಸುತ್ತಾನೆ ಎಂಬುದು ಅರ್ಥವಾಗುತ್ತದೆ. ಅವನಿಗೆ ಏನು ಅರ್ಥವಾಯಿತೋ ಗೊತ್ತಿಲ್ಲ. ನನಗೆ ಧರ್ಮಗಳ ಅತ್ಯಂತ ಸರಳವಾದ ತಿರುಳನ್ನು ತಿಳಿಸಿಕೊಟ್ಟವರು ನನ್ನ ತಾಯಿ ವೀಣಾದೇವಿ ದರಡಾ ಮತ್ತು ನನ್ನ ಪತ್ನಿ ಜ್ಯೋತ್ಸ್ನಾ. ಅವರು ಧರ್ಮಗಳನ್ನು ತುಂಬಾ ಚೆನ್ನಾಗಿ ಅರಿತುಕೊಂಡಿದ್ದಾರೆ. ಬೇರೆ ಬೇರೆ ಧರ್ಮಗಳ ಆಚರಣೆಗಳು ಬೇರೆ ಬೇರೆ ರೀತಿ ಇರಬಹುದು. ಆದರೆ ಎಲ್ಲಾ ಧರ್ಮಗಳ ಗುರಿಯೂ ಒಂದೇ ಆಗಿದೆ ಎಂಬುದನ್ನು ಅವರು ಚೆನ್ನಾಗಿ ಅರ್ಥ ಮಾಡಿಕೊಂಡಿದ್ದಾರೆ. ಶ್ರೀರಾಮ ಮತ್ತು ಶ್ರೀಕೃಷ್ಣನ ಬದುಕಿನ ನೀತಿಗಳು ಹಾಗೂ ಅವರ ಜೀವನದ ಕತೆಗಳು ಇಡೀ ಮನುಕುಲಕ್ಕೇ ಬದುಕಿನ ಪಾಠ ಹೇಳುವಂತಿವೆ. ಅವುಗಳಿಂದ ನಾವು ಜಗತ್ತನ್ನೇ ಅರ್ಥ ಮಾಡಿಕೊಳ್ಳಬಹುದು. ಹೀಗಾಗಿ ರಾಮಕಥೆಯನ್ನು ಆಯೋಜಿಸುವುದು, ನಮ್ಮ ಮುಂದಿನ ತಲೆಮಾರಿನ ಹುಡುಗರಿಗೆ ಅವುಗಳ ನೀತಿಯನ್ನು ತಿಳಿಸಿಕೊಡುವುದು ನಮ್ಮ ಕರ್ತವ್ಯವೆಂದೇ ನಾನು ಭಾವಿಸಿದ್ದೇನೆ.

ನಾವು ಈ ಹಿಂದೆ ಸಾಧ್ವಿ ಪ್ರೀತಿ ಸುಧಾ ಜೀ ಅವರ ಚಾತುರ್ಮಾಸ್ಯವನ್ನು ಆಯೋಜಿಸಿದ್ದೆವು. ಅಲ್ಲಿಗೆ ಜೈನಧರ್ಮದವರು ಮಾತ್ರವಲ್ಲ, ಎಲ್ಲಾ ಧರ್ಮದ ಜನರೂ ಎಷ್ಟೊಂದು ದೊಡ್ಡ ಸಂಖ್ಯೆಯಲ್ಲಿ ಪ್ರವಚನ ಕೇಳಲು ಬರುತ್ತಿದ್ದರು. ನಂತರ ಶ್ರೀಮದ್ ಭಾಗವತ ಕಥಾಶ್ರವಣವನ್ನೂ ಆಯೋಜಿಸಿದ್ದೆವು. ಶ್ರೀ ರಮೇಶ್ ಭಾಯಿ ಓಜಾ ಅವರು ಕೃಷ್ಣನ ಕತೆಗಳನ್ನು ರಸವತ್ತಾಗಿ ಹೇಳುತ್ತಿದ್ದರು. ಅಲ್ಲಿಗೂ ಎಲ್ಲಾ ಧರ್ಮದ ಜನರು ಬಂದು ಕತೆಗಳನ್ನು ಕೇಳಿ ಸಂತೋಷ ಪಡುತ್ತಿದ್ದರು. ಈಗ ನಾವು ಶ್ರೀ ಮುರಾರಿ ಬಾಪು ಅವರ ರಾಮಕಥೆಯನ್ನು ಕೇಳಲು ಬರುವ ಜನರನ್ನು ಕಣ್ತುಂಬಿಕೊಂಡು ಪರಮಾನಂದ ಅನುಭವಿಸುತ್ತಿದ್ದೇವೆ. ನಮ್ಮ ದೇಶದ ಸೊಗಸೇ ಇದು. ಇಲ್ಲಿ ಎಷ್ಟೊಂದು ಧರ್ಮ, ನಂಬಿಕೆಗಳು ಇದ್ದರೂ ಎಲ್ಲರೂ ಎಲ್ಲಾ ಧರ್ಮದಲ್ಲಿರುವ ಒಳ್ಳೆಯ ಸಂಗತಿಗಳನ್ನು ತಿಳಿದುಕೊಳ್ಳಲು ಬಯಸುತ್ತಾರೆ.

ಮುರಾರಿ ಬಾಪು ಇರಲಿ, ರಮೇಶ್ ಭಾಯಿ ಓಜಾ ಇರಲಿ, ಜಯಕಿಶೋರಿ ಜೀ ಇರಲಿ ಅಥವಾ ಇನ್ನಾವುದೇ ಸಾಧು ಸಂತರು ಇರಲಿ, ನಮ್ಮ ಸಮಾಜ ಅಂತಹ ಎಲ್ಲರನ್ನೂ ತುಂಬಾ ಗೌರವಿಸುತ್ತದೆ. ಅವರು ಜನರಿಗೆ ಒಳ್ಳೆಯ ಮಾರ್ಗ ತೋರಿಸುತ್ತಾರೆ ಎಂದೇ ಎಲ್ಲಾ ಜನಸಾಮಾನ್ಯರೂ ಯಾವುದೇ ಅನುಮಾನವಿಲ್ಲದೆ ಅವರನ್ನು ನಂಬುತ್ತಾರೆ. ಒಳ್ಳೆಯದು ಎಲ್ಲಿದ್ದರೂ ಹೋಗಿ ಅದನ್ನು ಸ್ವೀಕರಿಸುವ ಗುಣ ನಮ್ಮ ಜನರಲ್ಲಿದೆ.

ಹಾಗೆಯೇ, ಸನ್ಯಾಸಿಗಳ ವೇಷದಲ್ಲಿ ಪವಾಡಗಳನ್ನು ಮಾಡುತ್ತೇನೆಂದು ಹೇಳಿ ಜನರನ್ನು ಶೋಷಿಸುವವರೂ ಇದ್ದಾರೆ. ಅಂತಹವರು ತಮ್ಮಲ್ಲಿ ದೈವೀಶಕ್ತಿಯಿದೆ ಎಂದು ನಂಬಿಸಿ, ಸಾಮಾನ್ಯ ಜಾದೂ ಕಣ್ಕಟ್ಟುಗಳನ್ನು ಮಾಡಿ ತೋರಿಸಿ, ಜನರ ಮುಗ್ಧತೆಯ ಲಾಭ ಪಡೆಯಲು ಯತ್ನಿಸುತ್ತಾರೆ. ಕೆಲವೊಮ್ಮೆ ರಾಜಕಾರಣಿಗಳು ಕೂಡ ಸ್ವಾರ್ಥ ಸಾಧನೆಗಾಗಿ ಇಂತಹ ಧಾರ್ಮಿಕ ತಂತ್ರಗಳನ್ನು ಬಳಸುತ್ತಾರೆ. ಅಂತಹವರು ಸಮಾಜಕ್ಕೆ ದೊಡ್ಡ ನಷ್ಟ ಉಂಟುಮಾಡುತ್ತಾರೆ. ಬಹಳ ಕಡಿಮೆ ಧರ್ಮಗಳು ಇಂತಹ ಪವಾಡಗಳ ಆಕರ್ಷಣೆಯಿಂದ ದೂರ ಉಳಿದಿವೆ. ಅದೇ ರೀತಿ, ಕೆಲ ಧರ್ಮದವರು 'ನಮ್ಮ ಧರ್ಮವೇ ಶ್ರೇಷ್ಠ, ಬೇರೆ ಧರ್ಮಗಳು ಕನಿಷ್ಠ' ಎಂಬ ನಂಬಿಕೆಯನ್ನು ಸಮಾಜದಲ್ಲಿ ಬಿತ್ತುವುದಕ್ಕೂ ಪ್ರಯತ್ನಿಸುತ್ತಿರುತ್ತಾರೆ. ಅವರು ಕೂಡ ಸಮಾಜವನ್ನು ಹಾಳುಗೆಡವುತ್ತಾರೆ. ಅಂತಹವರ ಬಗ್ಗೆ ಎಚ್ಚರಿಕೆಯಿಂದ ಇರೋಣ.

ನಾನು ಯವತ್ಮಾಲ್‌ನಲ್ಲಿ ರಾಮಕಥೆಯನ್ನು ಆಯೋಜಿಸಿದ್ದರ ಹಿಂದೆ ಇರುವುದು ಖಂಡಿತ ಧಾರ್ಮಿಕ ಉದ್ದೇಶವಲ್ಲ. ಧರ್ಮದ ಬಗ್ಗೆ ಅಷ್ಟೆಲ್ಲಾ ತಲೆಕೆಡಿಸಿಕೊಳ್ಳುವ ವ್ಯಕ್ತಿ ನಾನಲ್ಲ. ನನ್ನ ಉದ್ದೇಶ ಇಷ್ಟೆ; ಸಮಾಜದಲ್ಲಿ ಒಳ್ಳೆಯ ಮೌಲ್ಯಗಳನ್ನು ಬಿತ್ತಬೇಕು. ಜನರು ಒಳ್ಳೆಯ ರೀತಿಯಲ್ಲಿ ಜೀವನ ನಡೆಸಬೇಕು. ರಾಮನ ಬದುಕಿನ ನೀತಿಗಳನ್ನು ಸಂತರು ಕತೆಯ ರೂಪದಲ್ಲಿ ಹೇಳುತ್ತಾರಲ್ಲವೇ, ಅದರಿಂದ ನಮ್ಮ ಯುವಕರು ಒಳ್ಳೆಯ ವಿಚಾರಗಳನ್ನು ಕಲಿಯುತ್ತಾರೆ. ಯಾವುದೇ ದೇಶದ ನಿಜವಾದ ಶಕ್ತಿ ಅಡಗಿರುವುದು ಅದರ ಸಂಸ್ಕೃತಿಯಲ್ಲಿ. ಆದರೆ ಇಂದು ಏನಾಗುತ್ತಿದೆ ಎಂಬುದನ್ನು ನೀವೇ ನೋಡಿ. ನಮ್ಮ ಮಕ್ಕಳಿಗೆ ಸಂಸ್ಕೃತಿ ಹಾಗೂ ಮೌಲ್ಯಗಳನ್ನು ಕಲಿಸುವವರೇ ಇಲ್ಲವಾಗಿದ್ದಾರೆ. ಅವರಿಗೆ ಸನ್ಮಾರ್ಗವನ್ನು ಯಾರು ತೋರಬೇಕು? ಇಡೀ ದಿನ ಮೊಬೈಲಿನಲ್ಲಿ ಮುಳುಗಿದ್ದರೆ ಅವರು ಬದುಕಿನಲ್ಲಿ ಏನನ್ನು ಕಲಿಯುತ್ತಾರೆ. ನಮ್ಮ ಸಂಸ್ಕೃತಿಯೇ ಭಾರತದ ಜೀವಾಳ. ಅದೇ ನಮ್ಮ ಗುರುತು.

ಶತಮಾನಗಳ ಕಾಲ ನಮ್ಮ ಮೇಲೆ ದಬ್ಬಾಳಿಕೆ ನಡೆದರೂ ಈ ಸಂಸ್ಕೃತಿ ಜೀವಂತವಾಗಿ ಉಳಿದುಕೊಂಡಿದೆ. ಏಕೆಂದರೆ ಅದರಲ್ಲಿರುವ ಮೌಲ್ಯಗಳನ್ನು ಯಾರೂ ಸಾಯಿಸಲು ಸಾಧ್ಯವಿಲ್ಲ. ಭಾರತೀಯ ಮೌಲ್ಯಗಳಿಗೆ ಅಷ್ಟೊಂದು ಶಕ್ತಿಯಿದೆ. ಇಡೀ ಭೂಮಂಡಲದಲ್ಲೇ ಶ್ರೇಷ್ಠವಾದ ಸಂಸ್ಕೃತಿ ನಮ್ಮದು. ವಸುಧೈವ ಕುಟುಂಬಕಂ ಇಡೀ ಜಗತ್ತೇ ಒಂದು ಎಂದು ಇನ್ನಾವ ಸಂಸ್ಕೃತಿ ಹೇಳುತ್ತದೆ? ನಾವು ಕೇವಲ ನಮ್ಮ ಒಳಿತನ್ನು ಮಾತ್ರವಲ್ಲ, ಇಡೀ ಮಾನವ ಕುಲದ ಒಳಿತನ್ನು ಬಯಸುತ್ತೇವೆ. ಆದ್ದರಿಂದಲೇ ಭಾರತೀಯ ಸಂಸ್ಕೃತಿಯನ್ನು ಎಲ್ಲರೂ ಗೌರವಿಸುತ್ತಾರೆ. ಇದರ ಮಹತ್ವವನ್ನು ನಮ್ಮ ಯುವ ತಲೆಮಾರಿನವರಿಗೆ ನಾವಲ್ಲದೇ ಇನ್ನಾರು ತಿಳಿಸಬೇಕು?

ನಾನು ಎಲ್ಲಾ ಧರ್ಮವನ್ನೂ ಓದುತ್ತೇನೆ. ಆಯಾ ಧರ್ಮಗಳಲ್ಲಿರುವ ಬೇರೆ ಬೇರೆ ಸಂಗತಿಗಳನ್ನು ವಿಶ್ಲೇಷಿಸಿ, ಅವುಗಳ ಸಾರವನ್ನು ಗ್ರಹಿಸಲು ಪ್ರಯತ್ನಿಸುತ್ತೇನೆ. ಆ ಕಾರಣದಿಂದಲೇ ನಾನು ಧರ್ಮ ಮತ್ತು ಆಧ್ಯಾತ್ಮಿಕ ಸಾಮರಸ್ಯದ ಬಗ್ಗೆ ಆಗಾಗ ಮಾತನಾಡುತ್ತೇನೆ. ಮುರಾರಿ ಬಾಪು ಅವರ ಪ್ರವಚನಗಳನ್ನು ಕೇಳಿದಾಗ ನನಗೆ ಭಗವಾನ್ ಶ್ರೀರಾಮನ ಬದುಕಿನಿಂದ ಮತ್ತು ಅವನು ತೋರಿಸಿಕೊಟ್ಟ ಮೌಲ್ಯಗಳಿಂದ ಅಪಾರ ಸ್ಫೂರ್ತಿ ಸಿಗುತ್ತದೆ. ನೀವು ರಾಮಚರಿತಮಾನಸವನ್ನು ಓದಿದರೆ ಶ್ರೀರಾಮನ ಅಸಂಖ್ಯ ಗುಣಗಳನ್ನು ತಿಳಿದುಕೊಳ್ಳಬಹುದು. ಅವುಗಳಿಗೆ ಮುಖಾಮುಖಿಯಾಗಿ, ಅವುಗಳನ್ನು ಅನುಸಂಧಾನ ಮಾಡಬಹುದು.

ಶ್ರೀರಾಮ ಕಾಲದ ಪರೀಕ್ಷೆಯನ್ನು ಗೆದ್ದು ಜನಮಾನಸದಲ್ಲಿ ಉಳಿದಿರುವ ದೇವರು. ಅವನದು ವಿಜ್ಞಾನವನ್ನೂ ಮೀರಿದ ಶಕ್ತಿ. ಅವನಿಗೆ ತನ್ನ ತಂದೆಯ ಮಾತಿನ ಮೇಲೆ ಅಪಾರ ಗೌರವವಿತ್ತು. ಆ ಕಾರಣದಿಂದಲೇ ವನವಾಸಕ್ಕೆ ಹೋಗಿ ಸಾಕಷ್ಟು ಕಷ್ಟಪಟ್ಟ. ಚಿಕ್ಕಮ್ಮ ಕೈಕೇಯಿಯು ತನ್ನ ಮಗನನ್ನು ರಾಜನನ್ನಾಗಿ ಮಾಡಬೇಕೆಂಬ ಉದ್ದೇಶದಿಂದ ರಾಮನನ್ನು ವನವಾಸಕ್ಕೆ ಕಳುಹಿಸುವಂತೆ ಪತಿ ದಶರಥನ ಬಳಿ ವರ ಕೇಳಿದ್ದಳು. ಅವಳನ್ನೂ ಕೂಡ ಶ್ರೀರಾಮ ತನ್ನ ಸ್ವಂತ ತಾಯಿಯನ್ನು ಗೌರವಿಸಿದಂತೆಯೇ ಗೌರವಿಸುತ್ತಿದ್ದ. ಎಂತಹ ಉದಾತ್ತ ಸಂದೇಶವಿದು! ಮೃದು ಮನಸ್ಸಿನ, ವಿನಯವಂತ, ಮೃದುಭಾಷಿ, ಸತ್ಯಸಂಧ, ಬುದ್ಧಿವಂತ, ತಾಳ್ಮೆಯ ಅಪರಾವತಾರ ಹಾಗೂ ಅದೇ ವೇಳೆ ಅಪ್ರತಿಮ ಪರಾಕ್ರಮಿಯಾಗಿದ್ದ ಶ್ರೀರಾಮನಲ್ಲಿ ನಾವು ತಿರಸ್ಕರಿಸುವ ಒಂದಾದರೂ ಗುಣವಿದೆಯೇ? ಅವನ ಪ್ರತಿಯೊಂದು ಗುಣವೂ ಅನುಸರಿಸಲು ಯೋಗ್ಯ.

ಇಂದು ನಮ್ಮ ಸಮಾಜವು ಜಾತಿಭೇದ, ಮಹಿಳೆಯರ ಮೇಲಿನ ದಬ್ಬಾಳಿಕೆ, ದ್ವೇಷ, ಅಸೂಯೆಗಳಿಂದ ನರಳುತ್ತಿದೆ. ಆದರೆ ಶ್ರೀರಾಮ ತೋರಿಸಿಕೊಟ್ಟ ಸಮಾನತೆಯೆಂಬ ಪರಮ ಶಕ್ತಿಶಾಲಿ ಅಸ್ತ್ರವನ್ನು ನಾವೂ ಬಳಸಿದರೆ ಈ ಪಿಡುಗುಗಳೆಲ್ಲ ನಿವಾರಣೆಯಾಗುತ್ತವೆ. ಶಬರಿ ಕಚ್ಚಿದ ಹಣ್ಣನ್ನು ತಾನು ತಿನ್ನುವ ಮೂಲಕ ಶ್ರೀರಾಮ ಯಾವ ಜಾತಿಯೂ ಕೀಳಲ್ಲ ಎಂಬುದನ್ನು ತೋರಿಸಿಕೊಟ್ಟಿದ್ದಾನೆ. ಕಾಡಿನಲ್ಲಿ ವಾಸಿಸುವ ಒಬ್ಬ ಕ್ಷುದ್ರ ಮಹಿಳೆ ಕೂಡ ತನಗೆ ಪ್ರೀತಿಪಾತ್ರಳು ಎಂಬುದನ್ನು ತೋರಿಸಿಕೊಟ್ಟಿದ್ದಾನೆ. ಮಹಿಳೆಯನ್ನು ಹೇಗೆ ಗೌರವಿಸಬೇಕು ಎಂಬುದಕ್ಕೆ ಅವನೇ ಆದರ್ಶ. ಯಾವ ಸಂಪನ್ಮೂಲಗಳೂ ಇಲ್ಲದೆ ಕೇವಲ ಕಪಿಗಳನ್ನು ಬಳಸಿ ಅವನು ರಾವಣನಂತಹ ಶಕ್ತಿಶಾಲಿ ರಾಜನನ್ನು ಸೋಲಿಸುವ ಸೇನೆಯನ್ನು ಕಟ್ಟಿದ. ಅಂತಹ ಅದ್ಭುತವಾದ ನಾಯಕತ್ವ ಹಾಗೂ ಮ್ಯಾನೇಜ್‌ಮೆಂಟ್ ಪಾಠವನ್ನು ನಮ್ಮ ಯುವಕರು ಇನ್ನೆಲ್ಲಿ ಪಡೆದುಕೊಳ್ಳಲು ಸಾಧ್ಯ?

ಕೃಷ್ಣನ ಬದುಕಿನಲ್ಲೂ ಇಂತಹುದೇ ಸ್ಫೂರ್ತಿದಾಯಕ ಕತೆಗಳಿವೆ. ರಣರಂಗದಲ್ಲಿ ಅರ್ಜುನನ ಸಾರಥಿಯಾಗಿ ಕೆಲಸ ಮಾಡುತ್ತಲೇ ಅವನು ಕೌರವರ ಶಕ್ತಿಶಾಲಿ ಸೇನೆಯನ್ನು ಪಾಂಡವರು ಎದುರಿಸುವಂತೆ ನೋಡಿಕೊಂಡ. ಪಾಂಡವ ರದು ದುರ್ಬಲ ಸೇನೆಯಾಗಿದ್ದರೂ, ಪ್ರಚಂಡ ರಣತಂತ್ರ ಗಳನ್ನು ಹೆಣೆದು, ಧರ್ಮದ ಉಳಿವಿಗಾಗಿ ಸಾಕಷ್ಟು ಅಡ್ಡ ದಾರಿಗಳನ್ನೂ ಬಳಸಿ, ಪಾಂಡವರಿಗೆ ಜಯ ಲಭಿಸುವಂತೆ ಕೃಷ್ಣ ನೋಡಿಕೊಂಡ. ಇದರ ಹಿಂದಿರುವುದು ಅಪ್ಪಟ ಮ್ಯಾನೇಜ್‌ಮೆಂಟ್ ತಂತ್ರಗಳು. ಕೃಷ್ಣಾವತಾರದ ಉದ್ದಕ್ಕೂ ಅವನಿಗೆ ಅಸಂಖ್ಯ ಕಷ್ಟಗಳು ಎದುರಾಗಿದ್ದವು. ಅವುಗಳನ್ನೆಲ್ಲ ಅವನು ಅಪ್ರತಿಮ ಜಾಣ್ಮೆ ಹಾಗೂ ಅನುಪಮ ತಾಳ್ಮೆಯಿಂದ ಎದುರಿಸಿ, ಒಬ್ಬ ಯಶಸ್ವಿ ವ್ಯಕ್ತಿ ಹೇಗಿರಬೇಕು ಎಂಬುದನ್ನು ತೋರಿಸಿಕೊಟ್ಟ. ಅವನ ಮುಖ ಯಾವತ್ತೂ ಬಾಡಲಿಲ್ಲ. ಅವನು ಯಾವತ್ತೂ ಉತ್ಸಾಹ ಕಳೆದುಕೊಳ್ಳಲಿಲ್ಲ. ಕೃಷ್ಣನನ್ನು ನೋಡಿ ನಮ್ಮ ಯುವಕರು ಕೂಡ ತಮ್ಮೊಳಗೆ ಸುಪ್ತವಾಗಿರುವ ಶಕ್ತಿಯನ್ನು ಸರಿಯಾದ ದಿಸೆಯಲ್ಲಿ ಬಳಸಿ ನಾಯಕರಾಗಿ ಹೊರಹೊಮ್ಮಲು ಸಾಧ್ಯವಿದೆ. ಆತ್ಮವಿಶ್ವಾಸ ಮತ್ತು ನಂಬಿಕೆಗೆ ಇನ್ನೊಂದು ಹೆಸರೇ ಕೃಷ್ಣ. ಈ ಎರಡು ಮೌಲ್ಯಗಳನ್ನು ನಮ್ಮ ಯುವಕರು ಅಳವಡಿಸಿಕೊಂಡರೆ ಅವರನ್ನು ತಡೆದು ನಿಲ್ಲಿಸುವವರು ಯಾರೂ ಇರುವುದಿಲ್ಲ. ಶ್ರೀಮದ್ ಭಾಗವತ ಮತ್ತು ರಾಮಚರಿತಮಾನಸದಲ್ಲಿ ಬದುಕಿನ ಕತೆಗಳಿವೆ. ಬದುಕಿಗೆ ನೀತಿಯನ್ನು ತುಂಬುವ ಆಖ್ಯಾನಗಳಿವೆ. ಮುರಾರಿ ಬಾಪು ಅವರ ನೇತೃತ್ವದಲ್ಲಿ ನಾವು ಆಯೋಜಿಸಿರುವ ಯವತ್ಮಾಲ್‌ನ ರಾಮಕಥೆ ಯಶಸ್ವಿಯಾಗುವುದರಲ್ಲಿ ಯಾವ ಅನುಮಾನವೂ ನನಗಿಲ್ಲ.

ಧರ್ಮವನ್ನು ನಮ್ಮ ಒಳಿತಿಗೆ ಬಳಸಿಕೊಂಡರೆ ಜಾತಿಭೇದ, ಪಂಥ, ರಾಜಕೀಯ ಇತ್ಯಾದಿಗಳನ್ನು ಮೀರಿಯೂ ನಾವು ಪ್ರಜ್ಞಾವಂತ ಸಮಾಜವಾಗಿ ಬೆಳೆಯಲು ಸಾಧ್ಯವಿದೆ.

ಭಟ್ಟರ್ ಸ್ಕಾಚ್

- **ಉಗ್ರಪ್ಪ ಕಂದಕೊಳ, ಬೆಳಗಾವಿ**
  ಭಟ್ರೇ, ಭೂಮಿ ಯಾಕೆ ತಿರುಗುತ್ತೆ?
  – **ಅದಕ್ಕೂ ತಲೆ ಸುತ್ತುತ್ತೆ!**
- **ಚಂದ್ರು, ಹಾಸನ**
  ಭಟ್ರೇ, ಮೀನು ಯಾಕೆ ಮಾತಾಡಲ್ಲ?
  – **ಅದರ ಬಾಯಲ್ಲಿ ನೀರು ತುಂಬಿರುತ್ತೆ!**
- **ಭವ್ಯ ಶೇಖರ, ಗುಬ್ಬಿ**
  ಭಟ್ರೇ, ಆನೆ ಯಾಕೆ ಕೆಂಪು ಬಣ್ಣದ ಪ್ಯಾಂಟ್ ಹಾಕುತ್ತೆ?
  – **ನೀಲಿ ಬಣ್ಣದ್ದು ಟೈಟ್ ಆಗುವುದಂತೆ!**
- **ಅಜ್ಜಪ್ಪ ಅಮರಗೋಳ, ಧಾರವಾಡ**
  ಭಟ್ರೇ, ಇಲ್ಲೊಬ್ಬ ಕುಡುಕ ರೈಲ್ವೆ ಹಳಿ ಮೇಲೆ ಮಲಗುತ್ತಾನಲ್ಲ?
  – **ಅವನು ಅದನ್ನ ಹಾಸಿಗೆ ಅಂತ ಭಾವಿಸಿರಬೇಕು!**
- **ಸುರೇಶ ಪಾಟೀಲ, ಹಾವೇರಿ**
  ಭಟ್ರೇ, ಕೋಳಿ ಮೊದಲು ಬಂತಾ ಅಥವಾ ಮೊಟ್ಟೆನಾ?
  – **ಮೊದಲು ಆರ್ಡರ್ ಮಾಡಿದ್ದು ಯಾವುದು?!**
- **ಕೆ.ಸಿ.ಚಂದ್ರು, ಅರಸೀಕೆರೆ**
  ಭಟ್ರೇ, ನನ್ನನ್ನು ಕನ್ನಡಿ ಮುಂದೆ ನಿಲ್ಲಿಸಿದರೆ ಏನಾಗುತ್ತೆ?
  – **ಇನ್ನೊಬ್ಬ ಜೋಕರ್ ಹುಟ್ಟಿಕೊಳ್ಳುತ್ತಾನೆ!**
- **ವೈಶಾಲಿ ಶರ್ಮ, ಹಡಗಳಿ**
  ಭಟ್ರೇ, ಇಲ್ಲಿ ಎರಡು ಇರುವೆಗಳು ಜಗಳವಾಡುತ್ತಿವೆ, ಯಾಕೆ ?
  – **ಅವುಗಳ ಮಧ್ಯೆ ಯಾರೋ ಸಕ್ಕರೆ ತಂದು ಹಾಕಿರಬೇಕು!**
- **ಬಿ.ರಘು, ಕಡಕೋಳ**
  ಭಟ್ರೇ, ಸೊಳ್ಳೆಗೂ ಮತ್ತು ನಿಮಗೂ ಏನು ವ್ಯತ್ಯಾಸ?
  – **ಸೊಳ್ಳೆ ರಾತ್ರಿ ಮಾತ್ರ ಕಚ್ಚುತ್ತೆ!**
- **ಸುಂದರ್ ಹಾಲೇಶಪ್ಪ, ದಾವಣಗೆರೆ**
  ಭಟ್ರೇ, ಕಾಗೆ ಯಾಕೆ ಕಪ್ಪಗಿದೆ?
  – **ಅದು ಫೇರ್ ಅಂಡ್ ಲವ್ಲಿ ಹಚ್ಚಲ್ಲ ಅದಕ್ಕೆ!**
- **ಅರವಿಂದ ನಾಡಿಗ, ತುಮಕೂರು**
  ಭಟ್ರೇ, ಇಲ್ಲೊಂದು ಕೋತಿ ಮರದಿಂದ ಕೆಳಗೆ ಬಿತ್ತು ಯಾಕೆ ?
  – **ಬಿದ್ದರೆ ಕೆಳಗೇ ಬೀಳಬೇಕಲ್ಲ?!**
- **ಸಮರ್ಥ ಕೆ.ಕೆ., ಬೆಂಗಳೂರು**
  ಭಟ್ರೇ, ಭಟ್ಟರ ಸ್ಕಾಚ್ ನಲ್ಲಿ ಪ್ರಶ್ನೆ ಕೇಳಲು ಅರ್ಹತೆ ಏನು ?
  – **ಬಾಯಲ್ಲಿ ಬೆರಳನ್ನು ಹಾಕಿಕೊಳ್ಳೋದನ್ನು ಬಿಟ್ಟವರು ಪ್ರಶ್ನೆ ಕೇಳಬಹುದು!**
- **ಮೌನೇಶ ವಿಶ್ವಕರ್ಮ, ಮಸ್ಕಿ**
  ಭಟ್ರೇ, ನಾವು ಸಾಯುವುದು ಮೊದಲೇ ಗೊತ್ತಾಗುವಂತಿದ್ದರೆ ಹೇಗಿರುತ್ತಿತ್ತು?
  – **ಸಾವಿನ ಕೈಗೆ ಸಿಗಬಾರದು ಎಂದು ಏನೇನೋ ಉಪಾಯ ಮಾಡುತ್ತಿದ್ದರು!**
- **ಅರುಣ್ ವಿದ್ಯಾಸಾಗರ, ಮೈಸೂರು**
  ಭಟ್ರೇ, ದೇವರು ಮೇಲೆಯೇ ಏಕೆ ಇರ್ತಾನೆ?
  – **ಕೆಳಗೆ ಬಂದ್ರೆ, ಜನ ಬಿಡ್ತಾರಾ ಹೇಳು!**

ಜೆನ್ ಝೀ ಮಕ್ಕಳಿಂದ ಒಂದು ಪ್ರೇಮ ಪತ್ರ

ಇಂದು ನೇಪಾಳದಲ್ಲಿ ಸಂಭವಿಸಿದ್ದು ನಾಳೆ ನಿಮ್ಮ ಅಂಗಳದಲ್ಲಿ ಸಂಭವಿಸಬಹುದು ಎಂಬ ಎಚ್ಚರಿಕೆ ನಿಮಗಿರಲಿ ಎಂದು ಮೊದಲೇ ಸೂಚಿಸುತ್ತಾ, ಈ ಕಾಗದವನ್ನು ಒಪ್ಪಿಸಿಕೊಳ್ಳೋಣವಾಗಲಿ. ನಿಮ್ಮ ನಂತರದ ತಲೆಮಾರಿನವರ ಕಂಗಳಲ್ಲಿ ಒಮ್ಮೆ ಕಣ್ಣಿಟ್ಟು ನೋಡಿ. ಅವರನ್ನು ಅರ್ಥ ಮಾಡಿಕೊಳ್ಳುವ ಪ್ರಯತ್ನ ಮಾಡಿ.

ಕಾಡುದಾರಿ
ಹರೀಶ್ ಕೇರ
vveditoped@gmail.com

ನೇಪಾಳದಲ್ಲಿ ನಡೆಯುತ್ತಿರುವ ಘಟನೆಗಳನ್ನು ನೋಡುತ್ತ ಬೆಚ್ಚಿ ಬಿದ್ದಿರುವ ಹಿರಿಯರಿಗೆ, ಜೆನ್ ಝೀ ಮಕ್ಕಳಿಂದ ಒಂದು ಪ್ರೇಮ ಪತ್ರ ಅಥವಾ ಅಷ್ಟೇನೂ ಪ್ರೇಮವಿಲ್ಲದ ಪತ್ರ. ನಿಮ್ಮ ಮಕ್ಕಳು ಅಥವಾ ಮೊಮ್ಮಕ್ಕಳು ಸೇರಿ ಆಗಿರುವ ಜೆನ್ ಝೀ ಅಥವಾ ಝುಡ್ ತಲೆಮಾರಿಗೆ ಬಗ್ಗೆ ನಿಮ್ಮ ತಿಳಿವಳಿಕೆ ಕಡಿಮೆ ಇದೆ ಎಂಬುದು ನಮ್ಮ ತಿಳಿವಳಿಕೆಗೆ ಬಂದಿದೆ. ಇಂದು ನೇಪಾಳದಲ್ಲಿ ಸಂಭವಿಸಿದ್ದು ನಾಳೆ ನಿಮ್ಮ ಅಂಗಳದಲ್ಲಿ ಸಂಭವಿಸಬಹುದು ಎಂಬ ಎಚ್ಚರಿಕೆ ನಿಮಗಿರಲಿ ಎಂದು ಮೊದಲೇ ಸೂಚಿಸುತ್ತಾ, ಈ ಕಾಗದವನ್ನು ಒಪ್ಪಿಸಿಕೊಳ್ಳೋಣವಾಗಲಿ.

ನಮ್ಮನ್ನು ನೀವು ಗುರುತಿಸಿರುವುದು 1997ರಿಂದ 2012ರ ನಡುವೆ ಜನಿಸಿರುವ ತಲೆಮಾರು ಎಂದು. ಅದೇನೋ ಸರಿ. ಸ್ವಲ್ಪ ಆಚೀಚೆ ಆಗಬಹುದು. ನಮ್ಮ ತಲೆಮಾರಿನ ಮುಖ್ಯ ಗುಣಲಕ್ಷಣ, ನಾವು ಡಿಜಿಟಲ್ ನೇಟಿವ್ ಅಥವಾ ಇಂಟರ್ನೆಟ್ ಸರ್ವವ್ಯಾಪಿಯಾಗಿರುವ ಸಂದರ್ಭದಲ್ಲಿ ಜನಿಸಿದವರು, ಮತ್ತು ಬುದ್ಧಿ ತಿಳಿದಾಗಿನಿಂದ ಸೋಶಿಯಲ್ ಮೀಡಿಯಾದ ಸತತ ಸಂಪರ್ಕ ಹೊಂದಿದವರು ಎಂಬುದು. ಅದೂ ಸರಿಯೇ ಇದೆ. ಆ ಬಳಿಕ ನಮ್ಮ ಬಗ್ಗೆ ನೀವು ಕಟ್ಟಿಕೊಂಡಿರುವ ಹಲವು ಕಲ್ಪನೆಗಳನ್ನೂ ನಾವು ಗಮನಿಸಿದ್ದೇವೆ.

ಉದಾಹರಣೆಗೆ ವರ್ಕ್ ಕಲ್ಚರ್ ಬಗ್ಗೆ ನಮಗೆ ಗೌರವವಿಲ್ಲ. ಹಿರಿಯರನ್ನು ಗೌರವಿಸುವುದಿಲ್ಲ. ಧಾಡಸಿತನ ಹೆಚ್ಚು. ತನ್ನಲ್ಲಿ ಟೆಕ್ನಾಲಜಿಕಲ್ ಸ್ಕಿಲ್ ಇತರರಿಗಿಂತ ಹೆಚ್ಚು ಇದೆ ಎಂಬ ಧೋರಣೆ. ಮ್ಯಾನೇಜರ್ ನನ್ನ ತಪ್ಪು ತೋರಿಸಿದರೆ ಸಹಿಸಿಕೊಳ್ಳಲಾಗೋಲ್ಲ– ನಾಳೆಯೇ ರಿಸೈನ್ ಮಾಡಿ ಎದ್ದು ಹೋಗ್ತೀನಿ ಅನ್ನುವ ಮನೋಭಾವ. ಈ ಬದುಕಿಗೆ ಯಾವ ಗುರಿಯೂ ಇಲ್ಲ, ಇರಬೇಕಾಗಿಯೂ ಇಲ್ಲ ಎಂಬ ಮನೋಧರ್ಮ. ಸಂಬಂಧಗಳನ್ನು ಗಟ್ಟಿಯಾಗಿ ಉಳಿಸಿಕೊಳ್ಳುವುದರತ್ತ ಗಮನವಿಲ್ಲ. ಗಂಡು– ಹೆಣ್ಣಿನ ಗೆಳೆತನದ ಬಗ್ಗೆ ಹಿಂದಿನ ತಲೆಮಾರು ಇಟ್ಟುಕೊಂಡಿರುವ ಮೌಲ್ಯಗಳ ಬಗ್ಗೆ ಅಷ್ಟು ನಂಬಿಕೆಯಿಲ್ಲ. ಇಂದು ಮದುವೆಯಾಗಿ, ನಾಳೆ ಡೈವೋರ್ಸ್ ಮಾಡಬೇಕಾಗಿ ಬಂದರೂ ಆ ಬಗ್ಗೆ ಹೆಚ್ಚು ಚಿಂತಿಸುವುದಿಲ್ಲ. ಮಾನಸಿಕ ಸಮಸ್ಯೆಗಳು ಬಹಳ. ಆದರ್ಶಗಳು ಅಗತ್ಯವಿಲ್ಲ. ಐಕಾನ್ಗಳು ಬೇಕಾಗಿಲ್ಲ... ಇತ್ಯಾದಿ ಇತ್ಯಾದಿ.

ಹಾಗಂತೆಲ್ಲ ನೀವು ಬಾಯಿ ಬಿಟ್ಟು ಹೇಳಿಲ್ಲ. ಆದರೆ ನಾವು ಅರ್ಥ ಮಾಡಿಕೊಳ್ಳಬಲ್ಲೆವು. ಹೆಚ್ಚಿನ ಬಹುರಾಷ್ಟ್ರೀಯ ಕಂಪನಿಗಳು ನಮ್ಮನ್ನು ನೇಮಿಸಿಕೊಳ್ಳುವಾಗ ಬಹಳ ಎಚ್ಚರಿಕೆ ವಹಿಸುತ್ತವೆ. ನಮ್ಮ ಮೇಲೆ ಅವುಗಳಿಗೂ ನಂಬಿಕೆಯಿಲ್ಲ. 'ಜೆನ್ ಝೀ ಬಹಳ ಪ್ರಾಬ್ಲೆಮ್ಯಾಟಿಕ್' ಎಂದು ನಿಮ್ಮ ಬೋರ್ಡ್ ರೂಂಗಳಲ್ಲಿ ನೀವು ಮಾತನಾಡಿಕೊಳ್ಳುವುದನ್ನು ನಾವು ಬಲ್ಲೆವು. ಬೆನ್ನಿಗೆ ಸಂಸಾರದ ನೊಗ ಕಟ್ಟಿಕೊಂಡಿರುವ, ಮನೆ ಸಾಲ, ಮಕ್ಕಳ ಶಿಕ್ಷಣದ ಲೋನು ಇಎಂಐ ಎಂದೆಲ್ಲ ಬದುಕಿನ ಭಾರಗಳಡಿ ಸಿಕ್ಕಿಕೊಂಡಿರುವ ನಮ್ಮ ಸೀನಿಯರ್‌ಗಳು ನಿಮ್ಮ ಆದೇಶಗಳನ್ನು ಬೆನ್ನು ಬಗ್ಗಿಸಿ ಪಾಲಿಸುತ್ತಾರೆ. ಆದರೆ ನಾವು ಹಾಗೆ ಮಾಡಲಾರೆವು. ನಾವು ಬಂಡೇಳುತ್ತೇವೆ. ಹೀಗಾಗಿಯೇ ನಮ್ಮ ಬಗ್ಗೆ ನಿಮಗೆ ಅಸಹನೆ.

ನಮಗೆ ಆದರ್ಶಗಳಿಲ್ಲದಿರಬಹುದು, ಆದರೆ ಆದರ್ಶಗಳನ್ನು ಇಟ್ಟುಕೊಂಡಿದ್ದ ನೀವು ಜಗತ್ತನ್ನು ಹೇಗೆ ರೂಪಿಸಿದ್ದೀರಿ ಎಂಬುದನ್ನು ನಾವು ನೋಡಿದ್ದೇವೆ. ಬೇರೆ ಬೇಡ, ಭಾರತದ ಉದಾಹರಣೆಯನ್ನೇ ತೆಗೆದುಕೊಳ್ಳಿ. ಸ್ವಾತಂತ್ರ್ಯ ಬಂದಾಗ ಇದ್ದ ಕನಸುಗಳನ್ನೂ ಈಗಿನ ವಸ್ತುಸ್ಥಿತಿಯನ್ನೂ ಸ್ವಲ್ಪ ನೋಡಿ. ನಾವು ಹೇಳುತ್ತಿರುವುದು ಶ್ರೀಮಂತಿಕೆಯ ಬಗೆಗಲ್ಲ. ಹಣ ಹೇಗೋ ದುಡಿದು ಗುಡ್ಡೆ ಹಾಕುತ್ತೀರಿ. ತಲೆಮಾರಿನಿಂದ ತಲೆಮಾರಿಗೆ ನೀವು ನಿಮ್ಮ ಮೌಲ್ಯಗಳನ್ನು ಕೆಡಿಸಿಕೊಳ್ಳುತ್ತಲೇ ಬಂದಿದ್ದೀರಿ. ಲಂಚ ನೀಡದೇ ಸರಕಾರಿ ಕೆಲಸ ಮಾಡಿಸಿಕೊಳ್ಳಲು ಸಾಧ್ಯವಿಲ್ಲ ಎಂಬ ಪರಿಸ್ಥಿತಿ ಸೃಷ್ಟಿಸಿಕೊಂಡಿರುವ ನೀವು, ಭ್ರಷ್ಟಾಚಾರ ಸಲ್ಲದು ಎಂದು ನಮಗೆ ಪಾಠ ಮಾಡುತ್ತೀರಿ. ಒನ್ ವೇಯಲ್ಲಿ ವಾಹನ ಚಲಾಯಿಸಿಕೊಂಡು ಬಂದು ಟ್ರಾಫಿಕ್ ರೂಲ್ಸ್ ಪಾಲಿಸಿ ಎಂದು ನಮಗೆ ಬೋಧಿಸುತ್ತೀರಿ. ಸ್ವಜನಪಕ್ಷಪಾತ ಸಲ್ಲದು ಎಂದು ಪಬ್ಲಿಕ್ಕಾಗಿ ಭಾಷಣ ಮಾಡುತ್ತಾ ನಿಮ್ಮ ಮಕ್ಕಳು ಮೊಮ್ಮಕ್ಕಳನ್ನೇ ಲಾಭಯುತ ಹುದ್ದೆಗಳಲ್ಲಿ ಕೂರಿಸಿಕೊಂಡಿದ್ದೀರಿ. ಆಡುವುದೊಂದು, ಮಾಡುವುದೊಂದು ಎಂಬ ನಿಮ್ಮ ನಡತೆಯನ್ನು ನಾವು ಗಮನಿಸದೇ ಇರಲು ಸಾಧ್ಯವೇ?

ಇದನ್ನೆಲ್ಲ ನೋಡುತ್ತ ಭ್ರಮನಿರಸನಗೊಂಡು ಬೆಳೆದ ತಲೆಮಾರು ನಮ್ಮದು. ಹೀಗಾಗಿ ನಮ್ಮಲ್ಲಿ ಕೊರತೆ, ಕೊರಗುಗಳಿದ್ದರೆ ಅದನ್ನು ಒಪ್ಪಿಕೊಳ್ಳಿ. ನಾವು ನಿಮಗಿಂತ ಭಿನ್ನ ಎಂಬುದನ್ನು ಅಂಗೀಕರಿಸಿ. ಈಗ ನಮ್ಮ ಮನಸಿನ ಮಾತನ್ನೂ ಸ್ವಲ್ಪ ನಿಮ್ಮಿಂದ ಕೇಳೋಣವಾಗಲಿ. ನಿಮ್ಮ ತಲೆಮಾರು ಕೂಡ ನಿಮ್ಮ ಹಿರಿಯರಿಂದ ಭಿನ್ನವಾಗಿ ಇತ್ತಲ್ಲವೇ? ನೀವು ಕೂಡ ಅವರಿಂದ ರೆಬೆಲ್ ಆಗಿ ನಿಲ್ಲಲು, ಬೇರೆಯಾಗಿ ಬದುಕು ಕಟ್ಟಿಕೊಳ್ಳಲು ಯತ್ನಿಸಿದಿರಿ. ನಾವು ಅದನ್ನು ಇನ್ನಷ್ಟು ಮುಕ್ತವಾಗಿ, ವೇಗವಾಗಿ ಮಾಡಲು ಯತ್ನಿಸುತ್ತಿದ್ದೇವೆ. ಅದಕ್ಕೆ ಟೆಕ್ನಾಲಜಿಯ ಸಾಥ್ ತೆಗೆದುಕೊಂಡಿದ್ದೇವೆ.

ನೇಪಾಳದಲ್ಲಿ ನಡೆದದ್ದು ಇದರ ಒಂದು ಪ್ರಯೋಗ ಅನ್ನಬಹುದು. ಆ ಹೋರಾಟ ಹೊತ್ತಿಕೊಳ್ಳಲು ಕಾರಣವಾದದ್ದು ಒಂದು ಸಣ್ಣ ಕಿಡಿ. ಆ ಕಿಡಿ ಬೇರೇನಲ್ಲ, ಸೋಶಿಯಲ್ ಮೀಡಿಯಾಗಳ ಬ್ಯಾನ್. ನಾವು ಬುದ್ಧಿ ತಿಳಿದಾಗಿನಿಂದ ಅದರಲ್ಲೇ ಬಾಳಿ ಬದುಕಿದ್ದೇವೆ. ನಮ್ಮ ಬದುಕಿನ ಎಲ್ಲ ಪ್ರಮುಖ ಘಟ್ಟಗಳೂ ಅದರಲ್ಲಿ ದಾಖಲಾಗಿವೆ. ಒಂದು ಸಣ್ಣ ರೈಡ್ ಹೋದರೂ ಅದರ ಫೋಟೋ ವಿಡಿಯೋ ಮಾಡಿ ಶೇರ್ ಮಾಡಿಕೊಳ್ಳುತ್ತೇವೆ. ಒಂದು ಸಣ್ಣ ದುಃಖವಾದರೂ ಅದನ್ನು ಹಂಚಿಕೊಳ್ಳುತ್ತೇವೆ. ಫೇಸ್‌ಬುಕ್, ಇನ್‌ಸ್ಟಾ, ವಾಟ್ಸಾಪ್‌ಗಳಿಲ್ಲದೆ ನಾವು ಬದುಕನ್ನು ಊಹಿಸಿಕೊಳ್ಳಲಾರೆವು. ಊಟ ಬಿಟ್ಟು ಒಂದು ವಾರ ಇರಬಲ್ಲೆವು. ನೀರಿಲ್ಲದೆ ಮೂರು ದಿನ ಇದ್ದೇವು. ಆದರೆ ಸೋಶಿಯಲ್ ಮೀಡಿಯಾ ಇಲ್ಲದೆ ಅರ್ಧ ಗಂಟೆ ಇರಲಾರೆವು. ಗೆಳೆಯರೊಡನೆ ಹ್ಯಾಂಗೌಟ್ ಮಾಡುವುದು, ಸೋಶಿಯಲ್ ಮೀಡಿಯಾದಲ್ಲಿ ಬ್ಯುಸಿಯಾಗಿರುವುದು ಇವೆಲ್ಲ ನಮ್ಮ ಸಹಜ ಹೊರದಾರಿಗಳು. ಇಂಥ ನಮ್ಮಿಂದ ಅವುಗಳನ್ನು ಕಸಿದುಕೊಳ್ಳುವುದು ಎಂದರೇನು?

ಹಾಗಾಗಿಯೇ ನಾವು ರೊಚ್ಚಿಗೆದ್ದೆವು.

ಆರಂಭದಲ್ಲಿ ನಮ್ಮ ಹೋರಾಟ ಶಾಂತಿಯುತವಾಗಿಯೇ ಇತ್ತು. ಆದರೆ ಅಧಿಕಾರದ ದರ್ಪದಲ್ಲಿ ಕುರುಡಾಗಿದ್ದ ನೇಪಾಳದ ಆಡಳಿತ ನಮ್ಮ ಮೇಲೆ ಪೊಲೀಸರನ್ನು ಛೂಬಿಟ್ಟು ಗೋಲಿಬಾರ್ ನಡೆಸಿತು. ಯಾವ ತಪ್ಪೂ ಮಾಡದ ನಮ್ಮ ಸ್ನೇಹಿತರು ಹತರಾದರು. ಆಗ ಮಾತ್ರ ನಮಗೆ ಸಿಟ್ಟು ತಡೆಯಲಾಗಲಿಲ್ಲ. ಹೀಗಿದ್ದರೂ ನಮ್ಮನ್ನು ಗೊತ್ತುಗುರಿಯಿಲ್ಲದ ಮೂರ್ಖ ತಲೆಮಾರು ಎಂದು ನೀವು ಜರೆಯುವುದು ತಪ್ಪುವುದಿಲ್ಲ. ಇದೂ ಆಗಿ ಹೋಗಲಿ ಎಂದು ಸಂಸತ್ ಭವನ, ಪ್ರಧಾನಿ ನಿವಾಸಗಳಿಗೆ ನುಗ್ಗಿ ಎಲ್ಲ ಮುರಿ ದಟ್ಟೆವು, ಬೆಂಕಿ ಹಾಕಿದೆವು. ಸರಕಾರ ಉರುಳಿಸಿದೆವು. ಹೊಸ ಆಡಳಿತ ಬರಲಿ ಎಂದು ಹಂಬಲಿಸಿದೆವು. ನಾವು ಸಂಘಟಿತರಾದರೆ ಏನನ್ನೂ ಮಾಡಬಲ್ಲೆವು ಎಂದು ತೋರಿಸಿದೆವು. ನಮಗೆ ದೀರ್ಘಾವಧಿ ಗುರಿಯಿಲ್ಲ, ದೊಡ್ಡ ನಾಯಕರಿಲ್ಲ. ಆದರೆ ಬದಲಾವಣೆಯ ಹಂಬಲ, ರೊಚ್ಚು ಇದೆ.

ಆದರೆ ನಮ್ಮ ಪಾಡು ನಮಗೆ ಗೊತ್ತಿದೆ. ಮಿಲಿಟರಿ, ಪೊಲೀಸರು, ಆಡಳಿತ ಎಲ್ಲವೂ ನಿಮ್ಮ ಕೈಯಲ್ಲೇ ಇದೆ. ನಿಮ್ಮನ್ನು ನಾವು ಬುಡಮಟ್ಟ ನಿರ್ಮೂಲ ಮಾಡಲಾರೆವು. ಅದು ನಮ್ಮ ಗುರಿಯೂ ಅಲ್ಲ. ಈಗ ನಮ್ಮ ಬಂಡಾಯದ ಸ್ಥಿತಿಯನ್ನೇ ನೋಡಿ. ನಮಗೆ ಸರಿಯಾದ ನಾಯಕನೇ ಇಲ್ಲ. ಇದ್ದ ಪ್ರಧಾನಿಯನ್ನು ಇಳಿಸಿದ್ದೇವೆ, ಆದರೆ ಪರ್ಯಾಯ ವ್ಯಕ್ತಿಯನ್ನು ಕೂರಿಸೋಣ ಎಂದರೆ ಕಳಂಕವಿಲ್ಲದ ಒಬ್ಬನೇ ಒಬ್ಬ ನಾಯಕ ನಿಮ್ಮ ತಲೆಮಾರಿನಲ್ಲಿ ಇಲ್ಲ. ನಮ್ಮ ತಲೆಮಾರಿನಲ್ಲಿ ಅಂಥವರನ್ನು ಬೆಳೆಯಲು ನೀವು ಬಿಡಲೂ ಇಲ್ಲ. ಮೇಲಾಗಿ, ನಿಮ್ಮ ತಲೆಮಾರನ್ನು ಹಿಂಬಾಲಿಸುತ್ತಿರುವ ನಮ್ಮ ತಲೆಮಾರಿನ ಬಹುತೇಕ ಮರಿಪುಢಾರಿಗಳು ಈಗಾಗಲೇ ನಿಮ್ಮಂತೆ ಆಗಿದ್ದಾರೆ. ಹೀಗಾಗಿ ನಮಗೆ ಹೊಸ ಬದುಕಿನ ಕನಸಿದ್ದರೂ ಅದು ನನಸಾದೀತು ಎಂಬ ಭರವಸೆಯಿಲ್ಲ. ಇದೇ ನಮ್ಮ ದುರಂತ, ಇದಕ್ಕೆ ನೀವೇ ಕಾರಣ.

ಈ ಬದುಕಿನ ಸತ್ಯಗಳು ನಮ್ಮನ್ನು ಹತಾಶರನ್ನಾಗಿಸುತ್ತಿವೆ. ನಮಗೆ ಹಸಿವಿಲ್ಲ ಎನ್ನುತ್ತೀರಿ– ಹಸಿವೇ ಆಗದಂತೆ ನಮ್ಮನ್ನು ಬೆಳೆಸಿದ್ದೀರಿ. ಕಷ್ಟಸಹಿಷ್ಣುತೆ ಇಲ್ಲ ಎನ್ನುತ್ತೀರಿ– ಕಷ್ಟಗಳೇ ಬರದಂತೆ ಪಾಲಿಸಿದ್ದೀರಿ. ನಮ್ಮಲ್ಲಿ ದೊಡ್ಡ ಆದರ್ಶಗಳನ್ನೂ ಕನಸುಗಳನ್ನೂ ಬಿತ್ತುತ್ತೀರಿ. ಆದರೆ ಅದಕ್ಕೆ ತಕ್ಕಂತೆ ನೀವೇ ನಡೆದುಕೊಳ್ಳುತ್ತಿಲ್ಲ. ಮೌಲ್ಯಗಳನ್ನು ಬೆಳೆಸಿಕೊಳ್ಳಬೇಕು ಎನ್ನುತ್ತೀರಿ, ಅವು ನಿಮ್ಮಲ್ಲೇ ಇಲ್ಲ. ತಂತ್ರಜ್ಞಾನದಲ್ಲಿ ಕಳೆದುಹೋಗಬೇಡಿ ಎನ್ನುತ್ತೀರಿ, ಆದರೆ ಅದಕ್ಕೆ ಪರ್ಯಾಯ ನಿಮ್ಮಲ್ಲಿ ಇಲ್ಲ. ನಿಮ್ಮ ಆಧ್ಯಾತ್ಮಿಕತೆ ಹುಸಿ ಎಂಬುದು ನಮಗೆ ಗೊತ್ತಿದೆ. ನೀವು ಸೃಷ್ಟಿಸಿದ ಕೃತಕ ಬುದ್ಧಿಮತ್ತೆ ನಮ್ಮ ಕೆಲಸಗಳನ್ನು ಕಿತ್ತುಕೊಳ್ಳುತ್ತಿದೆ. ಆದರೆ ನಮ್ಮ ಕ್ರಿಯೇಟಿವಿಟಿ, ಕಲೆಯ ಪ್ರತಿಭೆಗೆ ನಿಮ್ಮಲ್ಲಿ ಅವಕಾಶ ಇಲ್ಲ. ನೀವು ಸೃಷ್ಟಿಸಿದ ಸಮಾಜ ನಮ್ಮನ್ನು ನಿರಂತರ ಅವಮಾನಕ್ಕೆ ಈಡುಮಾಡುತ್ತಿದೆ. ನಾವು ಎಷ್ಟು ದಿನ ಅಂತ ಸಹಿಸೋಣ?

ನಿಮ್ಮ ನಂತರದ ತಲೆಮಾರಿನವರ ಕಂಗಳಲ್ಲಿ ಒಮ್ಮೆ ಕಣ್ಣಿಟ್ಟು ನೋಡಿ. ಅಲ್ಲಿರುವ ಹತಾಶೆ ಮತ್ತು ಭರವಸೆ, ಕನಸು ಮತ್ತು ರೊಚ್ಚು, ಮುಗ್ಧತೆ ಮತ್ತು ಉಡಾಫೆ– ಇವುಗಳನ್ನೆಲ್ಲ ಅರ್ಥ ಮಾಡಿಕೊಳ್ಳುವ ಪ್ರಯತ್ನ ಮಾಡಿ. ನಾವು ನಿಮ್ಮಂತೆ ವಾರಕ್ಕೆ ಎಪ್ಪತ್ತೆರಡು ಗಂಟೆ ಕೆಲಸ ಮಾಡುತ್ತಾ, ದುಡಿದದ್ದನ್ನೆಲ್ಲ ಇಎಂಐಗಳಿಗೆ ಸುರಿಯುತ್ತಾ, ಮಕ್ಕಳು ಮರಿ ಎಂದು ಮಾಡಿಕೊಂಡು ಅವರ ಮೇಲೂ ರೇಗುತ್ತಾ ಅವರಿಂದಲೂ ಹತಾಶೆಯುಣ್ಣುತ್ತಾ, ಕೊನೆಗೊಂದು ದಿನ ನಿವೃತ್ತರಾಗಿ ಎಲ್ಲರ ಮೇಲೆ ಎಗರಾಡುತ್ತಾ ಇರಲು ಬಯಸುವ ಕ್ಷುದ್ರಜೀವಿಗಳಲ್ಲ. ಹೇಗೆ ಇರಬಾರದು ಎಂದು ನಮಗೆ ನೀವು ತೋರಿಸಿಕೊಟ್ಟಿದ್ದೀರಿ. ನಮಗೆ ಇರುವುದೊಂದೇ ಬದುಕು ಎಂದು ಗೊತ್ತಿದೆ. ಇರುವ ಅಷ್ಟು ದಿನಗಳನ್ನು ಅರ್ಥಪೂರ್ಣವಾಗಿ ಕಳೆಯಬೇಕು ಎಂದುಕೊಳ್ಳುತ್ತೇವೆ. ಆದರೆ ಅರ್ಥಪೂರ್ಣತೆ ಹೇಗೆ ಸಾಧ್ಯ ಎಂಬುದು ನಮಗೆ ಗೊತ್ತಿಲ್ಲ. ಈ ಬದುಕಿಗೆ ಅರ್ಥ, ಉದ್ದೇಶ, ಗುರಿ ಇದೆಯೇ ಎಂದೆಲ್ಲ ತರ್ಕಿಸುವಷ್ಟು ನಮಗೆ ಬುದ್ಧಿ ಬಲಿತಿಲ್ಲ.

ನಮಗೆ ಗುರಿಗಳನ್ನು ಕೊಡಿ. ಆದರ್ಶಗಳನ್ನು ಕೊಡಿ. ಸಂವಿಧಾನ– ಮೌಲ್ಯ– ನೀತಿ ಎಲ್ಲ ಕೊಡಿ. ಆದರೆ ಅದರಂತೆ ನೀವೂ ಬದುಕಿ ತೋರಿಸಿ. ನಾವು ನಿಮ್ಮ ಹೆಜ್ಜೆಯಲ್ಲಿ ಹೆಜ್ಜೆಯಿಟ್ಟು ಬರುತ್ತೇವೆ. ಅದು ಆಗುವುದಿಲ್ಲ ಹೋಗುವುದಿಲ್ಲ ಎಂಬಂತಿದ್ದರೆ, ನಮ್ಮ ದಾರಿ ನಮಗೆ, ನಿಮ್ಮ ದಾರಿ ನಿಮಗೆ.

ಒದುಗರ ಒಣಿ

ಒದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಕೈದಿಗಳೇ ಭಾಗ್ಯಶಾಲಿಗಳು !

ಅತ್ಯಾಚಾರ ಎಸಗಿದ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆಗೆ ಗುರಿಯಾಗಿರುವ ಪ್ರಜ್ವಲ್ ರೇವಣ್ಣಗೆ ಪರಪ್ಪನ ಅಗ್ರಹಾರದಲ್ಲಿ ಕ್ಲರ್ಕ್ ಕೆಲಸಕ್ಕೆ ನೇಮಿಸಿದ್ದು, ₹524 ದಿನಗೂಲಿಯನ್ನು ನಿಗದಿಪಡಿಸಲಾಗಿದೆ ಎಂದು ವರದಿಯಾಗಿದೆ. ಇದರಿಂದ ಪ್ರಜ್ವಲ್‌ನ ಒಟ್ಟಾರೆ ಮಾಸಿಕ ದಿನಗೂಲಿ ₹15,720 ಆಗುತ್ತದೆ. ರಾಜ್ಯದಲ್ಲಿ ಪ್ರಸ್ತುತ ಹೆಚ್ಚಿನ ಪ್ರಮಾಣದ ಯುವಕ–ಯುವತಿಯರು ಎರಡೆರಡು ಪದವಿ ಪಡೆದು, ನಗರದಲ್ಲಿ ನೆಲೆ ಹುಡುಕಲು ತೆರಳಿ ಇದೀಗ ಎಂಟು–ಹತ್ತು ಸಾವಿರ ಸಂಬಳಕ್ಕೆ ದುಡಿಯುತ್ತಾ ತಮ್ಮ ಜೀವನ ನಡೆಸಲು ಹರಸಾಹಸಪಡುತ್ತಿದ್ದಾರೆ. ಆದರೆ ಅತ್ಯಾಚಾರ ಪ್ರಕರಣದಲ್ಲಿ ಜೈಲು ಸೇರಿದವನಿಗೆ 15 ಸಾವಿರ ರು. ಪಗಾರ ಸಿಗುತ್ತಿದೆ. ಇದು ಸಮಾಜಕ್ಕೆ ನೀಡುವ ಸಂದೇಶವಾದರೂ ಏನು? ಸದ್ಯದ ಸ್ಥಿತಿಯಲ್ಲಿ ಕೈದಿಗಳೇ ಭಾಗ್ಯಶಾಲಿಗಳು! ಇದು ನಮ್ಮ ವ್ಯವಸ್ಥೆಯ ವಿಪರ್ಯಾಸವಲ್ಲದೆ ಮತ್ತೇನು!?

–ದಿನೇಶ ಮಾವಿನಮನೆ, ಯಲ್ಲಾಪುರ

'ಮತ'ದಾನವೂ ಬಾರದ ಸಂಸದರು!

ಉಪರಾಷ್ಟ್ರಪತಿಯ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ನಡೆದ ಚುನಾವಣೆಯ ಮತದಾನದಲ್ಲಿ ಹದಿನಾಲ್ಕು ಸಂಸದರು ಗೈರಾಗಿದ್ದು, 15 ಸಂಸದರ ಮತಗಳು ಅಮಾನ್ಯಗೊಂಡಿರುವ ವರದಿಯಾಗಿದೆ. ದೇಶದ ಮಹತ್ತರ ಚುನಾವಣೆಯಲ್ಲಿ ಮತಹಾಕಲೂ ಬರದ ಹಾಗೂ ಬಾರದ ಸಂಸದರು ಇದ್ದಾರೆಂದರೆ ಅದು ದೇಶವೇ ತಲೆತಗ್ಗಿಸುವ ವಿಷಯ. ಇಂತಹ ಸುದ್ದಿಯಿಂದ ಅಂತಾರಾಷ್ಟ್ರೀಯ ಮಟ್ಟದಲ್ಲಿ ನಮ್ಮ ಕುರಿತ ಗೌರವ ಕಡಿಮೆ ಆಗುವುದಿಲ್ಲವೇ? ಇಂತಹ ಸಂಸದರು ನಮ್ಮ ಪ್ರತಿನಿಧಿಗಳು ಎಂದರೆ ದೌರ್ಭಾಗ್ಯವೇ ಸರಿ. ಅನಾರೋಗ್ಯದಿಂದ ಬಳಲುತ್ತಿರುವ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರು ಗಾಲಿ ಕುರ್ಚಿಯಲ್ಲಿ ಆಗಮಿಸಿ ಮತದಾನ ಮಾಡಿದ್ದು ಸಂಸದರಿಗೆ ಮಾದರಿ. ಮತದಾನ ಮಾಡಲೂ ಬಾರದ ಹಾಗೂ ಬರದ ಸಂಸದರಿಂದ ದೇಶದ ಅಭಿವೃದ್ಧಿಯನ್ನು ನಿರೀಕ್ಷಿಸಬಹುದೇ?

–ಪತ್ತಂಗಿ ಎಸ್ ಮುರಳಿ, ಬೆಂಗಳೂರು

ಕಿವಿಗೆ ಹಾನಿ ತರುವ ಡಿಜೆ ನಿಷೇಧಿಸಿ

ಗಣಪತಿ ವಿಸರ್ಜನೆ ಮೆರವಣಿಗೆಗೆ ಪ್ರತೀ ವರ್ಷ ಲಕ್ಷಾಂತರ ಭಕ್ತರು ಸೇರುವ ಸೇರುವ ಚಿತ್ರದುರ್ಗದಲ್ಲಿ ಗುರುವಾರ(11/10/25) ನಾಲ್ಕು ಲಕ್ಷಕ್ಕೂ ಅಧಿಕ ಜನರು ಸೇರುವ ಸಾಧ್ಯತೆ ಇದೆ ಎಂದು ಜಿಲ್ಲಾಡಳಿತ ಅಂದಾಜಿಸಿದೆ. ಈ ಸಂದರ್ಭದಲ್ಲಿ ಮೆರವಣಿಗೆ ವೇಳೆ ಜನರನ್ನು ಉತ್ತೇಜಿಸುವ ಸಲುವಾಗಿ ಸಂಗೀತ, ಭಕ್ತಿಗೀತೆ, ಸಿನಿಮಾ ಹಾಡುಗಳ ಮುಖೇನ ಯುವ ಜನತೆಯನ್ನು ಉತ್ತೇಜಿಸುವ ಡಿಜೆಯನ್ನು ನಿಷೇಧಿಸಲಾಗಿದೆ. ಕಳೆದ ಬಾರಿ ಡಿಜೆಯ ಮಿತಿಮೀರಿದ ಕರ್ಕಶ, ಹೆಚ್ಚಿನ ಶಬ್ದಕ್ಕೆ ಅನೇಕರಿಗೆ ಶ್ರವಣ ದೋಷ ಕಾಣಿಸಿಕೊಂಡಿದೆ. ಚಿತ್ರದುರ್ಗದ ಕಿವಿ, ಮೂಗು ಗಂಟಲು ತಜ್ಞ ಡಾ.ಪ್ರಹ್ಲಾದ್ ಅವರ ಅಭಿಪ್ರಾಯದಂತೆ ಕಳೆದ ಬಾರಿಯ ಹಿಂದೂ ಮಹಾ ಗಣಪತಿ ವಿಸರ್ಜನೆ ಮೆರವಣಿಗೆ ವೇಳೆ ಡಿಜೆ ಸದ್ದಿಗೆ ಸುಮಾರು 15 ಜನ ತೊಂದರೆಗೆ ಒಳಗಾಗಿದ್ದಾರೆ. ಅದರಲ್ಲಿ ಬಹುತೇಕರಿಗೆ ಶಾಶ್ವತ ಶ್ರವಣ ದೋಷ ಕಾಣಿಸಿಕೊಂಡಿದೆ ಎಂದು ತಿಳಿಸಿದ್ದಾರೆ. ಜಿಲ್ಲೆಯಲ್ಲಿ ಡಿಜೆಯನ್ನು ನಿಷೇಧಿಸಿದಂತೆ ರಾಜ್ಯದ ಇತರ ಕಡೆಗಳಲ್ಲೂ ಸರಕಾರ ಹಾಗೂ ಸ್ಥಳೀಯ ಜಿಲ್ಲಾಡಳಿತಗಳು ಇನ್ನು ಮುಂದೆ ಕಿವಿಗೆ ದೋಷ, ಹಾನಿಕಾರಕ ಡಿಜೆಯನ್ನು ನಿಷೇಧಿಸುವ ಕೆಲಸವನ್ನು ಮಾಡಿದರೆ ಒಳ್ಳೆಯದು.

–ಶ್ರೀಧರ್ ಡಿ.ರಾಮಚಂದ್ರಪ್ಪ, ತುರುವನೂರು

ಒದುಗರ ಒಣಿಗೆ ಭೇಟಿ ಕೊಡಿ
ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಕರಾವಳಿಯ ಬೇಲೂರು- ಬೈಂದೂರಿನ ಸೇನೇಶ್ವರ ದೇಗುಲ!

ಗಂಟಾಘೋಷ
ಗುರುರಾಜ್ ಗಂಟಿಹೊಳೆ
vveditoped@gmail.com

ಕೊರೋನ ಕಾಲಘಟ್ಟವನ್ನು ದಾಟಿದ ಮೇಲೆ, ಪ್ರಪಂಚದಾದ್ಯಂತ ಪ್ರವಾಸೋದ್ಯಮ ಹೆಚ್ಚು ಗರಿಗೆದರಿತು. ತೀರ್ಥಯಾತ್ರೆ ಎಂಬುದು ನಮ್ಮ ಜನರ ಜೀವನದ ಒಂದು ಸಹಜ ಭಾಗವೇ ಆಗಿದೆ. ದೇಶದಲ್ಲಿ ಇದು ಇನ್ನೂ ಹೆಚ್ಚು ಬೆಳೆಯತೊಡಗಿದಾಗ, ದೇಶಾದ್ಯಂತ ಪ್ರವಾಸೋದ್ಯಮಕ್ಕೆ ಹಾಗೂ ಆಯಾ ಜಿಲ್ಲಾ ಹಾಗೂ ತಾಲ್ಲೂಕು ವ್ಯಾಪ್ತಿಯಲ್ಲಿ ಬರುವಂತಹ ಪ್ರೇಕ್ಷಣೀಯ, ಆಧ್ಯಾತ್ಮಿಕ, ಐತಿಹಾಸಿಕ ದೇಗುಲ ಕ್ಷೇತ್ರಗಳ ದರ್ಶನಕ್ಕೆಗೊಳ್ಳಲು ಅನುಕೂಲವಾಗುವ ದೃಷ್ಟಿಯಿಂದ ಧಾರ್ಮಿಕ ಪ್ರವಾಸೋದ್ಯಮ (Temple tourism) ಎಂಬ ಪರಿಕಲ್ಪನೆಯನ್ನು 2014ರಲ್ಲಿ ಕೇಂದ್ರ ಸರಕಾರ ಪರಿಚಯಿಸಿತು.

ಪ್ರಸಾದ್ (PRASAD-Pilgrimage Rejuvenation and Spiritual Augmentation Drive) ಮತ್ತು ಸ್ವದೇಶ ದರ್ಶನ (Swadesh Darshan) ಯೋಜನೆಗಳ ನೆರವಿನಿಂದ ದೇವಾಲಯ ಪ್ರವಾಸೋದ್ಯಮ ಯೋಜನೆಗಳ ಮೂಲಕ ಪಕ್ಕದ ಆಂಧ್ರಪ್ರದೇಶ ರಾಜ್ಯವು ತನ್ನ ಪ್ರಮುಖ ತೀರ್ಥಕ್ಷೇತ್ರಗಳು ಮತ್ತು ಹೆರಿಟೇಜ್ ಕ್ಷೇತ್ರಗಳಲ್ಲಿ ಮೂಲ ಸೌಕರ್ಯ, ಸಂಪರ್ಕಮಾರ್ಗ ಹಾಗೂ ಯಾತ್ರಿಕರ ನಿವಾಸಸ್ಥಾನಗಳನ್ನು ಸಮರ್ಪಕವಾಗಿ ಒದಗಿಸುವ ಮೂಲಕ ಈ ಯೋಜನೆಯನ್ನು ಅತ್ಯಂತಯಶಸ್ವಿಯಾಗಿಸದುಪಯೋಗಪಡಿಸಿಕೊಳ್ಳುತ್ತಿದೆ. ಉಳಿದ ರಾಜ್ಯಗಳು ಇದರಲ್ಲಿ ಹೆಚ್ಚು ಆಸಕ್ತಿ ತೋರುತ್ತಿವೆ.

ಕಬ್ಬಿಣದ ಬೃಹತ್ ಐಫೆಲ್ ಟವರ್ ಒಂದನ್ನು ಇಟ್ಟುಕೊಂಡು, ವಿಶ್ವಪ್ರವಾಸೋದ್ಯಮದಲ್ಲಿ ತನ್ನ ಅಗ್ರಸ್ಥಾನ ಕಾಯ್ದುಕೊಂಡಿರುವ ಫ್ರಾನ್ಸ್ ದೇಶವನ್ನು ಗಮನಿಸಿದಾಗ, ನಾವು ನಮ್ಮ ಸುತ್ತಮುತ್ತಲಿರುವ ನಮ್ಮದೇ ಪೂರ್ವಜರ ಐತಿಹಾಸಿಕ ದಾಖಲೆಗಳಂತೆ ತಲೆಯೆತ್ತಿ ನಿಂತಿರುವ ದೇವಾಲಯ, ಶಿಲ್ಪಕಲಾ ಪರಂಪರೆಯನ್ನು ಗುರುತಿಸಿ ಗೌರವಿಸುವುದನ್ನು ಮತ್ತು ಅದನ್ನು ಪ್ರವಾಸೋದ್ಯಮದ ಪ್ರಮುಖ ಭಾಗವಾಗಿ ಜೋಡಿಸಿಕೊಳ್ಳುವುದನ್ನು ಮರೆಯುತ್ತಿದ್ದೇವೆ.

ಕೇಂದ್ರ ಸರಕಾರದದ ಯೋಜನೆಗಳು ಜನಪರವಾಗಿದ್ದರೂ ಸ್ಥಳೀಯ ವ್ಯವಸ್ಥೆಯು ಅವುಗಳನ್ನು ಸಮರ್ಪಕವಾಗಿ ಬಳಸಿಕೊಳ್ಳದಿದ್ದರೆ ಸ್ಮಾರಕಗಳು ಉಳಿಯುವ ಬಗೆಯಾದರೂ ಹೇಗೆ? ಎಂಬುದನ್ನು ನಾವೆಲ್ಲ ಪ್ರಶ್ನಿಸಿಕೊಳ್ಳಬೇಕಾಗಿದೆ. ಇಂತಹ ವಿಚಾರದಲ್ಲಿ ನಮ್ಮ ಕರಾವಳಿ ಭಾಗವು ಇಡೀ ರಾಜ್ಯದಲ್ಲೇ ವಿಭಿನ್ನ ಮತ್ತು ವಿಶಿಷ್ಟವಾಗಿ ನಿಲ್ಲುತ್ತದೆ. ಸಮರ್ಪಕ ರಾಷ್ಟ್ರೀಯ ಹೆದ್ದಾರಿಗಳು ಇಲ್ಲಿನ ಎಲ್ಲ ಪ್ರಮುಖ ದೇಗುಲ, ಪ್ರೇಕ್ಷಣೀಯ ಸ್ಥಳಗಳನ್ನು ಜೋಡಿಸುತ್ತವೆ. ವಿಮಾನಯಾನ, ರಸ್ತೆಸಾರಿಗೆ, ರೈಲುನಿಲ್ದಾಣಗಳಂತಹ ಸೌಕರ್ಯಗಳ ಮೂಲಕ ಕರ್ನಾಟಕದ ಕರಾವಳಿ ಪ್ರದೇಶವು ರಾಷ್ಟ್ರಮಟ್ಟದ ಧಾರ್ಮಿಕ ಪ್ರವಾಸೋದ್ಯಮದಲ್ಲಿ ತನ್ನದೇ ಆದ ಸ್ಥಾನವನ್ನು ಪಡೆಯುವಷ್ಟು ಸಾಮರ್ಥ್ಯ ಹೊಂದಿದೆ.

ಕೊಲ್ಲೂರು ಮೂಕಾಂಬಿಕಾ ದೇವಾಲಯ ದೇಶದ ಹಲವೆಡೆಗಳಿಂದ ಭಕ್ತರನ್ನು ಸೆಳೆಯುವ ಮೂಲಕ ರಾಜ್ಯ, ಅಂತರಾಜ್ಯ ಶಕ್ತಿಕ್ಷೇತ್ರವಾಗಿ ಗುರುತಿಸಿಕೊಂಡಿದ್ದರೆ, ಬೈಂದೂರಿನ ಇತಿಹಾಸ ಪ್ರಸಿದ್ಧ ಸೋಮೇಶ್ವರ ದೇವಸ್ಥಾನ ಪ್ರವಾಸಿಗರನ್ನು ಕೈಬೀಸಿ ಕರೆಯುತ್ತಿದೆ. ಇಂತಹ ಒಂದು ಐತಿಹಾಸಿಕ, ನಾಡಿನ ದೇವಾಲಯಗಳ ಶಿಲ್ಪಕಲೆಯಲ್ಲೇ ವಿಶಿಷ್ಟ ಸ್ಥಾನ ಹೊಂದಿರುವ ಬೈಂದೂರಿನ ಮತ್ತೊಂದು ಐತಿಹಾಸಿಕ ಸೇನೇಶ್ವರ ದೇವಸ್ಥಾನ ಈ ಸಾಲಿಗೆ ಸೇರುತ್ತದೆ. ಬೆರಗಿನ ಶಿಲ್ಪಕಲೆಯ ವಿನ್ಯಾಸ ಹೊಂದಿರುವ ಈ ದೇಗುಲವು ಧಾರ್ಮಿಕ ಪ್ರವಾಸೋದ್ಯಮಕ್ಕೆ (Temple tourism) ಹೇಳಿ ಮಾಡಿಸಿದ ದೇವಾಲಯಗಳಲ್ಲಿ ಇದೂ ಒಂದಾಗಿದೆ ಎಂದರೆ ಅತಿಶಯೋಕ್ತಿಯಾಗಲಾರದು!

ಕರ್ನಾಟಕದೊಳಗೆ ಕರಾವಳಿ ತೀರ ಎಂದರೆ ಕಿನಾರಾ ಜಿಲ್ಲೆ (ಕೆನರಾ)ಗಳಾದ ಉತ್ತರಕನ್ನಡ, ಅವಿಭಜಿತ ದಕ್ಷಿಣ ಕನ್ನಡಗಳನ್ನೊಳಗೊಂಡ ಪ್ರದೇಶದಲ್ಲಿ ಈ ಬೈಂದೂರು ಸೀಮೆಯು ಸರ್ವತೋಮುಖ ವಿಕಾಸದ ಅಗತ್ಯ ಮತ್ತು ಸಾಧ್ಯತೆಯನ್ನು ಹೊಂದಿರುವ ಬಗ್ಗೆ ಈಗ ಜಾಗೃತಿ ಮೂಡಿದೆ. ಈ ಸೀಮೆಯ ಮುಖ್ಯ ಸ್ಥಳ ಬೈಂದೂರು, ಯಡ್ತರೆ ಗ್ರಾಮದ ವ್ಯಾಪ್ತಿಯಲ್ಲಿದ್ದು ಈಗ ತಾಲೂಕಿನ ಆಡಳಿತ ಕೇಂದ್ರವಾಗಿದೆ. ಒಂದೇ ಗ್ರಾಮದಲ್ಲಿ 40–50 ದೇವ–ದೈವ ಸ್ಥಾನಗಳಿರುವ ಗರಿಮೆ ಈ ಕ್ಷೇತ್ರದ್ದು. ಬೈಂದೂರು ಪೇಟೆಯಲ್ಲೇ ನಾಲ್ಕೈದು ಮಹಿಮಾನ್ವಿತ ದೇವಾಲಯಗಳಿವೆ. ಅವುಗಳಲ್ಲಿ ಕಿರೀಟ ಪ್ರಾಯವಾದುದು ಊರಿನ ಹೃದಯಸ್ಥಾನ ಎನಿಸಿದ ಸೇನೇಶ್ವರ ದೇವಸ್ಥಾನ.

ಬಿಂದು ಮುನಿಯ ಕ್ಷೇತ್ರವಾಗಿ ಬಿಂದುಪುರ ಎಂದು ಹೆಸರು ಇತ್ತು. ಜನಭಾಷೆಯಲ್ಲಿ ಬೈಂದೂರು ಆಯಿತಂತೆ. ಶಾಸನ ಮತ್ತು ಇತರ ಬರಹಗಳಲ್ಲಿ ಬೈದೂರು, ಬಯಿದೂರು, ಬಯ್ದೂರು ಎಂದಾಗಿರುವುದೂ ಇದೆ. ಕರ್ನಾಟಕದ ವಾಸ್ತುಶಿಲ್ಪವು ಭಾರತೀಯ ವಾಸ್ತುಶಿಲ್ಪದಲ್ಲಿ ಅತ್ಯಂತ ಮಹತ್ವಪೂರ್ಣ ಪಾತ್ರವಹಿಸಿದ್ದು, ತನ್ನ ವೈವಿಧ್ಯಮಯ ಶೈಲಿಗಳು ಮತ್ತು ಭವ್ಯ ದೇವಾಲಯಗಳ ಮೂಲಕ ಶಿಲ್ಪಕಲೆಯ ಪರಂಪರೆಯನ್ನು ಇವತ್ತಿಗೂ ಕಲಾ ಶ್ರೀಮಂತಿಕೆಯಲ್ಲಿ ಜೀವಂತವಾಗಿರಿಸಿದೆ. ಶಿಲ್ಪಕಲಾ ಪ್ರಕಾರಗಳು ಕರ್ನಾಟಕದ ವಿವಿಧ ಕಾಲಘಟ್ಟಗಳ ರಾಜವಂಶಗಳ ಬಲ ಮತ್ತು ಸಾಂಸ್ಕೃತಿಕ ಹಿನ್ನಲೆಯಲ್ಲಿ ರೂಪುಗೊಂಡಿವೆ. ಪ್ರತಿ ಶೈಲಿಗೂ ವಿಭಿನ್ನ ವಿನ್ಯಾಸ, ಶಿಲ್ಪ, ಗೋಪುರ ಅಥವಾ ಶಿಲ್ಪಕಲಾ ವೈಶಿಷ್ಟ್ಯವಿದೆ. ಕದಂಬ ಶೈಲಿ, ಚಾಲುಕ್ಯ ಶೈಲಿ, ರಾಷ್ಟ್ರಕೂಟ ಶೈಲಿ, ಹೊಯ್ಸಳ ಶೈಲಿ, ಚೋಳ ಶೈಲಿಗಳು ಕರ್ನಾಟಕದ ಪ್ರಮುಖ ಶಿಲ್ಪಕಲಾ ಪ್ರಕಾರಗಳಾಗಿವೆ.

ಕರ್ನಾಟಕ ರಾಜ್ಯದಲ್ಲೇ ಅಪರೂಪವೆಂಬಂತೆ ಕಂಡುಬರುವ ಶಿಲ್ಪಕಲಾ ಶೈಲಿಯಲ್ಲಿ ಐತಿಹಾಸಿಕ ದೇಗುಲಗಳನ್ನು ನಿರ್ಮಿಸಲ್ಪಟ್ಟದ್ದು ಕರಾವಳಿ ಪ್ರದೇಶದಲ್ಲಿ ಮಾತ್ರ. ಸ್ಥಳೀಯ ಪರಂಪರೆ, ಭೌಗೋಳಿಕ ವೈಶಿಷ್ಟ್ಯಗಳಿಂದ ಕೂಡಿರುವ ಕರಾವಳಿ ಪ್ರದೇಶದ ವಾತಾವರಣವೂ ಇತರೆ ಪ್ರದೇಶಗಳಿಗಿಂತ ಭಿನ್ನವಾಗಿರುವುದರಿಂದ, ಕಟ್ಟಡ ನಿರ್ಮಾಣ ಮಾಡುವಾಗ ವಿಶೇಷ ಕಾಳಜಿ, ಪದ್ಧತಿಯನ್ನು ಅನುಸರಿಸಲಾಗುತ್ತದೆ.

ಕರಾವಳಿ ಪ್ರದೇಶದ ದೇವಾಲಯಗಳು ಸಾಮಾನ್ಯವಾಗಿ 8ನೇ ಶತಮಾನದಿಂದ 16ನೇ ಶತಮಾನಗಳವರೆಗೆ ನಿರ್ಮಾಣ ವಿಧಾನ ಹಾಗೂ ವಾಸ್ತುಶಿಲ್ಪ ಶಾಸ್ತ್ರೀಯ ಅಂಶಗಳನ್ನು ಹೊಂದಿವೆ. ಇಲ್ಲಿನ ದೇವಾಲಯಗಳ ಸ್ಥಾಪನೆಯು ಪ್ರಾಚೀನದಿಂದ ವಿಜಯನಗರ ಹಾಗೂ ನಂತರದ ಕಾಲಘಟ್ಟದವರೆಗೆ ವ್ಯಾಪಿಸಿರುವುದು ಕಂಡುಬರುತ್ತದೆ.

ಕುಂಬಾಶಿ, ಕೋಟೇಶ್ವರ ದೇವಾಲಯಗಳು ಸೇರಿದಂತೆ ಹಳೆಯ ದೇವಾಲಯಗಳು 8–10ನೇ ಶತಮಾನಗಳಲ್ಲಿ ನಿರ್ಮಾಣಗೊಂಡಿವೆ. ಕೆಲವು ದೇವಾಲಯಗಳು 12ನೇ ಶತಮಾನ ಮತ್ತು ಮುಂದೆ ಪಾಳೆಯಗಾರರ ಕಾಲದಲ್ಲಿ ಅಭಿವೃದ್ಧಿಗೊಂಡವು ಎಂದು ಇತಿಹಾಸಕಾರರು ಊಹಿಸಿದ್ದಾರೆ.

ವೈವಿಧ್ಯಮಯ ನಾಮಾಂಕಿತ, ವಿಶಿಷ್ಟ ವಿಗ್ರಹಗಳ ರಚನೆಯನ್ನು ಹೊಂದಿರುವ ಮೂಲಕ, ಪರಶುರಾಮ ಕ್ಷೇತ್ರದ ಶಿಲ್ಪಕಲಾ ಕೌಶಲದ ಒಂದು ಉತ್ಕೃಷ್ಟ ಮಾದರಿಯಾಗಿ ನಿಂತಿದೆ ಸೇನೇಶ್ವರ ದೇವಾಸ್ಥಾನ. ಚಾರಿತ್ರಿಕವಾಗಿ ಕ್ರಿ. ಶ.10–11ನೇ ಶತಮಾನದ ಕಲ್ಯಾಣ ಚಾಲುಕ್ಯ ಶೈಲಿಯ ಶಿಲ್ಪವೆಂದು ಗುರುತಿಸಲಾಗಿರುವ ಮಂದಿರದ ನಿರ್ಮಾಣ ಕಾಲ ಮಾತ್ರವಲ್ಲದೆ, ಕುಸುರಿ ಶಿಲ್ಪದ ದೃಷ್ಟಿಯಿಂದಲೂ ಕರಾವಳಿ ಕರ್ನಾಟಕದಲ್ಲೇ ಮೊದಲ ಸ್ಥಾನದ್ದು ಎಂದು ಶಿಲ್ಪಕಲಾ ಇತಿಹಾಸಜ್ಞರು ಗುರುತಿಸಿದ್ದಾರೆ. ಪಕ್ಕದ ಗೋವಾದಿಂದ ಕೇರಳದ ತಿರುವನಂತಪುರದವರೆಗೆ

ಸಾವಿರಾರು ದೇಗುಲಗಳಿದ್ದರೂ ರಚನಾ ಶೈಲಿ ಹೊಂದಿರುವ ಮತ್ತು ಸೇನೇಶ್ವರ ದೇವಸ್ಥಾನಕ್ಕೆ ಸಮನಾದ ಬೇರೊಂದು ದೇಗುಲಗಳಿಲ್ಲ ಎನ್ನುವುದು ಬೈಂದೂರು ಕ್ಷೇತ್ರಕ್ಕೆ ಮತ್ತು ಸ್ಥಳೀಯವಾಗಿ ನಮ್ಮೆಲ್ಲರಿಗೆ ಹೆಮ್ಮೆಯ ವಿಚಾರವಾಗಿದೆ.

ವಿಶ್ವಪ್ರಖ್ಯಾತ ಹೊಯ್ಸಳ ಶೈಲಿಯ ಬೇಲೂರು–ಹಳೇಬೀಡಿನ ಶಿಲ್ಪಕಲೆಯನ್ನೇ ಸೇನೇಶ್ವರ ದೇವಾಲಯ ಹೋಲುವುದರಿಂದ ಇದನ್ನು ಡಾ. ಗುರುರಾಜ ಭಟ್ಟರಂತಹ ಹಿರಿಯ ವಿದ್ವಾಂಸರು ಪಶ್ಚಿಮ ಕರಾವಳಿಯ 'ದಕ್ಷಿಣ ಕನ್ನಡದ ಬೇಲೂರು' ಎಂದು ಬಣ್ಣಿಸಿದ್ದಾರೆ. ಹನ್ನೊಂದನೇ ಶತಮಾನದಲ್ಲಿ ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಸೇನಾರಸ ಎಂಬ ಸಾಮಂತರೊಬ್ಬರು ನಿರ್ಮಿಸಿದ ಐತಿಹಾಸಿಕ ದೇವಸ್ಥಾನವೆಂದು ಪರಿಗಣಿಸಲಾಗಿದೆ. ಅವರ ಹೆಸರಿನ ದ್ಯೋತಕವಾಗಿ ಈ ದೇವಸ್ಥಾನಕ್ಕೆ ಸೇನೆಶ್ವರ ಎಂಬ ಹೆಸರು ಬಂದಿದ್ದು ಎಂದು ಇತಿಹಾಸದ ಆಧಾರ ಕಂಡುಬರುತ್ತದೆ.

ದೇವಸ್ಥಾನವು ಶ್ರದ್ಧಾಭಕ್ತಿಗಳ ಕೇಂದ್ರವಾಗಿದ್ದು, ಇಂದಿಗೂ ಪ್ರತಿ ಸೋಮವಾರ ವಿಶೇಷ ಪೂಜೆ ನಡೆಯುತ್ತದೆ. ಕಲೆ, ಸಂಸ್ಕೃತಿ, ಶಾಸ್ತ್ರಗಳನ್ನು ಮೇಳೈಸಿದ ಪೂಜಾ ಸೇವೆಗಳು ವಿಶೇಷ ಸಂದರ್ಭದಲ್ಲಿ ನಡೆಯುತ್ತವೆ. ಊರಿನ 'ಗ್ರಾಮ ದೇವರು' ಎಂದು ಪರಿಗಣಿತವಾಗಿರುವ ಸೇನೇಶ್ವರ ದೇವಸ್ಥಾನದಿಂದ ಪ್ರತಿಯೊಂದು ಕಾರ್ಯಕ್ರಮಗಳನ್ನು ಆರಂಭಿಸುವ ಪದ್ಧತಿಯಿದ್ದು ನಮಗೆಲ್ಲ ಶುಭ ತರುವುದಾಗಿದೆ ಎನ್ನುತ್ತಾರೆ ಸ್ಥಳೀಯರು.

ದೇವಾಲಯವು ಶಿವನ ಕಾರ್ಯವಾಸ್ತುಶಿಲ್ಪದ ಪರಿಕಲ್ಪನೆಯಷ್ಟೇ ಅಲ್ಲದೆ, ಚಾಲುಕ್ಯರ ವಾಸ್ತುಶಿಲ್ಪ ಶೈಲಿಯ ಆಕರ್ಷಕ ನಿರ್ಮಿತಿಯನ್ನು ಹೊತ್ತುಕೊಂಡು ನಿಂತಿದೆ ಎನ್ನಬಹುದು. ಗರ್ಭಗುಡಿ, ಸುಕನಾಸಿ, ಬಸವ ಮಂಟಪಗಳನ್ನು ಸಂಪೂರ್ಣ ಶಿಲೆಯಿಂದ ನಿರ್ಮಿಸಿದ್ದು, ಮೇಲ್ಭಾಗದಲ್ಲಿ ಅಷ್ಟದಿಕ್ಪಾಲಕರ ಮೂರ್ತಿಗಳನ್ನು ಶಾಸ್ತ್ರಬದ್ಧವಾಗಿ ಕೆತ್ತಿದ್ದಾರೆ. ನಂದಿಮಂಟಪ ಹಾಗೂ ಮೂರ್ತಿಗಳು ಕಲಾತ್ಮಕವಾಗಿ ಮನಮೋಹಕವಾಗಿವೆ. ಹೊರಗೋಡೆಗಳಲ್ಲಿ 'V' ಆಕಾರದ ಶಿಲ್ಪಕಲಾ ಕೆತ್ತನೆಗಳು ಜೊತೆಗೆ ಮಕರ ತೋರಣಗಳು ದೇಗುಲ ವಿನ್ಯಾಸದ ವಿಶೇಷತೆಯಾಗಿ ಗಮನಸೆಳೆಯುತ್ತವೆ.

ದೇವಕೋಷ್ಠದಲ್ಲಿರುವ ಚತುರ್ಮುಖ ಬ್ರಹ್ಮ, ಕಾಳಭೈರವ, ಚಾಮುಂಡೇಶ್ವರಿ ಹಾಗೂ ಇನ್ನೆರಡು ದೇವತೆಗಳಾದ ಗುರು ನರಸಿಂಹ, ವೀರಭದ್ರ ವಿಶೇಷ ಆಕರ್ಷಣೆಯಾಗಿವೆ. ದೇವಾಲಯದ ಹೊರಸುತ್ತಿನ ಉತ್ತರಭಾಗದ ದೇವಕೋಷ್ಠ(ಗೂಡು)ದಲ್ಲಿರುವ ಚಂಡೇಶ್ವರಿ ಅಥವಾ ಚಾಮುಂಡೇಶ್ವರಿ ಮೂರ್ತಿಯಿದೆ. ಈಕೆ ಕಲ್ಯಾಣಿ ಚಾಲುಕ್ಯರ ಮಾತೃದೇವತೆಯಾಗಿದ್ದು, ಚೋಳರ ದಾಳಿಯ ಸಮಯದಲ್ಲಿ ಈ ದೇವಾಲಯ ನಿರ್ಮಾಣಗೊಂಡಿದ್ದರಿಂದ, ಶತ್ರುಗಳ ಲಯಕರ್ತೆಯಾಗಿ ರೌದ್ರರೂಪದಲ್ಲಿ ನಿರ್ಮಿಸಿದ್ದಾರೆ ಎಂಬುದು ಇತಿಹಾಸ ಪ್ರಾಧ್ಯಾಪಕ ವೈ.ಉಮನಾಥ ಶೆಣೈ ಅವರ ಅಭಿಪ್ರಾಯ.

ಚಂಡೇಶ್ವರಿ ಮೂರ್ತಿ ವಾಸ್ತವದಲ್ಲಿ ಚಾಮುಂಡೇಶ್ವರಿ ದೇವಿಯೇ ಆಗಿದ್ದಾಳೆನ್ನಬಹುದು. ವಿಸ್ಮಯ ಮುದ್ರೆಯಲ್ಲಿ ನಿಂತಿರುವ ಭಂಗಿ, ಬಲ–ಎಡಬಾಗದಲ್ಲಿ ಎಂಟು ಕೈಗಳಿವೆ. ಬಲಭಾಗದ ಮೊದಲ ಕೈಯಲ್ಲಿ ಕೊಂಬು ಹಿಡಿದಿದ್ದಾಳೆ. ಎಡಗೈಯಲ್ಲಿ ಕಟ್ವಾಂಗ ಹಿಡಿದಿದ್ದಾಳೆ. ರುಂಡಮಾಲೆ, ತೋಳಬಂಧಿಯೂ ರುಂಡದಲ್ಲಿ ಮಾಡಿರುವ ಕೆತ್ತನೆಯಿಂದ ಕೂಡಿದ್ದು, ಈ ಮೂರ್ತಿಯನ್ನು ಭೈರವೀದೇವಿ ಎಂದು ಕರೆಯಬಹುದು. ಮೂರ್ತಿಯ ಕೆಳಭಾಗದಲ್ಲಿ ಬೇತಾಳಗಳಿವೆ. ಬೇತಾಳಗಳು ಕೊಂಬು, ತಂತಿವಾದ್ಯ, ತಾಳ, ಮೃದಂಗ ವಾದ್ಯ ಬಾರಿಸುತ್ತಿದ್ದಾರೆ. ಮುಖ್ಯವಾಗಿ, ದೇವಿಯ ಹೊಟ್ಟೆಯ ಮೇಲೆ ಚೇಳು, ಎರಡು ಸ್ತನಗಳನ್ನು ಸುತ್ತಿಕೊಂಡಿರುವ ಮೂಲಕ ನಾಗಬಂಧವಿದೆ ಎಂಬ ಅಭಿಪ್ರಾಯವನ್ನು ಪುರಾತತ್ವ ವಿದ್ವಾಂಸ ಮುರಗೇಶಿ ಅಭಿಪ್ರಾಯ ಪಡುತ್ತಾರೆ.

ದೇವಾಲಯದ ಉತ್ತರಭಾಗದಲ್ಲಿ ಸೂಕ್ಷ್ಮ ಕುಸುರಿ ಕೆತ್ತನೆಯುಳ್ಳ ಕಾಲಭೈರವನ ಶಿಲ್ಪವಿದೆ. ಬೆನ್ನಿಗೆ ಚತುರ್ಮುಖ ಬ್ರಹ್ಮ ಪದ್ಮಾಸನದಲ್ಲಿ ಕುಳಿತಿರುವ ಶಿಲ್ಪಕೆತ್ತನೆ ಅತ್ಯಾಕರ್ಷಕವಾಗಿದೆ. ಕೈಗಳ, ಕಾಲಿನ ಬೆರಳುಗಳ ಉಗುರು ಕೆತ್ತನೆಯಂತಹ ಸೂಕ್ಷ್ಮಗಳೂ ಇಲ್ಲಿ ಸಾಕಾರಗೊಂಡಿವೆ. ಬೈಂದೂರು ಸೇನೇಶ್ವರ ದೇವಸ್ಥಾನದ ಶಿಲಾಶಾಸನ ಸಾಕ್ಷ್ಯಗಳು ಪ್ರಮುಖ ಐತಿಹಾಸಿಕ ದಾಖಲೆಗಳಾಗಿ ಪರಿಗಣಿಸಲ್ಪಡುತ್ತವೆ. ಈ ಶಾಸನಗಳು ದೇವಾಲಯದ ನಿರ್ಮಾಣ, ದಾನ, ನಿರ್ವಹಣೆ ಮತ್ತು ದೇವಾಲಯಕ್ಕೆ ಸೇರಿದ ಭೂಮಿಗಳ ವಿವರಗಳನ್ನು ನೀಡುತ್ತವೆ. ಶಾಸನಗಳಲ್ಲಿ 11ನೇ ಶತಮಾನದಲ್ಲಿಯೇ ಈ ದೇವಸ್ಥಾನದ ಸ್ಥಾಪನೆ ಕುರಿತು ಉಲ್ಲೇಖವಾಗಿದೆ ಮತ್ತು ದೇವಾಲಯದ ಶಿಲ್ಪಕಲಾ, ವಾಸ್ತುಶಿಲ್ಪ ಮತ್ತು ಆರಾಧನೆ ಪದ್ಧತಿಗಳ ಕುರಿತು ವಿವರಿಸಲಾಗಿದೆ.

ಪ್ರಾಚ್ಯವಸ್ತು ಇಲಾಖೆಯ ಅಡಿಯಲ್ಲಿ ಅಧಿಕೃತವಾಗಿ, 27ನೇ ಸಂಪುಟದಲ್ಲಿ ಬೈಂದೂರಿಗೆ ಸಂಬಂಧಪಟ್ಟ 13 ಶಾಸನಗಳು ಇದುವರೆಗೆ ಪ್ರಕಟವಾಗಿವೆ. ಆಳೂಪ ಚಕ್ರವರ್ತಿ ವೀರಪಾಂಡ್ಯದೇವ ಶಾಸನದಲ್ಲಿ ಬಂಕೇಶ್ವರ ದೇಗುಲಕ್ಕೆ ದತ್ತಿ ಕೊಟ್ಟ ಮಾಹಿತಿಯಿದೆ. ವಿಜಯನಗರದ 3 ಶಾಸನಗಳು ದೊರೆತಿದ್ದು, ಒಂದು ಜೈನ ಬಸದಿಗೆ ದತ್ತಿಕೊಟ್ಟಿರುವ ಹಾಗೂ ಸೇನೇಶ್ವರ ಅಮೃತಪುರಿಗೆ ದಾನಕೊಟ್ಟ ಉಲ್ಲೇಖವಿದ್ದು, ಸೇನೇಶ್ವರ ದೇಗುಲಕ್ಕೆ ವಿಸ್ತಾರವಾದ ತೆಂಗಿನತೋಟವನ್ನು ದಾನಕೊಟ್ಟ ಮಾಹಿತಿ ಇದರಲ್ಲಿದೆ. ಎರಡು ಸದಾಶಿವ ಶಾಸನಗಳು ಮತ್ತು ಭಂಟ (ನಾಡವರು) ಅವರು ಕೊಟ್ಟ ಎರಡು ದಾನ ಶಾಸನಗಳಿವೆ.

ಈ ಶಾಸನಗಳು ಕಲ್ಲಿನ ಮೇಲೆ ನಿಖರವಾಗಿ ಕೆತ್ತಲ್ಪಟ್ಟಿದ್ದು, ಅವುಗಳಲ್ಲಿ ದೇವತೆಗಳ ಹೆಸರು, ದೇವಸ್ಥಾನದ ಸ್ಥಾಪಕರು ಹಾಗೂ ಅದಕ್ಕೆ ಸಂಬಂಧಿಸಿದ ರಾಜಕೀಯ ಮತ್ತು ಧಾರ್ಮಿಕ ವ್ಯಕ್ತಿಗಳ ಪೈಕಿ ಸೇನಾರಸರು ಹಾಗೂ ಇನ್ನಿತರೆ ಸಾಮಂತರರನ್ನು ಉಲ್ಲೇಖಿಸಲಾಗಿದೆ. ಈ ಶಾಸನಗಳ ಅಧ್ಯಯನದಿಂದ ದೇವಾಲಯದ ಇತಿಹಾಸ, ಧಾರ್ಮಿಕ ಮಹತ್ವ ಮತ್ತು ಸ್ಥಳೀಯ ಸಾಮಂತರ ವಂಶಗಳ ಸಂಬಂಧದ ಅಪ್ರತ್ಯಕ್ಷ ಮಾಹಿತಿ ದೊರಕುತ್ತದೆ.

ಕರಾವಳಿ ದೇವಾಲಯಗಳ ಪ್ರಮುಖ ಅಂಶಗಳು ವಿವಿಧ ವಾಸ್ತುಶೈಲಿ, ಧಾರ್ಮಿಕ ಪದ್ಧತಿ ಮತ್ತು ಸ್ಥಳೀಯ ಸಂಸ್ಕೃತಿಯ ವೈಜ್ಞಾನಿಕ ಮಿಶ್ರಣವೂ ಹೌದು. ಈ ದೇವಾಲಯಗಳು ಕರಾವಳಿ ಪ್ರದೇಶದ ಪೌರಾಣಿಕ, ಸಂಸ್ಕೃತಿಕ ಹಾಗೂ ಆಧ್ಯಾತ್ಮಿಕ ಪರಂಪರೆಯನ್ನು ಪ್ರತಿಬಿಂಬಿಸುತ್ತವೆ. ಗರ್ಭಗುಡಿ, ಮಂಟಪ, ನವರಂಗ ಹಾಗೂ ಬೆಳಕು–ಹವಾ ಹೊಂದುವ ವಿಶಿಷ್ಟ ವಿನ್ಯಾಸಗಳ ಜೊತೆಯಲ್ಲಿ ಉನ್ನತ ಗೋಪುರ, ಶಿಖರಗಳ ವಿನ್ಯಾಸ ಮತ್ತು ವಾಸ್ತುಶಿಲ್ಪದಲ್ಲಿ ಸಮ್ಮಿಳಿತಗೊಂಡಿರುತ್ತವೆ.

ಇಂತಹ ಹಲವು ವಿಶಿಷ್ಟತೆಗಳನ್ನು ಮೇಳೈಸಿಕೊಂಡು ಬೆರಗು ಹುಟ್ಟಿಸುವ ಕರಾವಳಿಯ ಸಮುದ್ರ ಕಿನಾರೆಯ ಜೊತೆಗೆ, ಐತಿಹಾಸಿಕ ಮತ್ತು ಪುರಾತನ ದೇವಾಲಯಗಳು, ಶಕ್ತಿಕೇಂದ್ರಗಳು ನಾಡಿನ, ದೇಶ–ವಿದೇಶಗಳ ಪ್ರವಾಸಿಗರನ್ನು ಕೈಬೀಸಿ ಕರೆಯುತ್ತಿವೆ. ಇಡೀ ರಾಜ್ಯದಲ್ಲಿಯೇ ಕರಾವಳಿ ವಿಭಾಗವು ದೇಗುಲ ಮತ್ತು ಆಧ್ಯಾತ್ಮಿಕ ಪ್ರವಾಸೋದ್ಯಮಕ್ಕೆ ಕೇಂದ್ರ ಬಿಂದುವಾಗಿ ದೇಶಾದ್ಯಂತ ಗಮನಸೆಳೆಯಬಲ್ಲದು.

ನಮ್ಮಲ್ಲಿ ನಿಸರ್ಗ ರಮಣೀಯತೆ, ದೇವಾಲಯಗಳ ವಿಶಿಷ್ಟತೆ ಸೇರಿದಂತೆ ಪ್ರವಾಸೋದ್ಯಮಕ್ಕೆ ಬೇಕಾದ ಎಲ್ಲವೂ ಇದೆ. ಇಂತಹ ಹತ್ತಾರು ವಿಶೇಷತೆಗಳನ್ನು ಗುರುತಿಸಿ, ಉಳಿಸಿ ಬೆಳೆಸುವಲ್ಲಿ ಸರಿಯಾದ ಉಪಕ್ರಮಗಳನ್ನು ಕೈಗೊಳ್ಳದಿದ್ದರೆ, ಇರುವ ನೂರಾರು ವ್ಯವಸ್ಥೆಗಳು ಬೆಳೆಯುವುದಿರಲಿ, ಉಳಿಯುವುದೇ ಅನುಮಾನ ಎಂಬಂತಹ ಪರಿಸ್ಥಿತಿಗೆ ಬರುವಂತಾಗಬಾರದು.

ಅಚ್ಚುಕಟ್ಟು ಪ್ರದೇಶ
RNI : KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue:240

ಸಮಾಚಾರ ಸಣ್ಣದಲ್ಲ

ಪ್ರಗ್ಯಾ ಖುಲಾಸೆ ಪ್ರಶ್ನಿಸಿ ಹೈ ಗೆ ಮೇಲ್ಮನವಿ

ಮುಂಬೈ: ಮಹಾರಾಷ್ಟ್ರದ ಮಾಲೆಗಾವ್‌ನಲ್ಲಿ 2008ರಂದು ನಡೆದಿದ್ದ ಸ್ಫೋಟ ಪ್ರಕರಣದಲ್ಲಿ ಪ್ರಮುಖ ಆರೋಪಿಗಳಾಗಿದ್ದ ಸಾಧ್ವಿ ಪ್ರಗ್ಯಾ ಸಿಂಗ್ ಠಾಕೂರ್(ಬಿಜೆಪಿ ಮಾಜಿ ಸಂಸದೆ) ಮತ್ತು ಲೆ. ಕರ್ನಲ್ ಪ್ರಸಾದ್ ಪುರೋಹಿತ್ ಸೇರಿದಂತೆ ಪ್ರಕರಣದ ಎಲ್ಲಾ ಆರೋಪಿಗಳನ್ನು ವಿಶೇಷ 'ಎನ್‌ಐಎ' ನ್ಯಾಯಾ ಲಯ ಜು.31 ರಂದು ಖುಲಾಸೆಗೊಳಿಸಿರುವುದನ್ನು ಪ್ರಶ್ನಿಸಿ ಸಂತ್ರಸ್ತ ಕುಟುಂಬಗಳು ಬಾಂಬೆ ಹೈಕೋರ್ಟ್ ಮೊರೆ ಹೋಗಿವೆ. ಮಾಲೆಗಾವ್ ಮಸೀದಿಯ ಬಳಿ ಮೋಟಾರ್ ಬೈಕ್‌ನಲ್ಲಿ ಇರಿಸಲಾಗಿದ್ದ ಬಾಂಬ್ 2008ರ ಸೆ.29ರಂದು ಸ್ಫೋಟಿಸಿದ್ದರಿಂದ ಆರು ಮಂದಿ ಸಾವಿಗೀಡಾಗಿದ್ದರು. ಈಗ ಆರೂ ಜನರ ಕುಟುಂಬದವರು ವಕೀಲರಾದ ಮತೀಶ್ ಶೇಖ್ ಅವರ ಮೂಲಕ ಹೈಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿದ್ದಾರೆ. ನಿಸಾರ್ ಅಹಮದ್ ಸಯ್ಯದ್ ಬಿಲಾಲ್ ಹಾಗೂ ಇತರೆ ಐದು ಕುಟುಂಬಗಳ ಸದಸ್ಯರು ಮೇಲ್ಮನವಿ ಸಹಿ ಮಾಡಿದ್ದಾರೆ.

'ಎಐ' ಬಳಸಿ ಅಶ್ಲೀಲ ಸೃಷ್ಟಿ: ಅಭಿಷೇಕ್ ದಾವೆ

ದೆಹಲಿ: ದೇಶದಲ್ಲಿ ಕೃತಕ ಬುದ್ಧಿಮತ್ತೆ(ಎಐ) ತಂತ್ರಜ್ಞಾನದ ದುರ್ಬಳಕೆ ಆಗುತ್ತಿದೆ. ಕೆಲ ದುಷ್ಟ ವ್ಯಕ್ತಿಗಳು ಗಣ್ಯರು, ಸಿನಿ ತಾರೆಯರ ಛಾಯಾಚಿತ್ರಗಳನ್ನು ಬಳಸಿಕೊಂಡು 'ಎಐ' ತಂತ್ರಜ್ಞಾನ ಬಳಸಿಕೊಂಡು ಅಶ್ಲೀಲ ಚಿತ್ರ, ದೃಶ್ಯಾವಳಿಗಳನ್ನು ಸೃಷ್ಟಿಸುತ್ತಿದ್ದಾರೆ. ಇದರಿಂದ ಗಣ್ಯರ ವ್ಯಕ್ತಿತ್ವಕ್ಕೆ ಭಾರೀ ಹಾನಿಯಾಗುತ್ತಿದೆ. ಅಶ್ಲೀಲ ದೃಶ್ಯ ಸೃಷ್ಟಿಕರ್ತರು, ಎಐ ತಂತ್ರಜ್ಞಾನ ದುರ್ಬಳಕೆದಾರರ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸಬೇಕು. ಗಣ್ಯರು, ಸಿನಿತಾರೆಯರ ವ್ಯಕ್ತಿತ್ವ ರಕ್ಷಣೆಗಾಗಿ ಸರಕಾರಕ್ಕೆ ಸೂಕ್ತ ಆದೇಶ ನೀಡಬೇಕು ಎಂದು ಬಾಲಿವುಡ್ ನಟ ಅಭಿಷೇಕ್ ಬಚ್ಚನ್ ದೆಹಲಿ ಹೈಕೋರ್ಟ್‌ಗೆ ಬುಧವಾರ ಮನವಿ ಮಾಡಿದ್ದಾರೆ. ಹಿಂದಿನ ದಿನವಷ್ಟೇ ಅಭಿಷೇಕ್ ಬಚ್ಚನ್ ಪತ್ನಿ ಐಶ್ವರ್ಯ ರೈ ಇದೇ ವಿಚಾರವಾಗಿ ದೆಹಲಿ ಹೈಕೋರ್ಟ್ ಮೊರೆಹೋಗಿದ್ದರು. ಐಶ್ವರ್ಯಾ ಪರವಾಗಿ ಹಿರಿಯ ವಕೀಲ ಸಂದೀಪ್ ಸೇಠಿ ನ್ಯಾಯಾಲಯದಲ್ಲಿ ಹಾಜರಾಗಿದ್ದರು.

ಮಂತ್ರಿಗೆ 'ಗೌರವಾನ್ವಿತ' ಸಂಬೋಧನೆ: ಸೂಚನೆ

ತಿರುವನಂತಪುರಂ: 'ಕೇಳಿಕೊಂಡು ಮರ್ಯಾದೆ ಪಡೆದುಕೊಂಡರು' ಎಂಬುದೊಂದು ಹಳೆಯ ಮಾತು ಚಾಲ್ತಿಯಲ್ಲಿ ಇದೆ. ಕೇರಳ ಸರಕಾರದ ನಡೆಯೂ ಅದೇ ಮಾದರಿಯಲ್ಲಿದೆ. ರಾಜ್ಯದ ಮುಖ್ಯಮಂತ್ರಿ, ಸಚಿವರಿಗೆ ಪತ್ರ ಬರೆಯುವಾಗ ಪತ್ರದಲ್ಲಿ ಮೊದಲಿಗೇ 'ಗೌರವಾನ್ವಿತ' ಎಂಬ ಪದ ಬಳಸಬೇಕಿದೆ ಎಂದು ಕೇರಳ ಸರಕಾರ ಹೊಸ ಆದೇಶ ಹೊರಡಿಸಿದೆ. ಈ ಸಂಬಂಧ ಸರಕಾರದ ವಿವಿಧ ಸಚಿವಾಲಯಗಳ ಕಾರ್ಯದರ್ಶಿಗಳು, ಜಿಲ್ಲಾಧಿಕಾರಿಗಳಿಗೆ ಸುತ್ತೋಲೆ ಕಳುಹಿಸಿಕೊಡಲಾಗಿದೆ. ನಿಯಮ ಉಲ್ಲಂಘಿಸಿದರೆ ಕಠಿಣ ಕ್ರಮ ಎದುರಿಸಬೇಕಾಗುತ್ತದೆ ಎಂಬ ಎಚ್ಚರಿಕೆಯನ್ನೂ ನೀಡಲಾಗಿದೆ.

ಉಕ್ರೇನ್ ಯುದ್ಧ ನಿಲ್ಲಿಸಿ: ಮೆಲೋನಿ ಕರೆ

ದೆಹಲಿ: ರಷ್ಯಾ-ಉಕ್ರೇನ್ ನಡುವಿನ ಯುದ್ಧ ನಿಲ್ಲಿಸಲು ಸೂಕ್ತ ಕ್ರಮ ಕೈಗೊಳ್ಳಿ ಎಂದು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಇಟಲಿ ಪ್ರಧಾನಿ ಜಾರ್ಜಿಯಾ ಮೆಲೋನಿ ಅವರು ಒತ್ತಾಯಿಸಿದ್ದಾರೆ.

ಭಾರತ-ಯುರೋಪ್ ಒಕ್ಕೂಟ ನಡುವಿನ ವ್ಯಾಪಾರ ಒಪ್ಪಂದದ ಮಾತುಕತೆ ಪೂರ್ಣಗೊಂಡು ಒಪ್ಪಂದಕ್ಕೆ ಸಹಿ ಬಿದ್ದಿರುವುದಕ್ಕೆ ಪ್ರಧಾನಿ ಮೋದಿ ಹರ್ಷ ವ್ಯಕ್ತಪಡಿಸಿದ್ದಾರೆ. ಈ ಸಂಬಂಧ ಇಟಲಿ ಪ್ರಧಾನಿ ಜಾರ್ಜಿಯಾ ಮೆಲೋನಿ ಅವರ ಜತೆಗಿನ ದೂರವಾಣಿ ಸಂಭಾಷಣೆ ವೇಳೆ ಮೋದಿ ಧನ್ಯವಾದ ಅರ್ಪಿಸಿದ್ದಾರೆ. ಭಾರತ-ಇಟಲಿ ನಡುವಿನ ಕಾರ್ಯತಂತ್ರಾತ್ಮಕ ಪಾಲುದಾರಿಕೆಯನ್ನು ಇನ್ನಷ್ಟು ಬಲಪಡಿಸುವ ಸಲುವಾಗಿ ಇಟಲಿ ಪ್ರಧಾನಿ ಜಾರ್ಜಿಯಾ ಮೆಲೋನಿ ಅವರೊಂದಿಗೆ ಅತ್ಯಂತ ಪರಿಣಾಮಕಾರಿ ಮಾತುಕತೆ ನಡೆಸಿದೆ. ಇದೇ ವೇಳೆ, ರಷ್ಯಾ-ಉಕ್ರೇನ್ ಯುದ್ಧದ ತ್ವರಿತ ಅಂತ್ಯಕ್ಕಾಗಿ ಚರ್ಚೆ ನಡೆಸಿದೆವು ಎಂದು ಮೋದಿ 'ಎಕ್ಸ್' ಸಂದೇಶದಲ್ಲಿ ಬರೆದಿದ್ದಾರೆ.

{ ಅರವಿಂದ್ ಕೇಜ್ರಿವಾಲ್ } ಎಎಪಿ ಮುಖಂಡ

ಭಾರತ ಮೇಲೆ ಸುಂಕಾಸ್ತ್ರ ಪ್ರಯೋಗಿಸಿದ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಜತೆಗೆ ಪ್ರಧಾನಿ ನರೇಂದ್ರ ಮೋದಿ ಮತ್ತೆ ಮಾತುಕತೆಗೆ ಮುಂದಾಗಿರುವುದು ಸರಿಯಲ್ಲ. ಸ್ನೇಹಿತ ಟ್ರಂಪ್‌ರನ್ನು ಮೆಚ್ಚಿಸಲು ದೇಶದ ಹತ್ತಿ ಬೆಳೆಗಾರರ ಹಿತ ಪಣಕ್ಕಿಡಲಾಗಿದೆ. ಯಾವ ರೀತಿ ಮಾತುಕತೆ ನಡೆಸುತ್ತಿರುವಿರಿ? ಏಕಪಕ್ಷೀಯದಂತೆ ಇದೆ. ಮೋದಿ ದೇಶದ ಗೌರವವನ್ನು ದುರ್ಬಲಗೊಳಿಸಬೇಡಿ.

ಜೀವನ ವೆಚ್ಚ ಹೆಚ್ಚುತ್ತಿರುವುದಕ್ಕೆ ಸಿಡಿದೆದ್ದ ಜನತೆ | ಹಿಂಸೆಗೆ ತಿರುಗಿದ ಪ್ರತಿಭಟನೆ: 200 ಜನರ ಸೆರೆ | ಸರಕಾರಿ ಬಸ್‌ಗಳಿಗೆ ಬೆಂಕಿ, ರೈಲು ಸಂಚಾರ ತಡೆ | ದೇಶದಲ್ಲೆಡೆ 80 ಸಾವಿರ ಪೊಲೀಸ್ ನಿಯೋಜನೆ | ಮಾಜಿ ಪ್ರಧಾನಿ ಫ್ರಾಂಕೋಯಿಸ್ ವೆಚ್ಚ ಕಡಿತ ಯೋಜನೆಗೆ ಸಿಟ್ಟು

ಫ್ರಾನ್ಸ್ ಆರ್ಥಿಕ ಅವ್ಯವಸ್ಥೆ: ಸರಕಾರ ವಿರುದ್ಧ ಜನಾಕ್ರೋಶ

ಪ್ಯಾರಿಸ್: ದೇಶದಲ್ಲಿನ ಆರ್ಥಿಕ ಅವ್ಯವಸ್ಥೆ, ಹೆಚ್ಚುತ್ತಿರುವ ಜೀವನ ವೆಚ್ಚದಿಂದ ಹತಾಶರಾದ ಫ್ರಾನ್ ದೇಶದ ಜನತೆ ಸರಕಾರದ ವಿರುದ್ಧ ಆಕ್ರೋಶಗೊಂಡಿದ್ದಾರೆ. ರಾಜಧಾನಿ ಪ್ಯಾರಿಸ್ ಸೇರಿದಂತೆ ದೇಶದ ವಿವಿಧ ನಗರಗಳಲ್ಲಿ ಸಾವಿರಾರು ಸಂಖ್ಯೆಯಲ್ಲಿ ಬೀದಿಗಿಳಿದು ಪ್ರತಿಭಟನೆ ನಡೆಸುತ್ತಿದ್ದಾರೆ. ಅಧ್ಯಕ್ಷ ಎಮ್ಯಾನ್ಯುವಲ್ ಮ್ಯಾಕ್ರೋನ್ ಸರಕಾರದ ಆರ್ಥಿಕ ನೀತಿಗಳನ್ನು ಖಂಡಿಸುತ್ತಿದ್ದಾರೆ.

ಪ್ಯಾರಿಸ್ ನಗರದಲ್ಲಿ 50 ಪ್ರತಿಭಟನಾಕಾರರು ಸೇರಿದಂತೆ ದೇಶದ ವಿವಿಧೆಡೆ ನಡೆಯುತ್ತಿರುವ ಪ್ರತಿಭಟನಾ ಸ್ಥಳಗಳಿಂದ ಒಟ್ಟು 200 ಜನರನ್ನು ಬಂಧಿಸಲಾಗಿದೆ.

ರಾಜಧಾನಿ ನಗರ ಪ್ಯಾರಿಸ್‌ನಲ್ಲಿ ಬುಧವಾರ ಬೆಳಗ್ಗೆಯೇ ರಸ್ತೆಗಿಳಿದ ಆಂದೋಲನಕಾರರು, ಹಿಂಸಾತ್ಮಕ ಪ್ರತಿಭಟನೆ ಆರಂಭಿಸಿದರು. ಬಸ್ ಸೇರಿದಂತೆ ಹಲವು ವಾಹನಗಳಿಗೆ ಬೆಂಕಿ ಹಚ್ಚಿದರು. ಪಾದಚಾರಿ ಮಾರ್ಗದ ಮೂಲೆಗಳಲ್ಲಿದ್ದ ಕಸದ ತೊಟ್ಟಿಗಳನ್ನು ರಸ್ತೆಯಲ್ಲಿ ಚೆಲ್ಲಾಡಿದರು. ರಸ್ತೆಗಳಲ್ಲಿ ಸಿಕ್ಕಸಿಕ್ಕಲ್ಲಿ ಬೆಂಕಿ ಹಚ್ಚಿದರು. ತಡೆಯಲು ಬಂದ ಪೊಲೀಸರ ಮೇಲೆಯೂ ಕಸದ ತೊಟ್ಟಿ ಎಸೆದರು, ಬೆಂಕಿಯ ಉಂಡೆಗಳನ್ನೂ ತೂರಿದರು. ಪ್ರತಿಭಟನೆ ಹಿಂಸಾತ್ಮಕ ರೂಪ ಪಡೆದ ಬಳಿಕ ಹೆಚ್ಚಿನ ಸಂಖ್ಯೆಯ ಪೊಲೀಸರನ್ನು ನಿಯೋಜಿಸಲಾಯಿತು. ಪ್ಯಾರಿಸ್ ಸೇರಿದಂತೆ ವಿವಿಧ ನಗರಗಳಲ್ಲಿ ಒಟ್ಟು 80 ಸಾವಿರ ಪೊಲೀಸರು ಹಿಂಸಾತ್ಮಕ ಪ್ರತಿಭಟನೆ ಹತ್ತಿಕ್ಕಲೆಂದೇ ನಿಯೋಜನೆ ಮಾಡಲಾಗಿದೆ. ಬೆಂಕಿ ಹಚ್ಚುವುದು, ಸಾರ್ವಜನಿಕ ಆಸ್ತಿ ನಾಶದಲ್ಲಿ ತೊಡಗಿದ್ದ 200 ಪ್ರತಿಭಟನಾಕಾರರನ್ನು ಬಂಧಿಸಲಾಗಿದೆ. ಹಾಗಿದ್ದೂ ಹಿಂಸಾತ್ಮಕ ಪ್ರತಿಭಟನೆ ಹತೋಟಿಗೆ ಬಂದಿಲ್ಲ ಎಂದು ವರದಿಯಾಗಿದೆ. ಇಮ್ಯಾನುಯಲ್ ಮ್ಯಾಕ್ರಾನ್ ನೇತೃತ್ವದ ಸರಕಾರದ ಆರ್ಥಿಕ ನೀತಿಗಳನ್ನು ಜನರು ಖಂಡಿಸಲಾರಂಭಿಸಿದ್ದಾರೆ. ಮ್ಯಾಕ್ರಾನ್ ಸರಕಾರದ ಕೆಟ್ಟ ಆರ್ಥಿಕ ನೀತಿಗಳಿಂದಾಗಿಯೇ ನಿತ್ಯದ ಜೀವನ ವೆಚ್ಚ ದಿನೇ ದಿನೇ ಹೆಚ್ಚುತ್ತಲೇ ಇದೆ. ದೇಶದ ಆರ್ಥಿಕ ಪರಿಸ್ಥಿತಿ ನಿರ್ವಹಿಸುವುದರಲ್ಲಿ ಮ್ಯಾಕ್ರಾನ್ ಸರಕಾರ ಸಂಪೂರ್ಣ ವಿಫಲವಾಗಿದೆ ಎಂದು ಜನ ಕಿಡಿಕಾರಲಾರಂಭಿಸಿದ್ದಾರೆ.

ಮ್ಯಾಕ್ರಾನ್‌ಗೆ ಹಿನ್ನಡೆ

ಅಧ್ಯಕ್ಷ ಇಮ್ಯಾನ್ಯುಯಲ್ ಮ್ಯಾಕ್ರಾನ್ ಅವರ ನೇತೃತ್ವದ ಸರಕಾರ ಮತ್ತೆ ಮತ್ತೆ ಸಂಕಷ್ಟಕ್ಕೆ ಸಿಲುಕುತ್ತಿದೆ. ಕಳೆದೆರಡು ವರ್ಷಗಳಲ್ಲಿ ಮೂರು ಪ್ರಧಾನಿಗಳು ಪದತ್ಯಾಗ ಮಾಡಿದ್ದಾರೆ. ಸಂಸತ್ತಿನಲ್ಲಿ ಮಂಗಳವಾರ ನಡೆದ ವಿಶ್ವಾಸಮತ ಪರೀಕ್ಷೆಯಲ್ಲಿ ಪ್ರಧಾನಿ ಫ್ರಾಂಕೋಯಿಸ್ ಬೈರೋ ಸೋಲು ಕಂಡರು. 2 ವರ್ಷದಲ್ಲಿ 3 ಬಾರಿ ಸರಕಾರ ಪತನಗೊಂಡಂತಾಗಿದೆ. ಈ ಬೆಳವಣಿಗೆಗಳು ಅಧ್ಯಕ್ಷ ಇಮ್ಯಾನ್ಯುಯಲ್ ಮಾಕ್ರಾನ್ ಅವರಿಗೆ ರಾಜಕೀಯವಾಗಿ ತೀವ್ರ ಹಿನ್ನಡೆ ಉಂಟು ಮಾಡಿದೆ.

ನೇಪಾಳ ಬಳಿಕ ಫ್ರಾನ್ಸ್

ವರ್ಷಗಳ ಹಿಂದೆ ಮೊದಲಿಗೆ ಶ್ರೀಲಂಕಾದಲ್ಲಿ ಶುರುವಾದ ಸರಕಾರದ ವಿರುದ್ಧ ಜನಾಕ್ರೋಶ, ನಂತರದಲ್ಲಿ ಬಾಂಗ್ಲಾದೇಶದಲ್ಲಿ, ಇತ್ತೀಚೆಗೆ ನೇಪಾಳದಲ್ಲಿಯೂ ವ್ಯಕ್ತವಾಗಿ ಹಿಂಸಾತ್ಮಕ ಪ್ರತಿಭಟನೆಗೆ, ಸರಕಾರದ ಬದಲಾವಣೆಗೆ ಕಾರಣವಾಗಿದೆ. ಫ್ರಾನ್ಸ್‌ನಲ್ಲಿ ಶುರುವಾಗಿರುವ ಜನಾಕ್ರೋಶ ಯಾವ ಸ್ವರೂಪ ಪಡೆದುಕೊಳ್ಳಲಿದೆಯೋ ಎಂಬ ಆತಂಕ ಶುರುವಾಗಿದೆ.

ಪ್ರತಿಭಟನೆ ಆರಂಭ ಹೇಗೆ? ನಾಯಕತ್ವ ಯಾರದ್ದು?

ಈ ಮೊದಲು ದೇಶದ ಪ್ರಧಾನಿಯಾಗಿದ್ದ ಫ್ರಾಂಕೋಯಿಸ್ ಬೇರೂ ಸಂಸತ್ತಿನಲ್ಲಿ ಸೋಮವಾರ ನಡೆದ ವಿಶ್ವಾಸಮತ ಪರೀಕ್ಷೆಯಲ್ಲಿ ಅಧಿಕಾರ ಕಳೆದುಕೊಂಡರು.

ಹಿಂದಿನ ಪ್ರಧಾನಿ ಫ್ರಾಂಕೋಯಿಸ್ ಬೇರೂ ದೇಶದ ಸಾಲದ ಹೊರೆ ಕಡಿಮೆ ಮಾಡುವ ಉದ್ದೇಶದಿಂದ 3500 ಕೋಟಿ ಡಾಲರ್ (3.70 ಲಕ್ಷ ಕೋಟಿ ರು.) ಕಡಿತ ಯೋಜನೆಯನ್ನು ಸಂಸತ್ತಿನಲ್ಲಿ ಮಂಡಿಸಿದ್ದರು. ಸಾರ್ವಜನಿಕ ರಜಾದಿನಗಳನ್ನ ಕಡಿತಗೊಳಿಸುವುದು, ಪಿಂಚಣಿ ಸ್ಥಗಿತಗೊಳಿಸುವುದು ಸೇರಿದಂತೆ ಅನೇಕ ಕಠಿಣ ಕ್ರಮಗಳನ್ನ ಅನುಷ್ಠಾನಕ್ಕೆ ತರಲು ಹಿಂದಿನ ಪ್ರಧಾನಿ ಫ್ರಾಂಕೋಯಿಸ್ ಮುಂದಾಗಿದ್ದರು.

ಫ್ರಾಂಕೋಯಿಸ್ ಆರ್ಥಿಕ ನೀತಿಗಳಿಂದ ಜನರು ಹತಾಶೆಗೊಂಡರು. ಅದುವೇ ಪ್ರತಿಭಟನೆ ಆರಂಭಕ್ಕೆ ಕಾರಣವಾಗಿವೆ ಎಂದು ಹೇಳಲಾಗುತ್ತಿದೆ.

ಫ್ರಾಂಕೋಯಿಸ್ ಪದತ್ಯಾಗ ಬಳಿಕ ಅಧ್ಯಕ್ಷ ಎಮ್ಯಾನುಯಲ್ ಮ್ಯಾಕ್ರಾನ್ ಅವರು, ತಮಗೆ ಬಹಳ ನಿಷ್ಠರಾಗಿರುವ ರಕ್ಷಣಾ ಸಚಿವ ಸೆಬಾಸ್ಟಿಯನ್ ಲೆಕೋರ್ನು ಅವರನ್ನೇ ನೂತನ ಪ್ರಧಾನಿಯಾಗಿ ನೇಮಿಸಿದ್ದಾರೆ. ಅಧಿಕಾರ ಸ್ವೀಕರಿಸುತ್ತಲೇ ದೇಶದ ವಿವಿಧೆಡೆ ಪ್ರತಿಭಟನೆ ಆರಂಭಗೊಂಡಿರುವುದು, ಲೆಕೋರ್ನು ಅವರಿಗೆ ದೊಡ್ಡ ಸವಾಲಾಗಿ ಪರಿಣಮಿಸಿದೆ. ಲೆಕೋರ್ನು ಪ್ರಸ್ತುತ ಸರಕಾರದಲ್ಲಿ ನೇಮಕವಾದ ನಾಲ್ಕನೇ ಪ್ರಧಾನಿಯಾಗಿದ್ದಾರೆ.

'ಬ್ಲಾಕ್ ಎವರಿಥಿಂಗ್' ಹ್ಯಾಷ್‌ಟ್ಯಾಗ್

ಕಳೆದ ಬೇಸಿಗೆಯಲ್ಲಿ 'ಬ್ಲ್ಯಾಕ್ ಎವೆರಿಥಿಂಗ್'(ಎಲ್ಲದಕ್ಕೂ ತಡೆಯೊಡ್ಡಿ) ಎಂಬ ಸಂದೇಶವೊಂದು ಜಾಲತಾಣ ಹರಡಲಾರಂಭಿಸಿದ್ದೇ ಈಗಿನ ಜನಾಂದೋಲಕ್ಕೆ ಕಾರಣ ಎನ್ನಲಾಗಿದೆ. ಕುತೂಹಲಕಾರಿ ಸಂಗತಿ ಏನೆಂದರೆ ಈ ಜನಾಂದೋಲಕ್ಕೆ ನಿರ್ದಿಷ್ಟ ನಾಯಕತ್ವವೇ ಇಲ್ಲ ಎನ್ನುವುದು.

'ಬ್ಲಾಕ್ ಎವರಿಥಿಂಗ್' ಹ್ಯಾಷ್‌ಟ್ಯಾಗ್ ಜನಾಂದೋಲನ ದೇಶದಲ್ಲಿನ ಸಮಗ್ರ ಸಾರಿಗೆ ವ್ಯವಸ್ಥೆಯನ್ನೇ ಅಸ್ತವ್ಯಸ್ತಗೊಳಿಸಿದೆ. ಮುಖಕ್ಕೆ ಮುಸುಕು ಧರಿಸಿದ ಪ್ರತಿಭಟನಾಕಾರರು ಕಸದ ತೊಟ್ಟಿಗಳನ್ನೆಲ್ಲಾ ರಸ್ತೆಗೆಸೆಯುತ್ತಿದ್ದಾರೆ. ವಾಹನಗಳ ಸಂಚಾರ ತಡೆಯಲು ಪೊಲೀಸ್ ಬ್ಯಾರಿಕೇಡ್‌ಗಳನ್ನು ರಸ್ತೆಗಳಲ್ಲಿ ಅಡ್ಡಲಾಗಿ ಹರಡಿದ್ದಾರೆ. ಪ್ರತಿಭಟನಾಕಾರರು ರಾಜಧಾನಿ ಪ್ಯಾರಿಸ್ ರೈಲ್ವೆ ಹಬ್ ಗ್ಯಾರೆ ಡು ನಾರ್ಡ್ ನಿಲ್ದಾಣಕ್ಕೂ ನುಗ್ಗಿದ್ದರು. ಪ್ಯಾರಿಸ್ ಮಾತ್ರವಲ್ಲದೇ ಬೋರ್ಡೆಕ್ಸ್ ಮತ್ತು ಮಾರ್ಸಿಲ್ಲೆ ನಗರಗಳಲ್ಲಿಯೂ ಹಿಂಸಾತ್ಮಕ ಪ್ರತಿಭಟನೆ ನಡೆಯುತ್ತಿದೆ. ಪೊಲೀಸರ ಮೇಲೆ ಕಲ್ಲು ಮತ್ತು ಪೆಟ್ರೋಲ್ ತುಂಬಿದ ಬಾಟಲಿಗಳನ್ನು ಎಸೆದು ಬೆಂಕಿ ಹಚ್ಚಲಾಗುತ್ತಿದೆ. ಸಾರ್ವಜನಿಕ ಸಾರಿಗೆ ವ್ಯವಸ್ಥೆಗೆ ಅಡ್ಡಿಪಡಿಸಲು ಯತ್ನಿಸಿದವರನ್ನಷ್ಟೇ ಬಂಧಿಸಲಾಗುತ್ತಿದೆ ಎಂದು ಪೊಲೀಸರು ಹೇಳಿದ್ದಾರೆ.

ಲೂಟಿಗೂ ಸಿದ್ಧತೆ: ಪ್ರತಿಭಟನಾಕಾರರು ಸಂಚಾರ ಅಸ್ತವ್ಯಸ್ಥ ಮಾಡುವುದಲ್ಲದೆ, ಪೆಟ್ರೋಲ್ ಬಂಕ್‌ಗಳು, ಸೂಪರ್ ಮಾರ್ಕೆಟ್‌ಗಳನ್ನು ದಾಳಿ ಗುರಿಯಾಗಿಸಿಕೊಂಡು ಲೂಟಿಗಿಳಿದಿದ್ದಾರೆ. ಕೆಲ ಹೋರಾಟಗಾರರ ಗುಂಪುಗಳು ಅಂಗಡಿಗಳನ್ನು ಲೂಟಿ ಮಾಡುವಂತೆ ಜನರಿಗೆ ಕರೆ ನೀಡಿವೆ.

ಕತಾರ್ ಮೇಲೆ ಇಸ್ರೇಲ್ ದಾಳಿ: ಹಮಾಸ್ ನಾಯಕನ ಪುತ್ರ ಹತ

ಗಾಜಾ: ಕತಾರ್ ದೇಶದ ರಾಜಧಾನಿ ದೋಹಾ ಮೇಲೆ ಇಸ್ರೇಲ್ ಮಂಗಳವಾರ ತೀವ್ರ ಸ್ವರೂಪದ ವೈಮಾನಿಕ ದಾಳಿ ನಡೆಸಿದ್ದು, ಹಮಾಸ್ ನಾಯಕನ ಪುತ್ರ ಸೇರಿದಂತೆ 6 ಮಂದಿ ಹತರಾಗಿದ್ದಾರೆ.

ಹಮಾಸ್ ನಾಯಕ ಖಲೀಲ್ ಅಲ್-ಹಯಾನ್ ಅವರ ಪುತ್ರ, ಆತನ ಸಹಾಯಕ, ಭದ್ರತಾ ಅಧಿಕಾರಿ ಮತ್ತು ಇತರೆ ಮೂವರು ಸಾವಿಗೀಡಾಗಿದ್ದಾರೆ. ದೋಹಾ ನಾಗರಿಕರಿಗೆ ಸಣ್ಣ ಹಾನಿಯೂ ಆಗದಂತೆ ಯೋಜಿತ ರೀತಿ ದಾಳಿ ನಡೆಸಲಾಗಿದೆ. ಹಮಾಸ್ ವಿರುದ್ಧದ ದಾಳಿ ಮುಂದುವರಿಯಲಿದೆ ಎಂದು ಇಸ್ರೇಲ್ ಸೇನೆ ಹೇಳಿದೆ. ಹಮಾಸ್ ಪ್ರಮುಖ ನಾಯಕರು ಪಾರಾಗಿದ್ದಾರೆ. ಕತಾರ್‌ನ ಭದ್ರತಾ ಪಡೆ ಯೋಧ ಸೇರಿ 6 ಮಂದಿ ಮೃತಪಟ್ಟು ಕೆಲವರು ಗಾಯಗೊಂಡಿದ್ದಾರೆ ಎಂದು ಕತಾರ್ ಸರಕಾರ ಹೇಳಿದೆ. 'ನಮ್ಮ ಪ್ರಮುಖ ನಾಯಕನಿಗೆ ಯಾವುದೇ ಅಪಾಯವಾಗಿಲ್ಲ' ಎಂದು ಹೇಳಿರುವ ಹಮಾಸ್ ಸಂಘಟನೆ ವಕ್ತಾರ, ಗಾಜಾದಿಂದ ಸೇನೆ ವಾಪಸಾಗಲಿ. ಗಾಜಾ ನಿರ್ವಹಣೆಗೆ ಬೇರೆ ಸಮಿತಿ ರಚನೆಯಾಗಲಿ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದು, ಅದರಂತೆ ಕದನ ವಿರಾಮದ ಮಾತುಕತೆ ನಡೆಸುತ್ತಿದ್ದಾಗಲೇ ಇಸ್ರೇಲ್ ದಾಳಿ ನಡೆಸಿದೆ ಎಂದು ಕಿಡಿಕಾರಿದ್ದಾರೆ.

ಭಾರತ ಕಳವಳ: ಕತಾರ್ ಮೇಲಿನ ಇಸ್ರೇಲ್ ದಾಳಿಗೆ ಕಳವಳ ವ್ಯಕ್ತಪಡಿಸಿರುವ ಭಾರತದ ವಿದೇಶಾಂಗ ಸಚಿವಾಲಯ, ಸಂಯಮದಿಂದ ವರ್ತಿಸಿ ಎಂದು ಇಸ್ರೇಲ್‌ಗೆ ಕರೆ ನೀಡಿದೆ. ವಿಶ್ವಸಂಸ್ಥೆ ಪ್ರಧಾನ ಕಾರ್ಯದರ್ಶಿ ಆಂಟೋನಿಯೊ ಗುಟೆರೆಸ್ ಕತಾರ್ ಮೇಲಿನ ದಾಳಿಯನ್ನು ಖಂಡಿಸಿದ್ದಾರೆ.

ವಾರಾಣಸಿ: ಇಂದು ಮಾರಿಷಸ್ ಪ್ರಧಾನಿ-ಮೋದಿ ದ್ವಿಪಕ್ಷ ಸಭೆ

ದೆಹಲಿ: ದ್ವೀಪ ರಾಷ್ಟ್ರ ಮಾರಿಷಸ್‌ನ ಪ್ರಧಾನಿ ಡಾ. ನವೀನಚಂದ್ರ ರಾಮಗೂಲಂ ಅವರು ಮಂಗಳವಾರ ದೆಹಲಿಗೆ ಆಗಮಿಸಿದ್ದು, ಗುರುವಾರ ವಾರಾಣಸಿಗೆ ಪ್ರಯಾಣ ಬೆಳೆಸುವರು. ಅವರು ಸೆ.16ರವರೆಗೂ ಭಾರತ ಪ್ರವಾಸದಲ್ಲಿರುವರು.



ಪ್ರಧಾನಿ ನರೇಂದ್ರ ಮೋದಿ ತಮ್ಮ ಲೋಕಸಭಾ ಕ್ಷೇತ್ರ ವಾರಾಣಸಿಯಲ್ಲಿ ರಾಮಗೂಲಂ ಅವರೊಂದಿಗೆ ಗುರುವಾರ ದ್ವಿಪಕ್ಷೀಯ ಸಭೆ ನಡೆಸಲಿದ್ದಾರೆ. ಭಾರತ-ಮಾರಿಷಸ್ ನಡುವೆ ಅಭಿವೃದ್ಧಿ ಪಾಲುದಾರಿಕೆ ಮತ್ತು ಸಂಬಂಧ ವೃದ್ಧಿ ಹಾಗೂ ಆರೋಗ್ಯ, ಶಿಕ್ಷಣ, ವಿಜ್ಞಾನ ಮತ್ತು ತಂತ್ರಜ್ಞಾನ, ಇಂಧನ, ಮೂಲಸೌಕರ್ಯ, ನವೀಕರಿಸಬಹುದಾದ ಇಂಧನ, ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯ ಮತ್ತು ಸಾಗರ ಉತ್ಪನ್ನ ಆಧಾರಿತ ಆರ್ಥಿಕತೆ ವಿಚಾರಗಳ ಕುರಿತು ಇಬ್ಬರೂ ನಾಯಕರು ದ್ವಿಪಕ್ಷೀಯ ಸಭೆಯಲ್ಲಿ ಚರ್ಚಿಸಲಿದ್ದಾರೆ. ಬಳಿಕ ಪ್ರಸಿದ್ಧ ಕಾಶಿ ವಿಶ್ವನಾಥ ದೇವಾಲ ಯವಿರುವ ವಾರಾಣಸಿಯಲ್ಲಿ ಹಲವು ಸಾಂಸ್ಕೃತಿಕ ಮತ್ತು ಧಾರ್ಮಿಕ ತಾಣಗಳನ್ನು ಇಬ್ಬರೂ ಪ್ರಧಾನಿಗಳು ಜತೆಯಾಗಿ ವೀಕ್ಷಿಸಲಿದ್ದಾರೆ.

ಡೆಹರಾಡೂನ್: ವಾರಾಣಸಿ ಕಾರ್ಯಕ್ರಮ ನಂತರ ಪ್ರಧಾನಿ ಮೋದಿ ಡೆಹರಾಡೂನ್‌ಗೆ ತೆರಳಿ, ಉತ್ತರಾಖಂಡದ ಪ್ರವಾಹ ಪೀಡಿತ ಪ್ರದೇಶಗಳ ವೈಮಾನಿಕ ಸಮೀಕ್ಷೆ ನಡೆಸಲಿದ್ದಾರೆ. ಬಳಿಕ ಸಿಎಂ ಜತೆಗೂಡಿ ಉನ್ನತ ಅಧಿಕಾರಿಗಳೊಂದಿಗೆ ಸಭೆ ನಡೆಸುವರು ಎಂದು 'ಪಿಎಂಒ' ಪ್ರಕಟಣೆಯಲ್ಲಿ ತಿಳಿಸಿದೆ.

20ರಂದು ಪಂಪಾ ನದಿ ದಡ ಅಗೋಲ ಅಯ್ಯಪ್ಪ ಸಂಗಮ

ತಿರುವನಂತಪುರಂ: ಸ್ವಾಮಿ ಅಯ್ಯಪ್ಪ ದೇವರ ಆವಾಸ ಸ್ಥಾನವಾಗಿರುವ ಕೇರಳದ ವಿಶ್ವ ಪ್ರಸಿದ್ಧ ಶಬರಿಮಲೆಯನ್ನು ವಿಶ್ವ ಯಾತ್ರಾ ಸ್ಥಳವನ್ನಾಗಿಸುವ ಉದ್ದೇಶದಿಂದ ಸೆ.20ರಂದು ಪಂಪಾ ನದಿ ದಡದಲ್ಲಿ ಜಾಗತಿಕ ಮಟ್ಟದ 'ಅಗೋಲ ಅಯ್ಯಪ್ಪ ಸಂಗಮ' ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ತಿರುವಾಂಕೂರು ದೇವಸ್ವಂ ಮಂಡಳಿ (ಟಿಡಿಟಿ) ಪ್ಲಾಟಿನಂ ಮಹೋತ್ಸವದ ಭಾಗವಾಗಿ, ಶಬರಿಮಲೆಯನ್ನು ವಿಶ್ವಾದ್ಯಂತ ದೈವಿಕ, ಸಾಂಪ್ರದಾಯಿಕ ಮತ್ತು ಸುಸ್ಥಿರ ಯಾತ್ರಾ ಕೇಂದ್ರವಾಗಿಸುವ ಉದ್ದೇಶದಿಂದ 'ಅಗೋಳ ಅಯ್ಯಪ್ಪ ಸಂಗಮ' ಕಾರ್ಯಕ್ರಮವನ್ನು ಬೃಹತ್ ಪ್ರಮಾಣದಲ್ಲಿ ನಡೆಸಲಾಗುತ್ತಿದೆ. ಪಂಪಾದಲ್ಲಿ 3,000 ಜನರಿಗೆ ಸ್ಥಳಾವಕಾಶವಿರುವ ಜರ್ಮನ್ ಮಾದರಿ ಪೆಂಡಾಲ್ ನಿರ್ಮಿಸಲಾಗಿದೆ. ಪತ್ತನಂತಿಟ್ಟ, ಪೆರುನಾಡ್, ಪಂಪಾ ಮತ್ತು ಸೀತತೋಡ್ ಸ್ಥಳಗಳಲ್ಲಿ ಸ್ವಾಗತ ಸಮಿತಿ ಕಚೇರಿ ಆರಂಭಿಸಲಾಗಿದೆ ಭಕ್ತರು ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು 'ಟಿಡಿಟಿ' ಬುಧವಾರ ಮನವಿ ಮಾಡಿದೆ.

ಪ್ರತಿವರ್ಷ ಲಕ್ಷಾಂತರ ಭಕ್ತರು ಕರ್ನಾಟಕ, ಆಂಧ್ರಪ್ರದೇಶ, ತೆಲಂಗಾಣ ಮಾತ್ರವಲ್ಲದೆ ದೇಶ ಮತ್ತು ವಿದೇಶಗಳಿಂದ ಶಬರಿಮಲೆಗೆ ಭೇಟಿ ನೀಡುತ್ತಾರೆ. ಹಾಗಾಗಿ, ವಿಮಾನ ನಿಲ್ದಾಣ ಮತ್ತು ರೈಲು ಮಾರ್ಗ ಸೇರಿದಂತೆ ಭವಿಷ್ಯದ ಶಬರಿಮಲೆ ಅಭಿವೃದ್ಧಿಗಾಗಿ 1,300 ಕೋಟಿ ರು. ಯೋಜನೆ ಸಿದ್ಧವಾಗಿದೆ ಎಂದೂ ಮಂಡಳಿ ತಿಳಿಸಿದೆ.

ಗಲಭೆ: ಇಮ್ರಾನ್‌ಖಾನ್ 17 ಬೆಂಬಲಿಗರಿಗೆ ಶಿಕ್ಷೆ

ಲಾಹೋರ್: ಮಾಜಿ ಪ್ರಧಾನಿ ಇಮ್ರಾನ್ ಖಾನ್ ಬೆಂಬಲಿಗರಿಗೆ 2023ರಲ್ಲಿನ ಗಲಭೆಗೆ ಸಂಬಂಧಿಸಿದಂತೆ ದೇಶದ ಭಯೋತ್ಪಾದನಾ ನಿಗ್ರಹ ನ್ಯಾಯಾಲಯ ಶಿಕ್ಷೆ ವಿಧಿಸಿದೆ. 2023ರ ಮೇ 9ರಂದು ಇಮ್ರಾನ್ ಖಾನ್ ಬಂಧನ ಖಂಡಿಸಿ ಸಾವಿರಾರು ಬೆಂಬಲಿಗರು ಗಲಭೆ ನಡೆಸಿದ್ದರು. ಆ ಸಂದರ್ಭ 10 ಸಾವಿರಕ್ಕೂ ಅಧಿಕ ಪ್ರತಿಭಟನಾಕಾರರನ್ನು ಬಂಧಿಸಲಾಗಿತ್ತು. ಅದರಲ್ಲಿ ಪಾಕಿಸ್ತಾನ್ ತೆಹ್ರೀಕ್ ಎ ಇನ್ಸಾಫ್(ಪಿಟಿಐ) ಪಕ್ಷದ ನಾಯಕ, ಪಂಜಾಬ್ ಪ್ರಾಂತ್ಯದ ಮಾಜಿ ಸಚಿವ ಯಾಸ್ಮಿನ್ ರಶೀದ್ ಮತ್ತು ಮಿಯಾನ್ ಮೆಹಮೂದ್ ರಶೀದ್‌ಗೆ ಹಾಗೂ ಮಾಜಿ ಗವರ್ನರ್ ಒಮರ್ ಸರ್ಫ್ರಾಜ್ ಚೀಮಾ ಸೇರಿದಂತೆ 17 ಜನರಿಗೆ ತಲಾ 10 ವರ್ಷಗಳ ಸೆರೆವಾಸದ ಶಿಕ್ಷೆ ವಿಧಿಸಲಾಗಿದೆ.

ರಾಗ ಬದಲಿಸಿದ ಟ್ರಂಪ್: ಮತ್ತೆ ಮಾತಿಗೆ ಮೋದಿ ಸಿದ್ಧ

ವಾಷಿಂಗ್ಟನ್/ದೆಹಲಿ: ಭಾರತದ ಆರ್ಥಿಕತೆ ಸತ್ತಿದೆ, ಮೋದಿಯದು ತಪ್ಪು ನಡೆ ಎಂದು ಟೀಕಿಸುತ್ತಾ, ರಷ್ಯಾದಿಂದ ಭಾರತ ಕಚ್ಚಾತೈಲ ಖರೀದಿಸಬಾರದು, ಖರೀದಿ ಮುಂದುವರಿಸಿದರೆ ಮತ್ತಷ್ಟು ಪ್ರತಿಸುಂಕ ಹಾಕುವೆ ಎಂದೆಲ್ಲಾ ಬೆದರಿಕೆ ಹಾಕುತ್ತಿದ್ದ, ಭಾರತದ ಜತೆಗಿನ ವ್ಯಾಪಾರದ ಮಾತುಕತೆ ನಿಲ್ಲಿಸಲಾಗಿದೆ ಎಂದು ಹೇಳುತ್ತಿದ್ದ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ದಿನಕಳೆದಂತೆ ಪರಿಸ್ಥಿತಿಯ ಅರಿವಾಗಿ ತಣ್ಣಗಾಗಿದ್ದಾರೆ. ಈಗ ರಾಗ ಬದಲಿಸಿದ್ದಾರೆ.

'ಭಾರತದ ಜತೆ ವ್ಯಾಪಾರದ ಮಾತುಕತೆಯನ್ನು ಅಮೆರಿಕ ಮುಂದುವರಿಸಲಿದೆ. ಆತ್ಮೀಯ ಸ್ನೇಹಿತ ಪ್ರಧಾನಿ ಮೋದಿ ಜತೆ ಮಾತನಾಡಲು ಕಾತುರನಾಗಿದ್ದೇನೆ' ಎಂದು ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ. ಈ ಸಂಬಂಧ ಬುಧವಾರ ನಸುಕಿನ 3 ಗಂಟೆಯಲ್ಲಿ(ಭಾರತದ ಸಮಯ) ಟ್ರಂಪ್ ತಮ್ಮದೇ ಒಡೆತನದ 'ಟ್ರೂತ್' ಆಪ್ ಮೂಲಕ ಸಂದೇಶ ರವಾನಿಸಿದ್ದಾರೆ.



'ಎರಡೂ ರಾಷ್ಟ್ರಗಳ ನಡುವಿನ ವ್ಯಾಪಾರ ಮಾತುಕತೆಗೆ ಎದುರಾಗಿರುವ ಅಡೆತಡೆ ನಿವಾರಿಸಲು ಭಾರತ ಮತ್ತು ಅಮೆರಿಕ ಮಾತುಕತೆಗಳನ್ನು ಮುಂದುವರಿಸುತ್ತಿವೆ ಎಂದು ಹೇಳಲು ಸಂತೋಷವಾಗುತ್ತಿದೆ. ಮುಂಬರುವ ವಾರಗಳಲ್ಲಿ ನನ್ನ ಆತ್ಮೀಯ ಸ್ನೇಹಿತ ಪ್ರಧಾನಿ ಮೋದಿಯವರೊಂದಿಗೆ ಮಾತನಾಡಲು ನಾನು ಎದುರು ನೋಡುತ್ತಿದ್ದೇನೆ' ಎಂದು ಟ್ರಂಪ್ ಬರೆದಿದ್ದಾರೆ. ಸುಂಕ ಸಮರ ಆರಂಭಿಸಿದ ನಂತರ ಪ್ರಧಾನಿ ಮೋದಿ ನನ್ನ ಉತ್ತಮ ಸ್ನೇಹಿತ ಎಂದು ಒಂದೇ ವಾರದಲ್ಲಿ 2ನೇ ಬಾರಿ ಹೇಳಿದ್ದಾರೆ.

ಪೇಚಾಟ: ಇದಕ್ಕೂ ಮುನ್ನ ಚೀನಾದ ಟಿಯಾಂಜಿನ್ ನಗರದಲ್ಲಿ ಸೆ.31ರಂದು 'ಶಾಂಘೈ ಸಹಕಾರ ಸಂಸ್ಥೆ'(ಎಸ್‌ಸಿಒ) ಶೃಂಗಸಭೆಯಲ್ಲಿ ಚೀನಾ, ರಷ್ಯಾ, ಭಾರತದ ನಾಯಕತ್ರಯರು ಒಟ್ಟಿಗೇ ಕಾಣಿಸಿಕೊಂಡ ತಮಾಷೆ ಮಾತನಾಡುತ್ತಾ, ನಗುತ್ತಾ ಇದ್ದ ದೃಶ್ಯಗಳನ್ನು ನೋಡಿದ ನಂತರ ಟ್ರಂಪ್ ಹತಾಶೆಗೊಂಡಿದ್ದರು. ರಷ್ಯಾ-ಚೀನಾಕ್ಕಾಗಿ ನಾನು ಭಾರತದ ಮೈತ್ರಿ ಕಳೆದುಕೊಂಡೆ ಎಂದು ಪೇಚಾಡಿದ್ದರು.

ಮೋದಿ ಪ್ರತಿ ಸಂದೇಶ

ಇದಕ್ಕೆ ಪ್ರತಿಯಾಗಿ ಪ್ರಧಾನಿ ನರೇಂದ್ರ ಮೋದಿ ಅವರೂ 'ಭಾರತ-ಅಮೆರಿಕ ಆಪ್ತ ಸ್ನೇಹಿತರು, ಪಾಲುದಾರ ದೇಶಗಳು. ಶೀಘ್ರವೇ ಭಾರತದ ಉನ್ನತ ಮಟ್ಟದ ಅಧಿಕಾರಿಗಳ ತಂಡ ಎರಡೂ ದೇಶಗಳ ನಡುವಿನ ವ್ಯಾಪಾರ ಮಾತುಕತೆ ಮರಳಿ ಆರಂಭಿಸಿ ಪೂರ್ಣಗೊಳಿಸಲಿದೆ ಎಂಬ ವಿಶ್ವಾಸವಿದೆ. ಅಧ್ಯಕ್ಷ ಟ್ರಂಪ್ ಜತೆಗೆ ಮಾತನಾಡಲು ನಾನೂ ಎದುರು ನೋಡುತ್ತಿದ್ದೇನೆ. ಎರಡೂ ದೇಶಗಳ ಜನರು ಹಿತದೃಷ್ಟಿಯಿಂದ, ಹೆಚ್ಚು ಸಮೃದ್ಧ ಭವಿಷ್ಯವನ್ನು ಸೃಷ್ಟಿಸುವ ಉದ್ದೇಶದಿಂದ ಎರಡೂ ದೇಶಗಳೂ ಒಟ್ಟಾಗಿ ಕೆಲಸ ಮಾಡುತ್ತೇವೆ ಎಂದು ಮರು ಸಂದೇಶದಲ್ಲಿ ಬರೆದಿದ್ದಾರೆ. ಟ್ರಂಪ್ ಸಂದೇಶದ ಬೆನ್ನಲ್ಲೇ ಮೋದಿ ಪ್ರತಿಕ್ರಿಯೆ ನೀಡಿರುವುದು, ಮರಳಿ ಮಾತುಕತೆ ನಡೆಸಲು ಒಲವು ತೋರಿರುವುದನ್ನು ಗಮನಿಸಿದರೆ ಶೀಘ್ರದಲ್ಲೇ ಎರಡೂ ದೇಶಗಳ ವ್ಯಾಪಾರ ಒಪ್ಪಂದ ಪೂರ್ಣಗೊಳ್ಳುವ ನಿರೀಕ್ಷೆ ಮೂಡಿದೆ.

ಸುದ್ದಿಗೋಷ್ಠಿಯಲ್ಲಿ ಕುಸಿದ ಸ್ವೀಡನ್ ಆರೋಗ್ಯ ಸಚಿವೆ

ಸ್ಟಾಕ್‌ಹೋಮ್: ಸ್ವೀಡನ್ ದೇಶದ ನೂತನ ಆರೋಗ್ಯ ಸಚಿವೆ ಮಂಗಳವಾರ ನಿಂತುಕೊಂಡು ಸುದ್ದಿಗೋಷ್ಠಿ ನಡೆಸುತ್ತಿದ್ದಾಗ ದಿಢೀರ್ ಅಸ್ವಸ್ಥರಾಗಿ ಕುಸಿದುಬಿದ್ದರು. ಆ ಸಂದರ್ಭದ ದೃಶ್ಯಗಳು ಸುದ್ದಿವಾಹಿನಿಯ ನೇರ ಪ್ರಸಾರದಲ್ಲಿ ಬಿತ್ತರಗೊಂಡವು.



ಎಲಿಸಬೆಟ್ ಲ್ಯಾನ್ ನೂತನ ಆರೋಗ್ಯ ಸಚಿವೆಯಾಗಿ ಅಧಿಕಾರ ಸ್ವೀಕರಿಸಿ ಕೆಲವೇ ಗಂಟೆಗಳಾಗಿದ್ದವು. ಪ್ರಮಾಣವಚನದ ಬಳಿಕ ಸುದ್ದಿಗೋಷ್ಠಿ ಆಯೋಜಿಸಲಾಗಿತ್ತು. ಸುದ್ದಿಗೋಷ್ಠಿಯಲ್ಲಿ ಮೊದಲಿಗೆ ಅಧಿಕಾರಿಯೊಬ್ಬರು ಮಾತು ಆರಂಭಿಸಿದಾಗ ಸಚಿವೆ ಎಲಿಸಬೆಟ್ ಆಲಿಸಲು ತುಸುವೇ ಮುಂದೆ ಬಾಗಿದರು. ಹಾಗೆ ಬಾಗುತ್ತಲೇ ಪೋಡಿಯಂ ಸಮೇತ ವೇದಿಕೆಯಲ್ಲಿ ಕುಸಿದು ಬಿದ್ದರು. ರಕ್ತದೊತ್ತಡ ದಿಢೀರ್ ಕಡಿಮೆ ಆಗಿದ್ದರಿಂದ ಸಚಿವೆ ಕುಸಿದಿರಬಹುದು ಎನ್ನಲಾಗಿದೆ. 16 ಸೆಕೆಂಡ್‌ಗಳ ಈ ದೃಶ್ಯದ ವಿಡಿಯೊ ಜಾಲತಾಣದಲ್ಲಿ ವೈರಲ್ ಆಗಿದೆ. ಪ್ರಜ್ಞಾಹೀನರಾದ ಸಚಿವೆಯನ್ನು ಪಕ್ಕದಲ್ಲೇ ಅಧಿಕಾರಿಗಳು, ಮುಂದಿನ ಸಾಲಿನಲ್ಲಿದ್ದ ಪತ್ರಕರ್ತರು ಮೇಲೆತ್ತಿ ಕೂರಿಸಿ ನೀರು ಕುಡಿಸಿದರು. ಅಲ್ಪ ಕಾಲ ವಿಶ್ರಾಂತಿ ಪಡೆದ ಸಚಿವೆ ಲ್ಯಾನ್ ನಂತರ ಮತ್ತೆ ಸುದ್ದಿಗೋಷ್ಠಿಗೆ ಹಾಜರಾದರು.

ಪ್ರತಿಪಕ್ಷ ಸಂಸದರಿಂದಲೂ 'ಆತ್ಮಸಾಕ್ಷಿ ಮತ': ಬಿಜೆಪಿ

ದೆಹಲಿ: ಭಾರತದ 15ನೇ ಉಪ ರಾಷ್ಟ್ರಪತಿಯಾಗಿ ಎನ್‌ಡಿಎ ಅಭ್ಯರ್ಥಿ ಸಿ.ಪಿ.ರಾಧಾಕೃಷ್ಣನ್ ಅವರ ಆಯ್ಕೆಯಾಗುವುದರಲ್ಲಿ ಪ್ರತಿಪಕ್ಷಗಳ ಪಾತ್ರವೂ ಇದೆ. ಏಕೆಂದರೆ ಪ್ರತಿಪಕ್ಷಗಳ ಹಲವು ಸಂಸದರು ಆತ್ಮಸಾಕ್ಷಿಯ ನುಡಿಯಂತೆ ರಾಧಾಕೃಷ್ಣನ್ ಅವರಿಗೆ ಮತ ಚಲಾಯಿಸಿದ್ದಾರೆ. ಹಾಗಾಗಿ ನಿರೀಕ್ಷೆಗೂ ಮೀರಿ ಹೆಚ್ಚಿನ ಅಂತರದ ಮತಗಳಿಂದ ರಾಧಾಕೃಷ್ಣನ್ ಗೆದ್ದಿದ್ದಾರೆ ಎಂದು ಬಿಜೆಪಿ ಹೇಳಿದೆ.

ಪ್ರತಿಪಕ್ಷಗಳ ಶಿಬಿರದಿಂದ ಅಡ್ಡ ಮತದಾನ ಆಗಿರುವುದನ್ನು ಈ ಫಲಿತಾಂಶ ತೋರಿಸಿಕೊಟ್ಟಿದೆ. ಪ್ರತಿಪಕ್ಷಗಳ 40 ಸಂಸದರು ಎನ್‌ಡಿಎ ಅಭ್ಯರ್ಥಿಯನ್ನು ಬೆಂಬಲಿಸಿದ್ದಾರೆ. ಅವರೆಲ್ಲರಿಗೂ ಕೃತಜ್ಞತೆ ಸಲ್ಲಿಸುವೆ ಎಂದು ಲೋಕಸಭೆಯಲ್ಲಿನ ಬಿಜೆಪಿ ಮುಖ್ಯ ಸಚೇತಕ ಸಂಜಯ್ ಜೈಸ್ವಾಲ್ ಹೇಳಿದ್ದಾರೆ. 15 ಮತಗಳು ಅಮಾನ್ಯಗೊಂಡಿರುವುದರಲ್ಲೂ ಗೂಢಾರ್ಥವಿದೆ. ಪ್ರತಿಪಕ್ಷಗಳ 15 ಸಂಸದರು ಉದ್ದೇಶಪೂರ್ವಕವಾಗಿಯೇ ಮತದಾನ ಸರಿಯಾಗಿ ಮಾಡಿಲ್ಲ ಎಂದೂ ಜೈಸ್ವಾಲ್ ಹೇಳಿದರು. ಪ್ರಧಾನಿ ಮೋದಿ ಅವರ ನೇತೃತ್ವದಲ್ಲಿ ಯಾವ ನಿರ್ಧಾರ ತೆಗೆದುಕೊಂಡರೂ ಅದು ಸರಿಯಾಗಿರುತ್ತದೆ. ಹಾಗಾಗಿಯೇ ಎನ್‌ಡಿಎ ಅಭ್ಯರ್ಥಿ ಗೆಲುವು ಸರಾಗವಾಗಿದೆ ಎಂದು ಹೇಳಿದ್ದಾರೆ.

ರಷ್ಯಾ ದಾಳಿ: ಉಕ್ರೇನ್‌ನ 24 ವೃದ್ಧರ ದುರ್ಮರಣ

ಕೀವ್: ರಷ್ಯಾ-ಉಕ್ರೇನ್ ನಡುವಿನ ಮೂರು ವರ್ಷಗಳ ಯುದ್ಧ ಯಥಾರೀತಿ ಮುಂದುವರಿದಿದ್ದು, ರಷ್ಯಾ ಮಂಗಳವಾರ ಬೆಳಗ್ಗೆ ನಡೆಸಿದ ವೈಮಾನಿಕ ದಾಳಿಯಿಂದ ಉಕ್ರೇನ್ ಭಾಗದಲ್ಲಿ 24 ವೃದ್ಧರು ಸಾವಿಗೀಡಾಗಿದ್ದಾರೆ. ಉಕ್ರೇನ್‌ನ ಪೂರ್ವ ಭಾಗದಲ್ಲಿನ 'ಯಾರೋವಾ' ಪಟ್ಟಣದ ಮೇಲೆ ರಷ್ಯಾ ಹಾರಿಸಿದ ಬಾಂಬ್ ಬಿದ್ದಿದ್ದು, ಗ್ರಾಮದಲ್ಲಿ ಪಿಂಚಣಿಗಾಗಿ ಸಾಲುಗಟ್ಟಿ ನಿಂತಿದ್ದವರಲ್ಲಿ 24 ಮಂದಿ ದುರ್ಮರಣಕ್ಕೀಡಾದರು. 19 ವೃದ್ಧರು ಗಾಯಗೊಂಡರು ಎಂದು ಉಕ್ರೇನ್ ಸರಕಾರದ ತುರ್ತು ಸೇವಾ ಘಟಕದ ಅಧಿಕಾರಿಗಳು ಸುದ್ದಿಸಂಸ್ಥೆಗೆ ಬುಧವಾರ ಮಾಹಿತಿ ನೀಡಿದ್ದಾರೆ. 24 ವೃದ್ಧರ ಸಾವಿಗೆ ಶೋಕ ವ್ಯಕ್ತಪಡಿಸಿರುವ ಉಕ್ರೇನ್ ಅಧ್ಯಕ್ಷ ವೊಲೊದಿಮಿರ್ ಝೆಲೆನ್‌ಸ್ಕಿ, ಇದು ರಷ್ಯಾ ಸೇನೆಯ ಅತ್ಯಂತ ಕ್ರೂರ ನಡೆಯಾಗಿದೆ ಎಂದು ಖಂಡಿಸಿದ್ದಾರೆ. ರಷ್ಯಾ ವಿರುದ್ಧ ಹೆಚ್ಚಿನ ಪ್ರಮಾಣದ ಆರ್ಥಿಕ ದಿಗ್ಬಂಧನ ವಿಧಿಸುವಂತೆ ಯೂರೋಪ್ ಮತ್ತು ಅಮೆರಿಕ ದೇಶಗಳ ಸರಕಾರಗಳಿಗೆ ಒತ್ತಾಯಿಸಿದ್ದಾರೆ.

ರಷ್ಯಾ ದಾಳಿಗೆ ಉಕ್ರೇನ್ ವೃದ್ಧರು ಹತರಾದ ಸ್ಥಳ

ಐಎಸ್‌ಐಎಸ್‌ನ ಉಗ್ರರಿಬ್ಬರ ಸೆರೆ

ದೆಹಲಿ: ದೆಹಲಿ ಪೊಲೀಸರು, ಜಾರ್ಖಂಡ್ ರಾಜ್ಯದ 'ಉಗ್ರ ನಿಗ್ರಹ ದಳ'(ಎಟಿಎಸ್) ಹಾಗೂ ರಾಂಚಿ ಪೊಲೀಸ್ ಬುಧವಾರ ಜಂಟಿ ಕಾರ್ಯಾಚರಣೆ ನಡೆಸಿ ಐಎಸ್‌ಐಎಸ್ ಭಯೋತ್ಪಾದಕ ಸಂಘಟನೆಯ ಜಾಲದ ಇಬ್ಬರು ಉಗ್ರರನ್ನು ಬಂಧಿಸಿದ್ದಾರೆ. ಬೊಕಾರೊ ನಗರ ಮೂಲದ ಆಶರ್ ಡ್ಯಾನಿಶ್ ಪ್ರಮುಖ ಆರೋಪಿಯಾಗಿದ್ದು, ಆತನನ್ನು ಜಾರ್ಖಂಡ್ ರಾಜಧಾನಿ ರಾಂಚಿಯಲ್ಲಿ ಬಂಧಿಸಲಾಗಿದ್ದರೆ, ಅಫ್ತಾಬ್ ಎಂಬವನನ್ನು ದೆಹಲಿಯಲ್ಲಿ ಸೆರೆಹಿಡಿಯಲಾಗಿದೆ. ಬಂಧಿತರಿಬ್ಬರೂ ಐಎಸ್‌ಐಎಸ್ ಉಗ್ರ ಸಂಘಟನೆಯ ಸಂಪರ್ಕದಲ್ಲಿದ್ದು, ಭಾರತದಲ್ಲಿ ಭಯೋತ್ಪಾದಕ ಕೃತ್ಯಗಳನ್ನು ನಡೆಸಲು ಸಂಚು ರೂಪಿಸಿದ್ದರು ಎಂದು ಹಿರಿಯ ಪೊಲೀಸ್ ಅಧಿಕಾರಿ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ. ಈ ಮೊದಲೇ ದೆಹಲಿ ಪೊಲೀಸ್ ವಿಶೇಷ ಘಟಕ ಆಶರ್ ಡ್ಯಾನಿಶ್ ವಿರುದ್ಧ ಪ್ರಕರಣ ದಾಖಲಿಸಿ, ಆತನಿಗಾಗಿ ವಿವಿಧೆಡೆ ಹುಡುಕಾಟ ನಡೆಸಿತ್ತು.



ಸಮಾಚಾರ ಸಣ್ಣದಲ್ಲ

ನಗರದಲ್ಲಿ ದಿಢೀರ್ ಸುರಿದ ಮಳೆ

ಬೆಂಗಳೂರು : ಕಳೆದ ಕೆಲ ದಿನಗಳಿಂದ ಬಿಡುವು ನೀಡಿದ್ದ ಮಳೆರಾಯನು ಬುಧವಾರ ರಾತ್ರಿಯ ವೇಳೆಗೆ ದಿಢೀರನೇ ಸುರಿದಿದ್ದು,ಜನಸಂಚಾರ ಅಸ್ತವ್ಯಸ್ತವಾಗಿತ್ತು. ರಾತ್ರಿ 9 ಗಂಟೆ ಸುಮಾರಿಗೆ ನಗರದ ವಿವಿಧ ಭಾಗಗಳಲ್ಲಿ ಧಾರಾಕಾರ ಮಳೆಯಾಗಿದ್ದು, ಕೆಲಸ ಮುಗಿಸಿ ಮನೆಗೆ ತೆರಳುವ ವಾಹನ ಸವಾರರು ಪರದಾಡುವಂತಾಯಿತು. ನಗರದ ಮೆಜೆಸ್ಟಿಕ್, ಆರ್‌ಆರ್ ನಗರ, ಶಾಂತಿನಗರ, ಕೆ.ಆರ್‌ಸರ್ಕಲ್, ಮಲ್ಲೇಶ್ವರ, ವಿಧಾನಸೌಧ, ರಾಜಾಜಿನಗರ, ಶೇಷಾದ್ರಿಪುರ,ಲಾಲ್‌ಬಾಗ್ ,ಟೌನ್ ಹಾಲ್,ಶಿವಾನಂದ ಸರ್ಕಲ್, ವಿಲ್ಸನ್ ಗಾರ್ಡನ್, ಜಯನಗರ, ಸೇರಿದಂತೆ ಹಲವು ಭಾಗಗಳಲ್ಲಿ ಮಳೆಯಾಗಿದ್ದು, ಭಾರಿ ಮಳೆಯಿಂದ ನಗರದ ಹಲವು ಭಾಗಗಳಲ್ಲಿ ನೀರು ನಿಂತಿದೆ. ಕೋನಪ್ಪನ ಅಗ್ರಹಾರದಲ್ಲಿ ಮಳೆಯಿಂದಾಗಿ ರಸ್ತೆಯ ಮೇಲೆ ನೀರು ನಿಂತಿದ್ದು, ಹೊಸೂರು ರಸ್ತೆಯಲ್ಲಿ ಸಂಚಾರ ದಟ್ಟಣೆಯುಂಟಾಗಿದೆ.

ಗ್ರೂಪ್ ಸಿ ನೇಮಕ ದಾಖಲೆಗಳ ಪರಿಶೀಲನೆ

ಬೆಂಗಳೂರು: ಕರ್ನಾಟಕ ಲೋಕಸೇವಾ ಆಯೋಗದಿಂದ 2024 ನೇ ಮಾ.15 ರಂದು ಅಧಿಸೂಚಿಸಲಾದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿನ ಗ್ರೂಪ್ ಸಿ ವೃಂದದ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಉಳಿಕೆ ಮೂಲವೃಂದದ 150 ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ಮೂಲದಾಖಲೆಗಳ ಪರಿಶೀಲನೆಯನ್ನು ಸೆ.24 ರಿಂದ 26 ರವರೆಗೆ ಬೆಂಗಳೂರಿನ ಆಯೋಗದ ಕೇಂದ್ರ ಕಚೇರಿಯಲ್ಲಿ ನಡೆಸಲಾಗುವುದು. ನೇಮಕಾತಿಯ ಮೂಲದಾಖಲೆಗಳ ಪರಿಶೀಲನಾ ವೇಳಾಪಟ್ಟಿಯನ್ನು ಆಯೋಗದ ವೆಬ್‌ಸೈಟ್ http://kpsc.kar.nic.in ನಲ್ಲಿ ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಕಟಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ನೃತ್ಯೋತ್ಸವ-ಸಂಪ್ರದಾಯ ಕಾರ್ಯಕ್ರಮ ಸೆ. 12ಕ್ಕೆ

ಬೆಂಗಳೂರು: ಮಲ್ಲೇಶ್ವರ ಸೇವಾ ಸದನದಲ್ಲಿ ಸೆ.12ರ ಸಂಜೆ 6.00 ಗಂಟೆಗೆ ನೃತ್ಯಾಂಗನಾ ಇನ್‌ಸ್ಟಿಟ್ಯೂಟ್ ಆಫ್ ಪರ್ಫಾರ್ಮಿಂಗ್ ಆರ್ಟ್ಸ್‌ನಿಂದ ನೃತ್ಯೋತ್ಸವ ಸಂಪ್ರದಾಯ – ಎ ಫೆಸ್ಟಿವಲ್ ಆಫ್ ಡ್ಯಾನ್ಸ್ ಟ್ರೆಡಿಷನ್ಸ್ ದ 2ನೇ ಆವೃತ್ತಿಯನ್ನು ಆಯೋಜಿಸಲಾಗಿದೆ. ಈ ಉತ್ಸವದಲ್ಲಿ ಮೂವರು ಖ್ಯಾತ ಕಲಾವಿದರು ತಮ್ಮ ಶಾಸ್ತ್ರೀಯ ನೃತ್ಯ ಶೈಲಿಗಳನ್ನು ಪ್ರದರ್ಶಿಸಲಿದ್ದು, ಸೌರವ್ ರಾಯ್ ಅವರ ಕಥಕ್, ಸರಿತಾ ಮಿಶ್ರಾ ಅವರ ಒಡಿಸ್ಸಿ ಹಾಗೂ ಸ್ವಪ್ನ ರಾಜೇಂದ್ರಕುಮಾರ್‌ರ ಮೋಹಿನಿಯಟ್ಟಂ ಪ್ರದರ್ಶನವಾಗಲಿದೆ. ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ನೃತ್ಯಗುರು ಹಾಗೂ ಕರ್ನಾಟಕ ಕಲಾಶ್ರೀ ಪ್ರಶಸ್ತಿ ಪುರಸ್ಕೃತ ಅಕಾಡೆಮಿ ಆಫ್ ಭಾರತನಾಟ್ಯಂ ನಿರ್ದೇಶಕಿ ಗಾಯತ್ರಿ ಕೇಶವನ್ ಹಾಗೂ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ವಿಜೇತ ಸುಧಾಕರನ್ ರಮಂತಾಳಿ ಆಗಮಿಸಲಿದ್ದಾರೆ. ಟಿಕೆಟ್ ಮತ್ತು ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ: 8355996919

ಬೈಕಂಪಾಡಿ: ಅಗ್ನಿ ಅವಘಡ

ಮಂಗಳೂರು: ಬೈಕಂಪಾಡಿ ಕೈಗಾರಿಕಾ ವಲಯದಲ್ಲಿ ಕಾರ್ಯಾಚರಿಸುತ್ತಿದ್ದ ಆರೋಮಾರ್ಘುನ್ ಸುಗಂಧ ದ್ರವ್ಯ ತಯಾರಿಕಾ ಕಂಪೆನಿಗೆ ಸೆ.10ರ ಬುಧವಾರ ಮುಂಜಾನೆ ಸುಮಾರು 5 ಗಂಟೆಗೆ ಬೆಂಕಿ ತುಗುಲಿದ ಘಟನೆ ನಡೆದಿದೆ. ಘಟನೆಯಲ್ಲಿ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ ಎಂದು ತಿಳಿದು ಬಂದಿದ್ದು, ಅಪಾರ ನಷ್ಟ ಸಂಭವಿಸಿದೆ ಎಂದು ಹೇಳಲಾಗಿದೆ. ಘಟನೆಯ ಮಾಹಿತಿ ತಿಳಿಯುತ್ತಿದ್ದಂತೆ ಎಂಸಿಎಫ್, ಎನ್ಎಂ ಪಿಎ, ಮತ್ತು ಕದ್ರಿಯ ಅಗ್ನಿ ಶಾಮಕ ದಳ ವಾಹನಗಳು ಸ್ಥಳಕ್ಕೆ ಬಂದು ಬೆಂಕಿ ನಂದಿಸಿವೆ. ಅಗ್ನಿ ಅವಘಡದ ಕಾರಣ ಪತ್ತೆಹಚ್ಚಲು ತನಿಖೆ ಆರಂಭಿಸಿದ್ದಾರೆ.

ಮತದಾರ ಪಟ್ಟಿಗೆ ಸೋನಿಯಾ ಹೆಸರು: ಕಾಯ್ದಿರಿಸಿದ ಆದೇಶ

ದೆಹಲಿ: ಭಾರತದ ಪೌರತ್ವ ಪಡೆಯುವುದಕ್ಕೂ 3 ವರ್ಷ ಮೊದಲೇ ಸೋನಿಯಾ ಗಾಂಧಿ ಹೆಸರು ದೇಶದ ಮತದಾರರ ಪಟ್ಟಿಗೆ ಸೇರಿಸಲಾಗಿತ್ತು ಎಂದು ಆರೋಪಿಸಿ ಸೋನಿಯಾ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಸಲ್ಲಿಸಲಾಗಿದ್ದ ಅರ್ಜಿಯ ವಿಚಾರಣೆ ಮುಕ್ತಾಯಗೊಳಿಸಿರುವ ದೆಹಲಿ ನ್ಯಾಯಾಲಯ, ಅರ್ಜಿ ಮೇಲಿನ ಆದೇಶ ಕಾಯ್ದಿರಿಸಲಾಗಿದೆ ಎಂದು ಬುಧವಾರ ಹೇಳಿದೆ. 1980ರ ಜನವರಿಯಲ್ಲಿ ಸೋನಿಯಾ ಗಾಂಧಿ ಭಾರತೀಯ ಪ್ರಜೆಯಾಗಿರಲಿಲ್ಲ. ಹಾಗಿದ್ದರೂ ಅವರ ಹೆಸರನ್ನು ದೆಹಲಿ ಕ್ಷೇತ್ರದ ಮತದಾರರ ಪಟ್ಟಿಗೆ ಸೇರಿಸಲಾಗಿದೆ ಎಂದು ವಿಕಾಸ್ ತ್ರಿಪಾಠ್ ನ್ಯಾಯಾಲದಲ್ಲಿ ದಾವೆ ಹೂಡಿದ್ದರು. ಅರ್ಜಿಯ ವಿಚಾರಣೆ ನಡೆಸಿದ ಹೆಚ್ಚುವರಿ ಮುಖ್ಯ ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟ್ ವೈಭವ್ ಚೌರಾಸಿಯಾ, 'ಆದೇಶ ಕಾಯ್ದಿರಿಸಲಾಗಿದೆ' ಎಂದು ಹೇಳಿದರು. ಆ ಬಳಿಕ ಸೋನಿಯಾ ಹೆಸರನ್ನು 1982ರಲ್ಲಿ ಪಟ್ಟಿಯಿಂದ ತೆಗೆಸಲಾಗಿತ್ತು. ಅವರು ಪೌರತ್ವ ಪಡೆದ ನಂತರ(1983) ಮತದಾರರ ಪಟ್ಟಿಗೆ ಮತ್ತೆ ಹೆಸರು ಸೇರಿಸಲಾಗಿತ್ತು.

ಮಾನಸ ಗಂಗೋತ್ರಿಯ ಬಯಲು ರಂಗಮಂದಿರದಲ್ಲಿ ಕಾರ್ಯಕ್ರಮ ಆಯೋಜನೆ | ಸಹಕಾರ ಸಚಿವರಿಂದ ಉದ್ಘಾಟನೆ

ಯುವ ಸಂಭ್ರಮಕ್ಕೆ ಅದ್ದೂರಿಯ ಚಾಲನೆ

ಮೈಸೂರು: ಮೈಸೂರು ದಸರಾ ಕೇವಲ ಜಿಲ್ಲೆ ಇಲ್ಲವೇ ರಾಜ್ಯಕ್ಕೆ ಸೀಮಿತವಲ್ಲ, ಇದರ ಖ್ಯಾತಿ ಅದೆಷ್ಟೋ ವರ್ಷಗಳಿಂದ ದೇಶ-ವಿದೇಶಗಳಲ್ಲೂ ಪಸರಿಸಿರುವುದು ಅದರ ಜನಪ್ರಿಯತೆಗೆ ಸಾಕ್ಷಿ ಎಂದು ಪಶುಸಂಗೋಪನಾ ಸಚಿವ ಕೆ. ವೆಂಕಟೇಶ್ ಹೇಳಿದರು.

ಮಾನಸ ಗಂಗೋತ್ರಿಯ ಬಯಲು ರಂಗಮಂದಿರದಲ್ಲಿ ಆಯೋಜಿಸಲಾಗಿದ್ದ 'ಯುವ ಸಂಭ್ರಮ ಕಾರ್ಯಕ್ರಮ' ಉದ್ಘಾಟಿಸಿ ಅವರು ಮಾತನಾಡಿದರು.

ನಮ್ಮ ನಾಡಹಬ್ಬಕ್ಕೆ ಪ್ರತೀವರ್ಷ ಲಕ್ಷಾಂತರ ಜನರು ಬಂದು ತಮ್ಮ ಕಣ್ತುಂಬಿ ಸಂತೋಷಪಟ್ಟುಕೊಳ್ಳುತ್ತಾರೆ. ದಸರಾ ಅಂಗವಾಗಿ ನಡೆಯುತ್ತಿರುವ ಯುವ ಸಂಭ್ರಮವು ಕೂಡ ನಾಡಹಬ್ಬದ ಆಕರ್ಷಣೆಗಳಲ್ಲಿ ಒಂದಾಗಿದೆ. ಇದು ಯುವ ಪೀಳಿಗೆ ಅತ್ಯಂತ ಪ್ರಿಯವಾದ ಹಬ್ಬವಾಗಿದೆ. ವಿವಿಧ ಜಿಲ್ಲೆಗಳಿಂದ ಕಾಲೇಜು ವಿದ್ಯಾರ್ಥಿಗಳು ಆಗಮಿಸಿದ್ದು, ಈ ಸಲ ಯುವ ದಸರಾ ಸಂಭ್ರಮ ಯಶಸ್ವಿಯಾಗಿ ನಡೆಯಲಿ ಎಂದು ಶುಭ ಹಾರೈಸಿದರು.

ಈ ವರ್ಷ ಯುವ ಸಂಭ್ರಮ ಅತ್ಯಂತ ವಿಶೇಷವಾಗಿ ನಡೆಯುತ್ತಿದ್ದು, ಇದರಲ್ಲಿ ಭಾಗವಹಿಸುವಂತಹ ಯುವಕ-ಯುವತಿಯರಿಗೆ ಹಾಗೂ ಯುವ ಪ್ರೇಕ್ಷಕರಿಗೆ ನಿಜಕ್ಕೂ ಮನರಂಜನೆಯ ಸಂಭ್ರಮ ಎಂದೂ ಹೇಳಿದರು.

ಶಾಸಕ ಜಿ.ಟಿ ದೇವೇಗೌಡ ಇದೇ ಸಂದರ್ಭದಲ್ಲಿ ಮಾತನಾಡಿ, ಯುವಕರ ಸಂಭ್ರಮ ಎಂದೇ ಖ್ಯಾತಿ ಪಡೆದಿರುವ ಯುವ ಸಂಭ್ರಮವು ದಸರಾ ಮಹೋತ್ಸವದ ಮೊದಲ ಅದ್ದೂರಿ ಕಾರ್ಯಕ್ರಮವಾಗಿದ್ದು, ಇನ್ನು ಹಲವಾರು ದಿನ ನಡೆಯುವ ಈ ಸ್ಪರ್ಧೆಗಳಲ್ಲಿ ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಎಂದು ಕರೆ ನೀಡಿದರು.

ದಸರಾ ಮಹೋತ್ಸವದ ಮುನ್ನಾ ದಿನಗಳಲ್ಲಿ ನಡೆಯುವ ಯುವ ಸಂಭ್ರಮಕ್ಕೆ ಮೈಸೂರಿನ ಮಾನಸಗಂಗೋತ್ರಿಯ ಬಯಲುರಂಗಮಂದಿರದಲ್ಲಿ ಬುಧವಾರ ಚಾಲನೆ ದೊರೆಯಿತು.

ನರಸಿಂಹರಾಜ ವಿಧಾನಸಭಾ ಕ್ಷೇತ್ರದ ಶಾಸಕರಾದ ತನ್ವೀರ್ ಸೇಟ್ ಅವರು ಮಾತನಾಡಿ, ಯುವಸಂಭ್ರಮದಲ್ಲಿ ನಮ್ಮ ಸಂಸ್ಕೃತಿಯನ್ನು ಪ್ರತಿಬಿಂಬಿಸುವಂತಹ ಕಾರ್ಯಕ್ರಮಗಳು ನಡೆಯಲಿದ್ದು, ಅರ್ಥಪೂರ್ಣ ಕಾರ್ಯಕ್ರಮವನ್ನು ಪ್ರತಿಯೊಬ್ಬರೂ ವೀಕ್ಷಿಸಬೇಕು. ಕಾರ್ಯಕ್ರಮದಲ್ಲಿ ತಮ್ಮ ಪ್ರತಿಭಾ ಪ್ರದರ್ಶನ ನೀಡಲು ಬಂದಿರುವಂತಹ ಪ್ರತಿಭೆಗಳಿಗೆ ಪ್ರೋತ್ಸಾಹ ನೀಡಿ ಅವರಲ್ಲಿ ಹೆಚ್ಚಿನ ಆತ್ಮವಿಶ್ವಾಸವನ್ನು ತುಂಬಬೇಕು ಎಂದು ಹೇಳಿದರು.

ನಟ ಯುವ ರಾಜಕುಮಾರ್ ಮಾತನಾಡಿ, ದಸರಾ ಅಂದರೆ ಅರಮನೆ, ರಾಜರು, ಕುವೆಂಪು ನೆನಪಾಗುತ್ತಾರೆ ಎಂದರು. ಅವರು ಕಾರ್ಯ್ಕರಮದಲ್ಲಿ 'ಬ್ಯಾಂಗಲ್ ಬಂಗಾರಿ' ಗೀತೆ ನೃತ್ಯ ಮಾಡಿ ಆಗಮಿಸಿದವರಲ್ಲಿ ಉತ್ಸಾಹ ತುಂಬಿದರು.

ಮೊದಲ ದಿನ ಕಾಲೇಜು ವಿದ್ಯಾರ್ಥಿಗಳಿಂದ ವಿವಿಧ ನೃತ್ಯಗಳು ನಡೆದವು. ವಿಧಾನ ಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ, ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಉಪಾಧ್ಯಕ್ಷೆ ಡಾ.ಪುಷ್ಪಾ ಅಮರ್ ನಾಥ್, ಜಿಲ್ಲಾಧಿಕಾರಿ ಜಿ. ಲಕ್ಷ್ಮಿಕಾಂತ ರೆಡ್ಡಿ, ಜಿಪಂ ಸಿಇಒ ಎಸ್.ಯುಕೇಶ್ ಕುಮಾರ್, ಮಹಾನಗರ ಪಾಲಿಕೆ ಆಯುಕ್ತ ಶೇಕ್ ತನ್ವೀರ್ ಆಸಿಫ್ ಇನ್ನಿತರರು ಉಪಸ್ಥಿತರಿದ್ದರು.

> 'ಯುವಸಂಭ್ರಮ' ಯುವಕ-ಯುವತಿಯರಿಗೆ ಪಾಲಿಗೆ ನಿಜಕ್ಕೂ ರಾಸದೌತಣ. ಈ ಕಾರ್ಯಕ್ರಮವನ್ನು ವಿಜೃಂಭಣೆಯಾಗಿ ನೆರವೇರಿಸಲು ಸರಕಾರ ಅತೀ ಹೆಚ್ಚಿನ ಅನುದಾನವನ್ನು ನೀಡಿ ಸಹಕಾರಿಸಿದೆ. **-ಜಿ.ಟಿ. ದೇವೇಗೌಡ,** ಶಾಸಕ

> ನಾಡಹಬ್ಬ ದಸರಾ ಸದಾ ವಿಜೃಂಭಣೆಯಿಂದ ಆಚರಣೆಗೊಳ್ಳುತ್ತಿರುವುದು ನಿಜಕ್ಕೂ ಸಂತಸದ ಸಂಗತಿ. ಯುವಕ-ಯುವತಿಯರು ಇದರಲ್ಲಿ ಸಕ್ರಿಯವಾಗಿ ಭಾಗವಹಿಸಿ ಯುವ ಸಂಭ್ರಮವನ್ನು ಆಚರಿಸಿ ಯಶಸ್ವಿಗೊಳಿಸಬೇಕು.
> **-ಅಮೃತ ಅಯ್ಯಂಗಾರ್,** ಚಿತ್ರ ನಟಿ

ಅನರ್ಹರ ಬಿಪಿಎಲ್ ಕಾರ್ಡ್ ರದ್ದು

ಆಹಾರ ಇಲಾಖೆ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ

ಬೆಂಗಳೂರು: ರಾಜ್ಯದಲ್ಲಿ ಅನರ್ಹ ಬಿಪಿಎಲ್ ಕಾರ್ಡ್‌ಗಳನ್ನು ರದ್ದುಪಡಿಸುವ ಸಮಯದಲ್ಲಿ ಅರ್ಹರಿಗೆ ಸಮಸ್ಯೆಯಾಗದಂತೆ ಕ್ರಮವಹಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ನಡೆದ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ರಾಜ್ಯದಲ್ಲಿ ಅನರ್ಹ ಬಿಪಿಎಲ್ ಕಾರ್ಡ್‌ಗಳನ್ನು ರದ್ದುಪಡಿಸಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು. ಆದರೆ ಅರ್ಹ ಬಿಪಿಎಲ್ ಕಾರ್ಡುದಾರರಿಗೆ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳಬೇಕು. ಅರ್ಹರು ಯಾರಾದರೂ ಬಿಟ್ಟು ಹೋಗಿದ್ದರೆ ಅವರಿಗೆ ಬಿಪಿಎಲ್ ಕಾರ್ಡ್ ನೀಡಲು ಕ್ರಮ ಕೈಗೊಳ್ಳಬೇಕು ಎಂದು ಸೂಚನೆ ನೀಡಿದ್ದಾರೆ.

ಈಗಾಗಲೇ ಗುರುತಿಸಲಾಗಿರುವ ಅನರ್ಹ ಬಿಪಿಎಲ್ ಪಡಿತರ ಚೀಟಿದಾರರ ಪೈಕಿ 3,65,614 ಪಡಿತರ ಚೀಟಿಗಳನ್ನು ರದ್ದು/ವರ್ಗ ಬದಲಾವಣೆ ಮಾಡಲಾಗಿದೆ. ಅನ್ನಭಾಗ್ಯ ಯೋಜನೆಯಲ್ಲಿ ಅಕ್ಕಿಯ ಜತೆಗೆ ಪೌಷ್ಟಿಕ ಧಾನ್ಯ, ಅಗತ್ಯ ಆಹಾರ ಸಾಮಗ್ರಿಗಳನ್ನು ಒಳಗೊಂಡ ಕಿಟ್ ಒದಗಿಸುವ ಕುರಿತು ಪರಿಶೀಲನೆ ನಡೆಸಲಾಗಿದ್ದು, ಈ ಕುರಿತು ಪ್ರಸ್ತಾವನೆ ಸಲ್ಲಿಸುವಂತೆ ಅಧಿಕಾರಿಗಳಿಗೆ ಸೂಚನೆ ಕೊಟ್ಟರು.

ಜಿಪಿಎಸ್ ಟ್ರ್ಯಾಕರ್ ಅಳವಡಿಕೆಗೆ ಸೂಚನೆ: ಪರಿಶಿಷ್ಟ ಜಾತಿ ಮತ್ತು ಪಂಗಡದ ಸಮುದಾಯದವರಿಗೆ ಹೊಸ ನ್ಯಾಯ ಬೆಲೆ ಅಂಗಡಿಗಳನ್ನು ಆದ್ಯತೆ ಮೇಲೆ ನೀಡಲು ಕ್ರಮ ಕೈಗೊಳ್ಳಬೇಕು. ಆಹಾರ ಧಾನ್ಯಗಳನ್ನು ಸರಬರಾಜು ಮಾಡುತ್ತಿರುವ ವಾಹನಗಳಿಗೆ ಜಿಪಿಎಸ್ ಟ್ರ್ಯಾಕರ್‌ಗಳನ್ನು ಅಳವಡಿಸಬೇಕು. ರಾಜ್ಯದಲ್ಲಿರುವ ಎಲ್ಲಾ ಗೋದಾಮುಗಳಲ್ಲಿ ಸಿಸಿಟಿವಿ ಅಳವಡಿಸಲು ಕ್ರಮ ಕೈಗೊಳ್ಳಬೇಕು. ಕನಿಷ್ಠ ಬೆಂಬಲ ಯೋಜನೆಯಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಹಾಗೂ ಸ್ವಸಹಾಯ ಸಂಘಗಳ ಸಹಯೋಗದೊಂದಿಗೆ ಆಹಾರಧಾನ್ಯಗಳ ಖರೀದಿ ಪ್ರಕ್ರಿಯೆ ನಡೆಸಬೇಕು. ಇದೇ ಪ್ರಥಮ ಬಾರಿಗೆ 0.29 ಲಕ್ಷ ಮೆಟ್ರಿಕ್ ಟನ್ ಕಿರುಸಿರಿಧಾನ್ಯಗಳನ್ನು ಖರೀದಿಸಲಾಗುತ್ತಿದೆ. ಆಹಾರ ಮತ್ತು ನಾಗರಿಕ ಸರಬರಾಜು ನಿಗಮದಲ್ಲಿ ಖಾಲಿಯಿರುವ ಅಗತ್ಯ ಸಿಬ್ಬಂದಿ ನೇಮಕಾತಿಗೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಅನುದಾನ ನೀಡಲು ಸೂಚನೆ: ವಸತಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ವಿವಿಧ ವಸತಿ ಯೋಜನೆಗಳಲ್ಲಿ ನಿರ್ಮಿಸಲಾಗುತ್ತಿರುವ ಮನೆಗಳನ್ನು ಪೂರ್ಣಗೊಳಿಸುವ ಅಗತ್ಯ ಅನುದಾನ ಹಂಚಿಕೆ ಕುರಿತಾಗಿ ಪ್ರಸ್ತಾವನೆಗಳನ್ನು ಸಲ್ಲಿಸುವಂತೆ ಹಣಕಾಸು ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ. ಪ್ರಧಾನಮಂತ್ರಿ ಆವಾಸ್ ಯೋಜನೆಯಲ್ಲಿ ಹಿಂದಿನ ಬಾರಿ ನಮ್ಮ ಸರಕಾರವಿದ್ದಾಗ 43,874 ಮನೆಗಳು ಸೇರಿದಂತೆ ಒಟ್ಟು 47,848 ಮನೆಗಳನ್ನು ಮಂಜೂರು ಮಾಡಲಾಗಿದೆ. ಇದರಲ್ಲಿ 13,303 ಮನೆಗಳು ಬಹುತೇಕ ಪೂರ್ಣಗೊಂಡಿದ್ದು, ಒಟ್ಟು 25,815 ಮನೆಗಳು ನಿರ್ಮಾಣ ಹಂತದಲ್ಲಿವೆ. ಇದರಲ್ಲಿ ಫಲಾನುಭವಿಗಳ ವಂತಿಕೆ ಒಟ್ಟು 134ಕೋಟಿ ರು. ಸಂಗ್ರಹಿಸಲಾಗಿದೆ ಎಂದು ತಿಳಿಸಿದರು.

ಮೊದಲ ಹಂತದಲ್ಲಿ 7900 ಮನೆಗಳು ಬಹುತೇಕ ಪೂರ್ಣಗೊಂಡಿದ್ದು, ಫಲಾನುಭವಿಗಳ ವಂತಿಕೆ ಮೊತ್ತ 216 ಕೋಟಿ ಬಾಕಿಯಿದೆ. ಮನೆ ಹಂಚಿಕೆ ಮಾಡಲು ಸಾಧ್ಯವಾಗುವಂತೆ ಈ ಬಾಕಿ ಮೊತ್ತದ ಪಾವತಿ ಬಗ್ಗೆ ಹುಡ್ಕೋದಿಂದ ಸಾಲ ಪಡೆಯುವುದು ಸೇರಿದಂತೆ ಸೂಕ್ತ ಪ್ರಸ್ತಾವನೆ ಸಿದ್ಧಪಡಿಸಲು ಮುಖ್ಯಮಂತ್ರಿ ಅವರು ಸೂಚನೆ ನೀಡಿದರು. ಸ್ಲಂ ಬೋರ್ಡ್‌ನಲ್ಲಿ 42ಸಾವಿರ ಮನೆಗಳನ್ನು ನಿರ್ಮಿಸಲಾಗುತ್ತಿದ್ದು, ಇಲ್ಲಿ ರಸ್ತೆ ಸೇರಿದಂತೆ ಮೂಲಸೌಲಭ್ಯಗಳನ್ನು ಕಲ್ಪಿಸಲು ಅನುದಾನ ಒದಗಿಸಲಾಗುವುದು. ಅಂಬೇಡ್ಕರ್ ವಸತಿ ಯೋಜನೆಯಡಿ(ಗ್ರಾಮೀಣ) 900 ಕೋಟಿ ರು. ಅನುದಾನ ಬಜೆಟ್‌ನಲ್ಲಿ ನಿಗದಿಪಡಿಸಲಾಗಿದೆ. ಈ ಯೋಜನೆಯಡಿ 94,939 ಮನೆಗಳನ್ನು ನಿರ್ಮಿಸಲಾಗುತ್ತಿದ್ದು, 56,682 ಮನೆಗಳ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ ಎಂದು ಹೇಳಿದರು.

ಪಪ್ಪಿ ಕ್ಯಾಸಿನೋಗಳಲ್ಲಿಯೇ ಅಕ್ರಮ ಬೆಟ್ಟಿಂಗ್

ಬೆಂಗಳೂರು: ರಾಜ್ಯದಲ್ಲಿ ಕಾನೂನು ಬಾಹಿರ ಚಟುವಟಿಕೆಗಳಿಗೆ ಎಷ್ಟೇ ಕಡಿವಾಣ ಹಾಕಿದರೂ ಅಕ್ರಮ ಆನ್‌ಲೈನ್ ಮತ್ತು ಆಫ್‌ಲೈನ್ ಬೆಟ್ಟಿಂಗ್ ಎಗ್ಗಿಲ್ಲದೆ ನಡೆಯುತ್ತವೆ. ಇತ್ತೀಚೆಗಿನ ದಿನದಲ್ಲಿ ಇಂತಹ ಅಕ್ರಮಗಳಲ್ಲಿ ಜನಪ್ರತಿನಿಧಿಗಳೇ ಹೆಚ್ಚಾಗಿ ಭಾಗಿಯಾಗುತ್ತಿರುವುದು ತನಿಖೆಯಲ್ಲಿ ತಿಳಿದುಬರುತ್ತಿದೆ. ಅದರಲ್ಲಿಯೂ ಕ್ಯಾಸಿನೋಗಳಲ್ಲಿ ಅಕ್ರಮ ಬೆಟ್ಟಿಂಗ್ ಜಾಲ ವ್ಯಾಪಕವಾಗಿ ಹರಡಿದೆ. ಈ ಜಾಲದಲ್ಲಿ ನೇರವಾಗಿ ಕೆಲವರ ಹೆಸರು ಬಹಿರಂಗವಾದರೆ, ಇನ್ನು ಕೆಲವರು ಬೇನಾಮಿ ಹೆಸರಲ್ಲಿ ನಡೆಸುತ್ತಿರುವುದು ಕಂಡು ಬಂದಿದೆ.

ಅಕ್ರಮ ಆನ್‌ಲೈನ್ ಮತ್ತು ಬೆಟ್ಟಿಂಗ್‌ನಲ್ಲಿ ಭಾಗಿಯಾಗಿರುವ ಆರೋಪದ ಮೇಲೆ ಇತ್ತೀಚೆಗೆ ಜಾರಿ ನಿರ್ದೇಶನಾಲಯ (ಇಡಿ) ಅಧಿಕಾರಿಗಳು ಚಿತ್ರದುರ್ಗ ಶಾಸಕ ಕೆ.ಸಿ.ವೀರೇಂದ್ರ ಪಪ್ಪಿ ಅವರನ್ನು ಬಂಧಿಸಿದ್ದು, 14 ದಿನ ನ್ಯಾಯಾಂಗ ಬಂಧನಕ್ಕೊಳಗಾಗಿದ್ದಾರೆ. ವೀರೇಂದ್ರ ವಿರುದ್ಧ ಕ್ಯಾಸಿನೋಗಳಲ್ಲಿ ಅಕ್ರಮ ಬೆಟ್ಟಿಂಗ್ ನಡೆಸುತ್ತಿರುವ ಆರೋಪವನ್ನು ಇ.ಡಿ ಅಧಿಕಾರಿಗಳು ಮಾಡಿದ್ದಾರೆ.

> **ಆನ್‌ಲೈನ್ ಬೆಟ್ಟಿಂಗ್ ಕಿಂಗ್**
>
> ಬೆಟ್ಟಿಂಗ್ ದಂಧೆಯಲ್ಲಿ ಭಾರೀ ಪ್ರಮಾಣದ ಹಣದ ವಹಿವಾಟು ನೋಡಿದ ವೀರೇಂದ್ರ ಪಪ್ಪಿ, ನಂತರ ಆನ್‌ಲೈನ್ ಬೆಟ್ಟಿಂಗ್‌ಗೆ ತಮ್ಮ ಸಾಮ್ರಾಜ್ಯವನ್ನು ವಿಸ್ತರಣೆ ಮಾಡುತ್ತಾರೆ ಎನ್ನುವುದು ತನಿಖೆಯಲ್ಲಿ ಗೊತ್ತಾಗುತ್ತದೆ. ಈ ಮೂಲಕ ಅಕ್ರಮ ಹಣ ವಹಿವಾಟು ನಡೆಸಿರುವುದು ಗೊತ್ತಾಗಿದೆ. ಆನ್‌ಲೈನ್ ಬೆಟ್ಟಿಂಗ್ ಮೂಲಕ ಕೋಟ್ಯಂತರ ರು.ಗಳಿಕೆ ಮಾಡಿ ನಂತರ ತಮ್ಮ ವ್ಯವಹಾರವನ್ನು ದೇಶದ ಇತರೆ ರಾಜ್ಯಗಳಿಗೆ ನಂತರ ವಿದೇಶಕ್ಕೆ ವಿಸ್ತರಣೆ ಮಾಡಿದ್ದಾರೆ.

ಗೋವಾದ ಐದು ಕ್ಯಾಸಿನೊಗಳು ಸೇರಿದಂತೆ ವೀರೇಂದ್ರ ಪಪ್ಪಿ ಮತ್ತು ಆತನ ಸಹಚರರಿಗೆ ಸಂಬಂಧಿಸಿದ 31 ಸ್ಥಳಗಳಲ್ಲಿ ಇಡಿ ಶೋಧ ನಡೆಸಿತ್ತು. ಈ ಪೈಕಿ ಚಿತ್ರದುರ್ಗದ 6, ಬೆಂಗಳೂರಿನ 10, ಗೋವಾದ 5, ಹುಬ್ಬಳ್ಳಿ, ಮುಂಬೈ, ಜೋಧಪುರದ ತಲಾ ಒಂದು ಕಡೆ ಮತ್ತು ಸಿಕ್ಕಿಂನಲ್ಲಿ ಐದು ಕಡೆ ಕಾರ್ಯಾಚರಣೆ ಕೈಗೊಳ್ಳಲಾಗಿತ್ತು. ಹಲವಾರು ಜೂಜಾಟದ ತಾಣಗಳನ್ನು ನಡೆಸುತ್ತಿದ್ದರೆ, ಆತನ ಸಹೋದರ ದುಬೈನಿಂದ ಪಪ್ಪಿಯ ಕಾಲ್ ಸೆಂಟರ್ ಮತ್ತು ಗೇಮಿಂಗ್ ವ್ಯವಹಾರಕ್ಕೆ ಸಂಬಂಧಿಸಿದ ಮೂರು ವ್ಯವಹಾರ ಸಂಸ್ಥೆಗಳನ್ನು ನಿರ್ವಹಿಸುತ್ತಿದ್ದ ಎಂದು ಇ.ಡಿ ಹೇಳಿದೆ.

ಅಂತಾರಾಷ್ಟ್ರೀಯ ಗ್ಯಾಂಬ್ಲಿಂಗ್, ಐಶಾರಾಮಿ ಕ್ಲಬ್ ಸದಸ್ಯತ್ವ: ಇ.ಡಿ ಅಧಿಕಾರಿಗಳು ದಾಳಿ ಮಾಡಿದಂತಹ ಸಮಯದಲ್ಲಿ ಅಂತಾರಾಷ್ಟ್ರೀಯ ಗ್ಯಾಂಬ್ಲಿಂಗ್ ಮತ್ತು ಐಷಾರಾಮಿ ಕ್ಲಬ್ ಸದಸ್ಯತ್ವವಿರುವುದು ಸಾಬೀತಾಗಿದೆ. ಪರಿಶೀಲನೆ ಕಾರ್ಯ ನಡೆಸಿದ ಅಧಿಕಾರಿಗಳಿಗೆ ಹಲವಾರು ಅಂತಾರಾಷ್ಟ್ರೀಯ ಕ್ಯಾಸಿನೊ ಮತ್ತು ಐಷಾರಾಮಿ ಕ್ಲಬ್‌ಗಳ ಸದಸ್ಯತ್ವ ಕಾರ್ಡ್‌ಗಳು ದೊರೆತಿವೆ. ಇವುಗಳಲ್ಲಿ ಎಂಜಿಎಂ ಕ್ಯಾಸಿನೊ, ಮೆಟ್ರೋಪಾಲಿಟನ್ ಕ್ಯಾಸಿನೊ, ಬೆಲ್ಲಾಜಿಯೊ ಕ್ಯಾಸಿನೊ, ಮರೀನಾ ಕ್ಯಾಸಿನೊ ಮತ್ತು ಕ್ಯಾಸಿನೊ ಜ್ಯುವೆಲ್‌ನ ಸದಸ್ಯತ್ವ ಕಾರ್ಡ್‌ಗಳು ಸೇರಿವೆ. ಇದರ ಜತೆಗೆ, ತಾಜ್, ಹಯಾತ್ ಮತ್ತು ಲೀಲಾ ಅಂತಹ ಪ್ರತಿಷ್ಠಿತ ಹೋಟೆಲ್‌ಗಳ ಐಷಾರಾಮಿ ಆತಿಥ್ಯ ಸದಸ್ಯತ್ವ ಕಾರ್ಡ್‌ಗಳೂ ಪತ್ತೆಯಾಗಿವೆ ಎಂದು ಇಡಿ ಮೂಲಗಳು ಹೇಳಿವೆ.

ಇಬ್ಬರ ಒಪ್ಪಿಗೆಯಲ್ಲಿಯೇ ಎಲ್ಲ ಯೋಜನೆಗಳನ್ನು ನಡೆಸಲಾಗಿದೆ

ಏಕಪಕ್ಷೀಯ ತೀರ್ಮಾನ ಕೈಗೊಂಡಿಲ್ಲ: ಖಾದರ್

ಬೆಂಗಳೂರು: ವಿಧಾನ ಮಂಡಲ ಸಚಿವಾಲ ಯದ ತೀರ್ಮಾನಗಳನ್ನು ತೆಗೆದುಕೊಳ್ಳುವಾಗ ತಮ್ಮ ಅಭಿಪ್ರಾಯ ಪರಿಗಣಿಸುತ್ತಿಲ್ಲವೆಂದು ಅಸಮಾಧಾನ ಹೊರಹಾಕಿದ್ದ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರ ಆರೋಪಕ್ಕೆ, ಸ್ಪೀಕರ್ ಯು.ಟಿ. ಖಾದರ್ ಪ್ರತಿಕ್ರಿಯಿಸಿದ್ದು, ಯಾವುದೇ ತೀರ್ಮಾನವನ್ನು ಏಕಪಕ್ಷೀಯವಾಗಿ ತೆಗೆದುಕೊಂಡಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಈ ಸಂಬಂಧ ಬಸವರಾಜ ಹೊರಟ್ಟಿ ಅವರಿಗೆ ಸುದೀರ್ಘ ಪತ್ರ ಬರೆದಿರುವ ಖಾದರ್, ಸಣ್ಣಪುಟ್ಟ ನ್ಯೂನತೆಗಳಿದ್ದರೆ, ಚರ್ಚಿಸಿ ಸಮನ್ವಯದಿಂದ ಪರಿಹರಿಸಿಕೊಂಡು ಕಾರ್ಯನಿರ್ವಹಿಸಿ, ವಿಧಾನಮಂಡಲ ಹಾಗೂ ರಾಜ್ಯದ ಕೀರ್ತಿಗೆ ಭಾಜನರಾಗೋಣ ಎಂದು ತಿಳಿಸಿದ್ದಾರೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ವಿಧಾನ ಪರಿಷತ್ ಮತ್ತು ವಿಧಾನಸಭೆ ಒಂದೇ ನಾಣ್ಯದ ಎರಡು ಮುಖಗಳಂತೆ. ಸಂಬಂಧಪಟ್ಟ ಸಚಿವಾಲಯದ ಕಚೇರಿ ಕಾರ್ಯಕ್ರಮಗಳೂ ಸಹ ಇದೇ ದೃಷ್ಟಿಯಿಂದ ಹಾಗೂ ದಿಕ್ಕಿನಲ್ಲಿ ಸಾಗಬೇಕೆಂಬ ತಮ್ಮ ಅಭಿಪ್ರಾಯಕ್ಕೆ ನಾನು ಸಂಪೂರ್ಣ ಸಹಮತಿ ವ್ಯಕ್ತಪಡಿಸುತ್ತೇನೆ. ಇದು ನನ್ನ ಮೊದಲ ಆದ್ಯತೆಯಾಗಿದೆ. ಆದರೆ, ತಾವು ಬರೆದ ಪತ್ರದಲ್ಲಿ ವಿಧಾನಪರಿಷತ್ ಸಭಾಪತಿಯಾದ ತಮ್ಮನ್ನು ಸೌಜನ್ಯಕ್ಕಾದರೂ ಸಂಪರ್ಕಿಸದೆ, ಅಧಿಕೃತ ಕಾರ್ಯಕ್ರಮಗಳ ರೂಪುರೇಷೆಗಳನ್ನು ಸಿದ್ದಪಡಿಸಿ, ಏಕಪಕ್ಷೀಯವಾಗಿ ನಿರ್ಧಾರ ಕೈಗೊಳ್ಳಲಾಗಿದೆ ಎಂಬುದಾಗಿ ಉಲ್ಲೇಖಿಸಿರುತ್ತೀರಿ. ಈ ಸಂಬಂಧದಲ್ಲಿ ತಮ್ಮ ಗಮನಕ್ಕೆ ಕೆಲ ಅಂಶಗಳನ್ನು ತರಬಯಸುತ್ತೇನೆ.

ಕರ್ನಾಟಕ ವಿಧಾನಮಂಡಲದ ಇತಿಹಾಸದಲ್ಲಿ ಪ್ರಥಮ ಬಾರಿಗೆ ಪುಸ್ತಕ ಮೇಳವನ್ನು ಆಯೋಜಿಸಲಾಗಿದ್ದು, ಈ ಮೇಳದ ರೂಪುರೇಷೆ ಇತ್ಯಾದಿಗಳನ್ನು ತಮ್ಮ ಗಮನಕ್ಕೆ ತರಲಾಗಿತ್ತು. ಈ ಮೇಳ ಮುಖ್ಯಮಂತ್ರಿಯವರಿಂದ ಉದ್ಘಾಟಿಸಿದ್ದು, ನಮ್ಮಿಬ್ಬರ ಜಂಟಿ ಅಧ್ಯಕ್ಷತೆಯಲ್ಲಿ ಉದ್ಘಾಟನಾ ಸಮಾರಂಭ ನಡೆದು, ಯಶಸ್ವಿಯಾಗಿ ರಾಜ್ಯದ ಜನರ ಮೆಚ್ಚುಗೆ ಪಡೆದಿದೆ. ಅಲ್ಲದೆ, ನಾವು ಇಬ್ಬರೂ ಸೇರಿ ರಾಜ್ಯಪಾಲರನ್ನು ಸ್ವಾಗತಿಸಿ, ಅವರೂ ನಮ್ಮಿಬ್ಬರೊಂದಿಗೆ ಪುಸ್ತಕ ಮೇಳವನ್ನು ವೀಕ್ಷಿಸಿ ಸಂತೋಷ ವ್ಯಕ್ತಪಡಿಸಿದ ವಿಚಾರಕ್ಕೂ ತಾವು ಸಾಕ್ಷಿಯಾಗಿದ್ದೀರಿ ಎಂದು ವಿವರಿಸಿದ್ದಾರೆ.

ಸುವರ್ಣ ವಿಧಾನಸೌಧದಲ್ಲಿ ಲೇಸರ್ ದೀಪಗಳನ್ನು ಅಳವಡಿಸಲಾಗಿದೆ. ಅದರಂತೆಯೇ ವಿಧಾನಸೌಧ ಕಟ್ಟಡದಲ್ಲಿಯೂ ಲೇಸರ್ ದೀಪ ಅಳವಡಿಸುವುದಕ್ಕೆ ನಾನು ಕಾಳಜಿ ವ್ಯಕ್ತಪಡಿಸಿದ್ದೆ. ಈ ವಿಚಾರವನ್ನು ಮುಖ್ಯಮಂತ್ರಿಗಳ ಗಮನಕ್ಕೆ ತಂದ ನಂತರ, ಅವರ ಆಸಕ್ತಿಯಿಂದ ಸರಕಾರದ ಮುಖ್ಯ ಕಾರ್ಯದರ್ಶಿ ಹಾಗೂ ಲೋಕೋಪಯೋಗಿ ಇಲಾಖೆಯ ಸಹಯೋಗದಿಂದ ಈ ಕಾರ್ಯ ನೆರವೇರಿದೆ. ಹೀಗಾಗಿ, ಈ ಯೋಜನೆ ಸರ್ಕಾರ ಮತ್ತು ಲೋಕೋಪಯೋಗಿ ಇಲಾಖೆಯ ಸಹಕಾರದಿಂದಲೇ ನಡೆದಿದೆ ಎಂದು ಸ್ಪಷ್ಟಪಡಿಸಿದದಾರೆ.

> ವಿಧಾನ ಮಂಡಲದಿಂದ ಆಯೋಜಿಸಲ್ಪಡುವ ಎಲ್ಲ ಕಾರ್ಯಕ್ರಮಗಳನ್ನು ಸೂಕ್ಷ್ಮವಾಗಿ ಗಮನಿಸಿ, ಆಗಾಗ ತಮಗೂ ತಿಳಿಸಿ, ಹಿರಿಯರಾದ ತಮ್ಮೊಂದಿಗೆ ಚರ್ಚಿಸಿ ನಿರ್ವಹಿಸಿದ್ದೆ ಎಂಬುದು ನನ್ನ ನಂಬಿಕೆ. ಆದರೂ, ತಮ್ಮ ಪತ್ರವನ್ನು ಸಕಾರಾತ್ಮಕವಾಗಿ ಸ್ವೀಕರಿಸಿರುತ್ತೇನೆ. ಇನ್ನು ಮುಂದೆ ಸಣ್ಣ ಸಣ್ಣ ನ್ಯೂನತೆಗಳಿದ್ದಲ್ಲಿ ಅವುಗಳನ್ನು ಚರ್ಚಿಸಿ ಸಮನ್ವಯದಿಂದ ಪರಿಹರಿಸಿಕೊಂಡು ಕಾರ್ಯನಿರ್ವಹಿಸಿ, ವಿಧಾನಮಂಡಲದ ಮತ್ತು ರಾಜ್ಯದ ಕೀರ್ತಿಗೆ ಭಾಜನರಾಗೋಣ.
> **- ಯು.ಟಿ. ಖಾದರ್,** ವಿಧಾನಸಭಾಧ್ಯಕ್ಷ

ಏಕಪಕ್ಷೀಯ ನಿರ್ಧಾರವಲ್ಲ

11ನೇ ಸಿಪಿಎ ಭಾರತ ವಲಯ ಸಮ್ಮೇಳನವನ್ನು ಕರ್ನಾಟಕದಲ್ಲಿ ಆಯೋಜಿ ಸಲು ಲೋಕಸಭಾ ಸಚಿವಾಲಯದಿಂದ ಕೋರಿಕೆ ಬಂದಿದ್ದು, ಅದಕ್ಕೆ ನಾವಿಬ್ಬರು ಸೇರಿ ಒಪ್ಪಿಗೆ ನೀಡಿರುತ್ತೇವೆ. ತದನಂತರ ಸಮ್ಮೇಳನದ ಆಯೋಜನೆ ಕುರಿತು ನಾನು ಸ್ವತಃ ತಮ್ಮ ಕೊಠಡಿಗೆ ಆಗಮಿಸಿ, ಪರಸ್ಪರ ಚರ್ಚಿಸಿದ ನಂತರ ಅಧಿವೇಶನವನ್ನು ನಡೆಸಲು ನಿರ್ಧಾರ ಕೈಗೊಂಡಿದ್ದೇವೆ. ಜೊತೆಗೆ, ಸಮ್ಮೇಳನದ ಪ್ರತಿನಿಧಿಗಳಿಗೆ ನಾವು ಇಬ್ಬರೂ ಸೇರಿ ಆಹ್ವಾನ ನೀಡಿದ್ದೇವೆ. ಸಮ್ಮೇಳನದ ವಿವರ ಹಾಗೂ ವೇಳಾಪಟ್ಟಿ ಲೋಕಸಭಾ ಸಚಿವಾಲಯದ ಮೂಲಕ ನಿರ್ವಹಿಸಲಾಗುತ್ತಿದೆ. ಶಿಷ್ಟಾಚಾರ ಹಾಗೂ ಇತರ ಕಾರ್ಯಗಳಿಗೆ ಉಭಯ ಸಚಿವಾಲಯಗಳ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಈ ಬಗ್ಗೆ ಉಭಯ ಕಾರ್ಯದರ್ಶಿಗಳಿಗೆ ಪರಸ್ಪರ ಚರ್ಚಿಸಿ ನಿರ್ವಹಿಸಲು ನಿರ್ದೇಶನ ನೀಡಲಾಗಿದೆ. ಹೀಗಾಗಿ, ಈ ಕಾರ್ಯ ಕ್ರಮ ಏಕಪಕ್ಷೀಯ ನಿರ್ಧಾರವಲ್ಲ ಎಂಬುದು ನನ್ನ ಭಾವನೆ ಎಂದು ಸ್ಪಷ್ಟಪಡಿಸಿದ್ದಾರೆ.

ಭಾರತವನ್ನು ಎದುರು ಹಾಕಿಕೊಂಡಿದ್ದರಿಂದಲೇ ಅಧಿಕಾರ ಹೋಯ್ತು ಎಂದ ಪದಚ್ಯುತ ಪ್ರಧಾನಿ

ನೇಪಾಳ ಅಶಾಂತಿಯಲ್ಲಿ ಭಾರತದ ಕೈವಾಡ: ಒಲಿ ಕಿಡಿ

ಕಠ್ಮಂಡು: ಯುವಜನತೆಯ ಭಾರೀ ಆಕ್ರೋಶಕ್ಕೆ ತುತ್ತಾಗಿ ನೇಪಾಳಿ ಪ್ರಧಾನಿ ಸ್ಥಾನ ಕಳೆದುಕೊಂಡಿರುವ ಕೆ.ಪಿ.ಶರ್ಮಾ ಓಲಿ, ಈ ಬೆನ್ನಲ್ಲೇ ಭಾರತದ ವಿರುದ್ಧ ಕಿಡಿಕಾರಿದ್ದಾರೆ. ಶ್ರೀರಾಮ ನೇಪಾಳದಲ್ಲಿ ಹುಟ್ಟಿದ್ದು, ಲಿಪುಲೇಖ್ ನೇಪಾಳಕ್ಕೆ ಸೇರಿದ್ದು ಎಂಬ ನಿಲುವು ತೆಗೆದುಕೊಂಡಿದ್ದರಿಂದಲೇ ತನ್ನನ್ನು ಬಲಾತ್ಕಾರವಾಗಿ ಅಧಿಕಾರದಿಂದ ಹೊರಹಾಕಲಾಯಿತು ಎಂದಿದ್ದಾರೆ. ಪ್ರಧಾನಿ ಪಟ್ಟ ಬಿಟ್ಟ ನಂತರ ನೇಪಾಳಿ ಸೇನೆಯ ಶಿವಪುರಿ ಬ್ಯಾರಕ್‌ನಲ್ಲಿರುವ ಅವರು ಅಲ್ಲಿಂದಲೇ ತಮ್ಮ ಪಕ್ಷದ ಪ್ರಧಾನ ಕಾರ್ಯದರ್ಶಿಗೆ ಬರೆದ ಪತ್ರದಲ್ಲಿ ಟೀಕಾಪ್ರಹಾರ ನಡೆಸಿದ್ದಾರೆ.

'ಕೆಲವು ಸೂಕ್ಷ್ಮ ವಿಚಾರಗಳಲ್ಲಿ ದೆಹಲಿ ನಾಯಕತ್ವವನ್ನು ವಿರೋಧಿಸುವ ಧೈರ್ಯವನ್ನು ನಾನು ತೋರಿದೆ. ಅದೇ ನನಗೆ ಹಿನ್ನಡೆಯಾಯಿತು. ಲಿಪುಲೇಖ್ ಪ್ರದೇಶದ ಬಗ್ಗೆ ನಾನು ಪ್ರಶ್ನೆ ಕೇಳದಿದ್ದರೆ ಪ್ರಧಾನಿ ಸ್ಥಾನದಲ್ಲೇ ಇರುತ್ತಿದ್ದೆ. ರಾಮನ ಜನ್ಮಸ್ಥಾನ ಅಯೋಧ್ಯಾ ಎಂಬ ಮಾತುಗಳನ್ನು ನಾನು ವಿರೋಧಿಸಿದ್ದರಿಂದಲೇ ನಾನು ಅಧಿಕಾರ ಕಳೆದುಕೊಂಡೆ. ಅದು ನನಗೆ ರಾಜಕೀಯವಾಗಿ ಹಿನ್ನಡೆಯನ್ನುಂಟು ಮಾಡಿತು' ಎಂದು ಪತ್ರದಲ್ಲಿ ಹೇಳಿದ್ದಾರೆ.

ಏನಿದು ಲಿಪುಲೇಖ್ ವಿವಾದ?: 1816ರ ಒಪ್ಪಂದದ ಪ್ರಕಾರ ಕಾಳಿ ನದಿಯನ್ನು ಭಾರತ-ನೇಪಾಳಿ ಗಡಿಯನ್ನಾಗಿ ತೆಗೆದುಕೊಳ್ಳಲಾಗಿದೆ. ಈ ನದಿ ಉತ್ತರಾಖಂಡದ ಪಿತೋರಗಢ ಜಿಲ್ಲೆಯ ಕಾಲಾಪಾನಿ ಹಳ್ಳಿಯಲ್ಲಿ ಹುಟ್ಟುತ್ತದೆ. ಆದ್ದರಿಂದ ಈ ಭಾಗ ಹಿಂದಿನಿಂದಲೂ ತನಗೆ ಸೇರಿದ್ದು ಭಾರತ ಹೇಳುತ್ತದೆ. ಇದರ ವಿರುದ್ಧ ತಗಾದೆ ತೆಗೆದಿರುವ ಕೆ.ಪಿ.ಶರ್ಮಾ ಕಾಳಿ ನದಿ ಹುಟ್ಟುವುದು ಲಿಂಪಿಯಾಧುರಾದಲ್ಲಿ. ಕಾಳಿ ನದಿಯ ಪೂರ್ವಭಾಗದಲ್ಲಿ ಬರುವ ಲಿಂಪಿಯಾಧುರಾ, ಲಿಪುಲೇಖ್ ಮತ್ತು ಕಾಲಾಪಾನಿ ನೇಪಾಳಕ್ಕೆ ಸೇರಿದ್ದು ಎಂದು ವಾದಿಸಿದ್ದಾರೆ. ಮಾತ್ರವಲ್ಲ ಭಾರತ ಇಲ್ಲಿ ರಸ್ತೆ ನಿರ್ಮಾಣ ಮಾಡಬಾರದು, ವ್ಯಾಪಾರ ಚಟುವಟಿಕೆ ನಡೆಸಬಾರದು ಎಂದು ತಾಕೀತು ಮಾಡಿದರು. ಚೀನಾಕ್ಕೂ ಮಾಹಿತಿ ನೀಡಿ, ಈ ಪ್ರದೇಶ ನೇಪಾಳಕ್ಕೆ ಸೇರಿದ್ದು ಎಂದಿದ್ದರು.

ರಾಮನ ಹುಟ್ಟಿನ ವಿವಾದವೇನು?: ಉತ್ತರಪ್ರದೇಶದ ಅಯೋಧ್ಯಾ ರಾಮನ ನಿಜವಾದ ಜನ್ಮಸ್ಥಾನವಲ್ಲ. ಅದು ನೇಪಾಳದ ಬೀರ್ಗಂಜ್‌ನ ಥೋರಿ ಹಳ್ಳಿಯಲ್ಲಿ ಬರುತ್ತದೆ. ರಾಮ ಮದುವೆಯಾಗಲು ನೇಪಾಳದವರೆಗೆ ಬರಲು ಹೇಗೆ ಸಾಧ್ಯ ಎಂದು ಶರ್ಮಾ ಪ್ರಶ್ನಿಸಿದ್ದರು.

6 ಸಾವಿರಕ್ಕೂ ಹೆಚ್ಚು ಕೈದಿಗಳು ಪರಾರಿ

ಕಠ್ಮಂಡು: ಹಿಂಸಾತ್ಮಕ ಪ್ರತಿಭಟನೆಗಳ ನಡುವೆ, ನೇಪಾಳದ ವಿವಿಧ ಜೈಲುಗಳಿಂದ ಕೈದಿಗಳು ಪರಾರಿಯಾಗಿದ್ದಾರೆ. 18 ಜಿಲ್ಲೆಗಳಲ್ಲಿ 6,000 ಕ್ಕೂ ಹೆಚ್ಚು ಕೈದಿಗಳು ಜೈಲುಗಳಿಂದ ಪರಾರಿಯಾಗಿದ್ದಾರೆ. ಅನೇಕ ಸ್ಥಳಗಳಲ್ಲಿ ಕೈದಿಗಳು ಜೈಲಿನ ಬಾಗಿಲುಗಳನ್ನು ಮುರಿದಿದ್ದಾರೆ. ಕೆಲವು ಸ್ಥಳಗಳಲ್ಲಿ ಅವರು ಹೊರಬರಲು ಗೋಡೆಗಳನ್ನು ನೆಲಸಮ ಗೊಳಿಸಿದ್ದಾರೆ. ಈ ಘಟನೆಯು ದೇಶದಲ್ಲಿ ಈಗಾಗಲೇ ತಲೆದೋರಿರುವ ಅವ್ಯವಸ್ಥೆಯನ್ನು ಮತ್ತಷ್ಟು ಹೆಚ್ಚಿಸಿದೆ. ಇದರಿಂದಾಗಿ ಅಧಿಕಾರಿಗಳು ನಿಯಂತ್ರಣ ಪಡೆಯಲು ಹೆಣಗಾಡುತ್ತಿದ್ದಾರೆ. ಶೀತಲ್ ನಿವಾಸ್ ಎಂದೇ ಹೆಸರಾಗಿರುವ ರಾಷ್ಟ್ರಪತಿ ಭವನವನ್ನು ನೇಪಾಳ ಸೇನೆ ವಶಪಡಿಸಿಕೊಂಡಿದೆ. ಭ್ರಷ್ಟಾಚಾರ ವಿರುದ್ಧ ಪ್ರತಿಭಟನೆ ಸಂದರ್ಭದಲ್ಲಿ ಪ್ರತಿಭಟನಾಕಾರರು ರಾಷ್ಟ್ರಪತಿ ಭವನ ವನ್ನು ಹಾನಿಗೊಳಿಸಿ ಬೆಂಕಿ ಹಚ್ಚಿದ ಬಳಿಕ ನೇಪಾಳ ಸೇನೆಯು ಅದನ್ನು ತನ್ನ ವಶಕ್ಕೆ ಪಡೆದುಕೊಂಡಿದೆ. ಪರಿಸ್ಥಿತಿಯನ್ನು ಮೇಲ್ವಿಚಾರಣೆ ಮಾಡಲು ಭಾರತೀಯ ಭದ್ರತಾ ಪಡೆಗಳು ನೇಪಾಳಿ ಸೇನೆಯೊಂದಿಗೆ ಸಂಪರ್ಕ ದಲ್ಲಿವೆ ಎಂದು ವರದಿಯಾಗಿದೆ.

ಪವರ್‌ಗ್ರಿಡ್: ಹುದ್ದೆಗಳ ನೇಮಕಾತಿ

ಪವರ್‌ಗ್ರಿಡ್ ಕಾರ್ಪೊರೇಷನ್ ಆಫ್ ಇಂಡಿಯಾ ಕೇಂದ್ರ ಸರಕಾರದ ವಿದ್ಯುತ್ ಸಚಿವಾಲಯದ ಅಧೀನದಲ್ಲಿರುವ ಮಹಾರತ್ನ ಸ್ಥಾನಮಾನದ ಕಂಪನಿಯಾಗಿದೆ. ವಿಶ್ವಾಸಾರ್ಹತೆ ಮತ್ತು ಸುರಕ್ಷಿತ ವಿದ್ಯುತ್ ಸರಬರಾಜು ಹೊಣೆಗಾರಿಕೆಯನ್ನು ಅದು ನಿಭಾಯಿಸುತ್ತದೆ. ಪ್ರಸ್ತುತ 1,543 ಫೀಲ್ಡ್ ಇಂಜಿನಿಯರ್ ಮತ್ತು ಫೀಲ್ಡ್ ಸೂಪರ್‌ವೈಸರ್ ಹುದ್ದೆಗಳ ನೇಮಕಾತಿಗೆ ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಿಕೊಳ್ಳಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಿದೆ. ಕರ್ನಾಟಕವೂ ಒಳಗೊಂಡಂತೆ ದಕ್ಷಿಣ ವಲಯದಲ್ಲಿ 268 ಹುದ್ದೆಗಳಿವೆ.

ಹುದ್ದೆಗಳ ವಿವರ: ಒಟ್ಟು 1,543 ಹುದ್ದೆಗಳು (ಫೀಲ್ಡ್ ಇಂಜಿನಿಯರ್ ಎಲೆಕ್ಟ್ರಿಕಲ್–532, ಸಿವಿಲ್ ಫೀಲ್ಡ್ ಸೂಪರ್‌ವೈಸರ್–198, ಸಿವಿಲ್–193, ಎಲೆಕ್ಟ್ರಿಕಲ್–535, ಇಲೆಕ್ಟ್ರಿಕಲ್ ಆ್ಯಂಡ್ ಕಮ್ಯುನಿಕೇಶನ್ಸ್–85

ಅಗತ್ಯ ವಿದ್ಯಾರ್ಹತೆಗಳು: ಫೀಲ್ಡ್ ಇಂಜಿನಿಯರ್ (ವಿದ್ಯುತ್) ಹುದ್ದೆಗೆ ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಹುದ್ದೆಗೆ ಸಂಬಂಧಿಸಿದ ವಿಷಯದಲ್ಲಿ ಬಿ.ಇ/ಬಿ.ಟೆಕ್/ಬಿ.ಎಸ್ಸಿ(ಎಂಜಿನಿಯರಿಂಗ್) ಪದವಿ ಪಡೆದಿರಬೇಕು. ಸಂಬಂಧಿಸಿದ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸಿರುವ ಅನುಭವ ಇರಬೇಕು.

ಫೀಲ್ಡ್ ಸೂಪರ್‌ವೈಸರ್: ಸೂಕ್ತ ಕ್ಷೇತ್ರದಲ್ಲಿ ಸ್ನಾತಕ ಪದವಿ ಅಥವಾ ಮೂರು ವರ್ಷಗಳ ಇಂಜಿನಿಯರಿಂಗ್ ಡಿಪ್ಲೊಮಾ ಅಥವಾ ಐಟಿಐ ಜತೆಗೆ 3 ವರ್ಷಗಳ ಅನುಭವವಿರಬೇಕು. ಎರಡೂ ಹುದ್ದೆಗಳಿಗೆ ಕಂಪ್ಯೂಟರ್ ತಂತ್ರಜ್ಞಾನದ ಅರಿವು ಅಗತ್ಯ.

ಆಯ್ಕೆ ಪ್ರಕ್ರಿಯೆ

ಆಸಕ್ತ ಅಭ್ಯರ್ಥಿಗಳು ಪವರ್ ಗ್ರಿಡ್‌ನ ಲಿಖಿತ ಪರೀಕ್ಷೆ–2025ಕ್ಕೆ ನೋಂದಾಯಿಸಿಕೊಳ್ಳಬೇಕು. ಅದರಂತೆ ಅಭ್ಯರ್ಥಿಯ ಆಯ್ಕೆಯು ಈ ಪರೀಕ್ಷೆಯಲ್ಲಿನ ಕಾರ್ಯಕ್ಷಮತೆ ಆಧಾರದ ಮೇಲೆ ನಡೆಯುತ್ತದೆ. ಪರೀಕ್ಷೆಯು 1 ಗಂಟೆಯ ಅವಧಿಯದಾಗಿದ್ದು ಇದರಲ್ಲಿ 50 ತಾಂತ್ರಿಕ ಜ್ಞಾನದ ಪ್ರಶ್ನೆಗಳು (ಸಂಬಂಧಿತ ವಿಭಾಗದ ಬಿ.ಟೆಕ್/ಡಿಪ್ಲೊಮಾ ಪಠ್ಯಕ್ರಮದ ಆಧಾರದ ಮೇಲೆ) ಮತ್ತು 25 ಆ್ಯಪ್ಟಿಟ್ಯೂಡ್ ಪ್ರಶ್ನೆಗಳು (ಸಾಮಾನ್ಯ ಇಂಗ್ಲಿಷ್, ರೀಸನಿಂಗ್, ಡೇಟಾ ಇಂಟರ್‌ಪ್ರಿಟೇಷನ್, ಕೋಡಿಂಗ್ ಮತ್ತು ಡಿಕೋಡಿಂಗ್, ಡಿಡಕ್ಟೀವ್ ಲಾಜಿಕ್ ಇತ್ಯಾದಿ) ಒಳಗೊಂಡಿರುತ್ತವೆ. ಅಂಗವಿಕಲ ಅಭ್ಯರ್ಥಿಗಳಿಗೆ ನಿಯಮದಂತೆ ಹೆಚ್ಚುವರಿ ಸಮಯ ನೀಡಲಾಗುತ್ತದೆ.

ವಯೋಮಿತಿ ವಿವರ: ಗರಿಷ್ಠ 27 ವರ್ಷ ವಯಸ್ಸು (ನಿಯಮಾನುಸಾರ ಮೀಸಲು ವರ್ಗಗಳಿಗೆ ವಯೋಮಿತಿ ಸಡಿಲಿಕೆ ಇದೆ).

ಮೊದಲು ಸೇವೆ ಸಲ್ಲಿಸಿದವರಿಗೂ ಅವಕಾಶ: ಪವರ್‌ಗ್ರಿಡ್‌ನಲ್ಲಿ ಫೀಲ್ಡ್ ಇಂಜಿನಿಯರ್‌ಗಳು/ಫೀಲ್ಡ್ ಸೂಪರ್‌ವೈಸರ್‌ಗಳಾಗಿ ಕನಿಷ್ಠ ಒಂದು ವರ್ಷ ಕಾರ್ಯ ನಿರ್ವಹಿಸಿದ ಮತ್ತು ಈಗಲೂ ಕಾಯ ನಿರ್ವಹಿಸುತ್ತಿರುವ ಅಥವಾ ಪವರ್‌ಗ್ರಿಡ್ ಉದ್ಯೋಗದಿಂದ ಬೇರ್ಪಟ್ಟಿರುವ ಅಭ್ಯರ್ಥಿಗಳೂ ಕೂಡ ಅರ್ಜಿ ಸಲ್ಲಿಸಬಹುದು.

ಅಂತವರು ಆನ್‌ಲೈನ್ ಅರ್ಜಿಯಲ್ಲಿ ಪವರ್‌ಗ್ರಿಡ್ ಎಂಪ್ಲಾಯ್ ಐ.ಡಿ ಸಂಖ್ಯೆ ನಮೂದಿಸಬೇಕು. ಪವರ್‌ಗ್ರಿಡ್ ಉದ್ಯೋಗದಿಂದ ಬೇರ್ಪಟ್ಟಿರುವ ಅಭ್ಯರ್ಥಿಗಳು ಸೇವಾ ಪ್ರಮಾಣಪತ್ರ ಸಲ್ಲಿಸುವುದು ಕಡ್ಡಾಯ.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಸೆ. 17 (ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಕೆಗೆ ಅವಕಾಶ)

ಅರ್ಜಿ ಶುಲ್ಕ ವಿವರ: ಫೀಲ್ಡ್ ಇಂಜಿನಿಯರ್ ಹುದ್ದೆಗೆ 400 ರು., ಫೀಲ್ಡ್ ಸೂಪರ್ ವೈಸರ್ ಹುದ್ದೆಗೆ 300 ರು. ಅರ್ಜಿ ಶುಲ್ಕ. ಎಸ್.ಸಿ/ಎಸ್.ಟಿ/ ಪಿಬ್ಲ್ಯೂಡಿ/ ಮಾಜಿ ಸೈನಿಕ ಅಭ್ಯರ್ಥಿಗಳಿಗೆ ಯಾವುದೇ ಶುಲ್ಕ ಇರುವುದಿಲ್ಲ.

ಪರೀಕ್ಷಾ ಕೇಂದ್ರಗಳ ವಿವರ: ದೆಹಲಿ, ಕೋಲ್ಕತ್ತ, ಬೆಂಗಳೂರು, ಭೋಪಾಲ್, ಗುವಾಹಟಿ, ಮುಂಬೈ ಸೇರಿ 6 ನಗರಗಳಲ್ಲಿ ಪರೀಕ್ಷಾ ಕೇಂದ್ರಗಳಿರಲಿವೆ. ಅಭ್ಯರ್ಥಿಗಳು ಯಾವುದಾದರೊಂದು ಪರೀಕ್ಷಾ ಕೇಂದ್ರವನ್ನು ಆಯ್ಕೆ ಮಾಡಿಕೊಳ್ಳಬಹುದು.

ವೇತನ ವಿವರ: ಫೀಲ್ಡ್ ಸೂಪರ್‌ವೈಸರ್‌ಗಳಿಗೆ 23,000–1,05,000 ರು., ಹಾಗೂ ಫೀಲ್ಡ್ ಇಂಜಿನಿಯರ್‌ಗೆ 30,000–1,20,000 ರು. ವೇತನ ಶ್ರೇಣಿ ನೀಡಲಾಗುತ್ತದೆ. ವಾರ್ಷಿಕ ಶೇ.3 ವೇತನ ಬಡ್ತಿ ಇರಲಿದೆ.

ಹೆಚ್ಚಿನ ಮಾಹಿತಿ ಹಾಗೂ ಅರ್ಜಿ ಸಲ್ಲಿಸಬೇಕಿರುವ ಜಾಲತಾಣ: careers.powergrid.in

ಬಿಇಎಲ್: 83 ಖಾಲಿ ಹುದ್ದೆಗಳು

ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ (ಬಿಇಎಲ್) ಕೇಂದ್ರ ಸರಕಾರದ ರಕ್ಷಣಾ ಸಚಿವಾಲಯದ ಅಡಿಯಲ್ಲಿ ಕಾರ್ಯನಿರ್ವಹಿಸುವ ನವರತ್ನ ಸ್ಥಾನಮಾನದ ಉದ್ದಿಮೆಯಾಗಿದೆ. ಪ್ರಸ್ತುತ ಪ್ರಾಜೆಕ್ಟ್ ಇಂಜಿನಿಯರ್, ಫೀಲ್ಡ್ ಆಪರೇಷನಲ್ ಇಂಜಿನಿಯರ್‌ಗಳ ಒಟ್ಟು 83 ಹುದ್ದೆಗಳ ಭರ್ತಿಗಾಗಿ ಅರ್ಜಿ ಆಹ್ವಾನಿಸಿದೆ.

ವಿದ್ಯಾರ್ಹತೆ: ಅಭ್ಯರ್ಥಿಗಳು ಆಯಾ ಹುದ್ದೆಗೆ ಸಂಬಂಧಿಸಿದ ವಿಷಯದಲ್ಲಿ ಬಿ.ಎಸ್ಸಿ/ ಬಿ.ಇ/ಬಿ.ಟೆಕ್/ಎಂ.ಇ/ಎಂ.ಟೆಕ್/ಎಂ.ಸಿ.ಎ ಪದವಿ ಪಡೆದಿರಬೇಕು.

ಒಟ್ಟು ಹುದ್ದೆಗಳು: 83 (ಫೀಲ್ಡ್ ಆಪರೇಷನಲ್ ಇಂಜಿನಿಯರ್–05, ಪ್ರಾಜೆಕ್ಟ್ ಇಂಜಿನಿಯರ್–78)

ವಯೋಮಿತಿ ವಿವರ: ಅರ್ಜಿ ಸಲ್ಲಿಸುವ ಅಭ್ಯರ್ಥಿಯ ವಯಸ್ಸು 2025ರ ಸೆ.1ಕ್ಕೆ ಅನುಗುಣವಾಗಿ 42 ವರ್ಷ ಮೀರಿರಬಾರದು. (ನೇಮಕಾತಿ ಮಂಡಳಿ ನಿಯಮಾನುಸಾರ ಮೀಸಲು ವರ್ಗಗಳಿಗೆ ವಯೋಮಿತಿ ಸಡಿಲಿಕೆ ಇದೆ).

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಸೆ. 17 (ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬೇಕು)

ಅರ್ಜಿ ಶುಲ್ಕದ ವಿವರ: ಫೀಲ್ಡ್ ಆಪರೇಷನ್ ಇಂಜಿನಿಯರ್ ಹುದ್ದೆಗೆ 450 ರು., ಪ್ರಾಜೆಕ್ಟ್ ಇಂಜಿನಿಯರ್ ಹುದ್ದೆಗೆ 472 ರು., ಪಾವತಿಸಬೇಕು. ಪ.ಜಾತಿ/ ಪ.ಪಂಗಡ/ಅಂಗವಿಕಲ ಅಭ್ಯರ್ಥಿಗಳಿಗೆ ಯಾವುದೇ ಶುಲ್ಕ ಇರುವುದಿಲ್ಲ.

ಆಯ್ಕೆ ಪ್ರಕ್ರಿಯೆ ವಿವರ: ಸ್ವೀಕೃತ ಅರ್ಜಿಗಳನ್ನು ಪರಿಶೀಲಿಸಿ ಅರ್ಹರನ್ನು ಲಿಖಿತ ಪರೀಕ್ಷೆಗೆ ಆಹ್ವಾನಿಸಲಾಗುತ್ತದೆ. ಅದರಲ್ಲಿ ಆಯ್ಕೆಯಾದವರನ್ನು ಸಂದರ್ಶನಕ್ಕೆ ಕರೆಯಲಾಗುತ್ತದೆ. ಲಿಖಿತ ಪರೀಕ್ಷೆಯು ಟೆಕ್ನಿಕಲ್ ಮತ್ತು ಸಾಮಾನ್ಯ ಜ್ಞಾನವನ್ನು ಒಳಗೊಂಡಿರುತ್ತದೆ. ಲಿಖಿತ ಪರೀಕ್ಷೆ ಮತ್ತು ಸಂದರ್ಶನದಲ್ಲಿ ತೋರಿದ ಕಾರ್ಯಕ್ಷಮತೆಯ ಆಧಾರದ ಮೇಲೆ ಅರ್ಹರನ್ನು ಅಂತಿಮವಾಗಿ ಆಯ್ಕೆಗೊಳಿಸಲಾಗುತ್ತದೆ. (ಅಸ್ಸಾಂ ಘಟಕಕ್ಕೆ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳಿಗೆ ನೇರ ಸಂದರ್ಶನ ಮಾತ್ರ ಇರಲಿದೆ)

ವೇತನ ವಿವರ: ಆಯ್ಕೆಯಾದ ಫೀಲ್ಡ್ ಆಪರೇಷನ್ ಇಂಜಿನಿಯರ್‌ಗೆ 60,000 ರು. ಹಾಗೂ ಪ್ರಾಜೆಕ್ಟ್ ಇಂಜಿನಿಯರ್‌ಗೆ 40,000 ರು.ಗಳ ಪ್ರಾರಂಭಿಕ ಮಾಸಿಕ ವೇತನ ನೀಡಲಾಗುತ್ತದೆ. ಸಂಸ್ಥೆಯ ನಿಯಮಾನುಸಾರ ವಿಮೆ, ಸೇರಿದಂತೆ ಇನ್ನಿತರ ಭತ್ಯೆಗಳನ್ನು ನೀಡಲಾಗುತ್ತದೆ.

ಹೆಚ್ಚಿನ ಮಾಹಿತಿ ಹಾಗೂ ಅರ್ಜಿ ಸಲ್ಲಿಕೆಗೆ ಸಂಪರ್ಕಿಸಬೇಕಾದ ಜಾಲತಾಣ: https://bel-india.in

ಬಿಇಎಂಎಲ್: ಅರ್ಜಿ ಆಹ್ವಾನ

NEW FRONTIERS. NEW DREAMS

ಬೆಂಗಳೂರಿನಲ್ಲಿ ಪ್ರಧಾನ ಕಚೇರಿ ಹೊಂದಿರುವ ಭಾರತ್ ಅರ್ಥ್ ಮೂವರ್ಸ್ ಲಿಮಿಟೆಡ್ (ಬಿಇಎಂಎಲ್) ಪ್ರಸ್ತುತ ಖಾಲಿಯಿರುವ ಮ್ಯಾನೇಜ್‌ಮೆಂಟ್ ಟ್ರೈನಿ ಹುದ್ದೆಗಳ ಭರ್ತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.

ಒಟ್ಟು ಹುದ್ದೆಗಳ ಸಂಖ್ಯೆ: 100 (ಮ್ಯಾನೇಜ್‌ಮೆಂಟ್ ಟ್ರೈನಿ ಮೆಕ್ಯಾನಿಕಲ್– 90, ಎಲೆಕ್ಟ್ರಿಕಲ್–10)

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಸೆ. 12

ವಿದ್ಯಾರ್ಹತೆ: ಹುದ್ದೆಗೆ ಸಂಬಂಧಿಸಿದ ಹುದ್ದೆಗಳಲ್ಲಿ ಬಿ.ಇ ಪದವಿ.

ವಯೋಮಿತಿ ವಿವರ: ಅರ್ಜಿ ಸಲ್ಲಿಸುವ ಅಭ್ಯರ್ಥಿಗಳ ಗರಿಷ್ಠ ವಯಸ್ಸು 2025ರ ಸೆ.12ರೊಳಗಾಗಿ ಗರಿಷ್ಠ 29 ವರ್ಷ. (ನೇಮಕಾತಿ ಮಂಡಳಿ ನಿಯಮಾನುಸಾರ ಮೀಸಲು ವರ್ಗಗಳಿಗೆ ವಯೋಮಿತಿ ಸಡಿಲಿಕೆ ಇದೆ)

ಅರ್ಜಿ ಶುಲ್ಕ ವಿವರ: ರು. 500 ಅರ್ಜಿ ಶುಲ್ಕ. (ಪ.ಜಾತಿ/ಪ.ಪಂಗಡ/ ಅಂಗವಿಕಲ ಅಭ್ಯರ್ಥಿಗಳಿಗೆ ಯಾವುದೇ ಶುಲ್ಕ ಅನ್ವಯವಾಗುವುದಿಲ್ಲ)

ವೇತನ ಶ್ರೇಣಿ: ರು.40,000–1,40,000 ಮಾಸಿಕ ವೇತನ. ಕಂಪನಿಯ ನಿಯಮಾನುಸಾರ ವಿಮೆ, ಗ್ರ್ಯಾಚುಟಿ, ಇನ್ನಿತರ ಭತ್ಯೆಗಳು ಇರಲಿವೆ. ಅಂತಿಮವಾಗಿ ನೇಮಕಾತಿಯ ಎಲ್ಲಾ ಅರ್ಹತಾ ಮಾನದಂಡಗಳನ್ನು ಪೂರೈಸುವ ಅಭ್ಯರ್ಥಿಗಳನ್ನು ಆಯ್ಕೆಗೊಳಿಸಿ ಮೆರಿಟ್ ಪಟ್ಟಿ ಸಿದ್ಧಪಡಿಸಲಾಗುತ್ತದೆ.

ಅರ್ಜಿ ಸಲ್ಲಿಸಲು ಹಾಗೂ ಹೆಚ್ಚಿನ ಮಾಹಿತಿಗಾಗಿ ಜಾಲತಾಣ: https://cbtexam.bemlindia.in/

ಆಯ್ಕೆ ಪ್ರಕ್ರಿಯೆ ವಿಧಾನ

ಸ್ವೀಕೃತ ಅರ್ಜಿಯನ್ನು ಪರಿಶೀಲಿಸಿ ಶಾರ್ಟ್‌ಲಿಸ್ಟ್ ಆದ ಅಭ್ಯರ್ಥಿಗಳನ್ನು ಕಂಪ್ಯೂಟರ್ ಆಧಾರಿತ ಪರೀಕ್ಷೆಗೆ ಆಹ್ವಾನಿಸಲಾಗುತ್ತದೆ. ಇದರಲ್ಲಿ ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದಂತೆ ಆಯಾ ಕ್ಷೇತ್ರದ ಜ್ಞಾನ (ಮೆಕ್ಯಾನಿಕಲ್ ಅಥವಾ ಇಲೆಕ್ಟ್ರಿಕಲ್ ಎಂಜಿನಿಯರಿಂಗ್) ಮತ್ತು ತಾರ್ಕಿಕ ಕೌಶಲ ಹಾಗೂ ಇಂಗ್ಲಿಷ್ ಸಾಮರ್ಥ್ಯವನ್ನು ಪರೀಕ್ಷಿಸುವ ಪ್ರಶ್ನೆಗಳಿರುತ್ತವೆ. ಅದರಲ್ಲಿ ಆಯ್ಕೆಯಾದವರನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲಾಗುತ್ತದೆ.

ಸುಪ್ರೀಂಕೋರ್ಟ್‌ನಲ್ಲಿ ಉದ್ಯೋಗಾವಕಾಶ

ಸುಪ್ರೀಂಕೋರ್ಟ್‌ನಲ್ಲಿ ಕೋರ್ಟ್ ಮಾಸ್ಟರ್ (ಶಾರ್ಟ್‌ಹ್ಯಾಂಡ್) ಹುದ್ದೆಗೆ ಅರ್ಜಿ ಸಲ್ಲಿಕೆ ಪ್ರಕ್ರಿಯೆ ಪ್ರಾರಂಭವಾಗಿದೆ. ಆಸಕ್ತ ಅಭ್ಯರ್ಥಿಗಳು ಸೆಪ್ಟೆಂಬರ್ 15ರ ವರೆಗೆ ಅರ್ಜಿ ಸಲ್ಲಿಸಬಹುದಾಗಿದ್ದು, ಒಟ್ಟು 30 ಹುದ್ದೆಗಳಿವೆ. 16 ಹುದ್ದೆಗಳು ಸಾಮಾನ್ಯ ವರ್ಗಕ್ಕೆ, 4 ಹುದ್ದೆಗಳು ಪರಿಶಿಷ್ಟ ಜಾತಿ, 2 ಹುದ್ದೆಗಳು ಪರಿಶಿಷ್ಟ ಪಂಗಡ ಮತ್ತು 8 ಹುದ್ದೆಗಳು ಇತರ ಹಿಂದುಳಿದ ವರ್ಗಗಳಿಗೆ ಮೀಸಲಾಗಿವೆ.

ಅಭ್ಯರ್ಥಿಗಳಿರಬೇಕಾದ ಅರ್ಹತೆ: ಅರ್ಜಿದಾರರು ಯಾವುದೇ ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಪದವಿ ಪಡೆದಿರಬೇಕು. ಅದರೊಂದಿಗೆ ಕಂಪ್ಯೂಟರ್ ಟೈಪಿಂಗ್‌ನಲ್ಲಿ ನಿಮಿಷಕ್ಕೆ 40 ಪದಗಳ ವೇಗವನ್ನು ಹೊಂದಿರಬೇಕು. ಅಭ್ಯರ್ಥಿಗಳು ಸಂಬಂಧಿತ ಸ್ಟೆನೋಗ್ರಫಿ ಅಥವಾ ಕಾರ್ಯದರ್ಶಿ ಹುದ್ದೆಯಲ್ಲಿ ಕನಿಷ್ಠ 5 ವರ್ಷಗಳ ಅನುಭವವನ್ನು ಪಡೆದಿರಬೇಕು. ಅರ್ಜಿದಾರರ ವಯಸ್ಸು 30 ರಿಂದ 45 ವರ್ಷಗಳ ವಯಸ್ಸಿನ ನಡುವೆ ಇರಬೇಕು.

ಅರ್ಜಿ ಶುಲ್ಕ ವಿವರ: ಸಾಮಾನ್ಯ ವರ್ಗದ ಅಭ್ಯರ್ಥಿಗಳು 1500 ರು. ಮತ್ತು ಎಸ್.ಸಿ/ಎಸ್.ಟಿ/ಒಬಿಸಿ/ವಿಕಲಚೇತನರು/ಮಾಜಿ ಸೈನಿಕರು 750 ರು. ಅರ್ಜಿ ಶುಲ್ಕ ಪಾವತಿಸಬೇಕಾಗುತ್ತದೆ. ಈ ಪಾವತಿಯನ್ನು ಯುಕೋ ಬ್ಯಾಂಕ್ ಪಾವತಿ ಗೇಟ್‌ವೇ ಮೂಲಕ ಮಾಡಬಹುದು.

ಆಯ್ಕೆ ಪ್ರಕ್ರಿಯೆ ವಿವರ: ಹುದ್ದೆಯ ಆಯ್ಕೆ ಪ್ರಕ್ರಿಯೆಯು ನಾಲ್ಕು ಹಂತಗಳಲ್ಲಿ ನಡೆಯಲಿದೆ. ಮೊದಲು ಸಂಕ್ಷಿಪ್ತ ಪರೀಕ್ಷೆ ಇರುತ್ತದೆ. ನಂತರ ವಸ್ತುನಿಷ್ಠ ಮಾದರಿಯ ಲಿಖಿತ ಪರೀಕ್ಷೆ ಇರಲಿದೆ. ಮೂರನೇ ಹಂತದಲ್ಲಿ ಕಂಪ್ಯೂಟರ್ ಟೈಪಿಂಗ್ ವೇಗ ಪರೀಕ್ಷೆ ಇರುತ್ತದೆ ಮತ್ತು ಅಂತಿಮವಾಗಿ ಸಂದರ್ಶನ ಇರುತ್ತದೆ. ಆಯ್ಕೆಯಾದ ಅಭ್ಯರ್ಥಿಗಳಿಗೆ ಪೇ ಮ್ಯಾಟ್ರಿಕ್ಸ್ ಅಡಿಯಲ್ಲಿ 67,700 ರು. ಆರಂಭಿಕ ಮೂಲ ವೇತನ ಸಿಗಲಿದೆ. ಇದರ ಹೊರತಾಗಿ, ಸರಕಾರದ ನಿಯಮಗಳ ಪ್ರಕಾರ ಇತರ ಭತ್ಯೆಗಳನ್ನೂ ಸಹ ನೀಡಲಾಗುತ್ತದೆ.

ಅಧಿಕೃತ ವೆಬ್‌ಸೈಟ್ sci.gov.inಗೆ ಭೇಟಿ ನೀಡುವ ಮೂಲಕ ಈ ನೇಮಕಾತಿಗೆ ಅರ್ಜಿ ಸಲ್ಲಿಸಬಹುದು

ವಿಮಾನ ನಿಲ್ದಾಣ ಪ್ರಾಧಿಕಾರ: 976 ಎಕ್ಸಿಕ್ಯೂಟಿವ್ಸ್ ಹುದ್ದೆ

ಕೇಂದ್ರ ಸರಕಾರದ ಸಾರ್ವಜನಿಕ ವಲಯದ ಉದ್ದಿಮೆಯಾದ ಭಾರತದ ವಿಮಾನ ನಿಲ್ದಾಣ ಪ್ರಾಧಿಕಾರ (ಎಎಐ) ತನ್ನ ವಿವಿಧ ವಿಭಾಗಗಳಲ್ಲಿ ಖಾಲಿಯಿರುವ 976 ಜ್ಯೂನಿಯರ್ ಎಕ್ಸಿಕ್ಯೂಟಿವ್ ಹುದ್ದೆಗಳ ಭರ್ತಿಗೆ ಅಧಿಸೂಚನೆ ಪ್ರಕಟಿಸಿದೆ.

ಯಾವ್ಯಾವ ಹುದ್ದೆಗಳು: ಆರ್ಕಿಟೆಕ್ಚರ್–11, ಸಿವಿಲ್–199, ಎಲೆಕ್ಟ್ರಿಕಲ್–208, ಎಲೆಕ್ಟ್ರಾನಿಕ್ಸ್–527,ಜೂನಿಯರ್, ಐ.ಟಿ–31

ವಿದ್ಯಾರ್ಹತೆ: ಹುದ್ದೆಗೆ ಬಿ.ಇ/ಬಿ.ಟೆಕ್/ಆರ್ಕಿಟೆಕ್ಚರ್‌ನಲ್ಲಿ ಪದವಿ ಪಡೆದಿರಬೇಕು. ಈ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಅನುಭವದ ಅಗತ್ಯವಿಲ್ಲ.

ವಯೋಮಿತಿ: ಅರ್ಜಿ ಸಲ್ಲಿಸುವ ಅಭ್ಯರ್ಥಿಗಳ ವಯಸ್ಸು ಸೆ. 27ಕ್ಕೆ ಅನ್ವಯವಾಗುವಂತೆ 27 ವರ್ಷದೊಳಗಿರಬೇಕು. ನೇಮಕಾತಿ ಮಂಡಳಿ ನಿಯಮಾನುಸಾರ ಮೀಸಲು ವರ್ಗಗಳಿಗೆ ವಯೋಮಾನದಲ್ಲಿ ಸಡಿಲಿಕೆ ಅನ್ವಯವಾಗಲಿದೆ.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಆನ್‌ಲೈನ್ ಮೂಲಕ ಅರ್ಜಿ ಸೆ.27ರೊಳಗಾಗಿ ಅರ್ಜಿ ಸಲ್ಲಿಸಬೇಕು.

ಅರ್ಜಿ ಶುಲ್ಕ: 300 ರು.ಗಳ ಅರ್ಜಿ ಶುಲ್ಕವಿದೆ. ಪ.ಜಾತಿ/ ಪ.ಪಂಗಡ/ಅಂಗವಿಕಲ ಅಭ್ಯರ್ಥಿಗಳಿಗೆ ಯಾವುದೇ ಶುಲ್ಕ ಅನ್ವಯವಾಗುವುದಿಲ್ಲ.

ಆಯ್ಕೆ ಪ್ರಕ್ರಿಯೆ: ಸ್ವೀಕೃತ ಅರ್ಜಿ ಪರಿಶೀಲಿಸಿ ಗೇಟ್ 2023, 2024, 2025ಕ್ಕೆ ಸಂಬಂಧಿತ ಪರೀಕ್ಷೆಯಲ್ಲಿ ಪಡೆದ ಅಂಕಗಳ ನುಸಾರ ಅಭ್ಯರ್ಥಿಗಳನ್ನು ಶಾರ್ಟ್‌ಲಿಸ್ಟ್ ಮಾಡಿ ಅರ್ಹರನ್ನು ದಾಖಲೆಗಳ ಪರಿಶೀಲನೆಗೆ ಆಹ್ವಾನಿಸಿ ನೇಮಕಾತಿ ಮಾಡಿಕೊಳ್ಳಲಾ ಗುತ್ತದೆ.

ವೇತನ ಶ್ರೇಣಿ: ಆಯ್ಕೆಯಾದ ಅಭ್ಯರ್ಥಿಗಳಿಗೆ ರು. 40,000–1,40,000 ವೇತನ ಶ್ರೇಣಿಯಿದ್ದು, ವಾರ್ಷಿಕವಾಗಿ ಶೇ.3ರ ವೇತನ ಬಡ್ತಿ ಅನ್ವಯವಾಗಲಿದೆ. ಆಯ್ಕೆಯಾದ ಅಭ್ಯರ್ಥಿಗಳಿಗೆ ಮೂಲ ವೇತನದ ಜತೆಗೆ ತುಟ್ಟಿಭತ್ಯೆ, ಮೂಲ ವೇತನದ ಶೇ.35 ಭತ್ಯೆಗಳು, ಮನೆ ಬಾಡಿಗೆ ಭತ್ಯೆ (ಎಚ್‌ಆರ್‌ಎ) ಮತ್ತು ಇತರ ಸೌಲಭ್ಯಗಳಾದ ಸಿಪಿಎಫ್, ಗ್ರಾಚ್ಯುಟಿ, ಸಾಮಾಜಿಕ ಭದ್ರತಾ ಯೋಜನೆಗಳು, ವೈದ್ಯಕೀಯ ಸೌಲಭ್ಯಗಳು ಇತ್ಯಾದಿಗಳು ಸಂಸ್ಥೆ ನಿಯಮಗಳಿಗೆ ಅನುಗುಣವಾಗಿ ಒದಗಿಸಲಾಗುತ್ತದೆ.

ಅರ್ಜಿ ಸಲ್ಲಿಕೆಗೆ ಹಾಗೂ ಮಾಹಿತಿಗೆ ಸಂಪರ್ಕಿಸಬೇಕಾದ ಜಾಲತಾಣ: https://www.aai. aero/en/careers/recruitment/Offical

ಗಮನಕ್ಕೆ: ಈ ಅಂಕಣದಲ್ಲಿ ಪ್ರಸ್ತುತಪಡಿಸಿದ ಮಾಹಿತಿಯ ನಿಖರತೆಯನ್ನು ಖಚಿತಪಡಿಸಿಕೊಳ್ಳಲು ಲೇಖಕರು ಎಲ್ಲ ಪ್ರಯತ್ನಗಳನ್ನು ಮಾಡಿದ್ದಾರೆ. ಆದಾಗ್ಯೂ, ವಿಷಯದ ಸಂಪೂರ್ಣತೆ, ನಿಖರತೆ ಅಥವಾ ಸಮಯೋಚಿತತೆ ಯನ್ನು ಖಾತರಿಪಡಿಸು ವುದಿಲ್ಲ. ಹಾಗಾಗಿ ಅರ್ಜಿ ಸಲ್ಲಿಸುವ ಮೊದಲು ಆಯಾಯ ವೈಬ್‌ಸೈಟ್ ನೋಡಿ ಖಚಿತಪಡಿಸು ವುದು ಉತ್ತಮ. ಯಾವುದೇ ಲೋಪದೋಷಗಳಿಗೆ ಪತ್ರಿಕೆ ಇಲ್ಲವೇ ಲೇಖಕರು ಜವಾಬ್ದಾರರಲ್ಲ.

ಆರ್. ಕೆ. ಬಾಲಚಂದ್ರ
ಲೇಖಕರು, ಬ್ಯಾಂಕಿಂಗ್ ತರಬೇತುದಾರರು ಹಾಗೂ ವೃತ್ತಿ ಮಾರ್ಗದರ್ಶಕರು, ಬೆಂಗಳೂರು.

ಇಂದು ಆರ್‌ಎಸ್‌ಎಸ್ ಸರಸಂಘಚಾಲಕ ಮೋಹನ್ ಭಾಗವತ್ ಅವರ ಜನ್ಮದಿನ. ಆರ್‌ಎಸ್‌ಎಸ್ ತನ್ನ ಶತಮಾನೋತ್ಸವ ಆಚರಿಸುತ್ತಿರುವ ಇದೇ ವರ್ಷ ಭಾಗವತ್ ಅವರ 75ನೇ ಜನ್ಮದಿನವೂ ಆಗಿದೆ. ರಾಷ್ಟ್ರೀಯ ಸ್ವಯಂಸೇವಕ ಸಂಘದೊಂದಿಗೆ ಸಂಬಂಧ ಹೊಂದಿರುವ ಲಕ್ಷಾಂತರ ಜನರು ಅವರನ್ನು ಗೌರವದಿಂದ ಪೂಜನೀಯ ಸರಸಂಘಚಾಲಕ್ ಎಂದು ಕರೆಯುತ್ತಾರೆ. ಈ ಹಿನ್ನೆಲೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ವಿಶೇಷ ಲೇಖನ ಬರೆದಿದ್ದಾರೆ. ಭಾಗವತ್‌ರ ವ್ಯಕ್ತಿತ್ವದ ವೈಶಿಷ್ಟ್ಯವನ್ನು ಮೋದಿ ವರ್ಣಿಸಿದ್ದಾರೆ.

ವಸುಧೈವ ಕುಟುಂಬಕಂನ ಜ್ವಲಂತ ಉದಾಹರಣೆ ಮೋಹನ್‌ಭಾಗವತ್‌ಜೀ

ನರೇಂದ್ರ ಮೋದಿ, ಪ್ರಧಾನಮಂತ್ರಿ

ಇಂದು ಸೆಪ್ಟೆಂಬರ್ 11. ಈ ದಿನ ನನಗೆ ಎರಡು ವ್ಯತಿರಿಕ್ತ ನೆನಪುಗಳು ಮರುಕಳಿಸುತ್ತವೆ. ಮೊದಲನೆಯದು, 1893ರಲ್ಲಿ ಸ್ವಾಮಿ ವಿವೇಕಾನಂದರು ತಮ್ಮ ಐತಿಹಾಸಿಕ ಶಿಕಾಗೋ ಭಾಷಣ ಮಾಡಿದ್ದು. ಅಮೆರಿಕದ ಸಹೋದರಿ ಮತ್ತು ಸಹೋದರರೇ ಎಂಬ ಕೆಲವೇ ಪದಗಳೊಂದಿಗೆ ಅವರು ಸಭಾಂಗಣದಲ್ಲಿದ್ದ ಸಾವಿರಾರು ಜನರ ಹೃದಯಗಳನ್ನು ಗೆದ್ದರು. ಅವರು ಭಾರತದ ಅನಾದಿ ಆಧ್ಯಾತ್ಮಿಕ ಪರಂಪರೆಯನ್ನು ಮತ್ತು ಜಾಗತಿಕ ಭ್ರಾತೃತ್ವದ ಮಹತ್ವವನ್ನು ವಿಶ್ವವೇದಿಕೆಗೆ ಪರಿಚಯಿಸಿದರು. ಎರಡನೆಯ ನೆನಪು ಭಯಾನಕ 9/11 ದಾಳಿಯದ್ದು, ಭಯೋತ್ಪಾದನೆ ಮತ್ತು ಮೂಲಭೂತವಾದದ ಬೆದರಿಕೆಯಿಂದಾಗಿ ವಿವೇಕಾನಂದರ ತತ್ವವು ದಾಳಿಗೆ ಒಳಗಾಯಿತು.

ಈ ದಿನದ ಬಗ್ಗೆ ಇನ್ನೂ ಒಂದು ಗಮನಾರ್ಹ ವಿಷಯವಿದೆ. ವಸುಧೈವ ಕುಟುಂಬಕಂ ತತ್ತ್ವದಿಂದ ಪ್ರೇರಿತರಾಗಿ, ತಮ್ಮ ಇಡೀ ಜೀವನವನ್ನು ಸಾಮಾಜಿಕ ಪರಿವರ್ತನೆ, ಸಾಮರಸ್ಯ ಮತ್ತು ಸಹೋದರತ್ವದ ಮನೋಭಾವವನ್ನು ಬಲಪಡಿಸಲು ಮುಡಿಪಾಗಿಟ್ಟ ವ್ಯಕ್ತಿತ್ವದ ಜನ್ಮದಿನ ಇಂದು. ರಾಷ್ಟ್ರೀಯ ಸ್ವಯಂಸೇವಕ ಸಂಘದೊಂದಿಗೆ ಸಂಬಂಧ ಹೊಂದಿರುವ ಲಕ್ಷಾಂತರ ಜನರು ಅವರನ್ನು ಗೌರವದಿಂದ ಪೂಜನೀಯ ಸರಸಂಘಚಾಲಕ್ ಎಂದು ಕರೆಯುತ್ತಾರೆ. ಹೌದು, ನಾನು ಶ್ರೀ ಮೋಹನ್ ಭಾಗವತ್‌ಜೀ ಅವರ ಬಗ್ಗೆ ಮಾತನಾಡುತ್ತಿದ್ದೇನೆ. ಅವರ 75ನೇ ಹುಟ್ಟುಹಬ್ಬವು ಕಾಕತಾಳೀಯವಾಗಿ, ರಾಷ್ಟ್ರೀಯ ಸ್ವಯಂಸೇವಕ ಸಂಘವು ತನ್ನ ಶತಮಾನೋತ್ಸವವನ್ನು ಆಚರಿಸುತ್ತಿರುವ ಇದೇ ವರ್ಷದಲ್ಲಿ ಬರುತ್ತದೆ. ನಾನು ಅವರಿಗೆ ನನ್ನ ಶುಭಾಶಯಗಳನ್ನು ಕೋರುತ್ತೇನೆ ಮತ್ತು ಅವರ ಸುದೀರ್ಘ ಮತ್ತು ಆರೋಗ್ಯಕರ ಜೀವನಕ್ಕಾಗಿ ಪ್ರಾರ್ಥಿಸುತ್ತೇನೆ.

ಮೋಹನ್‌ಜೀ ಅವರ ಕುಟುಂಬದೊಂದಿಗೆ ನನಗೆ ಗಾಢವಾದ ಬಾಂಧವ್ಯವಿದೆ. ಮೋಹನ್‌ಜೀ ಅವರ ತಂದೆ ದಿವಂಗತ ಮಧುಕರ್ ರಾವ್ ಭಾಗವತ್‌ಜೀ ಅವರೊಂದಿಗೆ ನಿಕಟವಾಗಿ ಕೆಲಸ ಮಾಡುವ ಸೌಭಾಗ್ಯ ನನಗೆ ದೊರಕಿತು. ನನ್ನ ಜ್ಯೋತಿಪುಂಜ್ ಪುಸ್ತಕದಲ್ಲಿ ಅವರ ಬಗ್ಗೆ ವಿವರವಾಗಿ ಬರೆದಿದ್ದೇನೆ. ಕಾನೂನು ಜಗತ್ತಿನೊಂದಿಗೆ ಒಡನಾಟದ ಜೊತೆಗೆ, ಅವರು ರಾಷ್ಟ್ರ ನಿರ್ಮಾಣಕ್ಕೂ ತಮ್ಮನ್ನು ಅರ್ಪಿಸಿಕೊಂಡರು. ಗುಜರಾತಿನಾದ್ಯಂತ ಆರ್‌ಎಸ್‌ಎಸ್ ಅನ್ನು ಬಲಪಡಿಸುವಲ್ಲಿ ಅವರು ಪ್ರಮುಖ ಪಾತ್ರ ವಹಿಸಿದರು. ರಾಷ್ಟ್ರ ನಿರ್ಮಾಣದ ಬಗ್ಗೆ ಮಧುಕರ್ ರಾವ್‌ಜೀ ಅವರ ಉತ್ಸಾಹ ಎಷ್ಟು ಆಳವಾಗಿತ್ತೆಂದರೆ ಅವರ ಮಗ ಮೋಹನ್‌ಜೀ ಅವರನ್ನು ಭಾರತದ ಪುನರುತ್ಥಾನಕ್ಕಾಗಿ ಕೆಲಸ ಮಾಡುವಂತೆ ಪ್ರೇರೇಪಿಸಿತು. ಇದು ಸ್ಪರ್ಶಮಣಿ ಮಧುಕರ್ ರಾವ್ ಅವರು ಮೋಹನ್ ರಾವ್ ಅವರಲ್ಲಿ ಮತ್ತೊಂದು ಸ್ಪರ್ಶಮಣಿಯನ್ನು ಸೃಷ್ಟಿಸಿದಂತಿದೆ.

ಮೋಹನ್‌ಜೀ 1970ರ ದಶಕದ ಮಧ್ಯಭಾಗದಲ್ಲಿ ಪ್ರಚಾರಕರಾದರು. 'ಪ್ರಚಾರಕ' ಎಂಬ ಪದವನ್ನು ಕೇಳಿದ ತಕ್ಷಣ, ಅದು ಕೇವಲ ಪ್ರಚಾರ ಮಾಡುವ ಅಥವಾ ವಿಚಾರಗಳನ್ನು ಪ್ರಚುರಪಡಿಸುವ ವ್ಯಕ್ತಿ ಎಂದು ತಪ್ಪು ತಿಳಿಯಬಹುದು. ಆದರೆ, ಆರ್‌ಎಸ್‌ಎಸ್ ಕಾರ್ಯವೈಖರಿಯ ಬಗ್ಗೆ ತಿಳಿದಿರುವವರಿಗೆ ಪ್ರಚಾರಕ ಪರಂಪರೆಯು ಸಂಘಟನೆ ಕೆಲಸದ ಮೂಲವಾಗಿದೆ ಎಂದು ತಿಳಿದಿದೆ. ಕಳೆದ ನೂರು ವರ್ಷಗಳಲ್ಲಿ, ದೇಶಭಕ್ತಿಯ ಉತ್ಸಾಹದಿಂದ ಪ್ರೇರಿತರಾಗಿ, ಸಾವಿರಾರು ಯುವಜನರು ತಮ್ಮ ಮನೆ ಮತ್ತು ಕುಟುಂಬಗಳನ್ನು ತೊರೆದು ಭಾರತ ಮೊದಲು ಎಂಬ ಧ್ಯೇಯವನ್ನು ನನಸಾಗಿಸಲು ತಮ್ಮ ಜೀವನವನ್ನು ಮುಡಿಪಾಗಿಟ್ಟಿದ್ದಾರೆ.

ಆರ್‌ಎಸ್‌ಎಸ್‌ನಲ್ಲಿನ ಅವರ ಆರಂಭಿಕ ವರ್ಷಗಳು ಭಾರತೀಯ ಇತಿಹಾಸದಲ್ಲಿನ ಅತ್ಯಂತ ಕರಾಳ ಅವಧಿಯಾಗಿದ್ದವು. ಆಗಿನ ಕಾಂಗ್ರೆಸ್ ಸರ್ಕಾರವು ಕಠಿಣ ತುರ್ತು ಪರಿಸ್ಥಿತಿಯನ್ನು ಹೇರಿದ್ದ ಸಮಯ ಅದು. ಪ್ರಜಾಪ್ರಭುತ್ವದ ತತ್ವಗಳನ್ನು ಗೌರವಿಸುವ ಮತ್ತು ಭಾರತವು ಅಭಿವೃದ್ಧಿ ಹೊಂದಬೇಕೆಂದು ಬಯಸುವ ಯಾರಾದರೂ ತುರ್ತು ಪರಿಸ್ಥಿತಿ ವಿರೋಧಿ ಚಳವಳಿಗೆ ಸೇರುವುದು ಸಹಜ. ಮೋಹನ್‌ಜೀ ಮತ್ತು ಅಸಂಖ್ಯಾತ ಆರ್‌ಎಸ್‌ಎಸ್ ಸ್ವಯಂಸೇವಕರು ಅದನ್ನೇ ಮಾಡಿದರು. ಅವರು ಮಹಾರಾಷ್ಟ್ರದ ಗ್ರಾಮೀಣ ಮತ್ತು ಹಿಂದುಳಿದ ಪ್ರದೇಶಗಳಲ್ಲಿ, ವಿಶೇಷವಾಗಿ ವಿದರ್ಭದಲ್ಲಿ

ವ್ಯಾಪಕವಾಗಿ ಕೆಲಸ ಮಾಡಿದರು. ಇದು ಬಡವರು ಮತ್ತು ದೀನದಲಿತರು ಎದುರಿಸುತ್ತಿರುವ ಸವಾಲುಗಳ ಬಗ್ಗೆ ಅವರ ತಿಳಿವಳಿಕೆಯನ್ನು ರೂಪಿಸಿತು.

ಹಲವು ವರ್ಷಗಳಲ್ಲಿ, ಭಾಗವತ್‌ಜೀ ಆರ್‌ಎಸ್‌ಎಸ್‌ನಲ್ಲಿ ವಿವಿಧ ಹುದ್ದೆಗಳನ್ನು ಅಲಂಕರಿಸಿದರು. ಅವರು ಪ್ರತಿಯೊಂದು ಜವಾಬ್ದಾರಿಯನ್ನು ಬಹಳ ದಕ್ಷತೆಯಿಂದ ನಿರ್ವಹಿಸಿದರು. 1990ರ ದಶಕದಲ್ಲಿ ಅಖಿಲ ಭಾರತೀಯ ಶಾರೀರಿಕ್ ಪ್ರಮುಖ್ ಆಗಿ ಮೋಹನ್‌ಜೀ ಅವರ ಅಧಿಕಾರಾವಧಿಯನ್ನು ಇನ್ನೂ ಅನೇಕ ಸ್ವಯಂಸೇವಕರು ಪ್ರೀತಿಯಿಂದ ನೆನಪಿಸಿಕೊಳ್ಳುತ್ತಾರೆ. ಈ ಸಮಯದಲ್ಲಿ, ಅವರು ಬಿಹಾರದ ಹಳ್ಳಿಗಳಲ್ಲಿ ಕೆಲಸ ಮಾಡುವುದರಲ್ಲಿ ಸಾಕಷ್ಟು ಸಮಯವನ್ನು ಕಳೆದರು. ಈ ಅನುಭವಗಳು ಅವರ ತಳಮಟ್ಟದ ಸಮಸ್ಯೆಗಳೊಂದಿಗಿನ ಸಂಪರ್ಕವನ್ನು ಮತ್ತಷ್ಟು ಗಾಢಗೊಳಿಸಿದವು. 2000ರಲ್ಲಿ ಸರಕಾರ್ಯವಾಹ ಆದ ಅವರು ಇಲ್ಲಿಯೂ ತಮ್ಮ ವಿಶಿಷ್ಟ ಕಾರ್ಯಶೈಲಿಯನ್ನು ತೋರಿಸಿದರು. ಅತ್ಯಂತ ಸಂಕೀರ್ಣ ಸಂದರ್ಭಗಳನ್ನು ಸುಲಭವಾಗಿ ಮತ್ತು ನಿಖರತೆಯಿಂದ ನಿಭಾಯಿಸಿದರು. 2009ರಲ್ಲಿ, ಅವರು ಸರಸಂಘಚಾಲಕ್ ಆದರು ಮತ್ತು ಇನ್ನೂ ಹೆಚ್ಚಿನ ಚೈತನ್ಯದಿಂದ ಕೆಲಸ ಮಾಡುತ್ತಿದ್ದಾರೆ.

ಸರಸಂಘಚಾಲಕ್ ಆಗಿರುವುದು ಕೇವಲ ಒಂದು ಸಂಘಟನೆಯ ಜವಾಬ್ದಾರಿಗಿಂತ ಹೆಚ್ಚಿನದು. ಅಸಾಧಾರಣ ವ್ಯಕ್ತಿಗಳು ವೈಯಕ್ತಿಕ ತ್ಯಾಗ, ಸ್ಪಷ್ಟ ಉದ್ದೇಶ ಮತ್ತು ಭಾರತಮಾತೆಗೆ ಅಚಲವಾದ ಬದ್ಧತೆಯ ಮೂಲಕ ಈ ಪಾತ್ರವನ್ನು ವ್ಯಾಖ್ಯಾನಿಸಿದ್ದಾರೆ. ಮೋಹನ್‌ಜೀ ಈ ಜವಾಬ್ದಾರಿಯ ಅಗಾಧತೆಗೆ ಸಂಪೂರ್ಣ ನ್ಯಾಯ ಒದಗಿಸಿದ್ದಾರೆ, ತಮ್ಮ ಶಕ್ತಿ, ಬೌದ್ಧಿಕ ಆಳ ಮತ್ತು ಸಹಾನುಭೂತಿಯ ನಾಯಕತ್ವದ ಸಾಮರ್ಥ್ಯಗಳನ್ನು ಪ್ರದರ್ಶಿಸಿದ್ದಾರೆ, ಇವೆಲ್ಲವೂ ರಾಷ್ಟ್ರ ಮೊದಲು ಎಂಬ ತತ್ವದಿಂದ ಪ್ರೇರಿತವಾಗಿವೆ.

ಮೋಹನ್‌ಜೀ ತಮ್ಮ ಹೃದಯಕ್ಕೆ ಹತ್ತಿರವಾದ ಮತ್ತು ತಮ್ಮ ಕಾರ್ಯಶೈಲಿಯಲ್ಲಿ ಅಳವಡಿಸಿಕೊಂಡಿರುವ ಎರಡು ವಿಶಿಷ್ಟತೆಗಳ ಬಗ್ಗೆ ನಾನು ನೆನಪಿಸಿಕೊಳ್ಳಬಹುದಾದರೆ, ಅವು ಸ್ಥಿರತೆ ಮತ್ತು ಹೊಂದಾಣಿಕೆ. ಅವರು ಅತ್ಯಂತ ಸಂಕೀರ್ಣ ಸಂದರ್ಭಗಳಲ್ಲಿಯೂ ಸಹ ಸಂಘಟನೆಯನ್ನು ಮುನ್ನಡೆಸಿದ್ದಾರೆ. ನಾವೆಲ್ಲರೂ ಹೆಮ್ಮೆಪಡುವ ಮೂಲ ಸಿದ್ಧಾಂತದ ಮೇಲೆ ಎಂದಿಗೂ ರಾಜೀ ಮಾಡಿಕೊಳ್ಳಲಿಲ್ಲ ಮತ್ತು ಅದೇ ಸಮಯದಲ್ಲಿ ಸಮಾಜದ ಬದಲಾಗುತ್ತಿರುವ ಅಗತ್ಯಗಳನ್ನು ಪೂರೈಸಿದ್ದಾರೆ. ಅವರು ಯುವಕರೊಂದಿಗೆ ಸಹಜ ಸಂಪರ್ಕವನ್ನು ಹೊಂದಿದ್ದಾರೆ. ಆದ್ದರಿಂದ ಅವರು ಯಾವಾಗಲೂ ಹೆಚ್ಚುಹೆಚ್ಚು ಯುವಜನರನ್ನು ಸಂಘ ಪರಿವಾರಕ್ಕೆ ತರುವತ್ತ ಗಮನಹರಿಸಿದ್ದಾರೆ. ಅವರು ಸಾರ್ವಜನಿಕ ಸಂವಾದಗಳಲ್ಲಿ ಭಾಗವಹಿಸುವುದು ಮತ್ತು ಜನರೊಂದಿಗೆ ಸಂವಹನ ನಡೆಸುವುದನ್ನು ಹೆಚ್ಚಾಗಿ ಕಾಣಬಹುದು. ಇದು ಇಂದಿನ ಕ್ರಿಯಾತ್ಮಕ ಮತ್ತು ಡಿಜಿಟಲ್ ಜಗತ್ತಿನಲ್ಲಿ ಬಹಳ ಉಪಯುಕ್ತವಾಗಿದೆ ಎಂದು ಸಾಬೀತಾಗಿದೆ.

ವಿಶಾಲವಾಗಿ ಹೇಳುವುದಾದರೆ, ಭಾಗವತ್‌ಜೀ ಅವರ ಅಧಿಕಾರಾವಧಿಯನ್ನು ಆರ್‌ಎಸ್‌ಎಸ್‌ನ 100 ವರ್ಷಗಳ ಪಯಣದಲ್ಲಿ ಅತ್ಯಂತ ಪರಿವರ್ತನಾಶೀಲ ಅವಧಿ ಎಂದು ಪರಿಗಣಿಸಲಾಗುತ್ತದೆ. ಸಮವಸ್ತ್ರದಲ್ಲಿನ ಬದಲಾವಣೆಗಳಿಂದ ಹಿಡಿದು ಶಿಕ್ಷಾ ವರ್ಗ (ತರಬೇತಿ ಶಿಬಿರ) ಗಳಲ್ಲಿನ ಬದಲಾವಣೆಗಳವರೆಗೆ, ಅವರ ನಾಯಕತ್ವದಲ್ಲಿ ಅನೇಕ ಪ್ರಮುಖ ಬದಲಾವಣೆಗಳಾದವು.

ಮನುಕುಲವು ಶತಮಾನದ ಸಾಂಕ್ರಾಮಿಕ ರೋಗದೊಂದಿಗೆ ಹೋರಾಡುತ್ತಿದ್ದ ಕೋವಿಡ್ ಅವಧಿಯಲ್ಲಿ ಮೋಹನ್‌ಜೀ ಅವರ ಪ್ರಯತ್ನಗಳನ್ನು ನಾನು ವಿಶೇಷವಾಗಿ ನೆನಪಿಸಿಕೊಳ್ಳುತ್ತೇನೆ. ಆ ಸಮಯದಲ್ಲಿ, ಆರ್‌ಎಸ್‌ಎಸ್‌ನ ಸಾಂಪ್ರದಾಯಿಕ



ಚಟುವಟಿಕೆಗಳನ್ನು ಮುಂದುವರಿಸುವುದು ಸವಾಲಿನ ಸಂಗತಿಯಾಗಿತ್ತು. ತಂತ್ರಜ್ಞಾನದ ಬಳಕೆಯನ್ನು ಹೆಚ್ಚಿಸುವಂತೆ ಮೋಹನ್‌ಜೀ ಸೂಚಿಸಿದರು. ಜಾಗತಿಕ ಸವಾಲುಗಳ ಸಂದರ್ಭದಲ್ಲಿ, ಸಾಂಸ್ಥಿಕ ರಚನೆಗಳನ್ನು ಅಭಿವೃದ್ಧಿಪಡಿಸುವಾಗ ಅವರು ಜಾಗತಿಕ ದೃಷ್ಟಿಕೋನದೊಂದಿಗೆ ಸಂಪರ್ಕ ಹೊಂದಿದ್ದರು.

ಆ ಸಮಯದಲ್ಲಿ, ಎಲ್ಲಾ ಸ್ವಯಂಸೇವಕರು ತಮ್ಮ ಮತ್ತು ಇತರರ ಸುರಕ್ಷತೆಯನ್ನು ಖಚಿತಪಡಿಸಿಕೊಂಡು, ಅಗತ್ಯವಿರುವವರನ್ನು ತಲುಪಲು ಸಾಧ್ಯವಿರುವ ಎಲ್ಲ ಪ್ರಯತ್ನಗಳನ್ನು ಮಾಡಿದರು. ಅನೇಕ ಸ್ಥಳಗಳಲ್ಲಿ ವೈದ್ಯಕೀಯ ಶಿಬಿರಗಳನ್ನು ಆಯೋಜಿಸಲಾಗಿತ್ತು. ನಾವು ನಮ್ಮ ಅನೇಕ ಶ್ರಮಶೀಲ ಸ್ವಯಂಸೇವಕರನ್ನು ಕಳೆದುಕೊಂಡೆವು, ಆದರೆ ಮೋಹನ್‌ಜೀ ಅವರ ಸ್ಫೂರ್ತಿ, ಅವರ ದೃಢಸಂಕಲ್ಪ ಎಂದಿಗೂ ಅಲುಗಾಡಲಿಲ್ಲ.

ಈ ವರ್ಷದ ಆರಂಭದಲ್ಲಿ, ನಾಗಪುರದಲ್ಲಿ ಮಾಧವ ನೇತ್ರ ಚಿಕಿತ್ಸಾಲಯದ ಉದ್ಘಾಟನಾ ಸಮಾರಂಭದಲ್ಲಿ, ಆರ್‌ಎಸ್‌ಎಸ್ ಅಕ್ಷಯವತ್ ಇದ್ದಂತೆ, ನಮ್ಮ ರಾಷ್ಟ್ರದ ರಾಷ್ಟ್ರೀಯ ಸಂಸ್ಕೃತಿ ಮತ್ತು ಸಾಮೂಹಿಕ ಪ್ರಜ್ಞೆಯನ್ನು ಚೈತನ್ಯಗೊಳಿಸುವ ಶಾಶ್ವತ ಆಲದ ಮರ ಎಂದು ನಾನು ಹೇಳಿದ್ದೆ. ಈ ಅಕ್ಷಯವತ್ ಬೇರುಗಳು ಆಳವಾದವು ಮತ್ತು ಬಲವಾದವು. ಏಕೆಂದರೆ ಅವು ಮೌಲ್ಯಗಳಲ್ಲಿ ಬೇರೂರಿವೆ. ಮೋಹನ್ ಭಾಗವತ್‌ಜೀ ಈ ಮೌಲ್ಯಗಳನ್ನು ಪೋಷಿಸಲು ಮತ್ತು ಮುನ್ನಡೆಸಲು ತಮ್ಮನ್ನು ಸಮರ್ಪಿಸಿಕೊಂಡಿರುವುದು ನಿಜವಾಗಿಯೂ ಸ್ಫೂರ್ತಿದಾಯಕವಾಗಿದೆ.

ಮೋಹನ್‌ಜೀ ಅವರ ವ್ಯಕ್ತಿತ್ವದ ಮತ್ತೊಂದು ಪ್ರಶಂಸನೀಯ ಗುಣವೆಂದರೆ ಅವರ ಮೃದು–ಮಾತಿನ ಸ್ವಭಾವ. ಅವರು ಅಸಾಧಾರಣವಾದ ಆಲಿಸುವ ಸಾಮರ್ಥ್ಯವನ್ನು ಹೊಂದಿದ್ದಾರೆ. ಈ ಗುಣವು ಆಳವಾದ ದೃಷ್ಟಿಕೋನವನ್ನು ಖಾತ್ರಿಗೊಳಿಸಿದೆ ಮತ್ತು ಅವರ ವ್ಯಕ್ತಿತ್ವ ಮತ್ತು ನಾಯಕತ್ವಕ್ಕೆ ಸೂಕ್ಷ್ಮತೆ ಮತ್ತು ಘನತೆಯನ್ನು ತಂದಿದೆ. ಇಲ್ಲಿ, ವಿವಿಧ ಜನಾಂದೋಲನಗಳಲ್ಲಿ ಅವರ ತೀವ್ರ ಆಸಕ್ತಿಯ ಬಗ್ಗೆಯೂ ನಾನು ಬರೆಯಲು ಬಯಸುತ್ತೇನೆ. ಸ್ವಚ್ಛ ಭಾರತ ಮಿಷನ್‌ನಿಂದ ಬೇಟಿ ಬಚಾವೋ–ಬೇಟಿ ಪಡಾವೋವರೆಗೆ, ಅವರು ಇಡೀ ಆರ್‌ಎಸ್‌ಎಸ್ ಪರಿವಾರವನ್ನು ಈ ಆಂದೋಲನಗಳಿಗೆ ಶಕ್ತಿ ನೀಡುವಂತೆ ಕರೆ ನೀಡಿದ್ದಾರೆ. ಸಾಮಾಜಿಕ ಕಲ್ಯಾಣವನ್ನು ಉತ್ತೇಜಿಸಲು, ಮೋಹನ್ ಜೀ ಅವರು ಸಾಮಾಜಿಕ ಸಾಮರಸ್ಯ, ಕುಟುಂಬ ಮೌಲ್ಯಗಳು, ಪರಿಸರ ಜಾಗೃತಿ, ರಾಷ್ಟ್ರೀಯ ಅಸ್ಮಿತೆ ಮತ್ತು ನಾಗರಿಕ ಕರ್ತವ್ಯವನ್ನು ಒಳಗೊಂಡಿರುವ 'ಪಂಚ ಪರಿವರ್ತನ'ವನ್ನು ನೀಡಿದ್ದಾರೆ. ಇವು ಎಲ್ಲಾ ವರ್ಗದ ಭಾರತೀಯರಿಗೆ ಸ್ಫೂರ್ತಿ ನೀಡಬಲ್ಲವು. ಪ್ರತಿಯೊಬ್ಬ ಸ್ವಯಂಸೇವಕನು ಬಲಿಷ್ಠ ಮತ್ತು ಸಮೃದ್ಧ ರಾಷ್ಟ್ರದ ಕನಸು ಕಾಣುತ್ತಾನೆ. ಈ ಕನಸನ್ನು ನನಸಾಗಿಸಲು, ಸ್ಪಷ್ಟ ದೃಷ್ಟಿಕೋನ ಮತ್ತು ನಿರ್ಣಾಯಕ ಕ್ರಮ ಎರಡೂ ಅಗತ್ಯವಿದೆ. ಮೋಹನ್‌ಜೀ ಅವರಲ್ಲಿ ಈ ಎರಡೂ ಗುಣಗಳು ಅಪಾರವಾಗಿವೆ.

ಭಾಗವತ್‌ಜೀ ಯಾವಾಗಲೂ 'ಏಕ್ ಭಾರತ್ ಶ್ರೇಷ್ಠ ಭಾರತ್'ನ ಪ್ರಬಲ ಪ್ರತಿಪಾದಕರಾಗಿದ್ದಾರೆ, ಅವರು ಭಾರತದ ವೈವಿಧ್ಯತೆ ಮತ್ತು ನಮ್ಮ ನೆಲದ ಭಾಗವಾಗಿರುವ ವಿವಿಧ ಸಂಸ್ಕೃತಿಗಳು ಮತ್ತು ಸಂಪ್ರದಾಯಗಳ ಆಚರಣೆಯಲ್ಲಿ ದೃಢ ನಂಬಿಕೆಯುಳ್ಳವರಾಗಿದ್ದಾರೆ. ತಮ್ಮ ಬಿಡುವಿಲ್ಲದ ಕೆಲಸಗಳ ನಡುವೆಯೂ, ಮೋಹನ್‌ಜೀ ಯಾವಾಗಲೂ ಸಂಗೀತ ಮತ್ತು ಹಾಡುಗಾರಿಕೆಯಂತಹ ಹವ್ಯಾಸಗಳಿಗೆ ಸಮಯವನ್ನು ಮೀಸಲಿಟ್ಟಿದ್ದಾರೆ. ಅವರು ವಿವಿಧ ಭಾರತೀಯ ಸಂಗೀತ ವಾದ್ಯಗಳಲ್ಲಿ ಪರಿಣಿತರು ಎಂದು ಹಲವರಿಗೆ ತಿಳಿದಿಲ್ಲ. ಓದುವ ಅವರ ಉತ್ಸಾಹವನ್ನು ಅವರ ಹಲವಾರು ಭಾಷಣಗಳು ಮತ್ತು ಸಂವಾದಗಳಲ್ಲಿ ಕಾಣಬಹುದು.

ಈ ವರ್ಷ, ಇನ್ನು ಕೆಲವೇ ದಿನಗಳಲ್ಲಿ, ಆರ್‌ಎಸ್‌ಎಸ್ ಸ್ಥಾಪನೆಯಾಗಿ 100 ವರ್ಷಗಳನ್ನು ಪೂರೈಸಲಿದೆ. ಈ ವರ್ಷ ವಿಜಯದಶಮಿ, ಗಾಂಧಿ ಜಯಂತಿ, ಲಾಲ್ ಬಹದ್ದೂರ್ ಶಾಸ್ತ್ರಿ ಜಯಂತಿ ಮತ್ತು ಆರ್‌ಎಸ್‌ಎಸ್ ಶತಾಬ್ದಿ ಆಚರಣೆಗಳು ಒಂದೇ ದಿನ ಬರುತ್ತಿರುವುದು ಸಂತೋಷದ ವಿಷಯವಾಗಿದೆ. ಭಾರತ ಮತ್ತು ಪ್ರಪಂಚದಾದ್ಯಂತ ಆರ್‌ಎಸ್‌ಎಸ್‌ನೊಂದಿಗೆ ಸಂಬಂಧ ಹೊಂದಿರುವ ಲಕ್ಷಾಂತರ ಜನರಿಗೆ ಇದೊಂದು ಐತಿಹಾಸಿಕ ಮೈಲಿಗಲ್ಲಾಗಲಿದೆ ಮತ್ತು ಈ ಸಂದರ್ಭದಲ್ಲಿ ಸಂಘಟನೆಯನ್ನು ಮುನ್ನಡೆಸುತ್ತಿರುವ ಮೋಹನ್‌ಜೀ ಅವರಲ್ಲಿ ಅತ್ಯಂತ ತಿಳುವಳಿಕೆ ಮತ್ತು ಕಠಿಣ ಪರಿಶ್ರಮಿ ಸರಸಂಘಚಾಲಕ್ ಇದ್ದಾರೆ. ನಾವು ಎಲ್ಲೆಗಳನ್ನು ಮೀರಿ ಎಲ್ಲರನ್ನೂ ನಮ್ಮವರೆಂದು ಪರಿಗಣಿಸಿದಾಗ, ಅದು ಸಮಾಜದಲ್ಲಿ ನಂಬಿಕೆ, ಸಹೋದರತ್ವ ಮತ್ತು ಸಮಾನತೆಯನ್ನು ಬಲಪಡಿಸುತ್ತದೆ. ಇಂತಹ ವಸುಧೈವ ಕುಟುಂಬಕಂನ ಜ್ವಲಂತ ಉದಾಹರಣೆ ಮೋಹನ್‌ಜೀ ಎಂದು ಹೇಳುವ ಮೂಲಕ ನಾನು ಈ ಬರಹವನ್ನು ಮುಕ್ತಾಯಗೊಳಿಸುತ್ತೇನೆ. ಭಾರತಮಾತೆಯ ಸೇವೆಯಲ್ಲಿ ಮೋಹನ್‌ಜೀ ಅವರಿಗೆ ಸುದೀರ್ಘ ಮತ್ತು ಆರೋಗ್ಯಕರ ಜೀವನವನ್ನು ನಾನು ಮತ್ತೊಮ್ಮೆ ಹಾರೈಸುತ್ತೇನೆ.

ವಿಶ್ವವಾಣಿ @vishwavaninews
ಆರಾಮ
ಅನುದಿನವೂ ವಿರಾಮಕ್ಕೆ ಒಂದು ನೆಪ ಬೆಂಗಳೂರು 11-09-2025 ಗುರುವಾರ

ಚಿತ್ತವಿಹಾರ

ಬಯಸದೆ ಬರುವ ಸಂತೋಷ

● ಮಾಯಾ ಬಾಲಚಂದ್ರ

ಕೆಲವರು ಖುಷಿಯಿಂದಲೇ ಕೆಲಸ ಮಾಡುತ್ತಾರೆಯೇ ಹೊರತು, ಖುಷಿಗಾಗಿ ಅಲ್ಲ. ಮುಂದೆ ಎಂದೋ ಒಮ್ಮೆ ಗುರಿ ತಲುಪಿ, ಯಶಸ್ಸನ್ನು ಕಂಡು, ಸಂತೋಷ ಕಾಣುತ್ತೇವೆ ಎನ್ನುವ ನಿರೀಕ್ಷೆ ಅವರಲ್ಲಿ ಇರುವುದಿಲ್ಲ. ಹಾಗಾಗಿ ಫಲಿತಾಂಶ ಏನೇ ಬಂದರೂ ಅವರ ಸಂಭ್ರಮಕ್ಕೆ ಧಕ್ಕೆ ಆಗುವುದಿಲ್ಲ. ಇಲ್ಲೊಂದು ವಿಸ್ಮಯವನ್ನು ಗಮನಿಸಬಹುದು. ಸಂತೋಷದಿಂದಲೇ ಕೆಲಸ ಮಾಡುವವರಿಗೆ, ನಿರೀಕ್ಷಿಸದೆಯೂ ಸಂತೋಷ ನೀಡುವ ಫಲಿತಾಂಶವೇ ದೊರೆತಿರುತ್ತದೆ. ಫಲಿತಾಂಶದ ಅಪೇಕ್ಷೆಯಿಂದ ಕೆಲಸ ಮಾಡುವವರಿಗೆ ಅದು ದಕ್ಕುವುದು ಸ್ವಲ್ಪ ಅಪರೂಪ.

ಅಣ್ಣನೋರ್ವನ ಸಂಪಾದಕತ್ವದಲ್ಲಿ ಪತ್ರಿಕೆಯೊಂದು ನಡೆಯುತ್ತಿತ್ತು. ಅದಕ್ಕೆ ತಮ್ಮನ ಸಹಾಯ-ಸಹಕಾರ ಸಂಪೂರ್ಣವಾಗಿ ಇದ್ದವು. ಪತ್ರಿಕೆಯನ್ನು ಅಚ್ಚು ಹಾಕುವುದರಿಂದ ಹಿಡಿದು, ಅಚ್ಚಾದ ಪತ್ರಿಕೆಗಳನ್ನು ಮನೆಮನೆಗೂ ತಲುಪಿಸುವವರೆಗೂ ತಮ್ಮನ ಕಾರ್ಯ ನಡೆದೇ ಇತ್ತು. ಈ ಎಲ್ಲ ಕೆಲಸಗಳನ್ನು ಅತ್ಯಂತ ಸಂತೋಷದಿಂದಲೇ ತಮ್ಮ ಮಾಡುತ್ತಿದ್ದ. ಮುದ್ರಣ ಕೇಂದ್ರದಲ್ಲಿರುವ ಎಲ್ಲಾ ಯಂತ್ರಗಳನ್ನು ವಿಶೇಷವಾಗಿ ಗಮನಿಸುತ್ತಿದ್ದ. ಆತನಲ್ಲಿ ವೈಜ್ಞಾನಿಕ ಪ್ರಜ್ಞೆ ಆಗಲೇ ಜಾಗೃತವಾಗಿತ್ತು, ಜೊತೆಗೆ ಪತ್ರಿಕೆಗಳನ್ನು ಓದುತ್ತಾ ತಾನೂ ಬರೆಯಬೇಕೆಂದು ಹಂಬಲಿಸಿ, ಬರೆಯಲಾರಂಸಿದ. ಆದರೆ ತನ್ನದೇ ಬರಹ ಎಂದು ತಿಳಿದರೆ, ತನ್ನ ಅಣ್ಣ ಅದನ್ನು ಮುದ್ರಿಸಲು ಹಿಂಜರಿಯಬಹುದು, ತನಗೆ ಪ್ರಚಾರವೂ ಬೇಕಿಲ್ಲ, ಇದು ಕೇವಲ ಓದುಗರನ್ನು ತಲುಪಿದರೆ ಸಾಕು ಎಂದುಕೊಂಡು ತನ್ನ ಲೇಖನಗಳನ್ನು ಯಾರಿಗೂ ತಿಳಿಯದಂತೆ, ಕಿಟಕಿ ಯಿಂದ ಮುದ್ರಣದ ಕೊಠಡಿಯೊಳಗೆ ಪ್ರತಿದಿನ ಹಾಕುತ್ತಿದ್ದ. ಆ ಲೇಖನಗಳನ್ನು ಓದಿದ ಅಣ್ಣ ಮತ್ತು ಕೆಲವು ಸಿಬ್ಬಂದಿಗಳು, ಆ ಲೇಖನದ ಪ್ರಬುದ್ಧತೆ ಯನ್ನು ಗಮನಿಸಿ, ಮುದ್ರಿಸಲಾರಂಭಿಸಿದರು. ಕೆಲವು ದಿನಗಳ ನಂತರ ಈ ವಿಚಾರಪೂರಿತ ಲೇಖನಗ ಳನ್ನು ಬರೆಯುತ್ತಿದ್ದವನು ಜಾಣ ತಮ್ಮನೇ ಎನ್ನುವುದು ಎಲ್ಲರಿಗೂ ತಿಳಿಯಿತು. ಎಲ್ಲರೂ ಸಂಭ್ರಮಿಸಿದರು.

ಮುಂದೆ ದೊಡ್ಡವನಾದ ಮೇಲೆ, ಆ ತಮ್ಮ ತಾನೇ ಒಂದು ಪತ್ರಿಕೆಯನ್ನು ಪ್ರಾರಂಭಿಸಿದ. ಅಷ್ಟಲ್ಲದೆ, ಸಂಭ್ರಮಾಶ್ಚರ್ಯಗಳಿಂದ ಎಲ್ಲವನ್ನು ಗಮನಿ ಸುತ್ತಿದ್ದ ಈತ, ವಿದ್ಯುತ್ ಶಕ್ತಿಯ ಸ್ವರೂಪವನ್ನು ತಿಳಿಸಿ ವಿಜ್ಞಾನಿ ಎನಿಸಿದ. ಖುಷಿಯಿಂದ ಪತ್ರಿಕೆಯನ್ನು ಓದುತ್ತಾ ತಿಳಿದ ಜ್ಞಾನದಿಂದ, ಕಲೆ, ತತ್ವಶಾಸ್ತ್ರ, ರಾಜಕೀಯ ಮುಂತಾದ ಹಲವಾರು ವಿಷಯಗಳಲ್ಲಿ ನಿಷ್ಣಾತನೆಂದು ಪ್ರಸಿದ್ಧನಾದ. ಆತನೇ ಅಮೆರಿಕಾದ ಬೆಂಜಮಿನ್ ಫ್ರಾಂಕ್ಲಿನ್. ತನ್ನ ಪ್ರತಿ ಕೆಲಸವನ್ನು ಅತ್ಯಂತ ಸಂತೋಷದಿಂದ ಮನವಿಟ್ಟು ಮಾಡುತ್ತಿದ್ದ ಈತ, ಮುಂದೊಂದು ದಿನ ಯಶ ಪಡೆದು, ಕೀರ್ತಿಗಳಿಸಿ, ಸಂತೋಷಪಡುವೆ ಎನ್ನುವ ಕನಸನ್ನು ಕಂಡವನೇ ಅಲ್ಲ.

ತಮ್ಮ ಕೆಲಸದಲ್ಲಿಯೇ ಖುಷಿ ಕಾಣುವವರಿಗೆ, ಫಲಿತಾಂಶದಿಂದ ಖುಷಿ ಕಾಣುವ ಆಸೆ ಇರುವುದಿಲ್ಲ. ಅವರು ಸದಾ ಆನಂದದಲ್ಲಿಯೇ ಇರುತ್ತಾರೆ.

ಅನಾರೋಗ್ಯದತ್ತ ಸಾಗುತ್ತಿರುವ ಬದುಕಿನ ಮಾರ್ಗಗಳು

● ಬಸವರಾಜ ಶಿವಪ್ಪ ಗಿರಗಾಂವಿ

ವಿಶ್ವದಲ್ಲಿ ಇಂದು ಸಮಾಧಾನವಿಲ್ಲದ ಬದುಕು ಜೋರಾಗಿದೆ. ಎಷ್ಟು ಗಳಿಸಿದರೂ ತೃಪ್ತಿಯಿಲ್ಲವಾಗಿದೆ. ಇನ್ನೂ ಬೇಕು, ಇನ್ನೂ ಬೇಕು ಎನ್ನುವ ಪ್ರವೃತ್ತಿಯು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಇದರಿಂದಾಗಿ ಮನುಕುಲಕ್ಕೆ ತನ್ನ ದಿನನಿತ್ಯದ ಪ್ರಾರಬ್ಧ ಕರ್ಮಗಳಾದ ಊಟ ಮತ್ತು ವಿಶ್ರಾಂತಿಗಳನ್ನು ಸಮಯಾನುಸಾರ ನೆರವೇರಿಸಿಕೊಳ್ಳಲು ಸಮಯವಿಲ್ಲದಾಗಿದೆ. ಇದರಿಂದಾಗಿ ಸಮಯದ ಅರಿವಿಲ್ಲದೆ ಗಳಿಸಿರುವ ಸಂಪತ್ತನ್ನು ಆರೋಗ್ಯಕ್ಕಾಗಿ ಖರ್ಚು ಮಾಡುವ ಪ್ರಸಂಗಗಳು ಹೆಚ್ಚಾಗುತ್ತಿವೆ. ಹೀಗೆ ಮನುಕುಲದ ದೈನಂದಿನ ಬದುಕು ಅನಾರೋಗ್ಯದತ್ತ ಮುಂದುವರಿದಿರುವುದರಿಂದ ಆರೋಗ್ಯ ಮತ್ತು ಆಯುಷ್ಯ ಹೇಗೆ ವೃದ್ಧಿಯಾಗುತ್ತದೆ? ಪ್ರತಿಯೊಬ್ಬರಿಗೂ ಗಳಿಸಬೇಕೆನ್ನುವ ಹಂಬಲವಿರುವುದು ಸ್ವಾಭಾವಿಕ. ಆದರೆ ಗಳಿಸುವ ದಾರಿ ನ್ಯಾಯ ಮತ್ತು ಧರ್ಮದಲ್ಲಿರಬೇಕು ಅಂದಾಗ ಮಾತ್ರ ಮನಸ್ಸಿಗೆ ನೆಮ್ಮದಿ ಮತ್ತು ನಿರಾಳತೆಯು ಪ್ರಾಪ್ತಿಯಾಗುತ್ತದೆ.

ಹಿಂದಿನ ಕಾಲದಲ್ಲಿನ ನಮ್ಮ ಪೂರ್ವಜರು ಅದು ಬೇಕು, ಇದು ಬೇಕು ಎನ್ನದೆ ಲಭ್ಯವಿರುವ ಶುದ್ಧ ಆಹಾರವನ್ನು ಸೇವಿಸಿ ಯಾವುದೇ ಚಟಾಧೀನರಾಗದೆ ಮೈತುಂಬಾ ದುಡಿದು ಕಣ್ತುಂಬಾ ನಿದ್ರಿಸುತ್ತಿದ್ದರು. ಕೆಲಸ ನಿರ್ವಹಣೆಯಲ್ಲಿಯೂ ಆ ಕೆಲಸ ಬೇಕು, ಈ ಕೆಲಸ ಬೇಕು ಎನ್ನದೆ ಲಭ್ಯವಿದ್ದ ಕೆಲಸವನ್ನು ಭಕ್ತಿ, ಶ್ರದ್ಧೆ ಮತ್ತು ಪ್ರಾಮಾಣಿಕತೆಯಿಂದ ಮಾಡುತ್ತ ನಿರೋಗಿಗಳಾಗಿದ್ದರು. ನಾಳೆಗಾಗಿ ಸಂಗ್ರಹಿಸದಿರುವುದು ಮತ್ತು ನ್ಯಾಯಯುತವಾಗಿ ಇಂದಿನ ದೈನಂದಿನ ಕಾರ್ಯಗಳನ್ನು ನಿರ್ವಹಿಸುವುದಾಗುವುದು ಅಂದಿನ ಸುಖಮಯ ಜೀವನದ ಪ್ರಮುಖ ಸೂತ್ರವಾಗಿತ್ತು. ಇದರಿಂದಾಗಿಯೇ ನಮ್ಮ ಪೂರ್ವಜರು ನೂರಾರು ವರ್ಷಗಳ ಕಾಲ ಆರೋಗ್ಯವಂತ ಬದುಕನ್ನು ಕಟ್ಟಿಕೊಂಡಿದ್ದರು.

ಆದರೆ ಇಂದಿನ ದಿನಮಾನಗಳಲ್ಲಿ ಶರಣರ ವಾಣಿಗಳಂತೆ ಇವನಾರವ ಎನ್ನದೆ, ಇವ ನಮ್ಮವ ಎನ್ನುವ ಅಂದಿನ ಸಂಸ್ಕಾರ ಮತ್ತು ಸಂಸ್ಕೃತಿಯು ಮಾಯವಾಗಿರುವುದರಿಂದ ಹಿಂದಿನ ಕಾಲದಲ್ಲಿನ ನಮ್ರತೆ ಹಾಗೂ ನೈಜತೆಯು ಕಾಣೆಯಾಗಿದೆ. ಇಂದು ಅನ್ಯಾಯ, ಅನೀತಿ ಮತ್ತು ಅಧರ್ಮದಿಂದ ಹಣ ಸಂಗ್ರಹಿಸುವ ಕಳ್ಳ ದಾರಿಗಳು ಹೆಚ್ಚಾಗಿವೆ. ಹೀಗೆ ಗಳಿಸಿದ ನಂತರದಲ್ಲಿನ ದಿನಮಾನಗಳಲ್ಲಿ ಅನ್ಯಮಾರ್ಗದ ಸಂಗ್ರಹವನ್ನು ಉಳಿಸಿಕೊಳ್ಳಲು ಆಯುಷ್ಯಪೂರ್ತಿ ಚಿಂತಿಸುವುದು ಮತ್ತು ಅನಾರೋಗ್ಯಪೀಡಿತರಾಗುವುದು ಸರ್ವೆ ಸಾಮಾನ್ಯವಾಗಿದೆ. ಇದರಿಂದಾಗಿ ಇಂದಿನ ದಿನಮಾನಗಳಲ್ಲಿ ಹೃದಯಾಘಾತದಂತಹ ಭಯಾನಕ ಪ್ರಕರಣಗಳು ಹೆಚ್ಚುತ್ತಲಿರುವುದು ಸುಳ್ಳೇನಲ್ಲ.

ಪ್ರತಿಯೊಬ್ಬರೂ ಇಂದು ತಮ್ಮ ಬದುಕಿಗೆ ಸಾಕಾಗುವಷ್ಟು ಉದ್ಯೋಗ ಮತ್ತು ವ್ಯವಹಾರಗಳನ್ನು ದಿನನಿತ್ಯ ಕೈಗೊಂಡು ತೃಪ್ತರಾಗದೆ, ಮುಂದಿನ ಪೀಳಿಗೆಗಾಗಿ ಸಂಪತ್ತನ್ನು ಸಂಗ್ರಹಿಸುತ್ತಿದ್ದಾರೆ. ಇದರಿಂದ ದುಡಿಯದೆ ಗಳಿಸಿದ ಸಂಪತ್ತನ್ನು ಬಳಸುವುದರಿಂದ ಮುಂಬರುವ ಪೀಳಿಗೆಯು ಖಂಡಿತವಾಗಿಯೂ ಸೋಮಾರಿ ಮತ್ತು ಚಟಗಳ ದಾಸರಾಗುತ್ತಾರೆ ವಿನಃ ಅವರು ಬದುಕಿನಲ್ಲಿ ಯಾವುದೇ ಸಾಧನೆಯನ್ನು ಮಾಡುವುದಿಲ್ಲ. ದುಃಖ-ದುಮ್ಮಾನಗಳಿಂದಲೇ ನಿಸ್ವಾರ್ಥ ಗಳಿಕೆಯು ಪ್ರಾಪ್ತವಾಗುತ್ತದೆ. ಹಿಂದೆ ನಮ್ಮ ಪೂರ್ವಜರು ಮುಂದಿನ ಪೀಳಿಗೆಗೆ ಸಂಪತ್ತನ್ನು ಸಂಗ್ರಹಿಸದೆ ಮತ್ತೊಬ್ಬರಿಗೆ ತೊಂದರೆಯಾಗದಂತೆ ನ್ಯಾಯಯುತವಾಗಿ ಮತ್ತು ಮತ್ತೊಬ್ಬರಿಗೆ ಮಾದರಿಯಾಗುವಂತಹ ಬದುಕುವ ಕಲೆಯನ್ನು ಕಲಿಸುತ್ತಿದ್ದರು. ಕಷ್ಟದಲ್ಲಿರುವವರಿಗೆ ಕರುಣೆ ತೋರಿಸಿ ಧರ್ಮದಿಂದ ದುಡಿದು ತಿನ್ನುವ ಪ್ರವೃತ್ತಿಯನ್ನು ಬೆಳೆಸಿದ್ದರು. ಹೀಗಾಗಿ ಅಂದಿನ ಬಹುತೇಕ ಪೀಳಿಗೆಯು ಆರಾಮವಾಗಿತ್ತು.

ವಿಶ್ವದ ಇತಿಹಾಸವನ್ನು ಅವಲೋಕಿಸಿದಾಗ ಕಷ್ಟಗಳಲ್ಲಿ ಬೆಳೆದ ಬಹುತೇಕ ವ್ಯಕ್ತಿಗಳು ವಿಶ್ವಶ್ರೇಷ್ಠರಾಗಿದ್ದಾರೆ ವಿನಃ ಪಾಲಕರು ಸಂಗ್ರಹಿಸಿದ ಸಂಪತ್ತಿನಲ್ಲಿ ಬೆಳೆದವರು ವಿಶ್ವಶ್ರೇಷ್ಠರಾಗಿಲ್ಲ. ಸುಖಮಯ ಮತ್ತು ಶಾಂತಮಯ ಜೀವನಕ್ಕೆ ನ್ಯಾಯ, ನೀತಿ ಮತ್ತು ಧರ್ಮ ಮೂಲಾಧಾರವಾಗಿವೆ. ಬದುಕಿನಲ್ಲಿ ಮತ್ತು ಭವಿಷ್ಯದ ಬದುಕಿಗಾಗಿ ಎಷ್ಟೇ ಸಿರಿ-ಸಂಪತ್ತು ಗಳಿಸಿದರೂ ಅನೈತಿಕತೆ ಮುಂದುವರಿದರೆ ಸಮಾಜದಲ್ಲಿ ಮೌಲ್ಯಾಧಾರಿತ ಮತ್ತು ಆರೋಗ್ಯವಂತ ಬದುಕನ್ನು ನಿರ್ಮಿಸುವುದು ಅಸಾಧ್ಯವಾಗುತ್ತದೆ. ಒಟ್ಟಾರೆಯಾಗಿ ಜೀವನದಲ್ಲಿ ನ್ಯಾಯ ಮತ್ತು ಧರ್ಮದಲ್ಲಿ ನಡೆದಾಗಲೆ ಸುಂದರ ಬದುಕನ್ನು ಕಟ್ಟಿಕೊಳ್ಳಬಹುದಾಗಿದೆ.

ಅನ್ಯಾಯದ ಸಂಗ್ರಹಣೆಯು ಕೇವಲ ಕ್ಷಣಿಕ ಸುಖ ನೀಡುವ ಹವ್ಯಾಸವಾಗಿದ್ದು, ಈ ಅನ್ಯಾಯದ ಸಂಗ್ರಹಣೆಯು ಬಹುಕಾಲ ಉಳಿದ ಉದಾಹರಣೆಗಳು ಸಹ ಇತಿಹಾಸದಲ್ಲಿ ದಾಖಲಾಗಿಲ್ಲ. ಆದ್ದರಿಂದ ನ್ಯಾಯಯುತವಾಗಿ ಬದುಕಿನ ಮೌಲ್ಯಗಳನ್ನು ಅಳವಡಿಸಿಕೊಂಡು ಜೀವಿಸುವ ಕಲೆಯನ್ನು ಮೈಗೂಡಿಸಿಕೊಳ್ಳಬೇಕು. ಅಂದಾಗ ಮಾತ್ರ ಬದುಕನ್ನು ಆರೋಗ್ಯಕರ ಮಾರ್ಗದಲ್ಲಿ ಕರೆದೊಯ್ಯಲು ಸಾಧ್ಯವಾಗುತ್ತದೆ.

ಸರ್ವೋದಯದ ಸಂತ ಆಚಾರ್ಯ ವಿನೋಬಾ

● ಶಿವರಾಜ ಸೂ. ಸಣಮನಿ, ಮದಗುಣಕಿ

130ನೇ ಜನ್ಮದಿನ

ವಿನಾಯಕ ನರಹರಿ ಭಾವೆ, ಜಗತ್ತು ಅವರನ್ನು ಗುರುತಿಸುವುದು 'ವಿನೋಬಾ' ಎಂಬ ಪ್ರೀತಿಯ ಹೆಸರಿನಿಂದ. ಮಹಾತ್ಮ ಗಾಂಧೀಜಿಯವರ ಆಧ್ಯಾತ್ಮಿಕ ಉತ್ತರಾಧಿಕಾರಿ ಎಂದೇ ಖ್ಯಾತರಾದ ಅವರು, ಕೇವಲ ಸ್ವಾತಂತ್ರ್ಯ ಹೋರಾಟಗಾರರಾಗಿ ಉಳಿಯಲಿಲ್ಲ. ಬದಲಾಗಿ ಸ್ವಾತಂತ್ರ್ಯಾನಂತರದ ಭಾರತದ ಆತ್ಮವನ್ನು ಶುದ್ಧೀಕರಿಸಲು, ಗ್ರಾಮಗಳ ಪುನರುತ್ಥಾನಕ್ಕಾಗಿ ತಮ್ಮ ಬದುಕನ್ನೇ ಮುಡಿಪಾಗಿಟ್ಟ ಒಬ್ಬ ಆಧುನಿಕ ಸಂತ. ಅವರ ಬದುಕು, ವೈಚಾರಿಕತೆ ಮತ್ತು ಕಾರ್ಯಗಳು ಇಂದಿನ ಯುವ ಪೀಳಿಗೆಗೆ ಆದರ್ಶಪ್ರಾಯವಾಗಿವೆ.

ಜೀವನ ಮತ್ತು ಗಾಂಧೀಜಿಯವರ ಪ್ರಭಾವ: 1895ರ ಸೆಪ್ಟೆಂಬರ್ 11ರಂದು ಮಹಾರಾಷ್ಟ್ರದ ಗಾಗೋಡೆ ಗ್ರಾಮದಲ್ಲಿ ಜನಿಸಿದ ವಿನೋಬಾರ ಮೇಲೆ ಬಾಲ್ಯದಿಂದಲೇ ತಾಯಿಯ ಆಧ್ಯಾತ್ಮಿಕ ಚಿಂತನೆಗಳು ಮತ್ತು ಭಗವದ್ಗೀತೆಯ ಆಳವಾದ ಪ್ರಭಾವವಿತ್ತು. ಸತ್ಯಾನ್ವೇಷಣೆಯ ತುಡಿತದಿಂದಾಗಿ ತಮ್ಮ ಓದನ್ನು ಅರ್ಧಕ್ಕೆ ನಿಲ್ಲಿಸಿ ಹಿಮಾಲಯಕ್ಕೆ ಹೊರಟಿದ್ದ ಅವರನ್ನು, ಕಾಶಿಯಲ್ಲಿ ಗಾಂಧೀಜಿಯವರ ಭಾಷಣವೊಂದು ಆಕರ್ಷಿಸಿತು. 1916ರಲ್ಲಿ ಗಾಂಧೀಜಿಯವರನ್ನು ಭೇಟಿಯಾದ ಆ ಕ್ಷಣ, ಅವರ ಜೀವನದ ದಿಕ್ಕನ್ನೇ ಬದಲಿಸಿತು. ಗಾಂಧೀಜಿಯವರಲ್ಲಿದ್ದ ಆಧ್ಯಾತ್ಮಿಕತೆ, ರಾಜಕೀಯ ಮತ್ತು ಸಾಮಾಜಿಕ ಕ್ರಿಯೆಯ ಅಪೂರ್ವ ಸಂಗಮವು ವಿನೋಬಾರನ್ನು ಆಳವಾಗಿ ಪ್ರಭಾವಿಸಿತು. ಗಾಂಧಿಯವರ ಆಶ್ರಮದಲ್ಲಿ ಅವರು ಸಂಸ್ಕೃತ, ತತ್ತ್ವಶಾಸ್ತ್ರ ಮತ್ತು ವಿವಿಧ ಭಾರತೀಯ ಭಾಷೆಗಳಲ್ಲಿ ಪಾಂಡಿತ್ಯ ಗಳಿಸಿದರು. ಅವರ ಜ್ಞಾನ, ಶಿಸ್ತು ಮತ್ತು ಸೇವಾ ಮನೋಭಾವವನ್ನು ಕಂಡ ಗಾಂಧೀಜಿ, 1940ರಲ್ಲಿ ಆರಂಭಿಸಿದ 'ವೈಯಕ್ತಿಕ ಸತ್ಯಾಗ್ರಹ'ಕ್ಕೆ ಪ್ರಥಮ ಸತ್ಯಾಗ್ರಹಿಯಾಗಿ ವಿನೋಬಾರನ್ನೇ ಆಯ್ಕೆ ಮಾಡಿದ್ದು ಅವರ ಮೇಲಿದ್ದ ನಂಬಿಕೆಗೆ ಸಾಕ್ಷಿಯಾಗಿದೆ.

ವಿನೋಬಾ ಭಾವೆ ಅವರ ಹೆಸರನ್ನು ಭಾರತದ ಇತಿಹಾಸದಲ್ಲಿ ಅಜರಾಮರವಾಗಿಸಿದ್ದು ಅವರ ಭೂದಾನ ಚಳುವಳಿ. ಸ್ವಾತಂತ್ರ್ಯಾನಂತರ ಭಾರತ ಎದುರಿಸುತ್ತಿದ್ದ ಅತಿ ದೊಡ್ಡ ಸವಾಲುಗಳಲ್ಲಿ ಒಂದಾದ ಭೂಮಾಲೀಕತ್ವದ ಅಸಮಾನತೆಯನ್ನು ನಿವಾರಿಸಲು ಅವರು ಹಿಂಸೆಯ ಅಥವಾ ಸರಕಾರದ ಕಾನೂನಿನ ಮಾರ್ಗವನ್ನು ಬಿಟ್ಟು, ಪ್ರೀತಿ ಮತ್ತು ಹೃದಯ ಪರಿವರ್ತನೆಯ ದಾರಿಯನ್ನು ಹಿಡಿದರು.

1951ರಲ್ಲಿ, ತೆಲಂಗಾಣದ ಪೋಚಂಪಲ್ಲಿ ಗ್ರಾಮದಲ್ಲಿ ಕಮ್ಯುನಿಸ್ಟ್ ಚಟುವಟಿಕೆಗಳಿಂದ ಉಂಟಾಗಿದ್ದ ಉದ್ವಿಗ್ನತೆಯನ್ನು ಶಮನಗೊಳಿಸಲು ಹೋದಾಗ, ಅಲ್ಲಿನ ಹರಿಜನರು ತಮಗೆ ಬದುಕಲು ಸ್ವಲ್ಪ ಭೂಮಿ ಬೇಕೆಂದು ಕೇಳಿಕೊಂಡರು. ಆಗ ವಿನೋಬಾ ಅವರು ಭೂಮಾಲೀಕರಲ್ಲಿ ಮನವಿ ಮಾಡಿದರು. ರಾಮಚಂದ್ರ ರೆಡ್ಡಿ ಎಂಬ ಜಮೀನುದಾರರು ಸ್ವಯಂಪ್ರೇರಿತರಾಗಿ ನೂರು ಎಕರೆ ಭೂಮಿಯನ್ನು ದಾನ ಮಾಡಲು ಮುಂದೆ ಬಂದ ಆ ಕ್ಷಣ, ಒಂದು ಐತಿಹಾಸಿಕ ಚಳುವಳಿಗೆ ನಾಂದಿ ಹಾಡಿತು. ಇದೇ ಸ್ಫೂರ್ತಿಯಿಂದ ವಿನೋಬಾ ಅವರು ಭಾರತದಾದ್ಯಂತ ಪಾದಯಾತ್ರೆ ಆರಂಭಿಸಿದರು. ಸುಮಾರು 13 ವರ್ಷಗಳ ಕಾಲ 58,000 ಕಿಲೋಮೀಟರ್‌ಗಳಿಗಿಂತ ಹೆಚ್ಚು ದೂರ ನಡೆದು, ಸಬ್ ಭೂಮಿ ಗೋಪಾಲ್ ಕೀ (ಎಲ್ಲಾ ಭೂಮಿ ದೇವರದು) ಎಂಬ ತತ್ತ್ವವನ್ನು ಸಾರಿದರು.

ಅವರು ಶ್ರೀಮಂತ ಭೂಮಾಲೀಕರ ಹೃದಯವನ್ನು ತಟ್ಟಿ, ಅವರಿಂದ ಸ್ವಇಚ್ಛೆಯಿಂದ ಭೂಮಿಯನ್ನು ದಾನವಾಗಿ ಪಡೆದು, ಅದನ್ನು ಭೂಹೀನರಿಗೆ ಹಂಚಿದರು. ಈ ಚಳುವಳಿಯು ಕೇವಲ ಭೂದಾನಕ್ಕೆ ಸೀಮಿತವಾಗದೆ, ಗ್ರಾಮದಾನ, ಸಂಪತ್ತಿದಾನ ಮತ್ತು ಜೀವನದಾನದಂತಹ ಪರಿಕಲ್ಪನೆಗಳಿಗೆ ವಿಸ್ತರಿಸಿತು. ಇದು ರಕ್ತರಹಿತ ಸಾಮಾಜಿಕ ಕ್ರಾಂತಿಯ ಒಂದು ಅದ್ಭುತ ಪ್ರಯೋಗವಾಗಿತ್ತು. ವಿನೋಬಾ ಭಾವೆ ಅವರ ವ್ಯಕ್ತಿತ್ವವು ಜ್ಞಾನ, ಕರ್ಮ ಮತ್ತು ಭಕ್ತಿಯ ತ್ರಿವೇಣಿ ಸಂಗಮವಾಗಿತ್ತು. ಅವರು ಬಹುಭಾಷಾ ಪಂಡಿತರು, ಗೀತೆಯ ಮೇಲೆ ಅವರ ಪ್ರವಚನಗಳು ಇಂದಿಗೂ ಪ್ರಸ್ತುತ. ಅವರ ತಾತ್ವಿಕತೆಯ ತಿರುಳು ಸರ್ವೋದಯ- ಎಲ್ಲರ ಉದಯ, ಎಲ್ಲರ ವಿಕಾಸ. ಇದು ಕೇವಲ ಬಹುಸಂಖ್ಯಾತರ ಹಿತವಲ್ಲ, ಕಟ್ಟಕಡೆಯ ವ್ಯಕ್ತಿಯ ಏಳಿಗೆಯನ್ನೂ ಒಳಗೊಂಡ ಗಾಂಧೀಜಿಯವರ ಕನಸಾಗಿತ್ತು.

ಅನಂತ ಪದ್ಮನಾಭ ಪೂಜಾಫಲ

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಜೂಜಾಟದಲ್ಲಿ ಸೋತು ವನವಾಸದಲ್ಲಿ ಅನೇಕ ಸಂಕಟಗಳನ್ನು ಅನುಭವಿಸಿ ದಿಕ್ಕು ತೋಚದ ಸ್ಥಿತಿಯಲ್ಲಿದ್ದ ಪಾಂಡವ ಮಹಾರಾಜನು, ಶ್ರೀಕೃಷ್ಣನನ್ನು ಕುರಿತು 'ಓ ಜಗದ್ರಕ್ಷಕನೇ, ನಾವು ಅನುಭವಿಸುತ್ತಿರುವ ಈ ಕಷ್ಟಗಳಿಂದ ಪಾರಾಗುವ ಮಾರ್ಗವನ್ನು ತಿಳಿಸು' ಎಂದು ಪ್ರಾರ್ಥಿಸುತ್ತಾನೆ. ಆಗ ಕೃಷ್ಣನು ಭಾದ್ರಪದ ಶುಕ್ಲ ಚತುರ್ದಶಿಯಂದು ಅನಂತ ಪದ್ಮನಾಭ ವ್ರತವನ್ನು ಮಾಡುವಂತೆ ಸೂಚಿಸುತ್ತಾನೆ.

ಅನಂತ ಪದ್ಮನಾಭ ಯಾರು? ಈ ಪೂಜೆಯ ಮಹತ್ವವೇನು ಎಂದು ಧರ್ಮರಾಜ ವಿನೀತನಾಗಿ ಕೇಳಿದಾಗ, ಕೃಷ್ಣನು ಅನಂತ ಎಂದರೆ ಯಾರೂ ಅಲ್ಲ, ನಾನೇ, ಕಾಲಪುರುಷ, ಕಾಲವೇ ಅನಂತ ಎಂದು ಉತ್ತರಿಸುತ್ತಾನೆ. ನಂತರ ಧರ್ಮರಾಜನಿಗೆ ಅನಂತಪದ್ಮನಾಭನ ಕೃಪೆ ಉಂಟಾದರೆ ಆಗುವ ಒಳಿತಿನ ಕಥೆಯನ್ನೂ ಹೇಳುತ್ತಾನೆ.

ಕೃತಯುಗದಲ್ಲಿ, ಸುಮಂತ ಮತ್ತು ದೀಕ್ಷಾ ಎಂಬ ಬ್ರಾಹ್ಮಣ ದಂಪತಿ ವಿಷ್ಣುವಿನ ಕೃಪೆಯಿಂದ ಹೆಣ್ಣುಮಗುವನ್ನು ಪಡೆದರು. ಅವರು ಅವಳಿಗೆ ಸುಶೀಲ ಎಂದು ಹೆಸರಿಸಿ ಮುದ್ದಾಗಿ ಬೆಳೆಸಿದರು. ಈ ನಡುವೆ ಸುಮಂತನ ಪತ್ನಿ ದೀಕ್ಷಾ ಅನಾರೋಗ್ಯದಿಂದ ಸಾವನ್ನಪ್ಪಿದಾಗ, ಅವನು ಬೇರೊಬ್ಬ ಕರ್ಕಶ ಎಂಬುವ ಹೆಣ್ಣು ಮಗಳನ್ನು ಮದುವೆಯಾಗುತ್ತಾನೆ. ಆಕೆ ಸುಶೀಲೆಯನ್ನು ಮಗಳಂತೆ ಪ್ರೀತಿಯಿಂದ ಕಾಣದೆ ಸಾಕಷ್ಟು ಹಿಂಸೆ ಕೊಡುತ್ತಾಳೆ. ಮಗಳಿಗೆ ಆಗುತ್ತಿರುವ ಮಲತಾಯಿಯ ಹಿಂಸೆಯಿಂದ ಅವಳನ್ನು ತಪ್ಪಿಸಲು ತಂದೆ ಅವಳನ್ನು ಕೌಂಡಿನ್ಯ ಎನ್ನುವ ವರನಿಗೆ ಕೊಟ್ಟು ಮದುವೆ ಮಾಡುತ್ತಾನೆ. ಇನ್ನು ತಂದೆಯ ಮನೆಯ ಋಣ ತೀರಿತು ಎಂದು ಮಗಳು ತನ್ನ ಪತಿಯನ್ನು ಒಡಗೂಡಿ ತಂದೆಯ ಮನೆಯನ್ನು ಬಿಟ್ಟು ಹೊರಡುತ್ತಾಳೆ.

ಎತ್ತಿನಬಂಡಿಯಲ್ಲಿ ತೆರಳುತ್ತಿರುವಾಗ ಮಾರ್ಗ ಮಧ್ಯೆ ಮರದ ಕೆಳಗೆ ದಂಪತಿ ವಿಶ್ರಾಂತಿ ಪಡೆಯುತ್ತಾರೆ. ಆಗ ಸುಶೀಲಾ ಅಲ್ಲೇ ಹತ್ತಿರದ ನದಿ ದಂಡೆಯಲ್ಲಿ ಪೂಜೆ ಮಾಡುತ್ತಿದ್ದ ಮುತ್ತೈದೆಯರನ್ನು ನೋಡಿ, ಅವರ ಬಳಿ ಬಂದು ಆ ಪೂಜೆಯ ಬಗ್ಗೆ ಕೇಳುತ್ತಾಳೆ. ಅವರು ಅವಳಿಗೆ ಆಗ ಅನಂತಪದ್ಮನಾಭ ವ್ರತದ ಬಗ್ಗೆ ಹೇಳುತ್ತಾರೆ . ಈ ದಿನ ನಾರಾಯಣನನ್ನು ಭಕ್ತಿಯಿಂದ ಪೂಜಿಸಿ, ಆ ಪೂಜೆಯಲ್ಲಿ ಇರಿಸುವ ಹದಿನಾಲ್ಕು ಎಳೆಯ ರೇಷ್ಮೆದಾರವನ್ನು ಗಂಡನು ಹೆಂಡತಿಯ ಎಡಗೈಗೆ ಮತ್ತು ಹೆಂಡತಿಯು ಗಂಡನ ಬಲಗೈಗೆ ಕಟ್ಟಿದರೆ ಸಂಪತ್ತು ಮತ್ತು ಸಂತೋಷ ಸಿಗಲಿದೆ ಎನ್ನುತ್ತಾರೆ.

ಆಗ ಸುಶೀಲೆಯು ಪತಿಯ ಸಹಕಾರದಿಂದ ಶ್ರೀಅನಂತನ ಪೂಜೆಯನ್ನು ಮಾಡುತ್ತಾಳೆ. ಕಾಲಕ್ರಮೇಣ ಅವರ ಬಡತನ ತೊಲಗಿ ಅಷ್ಟ ಐಶ್ವರ್ಯಗಳಿಂದ ತುಂಬುತ್ತದೆ. ಆದರೆ ಶ್ರೀಮಂತಿಕೆಯ ಮದದಿಂದ ಅವಳ ಪತಿ ಕೌಂಡಿನ್ಯನು ಅನಂತ ಪದ್ಮನಾಭನ ಕೃಪೆಯನ್ನು ಮರೆಯುತ್ತಾನೆ. ಅನಂತ ಪದ್ಮನಾಭ ವ್ರತದ ದಿನ ಸುಶೀಲೆಯ ಕೈಯಲ್ಲಿದ್ದ ಅನಂತನ ದಾರವನ್ನು ನೋಡುತ್ತಾನೆ. ಯಾರನ್ನು ವಶ ಮಾಡಿಕೊಳ್ಳಲು ಇದನ್ನು ಕಟ್ಟಿಕೊಂಡಿರುವೆ ಎಂದು ಅಹಂಕಾರದಿಂದ ಕೇಳುತ್ತಾನೆ, ಸಾಲದೆಂಬಂತೆ ಆ ದಾರವನ್ನು ತೆಗೆದುಕೊಂಡು ಬೆಂಕಿಯಲ್ಲಿ ಹಾಕಿ ಬಿಡುತ್ತಾನೆ. ಕೂಡಲೇ ಸುಶೀಲೆಯು ಸುಡುತ್ತಿದ್ದ ದಾರವನ್ನು ಹಾಲಿನಲ್ಲಿ ನೆನೆಸಿ ಇಡುತ್ತಾಳೆ. ಅವನ ಈ ಅಹಂಕಾರದಿಂದ ತನ್ನೆಲ್ಲಾ ಆಸ್ತಿಪಾಸ್ತಿಗಳನ್ನು ಕಳೆದುಕೊಳ್ಳುತ್ತಾನೆ. ನಂತರ ಪಶ್ಚಾತ್ತಾಪದಿಂದ ಈಗ ಅನಂತಪದ್ಮನಾಭನನ್ನು ಒಲಿಸುವ ಮಾರ್ಗವೇನು ಎಂದು ಪತ್ನಿ ಸುಶೀಲೆಯನ್ನು ಕೇಳುತ್ತಾನೆ. ಅನಂತನ ಕೃಪೆಯನ್ನು ಪಡೆಯಲು ತಪಸ್ಸು ಮಾಡುತ್ತಾನೆ. ವಿಷ್ಣುವು ಅವನ ಭಕ್ತಿಗೆ ಮೆಚ್ಚಿ ಪ್ರತ್ಯಕ್ಷನಾದಾಗ ಭಕ್ತಿಯಿಂದ ಅನಂತನನ್ನು ಸ್ತುತಿಸುತ್ತಾನೆ. ಅನಂತನು ಅವನನ್ನು ಆಶೀರ್ವದಿಸಿ, 'ನಿಮ್ಮ ಮನೆಯಲ್ಲಿ ಹದಿನಾಲ್ಕು ವರ್ಷಗಳ ಕಾಲ ಅನಂತ ಚತುರ್ದಶಿ ಪೂಜೆಯನ್ನು ಮಾಡಿರಿ, ನೀವು ಧರಿಸುವ ದಾರವು ಸಕಲ ಐಶ್ವರ್ಯಗಳನ್ನೂ ತಂದು ಅನುಗ್ರಹಿಸಲಿ' ಎಂದು ಆಶೀರ್ವದಿಸುತ್ತಾನೆ. ಹೀಗೆ ಅಂದಿನಿಂದ ಅನಂತ ಚತುರ್ದಶಿ ಆಚರಣೆ ರೂಢಿಯಲ್ಲಿದೆ ಎಂದು ಕೃಷ್ಣ ಪರಮಾತ್ಮ ಯುಧಿಷ್ಠಿರನಿಗೆ ಕಥೆಯನ್ನು ಹೇಳಿ ಮುಗಿಸುತ್ತಾನೆ.

ವನವಾಸದಲ್ಲಿದ್ದ 14 ವರ್ಷವೂ ಪಾಂಡವರು ಅನಂತನ ವ್ರತವನ್ನು ಮಾಡಿ ನಂತರ ತಮ್ಮ ರಾಜ್ಯವನ್ನು ಮರಳಿ ಪಡೆದರು ಎಂದು ಪುರಾಣದಲ್ಲಿ ಉಲ್ಲೇಖವಾಗಿದೆ. ನಮ್ಮ ಪ್ರತಿಯೊಂದು ಹಬ್ಬ ಆಚರಣೆಗೂ ಕೂಡ ಒಂದೊಂದು ಐತಿಹ್ಯವಿದೆ. ಅಹಂಕಾರದಿಂದ ಕಳೆದುಕೊಂಡದ್ದನ್ನು ಮತ್ತೆ ಭಕ್ತಿಯಿಂದ, ಭಗವಂತನಿಗೆ ನಮ್ಮನ್ನು ಸಮರ್ಪಿಸಿಕೊಳ್ಳುವುದರಿಂದ ಅವನ ಕೃಪಾಕಟಾಕ್ಷಕ್ಕೆ ಪಾತ್ರರಾಗಿ ಮತ್ತೆ ಮರಳಿ ಪಡೆಯಬಹುದು ಎನ್ನುವುದಕ್ಕೆ ಅನಂತ ಪದ್ಮನಾಭ ವ್ರತ ಉತ್ತಮ ಉದಾಹರಣೆ.

ಒಂದೊಳ್ಳೆ ಮಾತು
Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ಅಗತ್ಯ ನೋಡಿ ಖರ್ಚು ಮಾಡಿ

● ಜೆ.ಸಿ.ಜಾಧವ, ಬಾಗಲಕೋಟೆ

ಮೊನ್ನೆ ನಮ್ಮ ಫ್ರೆಂಡ್ ಹೇಳತಿದ್ದಾ ನಾನು 20 ವರ್ಷದ ಹಿಂದೆ ಒಂದು 30ಗಿ 40 ಸೈಟ್ ಎಂಭತ್ತು ಸಾವಿರಕ್ಕ ತೊಗೊಂಡಿದ್ದೆ, ಈಗ ಇಪ್ಪತ್ತೈದು ಲಕ್ಷಕ್ಕ ಮಾರಾಟ ಮಾಡಿದ್ಯಾ ಅಂತ. ಹಿಂಗ ಇನ್ನೊಬ್ಬರು ಮಾತಾಡತಿದ್ರು ಐದು ವರ್ಷದ ಹಿಂದೆ ಎಸ್‌ಜಿಬಿ ಅಂದ್ರ ಕೇಂದ್ರ ಸರ್ಕಾರದ ಸಾವರಿನ್ ಗೋಲ್ಡ್ ಬಾಂಡ್ ಸ್ಕೀಮಲ್ಲಿ ಅಥವಾ ಬಂಗಾರದ ಅಂಗಡಿಯಲ್ಲಿ ಸುಮಾರು 46 ಸಾವಿರಕ್ಕ 10 ಗ್ರಾಂ ಬಂಗಾರ ತೊಗೊಂಡಿದ್ವಿ. ಈಗ 10 ಗ್ರಾಂ ಬಂಗಾರಕ್ಕ ಒಂದು ಲಕ್ಷಕ್ಕೂ ಹೆಚ್ಚಿಗೆ ಆಗೇತಿ ಅಂತ. ಹೀಗೆ ನಾವು ಬಹಳಷ್ಟು ಜನರಿಂದ ಇಂತಹ ಮಾತುಗಳನ್ನ ಕೇಳತಿರತೀವಿ. ಇದಕ್ಕೆ ನಾವು ಸಾಮಾನ್ಯವಾಗಿ ನಾವು ದುಡ್ಡಿನ ಮೋಡಿ ಅನ್ನಬಹುದು. ಅಂದರೆ ಈಗಿನ ದಿನಗಳಲ್ಲಿ ನಾವು ತೊಡಗಿಸಿದ ಹಣ ಬಹಳಷ್ಟು ಬೆಳೆದಿದೆ ಎನ್ನುವ ಭ್ರಮೆಯಲ್ಲಿರುತ್ತೇವೆ.

ಆದರೆ ಈ ಎರಡೂ ಮೇಲಿನ ಉದಾಹರಣೆಗಳನ್ನು ನಾವು ನೋಡಿದಾಗ ಆ ಸಮಯದಲ್ಲಿ ಆ ಹಣದ ಮೌಲ್ಯ ಅಷ್ಟೇ ಇತ್ತು. ಈಗಲೂ ಆ ಮೊತ್ತಕ್ಕೆ ಅವರು ಏನು ಖರೀದಿಸಿದರೋ ಅಷ್ಟೇ ಪ್ರಮಾಣದ ವಸ್ತು ಅಥವಾ ಆಸ್ತಿಯನ್ನು ಖರೀದಿಸಬಹುದು. ಯಾಕೆಂದರೆ ಸೈಟ್ ಮಾರಿದ ವ್ಯಕ್ತಿ ಅದೇ ಅಳತೆಯ ಸೈಟ್ ಖರೀದಿಸಬೇಕಾದರೆ, ಈಗ ಎಷ್ಟಕ್ಕೆ ಮಾರಿದ್ದಾನೆಯೋ ಅಷ್ಟೇ ಮೊತ್ತವನ್ನು ನೀಡಬೇಕಾಗುತ್ತದೆ. ಅಲ್ಲದೇ 10 ಗ್ರಾಂ ಬಂಗಾರ ಖರೀದಿಗೆ ಅಷ್ಟೇ ಹಣ ನೀಡಿ ಖರೀದಿಸಬೇಕಾಗುತ್ತದೆ. ನಾವು ನಮ್ಮ ಹೂಡಿಕೆಗೆ ಹೆಚ್ಚು ಮೊತ್ತ ಪಡೆದಿದ್ದೇವೆ ಎಂದು ಮೋಡಿಗೆ ಒಳಗಾಗುತ್ತೇವೆ ವಿನಃ ಇಲ್ಲಿ ಏನೂ ಬದಲಾವಣೆ ಕಾಣುವುದಿಲ್ಲ. ಇದಕ್ಕೆ ಅರ್ಥಶಾಸ್ತ್ರದಲ್ಲಿ ಹಣದುಬ್ಬರ ಎನ್ನುತ್ತೇವೆ. ಅಲ್ಲದೇ ಆವಾಗಲೇ ಇನ್ನೂ ಒಂದೋ ಅಥವಾ ಎರಡು ಸೈಟ್ ಹೆಚ್ಚಿಗೆ ಖರೀದಿಸಬೇಕಾಗಿತ್ತು ಅಥವಾ 20 ಅಥವಾ 30 ಗ್ರಾಂ ಬಂಗಾರ ಹೆಚ್ಚು ಖರೀದಿಸಬೇಕಾಗಿತ್ತು ಅಂತ ಬಹಳಷ್ಟು ಜನ ಪೇಚಾಡುವುದನ್ನು ನೋಡಿರಬಹುದು. ಆದರೆ ಆ ಸಮಯದಲ್ಲಿ ಅಷ್ಟೇ ಹಣ ವಿನಿಯೋಗಿಸುವಷ್ಟು ಸಾಮರ್ಥ್ಯ ಅಥವಾ ವರಮಾನ ಇರುತ್ತೆ ಅನ್ನುವುದು ಗಮನಿಸಬೇಕಾದ ಸಂಗತಿ.

ಯಾವಾಗಲೂ ಜನಸಾಮಾನ್ಯರ ಅದರಲ್ಲೂ ಮಧ್ಯಮ ವರ್ಗದವರ ವರಮಾನ ಹಾಗೂ ಪ್ರಸ್ತುತ ವಿದ್ಯಮಾನಗಳ ಮೇಲೆ ದೇಶದ ಅಥವಾ ಜಾಗತಿಕ ಅರ್ಥ ವ್ಯವಸ್ಥೆಯು ರೂಪುಗೊಳ್ಳುತ್ತದೆ ಎನ್ನುವುದನ್ನು ಮರೆಯಬಾರದು. ಈ ಹಣದುಬ್ಬರವು ನಮ್ಮ ದಿನ ಬಳಕೆಯ ವಸ್ತುಗಳ ಮತ್ತು ಸೇವೆಗಳ ಬೆಲೆ ಏರಿಕೆಯ ಮೂಲಕ ನಾವು ತಿಳಿಯಬಹುದು. ಹಣದುಬ್ಬರವನ್ನು ಆಯಾ ದೇಶಗಳ ಸರ್ಕಾರ ಮತ್ತು ಕೇಂದ್ರಿಯ ಬ್ಯಾಂಕ್‌ಗಳ ವಿತ್ತೀಯ ನೀತಿ (Monetary Policy) ಮತ್ತು ಹಣಕಾಸಿನ ನೀತಿ (Fiscal Policy) ಮೂಲಕ ನಿಯಂತ್ರಣಕ್ಕೆ ತರುತ್ತಾರೆ.

ವಿತ್ತೀಯ ನೀತಿ ಸಮಿತಿ (Monetray Policy Committee) ನಮ್ಮ ದೇಶದಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್ 2 ತಿಂಗಳಿಗೊಮ್ಮೆ ವಿತ್ತೀಯ ನೀತಿ ಸಮಿತಿಯ ಸಭೆಯ ನಿರ್ಧಾರದ ಆಧಾರದಿಂದ ಈ ರೀತಿಯ ನಿರ್ಣಯಗಳನ್ನು ಕೈಗೊಳ್ಳುತ್ತದೆ. 1) ಬಡ್ಡಿ ದರ ಹೊಂದಾಣಿಕೆ (Interest Rate Adjustment), 2) ಮೀಸಲು ನಿಧಿಯ ಬೇಡಿಕೆ (Reserve Requirements) 3) ಮುಕ್ತ ಮಾರುಕಟ್ಟೆ ಕಾರ್ಯಾಚರಣೆ (Open Market Operations)

ಬಡ್ಡಿ ದರ ಹೊಂದಾಣಿಕೆಗಳು (Interest Rate Adjustment): ಸಾಲ ಮತ್ತು ಖರ್ಚು ಕಡಿಮೆ ಮಾಡಲು ಬ್ಯಾಂಕ್‌ಗಳು ಬಡ್ಡಿ ದರಗಳನ್ನು ಹೆಚ್ಚಿಸುವುದರಿಂದ ಮಾರುಕಟ್ಟೆಯಲ್ಲಿ ಹಣದ ಪೂರೈಕೆಯು ಕಡಿಮೆಯಾಗಿ ಹೆಚ್ಚು ಖರ್ಚು ಮಾಡುವುದನ್ನು ತಡೆಯುವ ಮೂಲಕ ಹಣದುಬ್ಬರವನ್ನು ನಿಯಂತ್ರಣಕ್ಕೆ ತರುತ್ತದೆ. ಮೀಸಲು ಅಗತ್ಯತೆಗಳು: ಬ್ಯಾಂಕುಗಳ ಮೀಸಲು ನಿಧಿಯನ್ನು ಹೆಚ್ಚಳ ಮಾಡಿ ಸಾಲ ನೀಡಲು ಲಭ್ಯವಿರುವ ಹಣದ ಪ್ರಮಾಣವನ್ನು ಕಡಿಮೆ ಮಾಡುತ್ತವೆ. ಇದು ಹಣದುಬ್ಬರವನ್ನು ನಿಯಂತ್ರಿಸಲು ಸಹಾಯ ಮಾಡುತ್ತದೆ. ಮುಕ್ತ ಮಾರುಕಟ್ಟೆ ಕಾರ್ಯಾಚರಣೆ: ಆರ್‌ಬಿಐ ಹಣದ ಪೂರೈಕೆಯನ್ನು ನಿಯಂತ್ರಿಸಲು ಸರ್ಕಾರದ ಭದ್ರತಾ ಪತ್ರಗಳನ್ನು ಖರೀದಿಸುತ್ತವೆ ಅಥವಾ ಮಾರಾಟ ಮಾಡುತ್ತವೆ.

ಸರಕಾರಿ ಖರ್ಚುಗಳನ್ನು ಕಡಿಮೆ ಮಾಡುವುದರ ಮೂಲಕ ಒಟ್ಟಾರೆ ಬೇಡಿಕೆಯನ್ನು ಕಡಿಮೆ ಮಾಡಿ ಹಣದುಬ್ಬರವನ್ನು ನಿಯಂತ್ರಣಕ್ಕೆ ತರುತ್ತದೆ. ತೆರಿಗೆಗಳನ್ನು ಹೆಚ್ಚಿಸುವುದರಿಂದ ಖರ್ಚು ಮಾಡುವುದನ್ನು ತಡೆಯುವ ಜೊತೆಗೆ ಬೇಡಿಕೆಯನ್ನು ತಗ್ಗಿಸುವ ಮೂಲಕ ಹಣದುಬ್ಬರವನ್ನು ನಿಯಂತ್ರಿಸುತ್ತದೆ. ಇನ್ನು ನಾವು ವೈಯಕ್ತಿಕವಾಗಿ ಹಣದುಬ್ಬರವನ್ನು ಈ ರೀತಿ ನಿಯಂತ್ರಿಸಿಕೊಳ್ಳಬಹುದು.

ನಮ್ಮ ಅವಶ್ಯಕತೆಗಳಲ್ಲಿ ಆದ್ಯತೆಯ ಮೇರೆಗೆ ಖರ್ಚು ಮಾಡುವುದನ್ನು ರೂಢಿಸಿಕೊಳ್ಳುವುದು ಅಗತ್ಯ. ನಮ್ಮ ಹೂಡಿಕೆ ಅಥವಾ ಉಳಿತಾಯ ಮುಂದಿನ ದಿನಗಳ ಹಣದುಬ್ಬರವನ್ನು ನಿಭಾಯಿಸುವಷ್ಟು ಮತ್ತು ಸುರಕ್ಷಿತವಾಗಿರುವಂತೆ ನೋಡಿಕೊಳ್ಳಬೇಕು. ನಮಗೆ ಏನಾದರೂ ಒಂದಿಡೀ ಮೊತ್ತ ಬಂದರೆ ಅದನ್ನು ನಮ್ಮ ಮುಂದಿನ ಜೀವನೋಪಾಯಕ್ಕೆ ಸಹಕಾರಿಯಾಗುವಂತೆ ಉಳಿತಾಯ ಮಾಡಬೇಕು. ಉದಾಹರಣೆಗೆ ನಮ್ಮ ವಯಸ್ಸಾದ ಕಾಲಕ್ಕೆ ವರಮಾನ ನೀಡುವಂತಹ ಖಚಿತ ಹಾಗೂ ನಿರಂತರವಾಗಿ ನೀಡುವ ಪಿಂಚಣಿ ಯೋಜನೆಗಳಲ್ಲಿ ತೊಡಗಿಸುವುದು. ಜೊತೆಗೆ ಚಿನ್ನದಲ್ಲಿ ಉಳಿತಾಯ ಮಾಡುವುದು. ಕಡಿಮೆ ದರದಲ್ಲಿ ದೊರೆಯುವ ಹಾಗೂ ಮುಂದಿನ ದಿನಗಳಲ್ಲಿ ಬೇಡಿಕೆ ಬರುವ ಸ್ಥಳಗಳಲ್ಲಿ ಸೈಟ್ ಖರೀದಿಸುವ ಯೋಜನೆ. ಯುಲಿಪ್ ಪಾಲಿಸಿಗಳು ಜೀವ ವಿಮಾ ರಕ್ಷಣೆಯೊಂದಿಗೆ ಹೆಚ್ಚಿನ ನಿವ್ವಳ ಲಾಭವನ್ನು ನೀಡುತ್ತವೆ. ದೀರ್ಘ ಕಾಲದ ಸಾಂಪ್ರದಾಯಿಕ ಜೀವ ವಿಮಾ ಪಾಲಿಸಿಗಳು ಅದರಲ್ಲೂ ಖಚಿತ ಸೇರ್ಪಡೆಯೊಂದಿಗೆ (Guaranteed Addition) ನಿರಂತರ ಆದಾಯ ಹಾಗೂ ಇಡೀ ಮೊತ್ತವನ್ನು ನೀಡುವುದರಿಂದ ಆಯಾ ಸಮಯದ ಹಣಕಾಸಿನ ಜವಾಬ್ದಾರಿಗಳನ್ನು ಮತ್ತು ಹಣದುಬ್ಬರವನ್ನು ನಿಭಾಯಿಸಲು ಸಹಕಾರಿಯಾಗಲಿವೆ. ಭಾರತೀಯ ಜೀವ ವಿಮಾ ನಿಗಮದ ಜೀವನ್ ಉತ್ಸವ್ ಪಾಲಿಸಿ ಖಚಿತ ಸೇರ್ಪಡೆಯೊಂದಿಗೆ ಜೀವನ ಪರ್ಯಂತ ವಿಮಾ ರಕ್ಷಣೆ ನೀಡುವುದರ ಜೊತೆಗೆ ವಾರ್ಷಿಕವಾಗಿ ನಿರಂತರ ಮತ್ತು ಖಚಿತ ಆದಾಯ ನೀಡುತ್ತದೆ. ಇನ್ನೂ ಎಲ್ಲಾ ವಿಧದ ಉಳಿತಾಯ ಹಾಗೂ ಹೂಡಿಕೆಗಳಲ್ಲಿ ಹಣ ತೊಡಗಿಸಿದರೆ ಒಳ್ಳೆಯದು. ಇದರಿಂದ ಹಣದುಬ್ಬರವನ್ನು ನಿಯಂತ್ರಿಸಿಕೊಳ್ಳಬಹುದು.

ಪದಬಂಧ

● ಸಿ.ರವಿಶಂಕರ ಶಾಸ್ತ್ರಿ, ದಂಬೆ



ಎಡದಿಂದ ಬಲಕ್ಕೆ

1. ಎರಡು ಭಾಷೆಯನ್ನು ಬಲ್ಲವನು (3)
3. ರಾಮನಿಗೂ ಬೇಕಾಗಿದೆ ಬಿಡುವು (3)
5. ಸದ್ದೇ ಇಲ್ಲ, ಮೌನ (3)
7. ಎರಡೂ ಕೈಮುಗಿದು ಮಾಡುವ ವಂದನೆ (4)
9. ತುಂಬಾ ಪರಿಣಾಮಕಾರಿಯಾದ ಉಪಾಯವು ದಶರಥ ನಂದನನಿಂದ ಆರಂಭವಾಗಿದೆ (4)
11. ಸಹಾಯ ಮಾಡಲು ಬಂದಿರುವ ಗುಂಪು (3)
13. ಪುತ್ರ ಅಥವಾ ಮಗ (3)
14. ಸ್ಥಿರವಲ್ಲದ ಎಂದರ್ಥ (3)
15. ಆಧಾರ ಅಥವಾ ಗಣಿ (3)
17. ಮಾರುತ ಅಥವಾ ಗಾಳಿ (4)
18. ನೀರಿನಲ್ಲಿ ವಾಸಿಸುವ ಮೀನು, ಮೊಸಳೆ ಇತ್ಯಾದಿ ಅಸ್ತವ್ಯಸ್ತವಾಗಿ ಬಂದಿದೆ (4)
20. ಸ್ವರ್ಗವಲ್ಲ, ಅದಕ್ಕೆ ವಿರುದ್ಧವಾದುದು (3)
22. ಆಶೆಯಿಂದ ಮಾಡಿದ ವಿನೋದ (3)
23. ಪರದ ನಡುವೆ ಸಿಲುಕಿದ ಮಡಿಕೆ (3)

ಮೇಲಿಂದ ಕೆಳಕ್ಕೆ

1. ಮನಸ್ಸಿನ ಕಳವಳ (3)
2. ಹಾಲಿಗೆ ಮತ್ತೊಂದು ಪದ (2)
4. ಮತ್ತೊಂದು ವೃಕ್ಷವನ್ನು ಕಟ್ಟಿಕೊಂಡಿದೆ ಸಾವು (3)
5. ಸಾರಹೀನವಾದದ್ದು (3)
6. ವಿಷ್ಣುವಿನ ಅವತಾರಗಳಲ್ಲಿ ಮೂರನೆಯದು (3)
8. ಶ್ರೇಷ್ಠನಾದವನು ಎಂದರ್ಥ (5)
10. ತಿನ್ನಬೇಕೆಂಬ ಬಯಕೆ (5)
12. ಗಣೇಶನ ವಾಹನ (3)
15. ಮುಖ, ವದನ (3)
16. ವಸ್ತ್ರ ಒಗೆಯುವ ಅಗಸ (3)
17. ದೊಡ್ಡದಾದ ಬೆಟ್ಟ (3)
19. ಬಳ್ಳಿ ಹಬ್ಬಲು ಹಾಕಿರುವ ಹಂದರ (3)
21. ಎರಡಕ್ಷರದ ರುಧಿರ (2)

ನೀವೂ ಬರೆಯಬಹುದು
ನಮ್ಮ ವಿಳಾಸ
ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
e-mail: vishwavanimagazine@gmail.com

ಸಮಾಚಾರ ಸಣ್ಣದಲ್ಲ

ವಿಶ್ವಕಪ್: ಸೋಫಿ ಡಿವೈನ್ ನ್ಯೂಜಿಲೆಂಡ್ ನಾಯಕಿ

ವೆಲ್ಲಿಂಗ್ಟನ್: ಐಸಿಸಿ ಮಹಿಳಾ ಏಕದಿನ ವಿಶ್ವಕಪ್‌ಗಾಗಿ ನ್ಯೂಜಿಲೆಂಡ್ ಬುಧವಾರ ತನ್ನ ತಂಡವನ್ನು ಪ್ರಕಟಿಸಿದ್ದು, 15 ಸದಸ್ಯರ ತಂಡವನ್ನು ಸೋಫಿ ಡಿವೈನ್ ಮುನ್ನಡೆಸಲಿದ್ದಾರೆ. ನಾಲ್ವರು ಆಟಗಾರ್ತಿಯರು ಚೊಚ್ಚಲ ಮಹಿಳಾ ವಿಶ್ವಕಪ್ ಕರೆ ಪಡೆದಿದ್ದಾರೆ. ಫ್ಲೋರಾ ಡೆವನ್‌ಶೈರ್, ಪಾಲಿ ಇಂಗ್ಲಿಸ್, ಬೆಲ್ಲಾ ಜೇಮ್ಸ್ ಮತ್ತು ಬ್ರೀ ಇಲ್ಲಿಂಗ್ ಅವರು ತಮ್ಮ ಮೊದಲ ವಿಶ್ವಕಪ್ ಕರೆ ಪಡೆದ ನಾಲ್ವರು ಆಟಗಾರ್ತಿಯರು. ಸುಜೀ ಬೇಟ್ಸ್ ತಂಡದಲ್ಲಿ ಸ್ಥಾನ ಪಡೆದಿದ್ದಾರೆ. ಲಿಯಾ ತಹುಹು ಈ ಸಲ ತಮ್ಮ ನಾಲ್ಕನೇ ಏಕದಿನ ವಿಶ್ವಕಪ್ ಆಡಲಿದ್ದಾರೆ. ಮ್ಯಾಡಿ ಗ್ರೀನ್ ಮತ್ತು ಅಮೆಲೀ ಕೆರ್ ಕೂಡಾ ವಿಶ್ವಕಪ್‌ಗೆ ಆಯ್ಕೆಯಾಗಿದ್ದಾರೆ. ನ್ಯೂಜಿಲೆಂಡ್ ತಂಡ ಹೀಗಿದೆ–ಸೋಫಿ ಡಿವೈನ್ (ನಾಯಕಿ), ಸುಜೀ ಬೇಟ್ಸ್, ಈಡನ್ ಕಾರ್ಸನ್, ಫ್ಲೋರಾ ಡೆವನ್‌ಶೈರ್, ಇಜ್ಜಿ ಗೇಜ್, ಮ್ಯಾಡಿ ಗ್ರೀನ್, ಬ್ರೂಕ್ ಹ್ಯಾಲಿಡೇ, ಬ್ರೀ ಇಲಿಂಗ್, ಪಾಲಿ ಇಂಗ್ಲಿಸ್, ಬೆಲ್ಲಾ ಜೇಮ್ಸ್, ಜೆಸ್ ಕೆರ್, ಮೆಲೀ ಕೆರ್, ರೋಸ್‌ಮರಿ ಮೈರ್, ಜಾರ್ಜಿಯಾ ಪ್ಲಿಮ್ಮರ್, ಲಿಯಾ ತಹುಹು.

ಬೌಲಿಂಗ್ ಶ್ರೇಯಾಂಕ: 3ನೇ ಸ್ಥಾನದಲ್ಲಿ ಆರ್ಚರ್

ದುಬೈ: ಇಂಗ್ಲೆಂಡ್ ವೇಗಿ ಜೋಫ್ರಾ ಆರ್ಚರ್ ಅವರು ನೂತನ ಐಸಿಸಿ ಏಕದಿನ ಬೌಲಿಂಗ್ ಶ್ರೇಯಾಂಕದಲ್ಲಿ 16 ಸ್ಥಾನಗಳ ಭಾರಿ ಜಿಗಿತ ಕಾಣುವ ಮೂಲಕ 3ನೇ ಸ್ಥಾನಕ್ಕೇರಿದ್ದಾರೆ. ಅವರು ದಕ್ಷಿಣ ಆಫ್ರಿಕಾ ವಿರುದ್ಧದ ಸರಣಿಯಲ್ಲಿ ಅತಿ ಹೆಚ್ಚು ವಿಕೆಟ್ ಸಾಧನೆಗೈದಿದ್ದರು. ಈ ಪ್ರದರ್ಶನ ಅವರನ್ನು ಶ್ರೇಯಾಂಕದಲ್ಲಿ ಪ್ರಗತಿ ಸಾಧಿಸುವಂತೆ ಮಾಡಿದೆ. ಅಂತಿಮ ಏಕದಿನ ಪಂದ್ಯದಲ್ಲಿ ಆರ್ಚರ್ ನಾಲ್ಕು ವಿಕೆಟ್‌ಗಳನ್ನು ಕಬಳಿಸುವ ಮೂಲಕ ಇಂಗ್ಲೆಂಡ್ ಏಕದಿನ ಕ್ರಿಕೆಟ್ ಇತಿಹಾಸದಲ್ಲಿ ಅತೀ ದೊಡ್ಡ ಗೆಲುವು ದಾಖಲಿಸುವಲ್ಲಿ ಪ್ರಮುಖ ಪಾತ್ರವಹಿಸಿದ್ದರು. ದಕ್ಷಿಣ ಆಫ್ರಿಕಾದ ಕೇಶವ್ ಮಹಾರಾಜ್ 680 ರೇಟಿಂಗ್ ಅಂಕಗಳೊಂದಿಗೆ ಅಗ್ರಸ್ಥಾನ ಕಾಯ್ದುಕೊಂಡಿದ್ದಾರೆ. ಶ್ರೀಲಂಕಾದ ಮಹೇಶ್ ತೀಕ್ಷಣ 659 ರೇಟಿಂಗ್‌ಗಳೊಂದಿಗೆ ಎರಡನೇ ಸ್ಥಾನದಲ್ಲಿದ್ದಾರೆ. ಆರ್ಚರ್ 654 ರೇಟಿಂಗ್ ಅಂಕಗಳನ್ನು ಹೊಂದಿದ್ದು, ಎರಡನೇ ಸ್ಥಾನಕ್ಕೆ ಜಿಗಿಯುವ ಹತ್ತಿರದಲ್ಲಿದ್ದಾರೆ.

ಏಷ್ಯಾ ಕಪ್‌ನಲ್ಲಿ ಕುಲ್ದೀಪ್, ಶಿವಂ ದುಬೆ ಬೌಲಿಂಗ್ ಮೋಡಿ | ಸೂರ್ಯ ಪಡೆ ಶುಭಾರಂಭ

ಭಾರತಕ್ಕೆ ಸುಲಭ ತುತ್ತಾದ ಯುಎಇ

ದುಬೈ: ಕುಲ್ದೀಪ್ ಯಾದವ್ (7 ರನ್‌ಗೆ 4 ವಿಕೆಟ್) ಅವರ ಸ್ಪಿನ್ ಮೋಡಿಯ ಬಲದಿಂದ ಭಾರತ ತಂಡವು ಏಷ್ಯಾ ಕಪ್ ಟೂರ್ನಿಯ ಎ-ಗುಂಪಿನ ಮೊದಲನೇ ಪಂದ್ಯದಲ್ಲಿ ಯುಎಇ ವಿರುದ್ಧ 9 ವಿಕೆಟ್‌ಗಳ ಭರ್ಜರಿ ಗೆಲುವನ್ನು ಪಡೆದಿದೆ. ಈ ಮೂಲಕ ಮಹತ್ವದ ಟೂರ್ನಿಯಲ್ಲಿ ಸೂರ್ಯಕುಮಾರ್ ಯಾದವ್ ನಾಯಕತ್ವದ ಟೀಮ್ ಇಂಡಿಯಾ ಶುಭಾರಂಭ ಕಂಡಿದೆ.

ಪಂದ್ಯದಲ್ಲಿ ಸ್ಪಿನ್ ಮೋಡಿ ಮಾಡಿ 4 ವಿಕೆಟ್ ಕಿತ್ತ ಕುಲ್ದೀಪ್ ಯಾದವ್, ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು. ಈ ಪಂದ್ಯದ ಗೆಲುವಿನ ಭಾರತ ತಂಡವು ತನ್ನ ಸಾಂಪ್ರದಾಯಿಕ ಎದುರಾಳಿ ಪಾಕಿಸ್ತಾನ ವಿರುದ್ಧದ ಹಣಾಹಣಿಗೂ ಮುನ್ನ ತನ್ನ ಆತ್ಮವಿಶ್ವಾಸವನ್ನು ಹೆಚ್ಚಿಸಿಕೊಂಡಿದೆ.

ಬುಧವಾರ ಇಲ್ಲಿನ ದುಬೈ ಇಂಟರ್‌ನ್ಯಾಷನಲ್ ಕ್ರೀಡಾಂಗಣದಲ್ಲಿ ಯುಎಇ ನೀಡಿದ್ದ 58 ರನ್‌ಗಳ ಗುರಿಯನ್ನು ಹಿಂಬಾಲಿಸಿದ ಭಾರತ ತಂಡವು ಬಹುಬೇಗ ಗೆಲುವಿನ ದಡ ಸೇರಿತು. ಅಭಿಷೇಕ್ ಶರ್ಮಾ (30) ಹಾಗೂ ಶುಭಮನ್ ಗಿಲ್ (20 ಅಜೇಯ) ಅವರ ಸ್ಫೋಟಕ ಬ್ಯಾಟಿಂಗ್ ನೆರವಿನಿಂದ ಕೇವಲ 4.3 ಓವರ್‌ಗಳಿಗೆ ಒಂದು ವಿಕೆಟ್ ನಷ್ಟಕ್ಕೆ 60 ರನ್ ಗಳಿಸಿ ಗೆದ್ದು ಬೀಗಿತು.

ಅಭಿಷೇಕ್ ಶರ್ಮಾ ಕೇವಲ 16 ಎಸೆತಗಳಲ್ಲಿ 3 ಸಿಕ್ಸರ್ ಹಾಗೂ ಎರಡು ಬೌಂಡರಿಗಳೊಂದಿಗೆ 30 ರನ್ ಗಳಿಸಿ ವಿಕೆಟ್ ಒಪ್ಪಿಸಿದರು.

ಉಪ ನಾಯಕ ಶುಭಮನ್ ಗಿಲ್ 9 ಎಸೆತಗಳಲ್ಲಿ ಅಜೇಯ 20 ರನ್‌ಗಳನ್ನು ಸಿಡಿಸಿದರು. ಮೂರನೇ ಕ್ರಮಾಂಕದಲ್ಲಿ ಕ್ರೀಸ್‌ಗೆ ಬಂದ ನಾಯಕ ಸೂರ್ಯಕುಮಾರ್ ಯಾದವ್ ಕೇವಲ 2 ಎಸೆತಗಳಲ್ಲಿ ಒಂದು ಸಿಕ್ಸರ್ ಸೇರಿದಂತೆ 7 ರನ್ ಗಳಿಸಿದರು. ಯುಎಇ ಪರ ಜುನೈದ್ ಸಿದ್ದಿಕಿ ಒಂದು ವಿಕೆಟ್ ಪಡೆದರು.

57 ರನ್‌ಗಳಿಗೆ ಯುಎಇ ಆಲ್‌ಔಟ್: ಟಾಸ್ ಸೋತು ಮೊದಲು ಬ್ಯಾಟ್ ಮಾಡಿದ ಯುಎಇ ತಂಡ, ಬ್ಯಾಟಿಂಗ್ ವೈಫಲ್ಯ ಅನುಭವಿಸಿತು. ಕುಲ್ದೀಪ್ ಯಾದವ್ ಅವರ ಸ್ಪಿನ್ ಮೋಡಿಯನ್ನು ಎದುರಿಸುವಲ್ಲಿ ಯುಎಇ ವಿಫಲವಾಯಿತು. ಆ ಮೂಲಕ ಯುಎಇ 13.1 ಓವರ್‌ಗಳಿಗೆ 57 ರನ್ ಗಳಿಗೆ ಆಲೌಟ್ ಆಯಿತು.

ಯುಎಇ ಪರ ಆರಂಭಿಕ ಬ್ಯಾಟ್ಸ್‌ಮನ್ ಗಳಾದ ಅಲಿಶನ್ ಶರಫು (22 ರನ್) ಹಾಗೂ ಮುಹಮ್ಮದ್ ವಸೀಮ್ (19) ಅವರನ್ನು ಹೊರತುಪಡಿಸಿ ಇನ್ನುಳಿದ ಬ್ಯಾಟ್ಸ್‌ಮನ್‌ಗಳು ಎರಡಂಕಿ ವೈಯಕ್ತಿಕ ಮೊತ್ತವನ್ನು ಕಲೆ ಹಾಕುವಲ್ಲಿ ವಿಫಲರಾದರು.

ಭಾರತದ ಪರ ಶಿವಂ ದುಬೆ ಎರಡು ಓವರ್ ಬೌಲ್ ಮಾಡಿ ಕೇವಲ 4 ರನ್ ನೀಡಿ ಮೂರು ವಿಕೆಟ್ ಪಡೆದರು. ಜಸ್‌ಪ್ರೀತ್ ಬುಮ್ರಾ, ಅಕ್ಷರ್ ಪಟೇಲ್ ಹಾಗೂ ವರುಣ್ ಚಕ್ರವರ್ತಿ ತಲಾ ಒಂದೊಂದು ವಿಕೆಟ್ ಪಡೆದರು.

ಅತ್ಯಂತ ಹೆಚ್ಚು ಬಾಲ್‌ಗಳೊಂದಿಗಿನ ಗೆಲುವುಗಳು

- **ಇಂಗ್ಲೆಂಡ್-ಒಮಾನ್:** 101 ಬಾಲ್‌ಗಳೊಂದಿಗೆ ಗೆಲುವು (ಆಂಟಿಗ್ವಾ, 2024)
- **ಭಾರತ-ಯುಎಇ:** 93 ಬಾಲ್‌ಗಳೊಂದಿಗೆ ಗೆಲುವು (ದುಬೈ, 2025)
- **ಶ್ರೀಲಂಕಾ-ನೆದರ್‌ಲ್ಯಾಂಡ್ಸ್:** 90 ಬಾಲ್‌ಗಳೊಂದಿಗೆ ಗೆಲುವು (ಚಟ್ಟೋಗ್ರಾಮ್, 2014)
- **ಜಿಂಬಾಬ್ವೆ-ಮೊಜಾಂಬಿಕ್:** 90 ಬಾಲ್‌ಗಳೊಂದಿಗೆ ಗೆಲುವು (ನೈರೋಬಿ, 2024)
- **ಭಾರತದ ಹಿಂದಿನ ದಾಖಲೆ:** 81 ಬಾಲ್‌ಗಳೊಂದಿಗೆ ಗೆಲುವು: ಸ್ಕಾಟ್‌ಲ್ಯಾಂಡ್ ವಿರುದ್ಧ (ದುಬೈ, 2021)

ಸೆ.28ರಂದು ಬಿಸಿಸಿಐ ಸರ್ವ ಸದಸ್ಯರ ವಾರ್ಷಿಕ ಸಭೆ

ತೆಂಡೂಲ್ಕರ್ ಮುಂದಿನ ಬಿಸಿಸಿಐ ಅಧ್ಯಕ್ಷ?

ದೆಹಲಿ: ಇದೇ ತಿಂಗಳಾಂತ್ಯದಲ್ಲಿ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ ವಾರ್ಷಿಕ ಸರ್ವಸದಸ್ಯರ ಸಭೆ ನಡೆಯಲಿದೆ. ಮಂಡಳಿಯ ಅಧ್ಯಕ್ಷ ಮತ್ತು ಐಪಿಎಲ್ ಆಡಳಿತ ಸಮಿತಿಯ ಮುಖ್ಯಸ್ಥರು ಸೇರಿದಂತೆ ಪ್ರಮುಖ ಹುದ್ದೆಗಳಿಗೆ ಪದಾಧಿಕಾರಿಗಳ ಆಯ್ಕೆ ಈ ಸಭೆಯಲ್ಲಿ ನಡೆಯಲಿದೆ. ಸಭೆಗೂ ಮುನ್ನವೇ ಅತ್ಯಂತ ಕುತೂಹಲಕಾರಿ ಬೆಳವಣಿಗೆಯೊಂದು ನಡೆದಿದ್ದು, ಬಿಸಿಸಿಐ ಅಧ್ಯಕ್ಷ ಹುದ್ದೆಗೆ ಕ್ರಿಕೆಟ್ ದಿಗ್ಗಜ ಸಚಿನ್ ತೆಂಡುಲ್ಕರ್ ಹೆಸರು ಕೇಳಿಬರುತ್ತಿದ್ದು, ಸಭೆಯು ಅಪಾರ ಕುತೂಹಲ ಕೆರಳಿಸಿದೆ. ಬಿಸಿಸಿಐ ವಾರ್ಷಿಕ ಮಹಾಸಭೆ ಸೆ.28ರಂದು ಮುಂಬೈನಲ್ಲಿ ನಿಗದಿಯಾಗಿದ್ದು, ಅದೇ ದಿನ ಹೊಸ ಅಧ್ಯಕ್ಷರ ಆಯ್ಕೆಯೂ ನಡೆಯಲಿದೆ.

ಆವರ್ತನ ಪದ್ಧತಿಯನ್ವಯ ಈ ಬಾರಿ ಅಧ್ಯಕ್ಷ ಹುದ್ದೆಯನ್ನು ಪಶ್ಚಿಮ ವಲಯದ ಅಭ್ಯರ್ಥಿಗೆ ನೀಡಲು ಬಿಸಿಸಿಐ ವಲಯದಲ್ಲಿ ಒಲವು ಮೂಡಿದೆ. ಹೀಗಾಗಿ ಬಿಸಿಸಿಐ ಯೋಜನೆಯನ್ವಯ, ಸಚಿನ್ ತೆಂಡುಲ್ಕರ್‌ಗೆ ಅವಿರೋಧ ಆಯ್ಕೆ ಅವಕಾಶ ನೀಡುವ ಸಾಧ್ಯತೆ ಇದೆ. ಆದರೆ ಸಚಿನ್ ಇದಕ್ಕೆ ಒಪ್ಪುವರೇ ಎಂಬುದು ಸದ್ಯದ ಬಹುದೊಡ್ಡ ಕುತೂಹಲವಾಗಿದೆ. ಒಂದು ವೇಳೆ ಸಚಿನ್ ಒಪ್ಪಿದರೆ, ಯಾವುದೇ ಚುನಾವಣೆ ಇಲ್ಲದೆ ಅವರ ಆಯ್ಕೆ ಔಪಚಾರಿಕತೆ ಪೂರ್ಣಗೊಳ್ಳಲಿದೆ. ಅಧ್ಯಕ್ಷರಾಗಿದ್ದ ರೋಜರ್ ಬಿನ್ನಿ ಅವರು ಜುಲೈನಲ್ಲಿ ತಮ್ಮ 70ನೇ ಜನ್ಮದಿನ ಆಚರಿಸಿಕೊಂಡಿದ್ದರು. ಸದ್ಯದ ನಿಯಮಾವಳಿಯ ಪ್ರಕಾರ 70 ವರ್ಷ ಮೇಲ್ಪಟ್ಟವರು ಪದಾಧಿಕಾರಿಯಾಗಿ ಮುಂದುವರಿಯುವಂತಿಲ್ಲ, ಅದರಿಂದಾಗಿ ತೆರವಾಗಿರುವ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧೆ ನಡೆಯಲಿದೆ. ಸದ್ಯ ಹಂಗಾಮಿ ಅಧ್ಯಕ್ಷರಾಗಿ ರಾಜೀವ್ ಶುಕ್ಲಾ ಕಾರ್ಯ ನಿರ್ವಹಿಸುತ್ತಿದ್ದಾರೆ.

ಐಪಿಎಲ್‌ಗೂ ಹೊಸ ಮುಖ್ಯಸ್ಥರ ಆಯ್ಕೆ

ಪ್ರಸ್ತುತ ಐಪಿಎಲ್ ಮುಖ್ಯಸ್ಥರಾಗಿರುವ ಅರುಣ್ ಧುಮಾಲ್ ಅವರು ಪದಾಧಿಕಾರಿಯಾಗಿ ಒಟ್ಟು ಆರು ವರ್ಷಗಳನ್ನು ಪೂರೈಸಿದ್ದಾರೆ. ಆದ್ದರಿಂದ ಅವರು ಯಾವುದೇ ಹುದ್ದೆಯಲ್ಲಿ ಮುಂದುವರಿಯುವಂತಿಲ್ಲ, ಅದರಿಂದಾಗಿ ಅವರ ಉತ್ತರಾಧಿಕಾರಿಯನ್ನು ನೇಮಕ ಮಾಡುವ ಪ್ರಕ್ರಿಯೆ ನಡೆಯಲಿದೆ. ಈ ಸ್ಥಾನಕ್ಕಾಗಿ ಮುಂಬೈ ಕ್ರಿಕೆಟ್ ಸಂಸ್ಥೆಯ ಕಾರ್ಯದರ್ಶಿ ಸಂಜಯ್ ನಾಯಕ ಮತ್ತು ಬಿಸಿಸಿಐ ಉಪಾಧ್ಯಕ್ಷ ರಾಜೀವ್ ಶುಕ್ಲಾ ಅವರ ಹೆಸರು ಕೇಳಿಬರುತ್ತಿವೆ. ಕಾಂಗ್ರೆಸ್ ಪಕ್ಷದವರಾಗಿರುವ ಶುಕ್ಲಾ, ಐಪಿಎಲ್ ಮುಖ್ಯಸ್ಥರಾಗಿ ನೇಮಕವಾದರೆ, ಬಿಸಿಸಿಐ ಉಪಾಧ್ಯಕ್ಷ ಸ್ಥಾನಕ್ಕೆ ಬಿಹಾರ ಕ್ರಿಕೆಟ್ ಸಂಸ್ಥೆ ಅಧ್ಯಕ್ಷ ಹಾಗೂ ಬಿಜೆಪಿ ಧುರೀಣ ರಾಕೇಶ್ ತಿವಾರಿ ಅವರು ಆ ಸ್ಥಾನಕ್ಕೆ ಸ್ಪರ್ಧಿಸುವ ಸಾಧ್ಯತೆ ಇದೆ.

ಸೆ.30ರಿಂದ ಆರಂಭವಾಗಲಿರುವ ಪ್ರತಿಷ್ಠೆಯ ಟೂರ್ನಿ

ಮಹಿಳಾ ವಿಶ್ವಕಪ್‌ಗೆ 15 ಸದಸ್ಯರ ಲಂಕಾ ತಂಡ ಪ್ರಕಟ

ದೆಹಲಿ: ಮುಂಬರುವ ಮಹಿಳಾ ಏಕದಿನ ವಿಶ್ವಕಪ್ ಟೂರ್ನಿಗೆ 15 ಸದಸ್ಯರ ಲಂಕಾ ಮಹಿಳಾ ತಂಡವನ್ನು ಪ್ರಕಟಿಸಲಾಗಿದೆ. ಈ ಮಹತ್ವದ ಟೂರ್ನಿಯಲ್ಲಿ ಲಂಕಾ ತಂಡವನ್ನು ಚಮರಿ ಅಟಪಟ್ಟು ಮುನ್ನಡೆಸಲಿದ್ದು, ಇವರು ಶ್ರೀಲಂಕಾ ತಂಡದಲ್ಲಿ ಅತ್ಯಂತ ಅನುಭವಿ ಆಟಗಾರ್ತಿಯಾಗಿದ್ದಾರೆ. ಇವರು ಆಡಿದ ಒಟ್ಟು 155 ಏಕದಿನ ಪಂದ್ಯಗಳಿಂದ 3877 ರನ್‌ಗಳು ಹಾಗೂ 45 ವಿಕೆಟ್‌ಗಳನ್ನು ಕಬಳಿಸಿದ್ದಾರೆ. ಮಹಿಳಾ ಏಕದಿನ ವಿಶ್ವಕಪ್ ಟೂರ್ನಿಯು ಸೆಪ್ಟೆಂಬರ್ 30ರಂದು ಆರಂಭವಾಗಿ, ನವೆಂಬರ್ 2ರಂದು ಫೈನಲ್ ಮೂಲಕ ಅಂತ್ಯವಾಗಲಿದೆ.

ಲಂಕಾ ತಂಡವು ಅನುಭವಿ ಆಟಗಾರರು ಮತ್ತು ಉದಯೋನ್ಮುಖ ಪ್ರತಿಭೆಗಳ ಒಳಗೊಂಡಿದೆ. ಅಟಪಟ್ಟು ಅವರ ನಾಯಕತ್ವ ಮತ್ತು ಅನುಭವವು ತಂಡದ ಬೆನ್ನೆಲುಬಾಗಿ ಉಳಿದಿದೆ, ಆದರೆ ಇತ್ತೀಚಿನ ಫಾರ್ಮ್‌ಗೆ ಮರಳಿದ ಹಲವು ಯುವ ಆಟಗಾರ್ತಿಯರನ್ನು ಆಯ್ಕೆ ಮಾಡಲಾಗಿದೆ.ಹರ್ಷಿತಾ ಸಮರವಿಕ್ರಮ ಹಾಗೂ ವಿಷ್ಮಿ ಗುಣರತ್ನೆ ಅವರು ಕೂಡ ಲಂಕಾ ತಂಡಕ್ಕೆ ಆಯ್ಕೆಯಾಗುವ ಮೂಲಕ ಎಲ್ಲರ ಗಮನವನ್ನು ಸೆಳೆದಿದ್ದಾರೆ. 27ರ ಪ್ರಾಯದ ಹರ್ಷಿತಾ ಅವರು 41 ಏಕದಿನ ಪಂದ್ಯಗಳಿಂದ

ಒಂದು ಶತಕ ಹಾಗೂ ಹಲವು ಅರ್ಧಶತಕಗಳ ಮೂಲಕ 1,075 ರನ್‌ಗಳನ್ನು ಕಲೆ ಹಾಕಿದ್ದಾರೆ. ಭಾರತದ ವಿರುದ್ಧ ಮಹಿಳಾ ಏಷ್ಯಾ ಕಪ್ ಟೂರ್ನಿಯ ಫೈನಲ್‌ನಲ್ಲಿ ಉತ್ತಮ ಪ್ರದರ್ಶನವನ್ನು ತೋರುವ ಮೂಲಕ ಅವರು 2024ರ ಆಗಸ್ಟ್ ತಿಂಗಳ ಆಟಗಾರ್ತಿ ಎಂಬ ಸಾಧನೆಗೆ ಅವರು ಭಾಜನರಾಗಿದ್ದರು.

ಲಂಕಾ ತಂಡ: ಚಮರಿ ಅಟಪಟ್ಟು (ನಾಯಕಿ), ಹಸೀನಿ ಪೆರೆರಾ, ವಿಷ್ಮಿ ಗುಣರತ್ನೆ, ಹರ್ಷಿತಾ ಸಮರವಿಕ್ರಮ, ಕವೀಶಾ ದಿಲ್ಹಾರಿ, ನೀಲಾಂಕ್ಷಿ ಡಿ ಸಿಲ್ವಾ, ಅನುಷ್ಕಾ ಸಂಜೀವಾಣಿ, ಇಮೇಶಾ ದುಲ್ವಾನಿ, ದೇವಾಮಿ ವಿಹಾಂಗ, ಪಿಯೂಮಾ ವಾತ್ಸಾಲ, ಇನೋಕಾ ರಣವೀರ, ಸುಗಂಧಿಕ ಕುಮಾರಿ, ಉದೇಶಿಕಾ ಪ್ರಬೋದನಿ, ಮಾಲ್ಕಿ, ಮದಾರಾ, ಅಚಿನ ಕುಲಸೂರಿಯಾ

ಡೆನ್ಮಾರ್ಕ್‌ನ ಶ್ರೇಯಾಂಕರಹಿತ ಆಟಗಾರ್ತಿ ಲೈನ್ ಕ್ರಿಸ್ಟೋಫರ್ಸನ್ ವಿರುದ್ಧ ಸಿಂಧುಗೆ ಸೋಲು

ಹಾಂಕಾಂಗ್ ಓಪನ್: ಪ್ರಣಯ್, ಸೇನ್ ಮುನ್ನಡೆ

ದೆಹಲಿ: ಭಾರತದ ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತೆ ಪಿ.ವಿ. ಸಿಂಧು ಅವರು ಹಾಂಗ್ ಕಾಂಗ್ ಓಪನ್ ಸೂಪರ್ 500 ಟೂರ್ನಿಯಲ್ಲಿ ಸೋತು ತಮ್ಮ ಅಭಿಯಾನ ಮುಗಿಸಿದ್ದಾರೆ. ಬುಧವಾರ ನಡೆದ ಮೊದಲ ಸುತ್ತಿನ ಪಂದ್ಯದಲ್ಲಿ ಡೆನ್ಮಾರ್ಕ್‌ನ ಶ್ರೇಯಾಂಕರಹಿತ ಲೈನ್ ಕ್ರಿಸ್ಟೋಫರ್ಸನ್ ವಿರುದ್ಧ 21–15, 16–21, 19–21 ಅಂತರದಿಂದ ಸೋಲು ಕಂಡರು.

ಕಳೆದ ತಿಂಗಳು ಬಿಡಬ್ಲ್ಯುಎಫ್ ವಿಶ್ವ ಚಾಂಪಿಯನ್‌ಶಿಪ್‌ನ ಕ್ವಾರ್ಟರ್ ಫೈನಲ್ ತಲುಪಿದ್ದ ಪಿ.ವಿ. ಸಿಂಧು ಮೇಲೆ ಈ ಟೂರ್ನಿಯಲ್ಲಿ ಭಾರೀ ನಿರೀಕ್ಷೆ ಇರಿಸಲಾಗಿತ್ತು, ಆದರೆ ಸೋತು ನಿರೀಕ್ಷೆಯನ್ನು ಹುಸಿಯಾಗಿದ್ದಾರೆ. 25 ವರ್ಷದ ಆಟಗಾರ್ತಿ ಲೈನ್ ವಿರುದ್ಧ ಸಿಂಧುಗೆ ಎದುರಾದ ಮೊದಲ ಸೋಲು ಇದಾಗಿದೆ. ಹಿಂದಿನ 5 ಮುಖಾಮುಖಿಯಲ್ಲಿ ಸಿಂಧು ಮೇಲುಗೈ ಸಾಧಿಸಿದ್ದರು. ಸಿಂಧು ಮಾತ್ರವಲ್ಲದೆ ಅನುಪಮಾ ಉಪಾಧ್ಯಾಯ ಕೂಡ ಸೋತು ನಿರ್ಗಮಿಸಿದರು.

ಪ್ರಣಯ್ ಪ್ರಿ-ಕ್ವಾರ್ಟರ್‌ಗೆ: ಪುರುಷರ ಸಿಂಗಲ್ಸ್‌ನಲ್ಲಿ ವಿಶ್ವದ 34ನೇ ಶ್ರೇಯಾಂಕಿತ, ಎಚ್.ಎಸ್. ಪ್ರಣಯ್ ಅವರು ವಿಶ್ವದ 14ನೇ ಶ್ರೇಯಾಂಕಿತ ಚೀನಾದ ಲು ಗುವಾಂಗ್ ಜು ಅವರನ್ನು 44 ನಿಮಿಷಗಳ ಹೋರಾಟದಲ್ಲಿ 21–17, 21–14 ನೇರ ಗೇಮ್‌ಗಳ ಅಂತರದಲ್ಲಿ ಸೋಲಿಸಿ ಪ್ರಿ-ಕ್ವಾರ್ಟರ್ ಫೈನಲ್ ತಲುಪಿದರು. ಮಾಜಿ ವಿಶ್ವ ಚಾಂಪಿಯನ್‌ಶಿಪ್ ಪದಕವಿಜೇತ ಲಕ್ಷ್ಯ ಸೇನ್ ಕೂಡ 22–20, 16–21, 21–15 ಅಂತರದಲ್ಲಿ ಕಠಿಣ ಗೆಲುವು ಸಾಧಿಸಿದರು. ಕಿರಣ್ ಜಾರ್ಜ್ ಸಿಂಗಾಪುರದ ಉನ್ನತ ಶ್ರೇಯಾಂಕಿತ ಜಿಯಾ ಹೆಂಗ್ ಜೇಸನ್ ತೆಹ್ ಅವರನ್ನು 21–16, 21–11 ಅಂತರದಲ್ಲಿ ಸೋಲಿಸಿದರು.

ವಸುದೇವ ಕುಟುಂಬದಲ್ಲಿ ಅವಿನಾಶ್

ಕನ್ನಡ ಚಿತ್ರರಂಗದ ಹಿರಿಯ ನಟ ಅವಿನಾಶ್ ಸಾಲು ಸಾಲು ಸಿನಿಮಾಗಳಲ್ಲಿ ಬ್ಯುಸಿಯಾಗಿದ್ದಾರೆ. ಈ ನಡುವೆಯೇ ಕಿರುತೆರೆಗೂ ಎಂಟ್ರಿಕೊಟ್ಟಿದ್ದಾರೆ. ಅದು ಬರೋಬ್ಬರಿ ಇಪ್ಪತ್ತೆಂಟು ವರ್ಷಗಳ ಬಳಿಕ ಧಾರಾವಾಹಿಯಲ್ಲಿ ನಟಿಸುತ್ತಿರುವುದು ವಿಶೇಷ. ಹೌದು, ಅನಿಲ್ ಕೋರಮಂಗಲ ನಿರ್ಮಿಸಿ, ನಿರ್ದೇಶಿಸುತ್ತಿರುವ ವಸುದೇವ ಕುಟುಂಬ ಧಾರಾವಾಹಿಯಲ್ಲಿ ಅವಿನಾಶ್ ಪ್ರಮುಖ ಪಾತ್ರದಲ್ಲಿ ಅಭಿನಯಿಸುತ್ತಿದ್ದಾರೆ. ಕುಟುಂಬದ ಯಜಮಾನ ವಸುದೇವ, ಹಾಗೂ ಮುದ್ದಿನ ನಾಲ್ಕು ಹೆಣ್ಣು ಮಕ್ಕಳ ತಂದೆಯಾಗಿ ಕಾಣಿಸಿಕೊಳ್ಳುತ್ತಿದ್ದಾರೆ. ಪತ್ನಿಯಾಗಿ ಹಿರಿಯ ನಟಿ ಅಂಜಲಿ. ಪುತ್ರಿಯರಾಗಿ ಭಾವನಾ ಪಾಟೀಲ್, ಚೈತ್ರಾ ತೋಟದ್, ಬೃಂದಾ ಕಶ್ಯಪ್, ಆರಾಧ್ಯಾ. ಇವರೊಂದಿಗೆ ಹಂಸ, ಭಗತ್, ಆರ್.ಜಿ.ಅನೂಪ ಸೇರಿದಂತೆ ಹಲವು ಕಲಾವಿದರು ತಾರಾಬಳಗದಲ್ಲಿದ್ದಾರೆ. ಒಂದೇ ಬೇರು, ಕವಲು ನೂರು ಎಂಬ ಅರ್ಥಪೂರ್ಣ ಅಡಿಬರಹವಿದ್ದು, ಇದನ್ನು ಗಮನಿಸಿದರೆ ಧಾರಾವಾಹಿಯಲ್ಲಿ ಕೌಟುಂಬಿಕ ಕಥೆ ಬೆರೆತಿದೆ ಎಂಬುದು ಮನದಟ್ಟಾಗುತ್ತದೆ.

ಹಳ್ಳಿಯಲ್ಲಿ ವಸುದೇವನ ಹಿರಿಯ ಮಗಳ ಮದುವೆಯ ಸಿದ್ಧತೆ ಸಂಭ್ರಮದಲ್ಲಿದ್ದಾಗ, ಆಕಸ್ಮಿಕವಾಗಿ ಸಂಭವಿಸುವಂತಹ ಒಂದು ದುರ್ಘಟನೆ ಎಲ್ಲರ ಜೀವನವನ್ನು ತಲೆಕೆಳಗಾಗಿಸುವಂತೆ ಮಾಡುತ್ತದೆ. ಇದರಿಂದಾಗಿ ಇಡೀ ಕುಟುಂಬ ಆರ್ಥಿಕ ಸಂಕಷ್ಟಕ್ಕೆ ಸಿಲುಕುತ್ತದೆ. ಇಂತಹ ಕಷ್ಟದ ಸಮಯದಲ್ಲಿ ಕಥಾನಾಯಕಿ ಸ್ವಾತಿ, ತನ್ನ ತಾಳ್ಮೆ ಮತ್ತು ಧೈರ್ಯದಿಂದ ತಾಯಿ, ಅಕ್ಕ ತಂಗಿಯರಿಗೆ ಹೇಗೆ ಆಧಾರವಾಗಿ ನಿಲ್ಲುತ್ತಾಳೆ. ತನ್ನ ದುಖ:ವನ್ನು ಮರೆತು ಮನೆಯ ಬದುಕನ್ನು ಕಟ್ಟಿಕೊಡಲು ಹೇಗೆ ಶ್ರಮಪಡುತ್ತಾಳೆ ಎಂಬುದೇ ಕಥೆಯ ಸಾರಾಂಶವಾಗಿದೆ. ಸೋಮವಾರದಿಂದ ಸ್ಟಾರ್ ಸುವರ್ಣ ವಾಹಿನಿಯಲ್ಲಿ ಈ ಧಾರಾವಾಹಿ ಪ್ರಸಾರವಾಗಲಿದೆ.

ಈ ಹಿಂದೆಯೂ ನನಗೆ ಹಲವು ಧಾರಾವಾಹಿಗಳಲ್ಲಿ ಅಭಿನಯಿಸುವ ಅವಕಾಶ ಬಂದಿತ್ತು, ಆದರೆ ಒಪ್ಪಲಿಲ್ಲ. ಬೆಳಗ್ಗೆಯಿಂದ ರಾತ್ರಿವರೆಗೆ ಶೂಟಿಂಗ್ ಇರುತ್ತದೆ ಎಂದು ಕೇಳಿದಾಗ ನನಗೆ ಭಯವಾಗಿತ್ತು. ಹಾಗಾಗಿಯೇ ಕಿರುತೆರೆಯಿಂದ ದೂರವಿದ್ದೆ. ಹೀಗಿರುವಾಗಲೇ ನಿರ್ದೇಶಕರು ವಸುದೇವ ಕುಟುಂಬದ ಕಥೆ ಹೇಳಿದರು. ಸ್ಟೋರಿ ಕೇಳಿ ಖುಷಿಯಾಯಿತು. ಇಲ್ಲಿ ಸಂಬಂಧಗಳ, ಸಂಸ್ಕೃತಿಯ ಕಥೆ ಇದೆ. ಜತೆಗೆ ನನ್ನ ಪಾತ್ರವೂ ಅದ್ಭುತವಾಗಿದೆ. ಹಾಗಾಗಿ ನಟಿಸಲು ಸಮ್ಮತಿಸಿದೆ. ಧಾರಾವಾಹಿ ವೇಗವಾಗಿ ಸಾಗುತ್ತಿದ್ದು, ಧಾರಾವಾಹಿ ತಂಡವೇ ನಮ್ಮ ಕುಟುಂಬದಂತಿದೆ. ಎಲ್ಲರೊಂದಿಗೆ ಬೆರೆತಿರುವುದು ಖುಷಿಕೊಟ್ಟಿದೆ.

–ಅವಿನಾಶ್ ಹಿರಿಯ ನಟ



ಚಿಕ್ಕಣ್ಣನ ಜತೆಯಾದ ಮಹೇಶ್

ಅಧ್ಯಕ್ಷ ಚಿತ್ರದ ಬಳಿಕ ಉಪಾಧ್ಯಕ್ಷನಾಗಿ ಮಿಂಚಿದ ಚಿಕ್ಕಣ್ಣಗೆ ಲಕ್ಷ್ಮಿ ಕಟಾಕ್ಷ ಒಲಿಯಿತು. ಹಾಗಾಗಿ ಎ.ಪಿ.ಅರ್ಜುನ್ ನಿರ್ಮಾಣದ ಲಕ್ಷ್ಮಿಪುತ್ರ ಸಿನಿಮಾದಲ್ಲಿ ಚಿಕ್ಕಣ್ಣ ನಾಯಕನಾಗಿ ನಟಿಸುತ್ತಿದ್ದಾರೆ. ಈ ಸಿನಿಮಾ ಬಿಡುಗಡೆಯಾಗುವ ಮೊದಲೇ ಚಿಕ್ಕಣ್ಣ ಮತ್ತೊಂದು ಚಿತ್ರದಲ್ಲಿ ನಟಿಸಲು ಸಮ್ಮತಿಸಿದ್ದಾರೆ. ವಿಶೇಷ ಎಂದರೆ ಅಯೋಗ್ಯ ಸಿನಿಮಾ ಖ್ಯಾತಿಯ ಮಹೇಶ್ ಕುಮಾರ್ ಈ ಸಿನಿಮಾವನ್ನು ನಿರ್ದೇಶನ ಮಾಡುತ್ತಿದ್ದಾರೆ. ಇದು ಅದ್ದೂರಿ ವೆಚ್ಚದ ಸಿನಿಮಾವಾಗಿದ್ದು, ಆಕಾಶ್ ಎಂಟರ್ ಪ್ರೈಸಸ್ ಬ್ಯಾನರ್‌ನಲ್ಲಿ ಸೋಮಶೇಖರ್ ಕಟ್ಟಿಗೇನಹಳ್ಳಿ ಬಂಡವಾಳ ಹೂಡುತ್ತಿದ್ದಾರೆ. ಈ ಹಿಂದೆ ವಿನೋದ್ ಪ್ರಭಾಕರ್ ಅಭಿನಯದ ಸಿನಿಮಾವನ್ನು ನಿರ್ಮಾಣ ಮಾಡಿದ್ದ ಸೋಮಶೇಖರ್ ಈ ಸಿನಿಮಾ ನಿರ್ಮಾಣದ ಜವಾಬ್ದಾರಿಯನ್ನು ಹೊತ್ತಿದ್ದಾರೆ. ಚಿಕ್ಕು ಈ ಹೊಸ ಸಿನಿಮಾದಲ್ಲಿ ಈವರೆಗೂ ಮಾಡಿರದ ಪಾತ್ರವೊಂದರಲ್ಲಿ ಬಣ್ಣ ಹಚ್ಚುತ್ತಿದ್ದು, ವಿಭಿನ್ನ ಗೆಟಪ್‌ನಲ್ಲಿ ಕಂಗೊಳಿಸಲಿದ್ದಾರೆ. ಉಳಿದಂತೆ ದೊಡ್ಡ ತಾರಾಬಳಗವೇ ಸಿನಿಮಾದಲ್ಲಿರಲಿದೆ.

ಸದ್ಯ ಸ್ಕ್ರಿಪ್ಟ್ ಕೆಲಸಗಳು ಪೂರ್ಣಗೊಂಡಿದ್ದು, ಅಕ್ಟೋಬರ್‌ನಲ್ಲಿ ಹೊಸ ಸಿನಿಮಾದ ಮುಹೂರ್ತ ನೆರವೇರಲಿದೆ. ಅದೇ ದಿನ ಶೀರ್ಷಿಕೆ ಕೂಡ ಅನಾವರಣವಾಗಲಿದೆ. ವಿ.ಹರಿಕೃಷ್ಣ ಸಂಗೀತ ನಿರ್ದೇಶನ, ಸುಧಾಕರ್ ಛಾಯಾಗ್ರಹಣ ಈ ಸಿನಿಮಾಗಿದೆ. ಮಾಸ್ತಿ, ರಘು ನಿಡುವಳ್ಳಿ ಹಾಗೂ ರಾಜಶೇಖರ್ ಸಂಭಾಷಣೆ, ಮೋಹನ್.ಬಿ.ಕೆರೆ ಕಲಾ ನಿರ್ದೇಶನ ಈ ಚಿತ್ರಕ್ಕಿದೆ. ಸದ್ಯ ಅಯೋಗ್ಯ 2 ಚಿತ್ರದಲ್ಲಿ ಬ್ಯುಸಿಯಾಗಿರುವ ಮಹೇಶ್ ಆ ಸಿನಿಮಾದ ಬಹುತೇಕ ಚಿತ್ರೀಕರಣವನ್ನು ಪೂರ್ಣಗೊಳಿಸಿದ್ದಾರೆ. ಇದು ಮಹೇಶ್ ಕುಮಾರ್ ನಿರ್ದೇಶನದ ನಾಲ್ಕನೇ ಸಿನಿಮಾವಾಗಿದೆ.

ವಿಟಾಕೀಸ್

ಪ್ರೇತಾತ್ಮಗಳ ದೈವ ದೈಜಿ

ರಮೇಶ್ ಅರವಿಂದ್ ಹುಟ್ಟುಹಬ್ಬದ ಸಂಭ್ರಮದಲ್ಲಿದ್ದಾರೆ. ತಮ್ಮ ನೆಚ್ಚಿನ ನಟನ ಹುಟ್ಟುಹಬ್ಬಕ್ಕೆ ಅಭಿಮಾನಿಗಳು ಶುಭಕೋರಿ ಸಂಭ್ರಮಿಸಿದ್ದಾರೆ. ಬರ್ತ್ ಡೆ ಪ್ರಯುಕ್ತ ರಮೇಶ್ ಅರವಿಂದ್ ಅಭಿನಯದ ದೈಜಿ ಚಿತ್ರದ ಟೀಸರ್ ರಿಲೀಸ್ ಆಗಿದೆ. ಈ ಹಿಂದೆ ರಮೇಶ್, ಶಿವಾಜಿ ಸುರತ್ಕಲ್ ಮೊದಲ ಮತ್ತು ಎರಡನೇ ಭಾಗದಲ್ಲಿ ನಟಿಸಿದ್ದರು. ವಿಭಿನ್ನ ಗೆಟಪ್‌ನಲ್ಲಿ ಕಂಗೊಳಿಸಿದ್ದರು. ಶಿವಾಜಿ ಸುರತ್ಕಲ್ ಭರ್ಜರಿ ಯಶಸ್ಸು ಪಡೆದಿತ್ತು. ಈ ಯಶಸ್ಸಿ ಖುಷಿಯಲ್ಲಿದ್ದ ರಮೇಶ್ ಅದೇ ತಂಡದ ಜತೆಗೆ ಕೈಜೋಡಿಸಿದ್ದು, ದೈಜಿ ಚಿತ್ರದಲ್ಲಿಯೂ ಬಣ್ಣಹಚ್ಚಿದ್ದಾರೆ. ಆಕಾಶ್ ಶ್ರೀವತ್ಸ ದೈಜಿ ಚಿತ್ರವನ್ನು ನಿರ್ದೇಶನ ಮಾಡುತ್ತಿದ್ದಾರೆ. ಈ ಸಿನಿಮಾದಲ್ಲಿ ರಮೇಶ್ ಅರವಿಂದ್ ಹಿಂದೆಂದೂ ಕಾಣದ ಲುಕ್‌ನಲ್ಲಿ ತೆರೆಯಲ್ಲಿ ಮಿಂಚಲು ಸಿದ್ಧವಾಗಿದ್ದಾರೆ. ದೈಜಿ ಚಿತ್ರದ ಟೀಸರ್ ಬಲು ಥ್ರಿಲ್ಲಿಂಗ್ ಆಗಿದೆ. ದೈಜಿ ಎಂದರೆ ಆತ ಪ್ರೇತಾತ್ಮಗಳಿಗೆ ದೈವ, ಈತನ ಕರೆಯೋಕೆ ಮೇಕಪ್ ಮಾಡಿಕೊಳ್ಳಬೇಕು. ಸೂರ್ಯಕಾಂತಿ ಹೂವನ್ನ ಕೈಯಲ್ಲಿ ಹಿಡಿದು ಕೊಳ್ಳಬೇಕು. ಮೂರು ಸಲ ಚಪ್ಪಾಳೆ ತಟ್ಟಬೇಕು. ಆಗಲೇ ದೈಜಿ ಬರ್ತಾನೆ. ಬಂದ ಮೇಲೆ ಒಂದು ಒಪ್ಪಂದ ಇರುತ್ತದೆ, ಹೀಗೆ ಟೀಸರ್‌ನಲ್ಲಿನ ಡೈಲಾಗ್‌ಗಳು ಗಮನಸೆಳೆಯುತ್ತವೆ. ಇದನ್ನು ಗಮನಿಸಿದರೆ ದೈಜಿಯಲ್ಲಿ ಸೈಕಲಾಜಿಕಲ್ ಥ್ರಿಲ್ಲರ್ ಜತೆಗೆ ಹಾರರ್ ಸ್ಟೋರಿಯೂ ಬೆರೆತಿದೆ ಎಂಬುದು ಸ್ಪಷ್ಟವಾಗುತ್ತದೆ. ರಮೇಶ್ ಡಬ್ಬಲ್ ಶೇಡ್‌ನಲ್ಲಿ ಮಿಂಚಿದ್ದು, ಅವರ ಜತೆಗೆ ದಿಗಂತ್, ಅವಿನಾಶ್, ರಾಧಿಕಾ ನಾರಾಯಣ್ ಟೀಸರ್‌ನಲ್ಲಿ ಕಾಣಿಸಿಕೊಂಡಿದ್ದಾರೆ.

ರಮೇಶ್ ವಿಭಿನ್ನ ಕಥೆಗಳ ಸಿನಿಮಾಗಳನ್ನು ಆಯ್ದುಕೊಳ್ಳುತ್ತಿದ್ದಾರೆ. ಭಿನ್ನ ಪಾತ್ರಗಳಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಅಂತಹ ಸಿನಿಮಾಗಳಲ್ಲಿ ಯುವರ್ ಸಿನ್ಸಿಯರ್ಲಿ ರಾಮ್ ಸಿನಿಮಾವೂ ಒಂದು. ರಮೇಶ್ ಬರ್ತ್‌ಡೇ ಪ್ರಯುಕ್ತ ಈ ಚಿತ್ರದ ಹೊಸ ಪೋಸ್ಟರ್ ರಿಲೀಸ್ ಆಗಿದೆ. ಪೋಸ್ಟ್ ಡಬ್ಬಿಯಲ್ಲಿ ಕುಳಿತಿರುವ ರಮೇಶ್ ಸೂಪರ್ ಮ್ಯಾನ್ ಅವತಾರ ತಾಳಿದ್ದು, ಕೈಯಲ್ಲಿ ಪತ್ರವೊಂದನ್ನು ಹಿಡಿದಿದ್ದಾರೆ. ಇದನ್ನು ನೋಡಿದರೆ ಈ ಹಿಂದೆ ಬಂದ ಪುಷ್ಪಕ ವಿಮಾನ ಸಿನಿಮಾ ನೆನಪಾಗುತ್ತದೆ. ಪುಷ್ಪಕ ವಿಮಾನದಂತೆಯೇ ಇಲ್ಲಿಯೂ ರಮೇಶ್ ಅವರು ಮುಗ್ಧನ ಪಾತ್ರದಲ್ಲಿ ಬಣ್ಣಹಚ್ಚಿರುವುದು ತಿಳಿಯುತ್ತದೆ. ಪುಷ್ಪಕ ವಿಮಾನ ಸಿನಿಮಾವನ್ನು ನಿರ್ಮಿಸಿದ್ದ ವಿಖ್ಯಾತ್ ಯುವರ್ ಸಿನ್ಸಿಯರ್ಲಿ ರಾಮ್ ಚಿತ್ರವನ್ನು ನಿರ್ದೇಶನ ಮಾಡುತ್ತಿದ್ದಾರೆ. ಈ ಚಿತ್ರದಲ್ಲಿ ರಮೇಶ್ ಜತೆಗೆ ಗಣೇಶ್ ಕೂಡ ಅಭಿನಯಿಸಿದ್ದಾರೆ.

ಸೂಪರ್ ಮ್ಯಾನ್ ಅವತಾರ

ಸುಳಿಯಲ್ಲಿ ಸಾಮಾಜಿಕ ಸಂಕಥನ

ಎಪ್ಪತ್ತರ ದಶಕದಲ್ಲಿ ಪ್ರಕಟವಾದ ಚಿನ್ನಪ್ಪ ಭಾರತಿ ಅವರ ತಮಿಳು ಕಾದಂಬರಿ ಪವಳಾಯಿ ಕನ್ನಡ ಭಾಷೆಗೂ ಅನುವಾದವಾಗಿ ಬಿಡುಗಡೆಯಾಗಿತ್ತು. ಇದೀಗ ಈ ಪವಳಾಯಿ ಕಾದಂಬರಿ ಆಧರಿಸಿ ಸುಳಿ ಶೀರ್ಷಿಕೆಯಲ್ಲಿ ಸಿನಿಮಾ ಮೂಡಿಬರುತ್ತಿದೆ. ಈಗಾಗಲೇ ಚಿತ್ರೀಕರಣವೂ ಮುಕ್ತಾಯವಾಗಿದ್ದು ತೆರೆಗೆ ಸಿದ್ಧವಾಗಿದೆ. ಎಸ್.ರಶ್ಮಿ, ಸುಳಿ ಚಿತ್ರವನ್ನು ನಿರ್ದೇಶನ ಮಾಡಿದ್ದು, ಸಹಸ್ರಕೋಟಿ ಮೂವಿ ಎಂಟರ್‌ಟೇನ್‌ಮೆಂಟ್ ಬ್ಯಾನರಿನಲ್ಲಿ ಬೆಟ್ಟಸ್ವಾಮಿ ಗೌಡ ಚಿತ್ರ ನಿರ್ಮಾಣಕ್ಕೆ ಬಂಡವಾಳ ಹೂಡಿದ್ದಾರೆ. ಸನತ್, ಚೈತ್ರಾ ಸಾಕೇಲ್, ಸಂಜನಾ ನಾಯ್ಡು, ಶಿವಕುಮಾರ್ ಆರಾಧ್ಯ, ಸೌಭಾಗ್ಯಾ ಸಿದ್ದು ಮಂಡ್ಯ, ಶಂಕರ ನಾರಾಯಣ, ಬೆಟ್ಟಸ್ವಾಮಿ ಗೌಡ, ಕಾವ್ಯಾ, ಹರಿಹರನ್ ಮತ್ತಿತರರು ಪ್ರಮುಖ ಪಾತ್ರಗಳಲ್ಲಿ ಅಭಿನಯಿಸಿದ್ದಾರೆ.

ಈಗ ಸುಳಿ ಚಿತ್ರದ ಟ್ರೇಲರ್ ಮತ್ತು ಹಾಡುಗಳು ಬಿಡುಗಡೆಯಾಗಿವೆ. ಹಿರಿಯ ಲೇಖಕಿ, ಬಿ.ಟಿ.ಲಲಿತಾ ನಾಯಕ್, ಹಿರಿಯ ನಟಿ ಭವ್ಯಾ, ಹಿರಿಯ ನಟ ಸುಚೇಂದ್ರ ಪ್ರಸಾದ್ ಟ್ರೇಲರ್ ಮತ್ತು ಹಾಡುಗಳನ್ನು ಬಿಡುಗಡೆ ಮಾಡಿ ಚಿತ್ರತಂಡಕ್ಕೆ ಶುಭಕೋರಿದರು. ಹೆಣ್ಣಿನ ಅಂತರಂಗದ ಭಾವನೆಗಳು ಮತ್ತು ಸಾಮಾಜಿಕ ಮೌಲ್ಯಗಳ ಕುರಿತ ಕಥೆ ಸಿನಿಮಾದಲ್ಲಿದ್ದು, ಮಂಡ್ಯದ ಗ್ರಾಮೀಣ ಪರಿಸರವನ್ನು ಹಿನ್ನೆಲೆಯಾಗಿಟ್ಟುಕೊಂಡು ಕಥೆ ಸಾಗುತ್ತದೆ. ಮಂಡ್ಯದ ಆಲಭುಜನಹಳ್ಳಿ, ನಗರಕೆರೆ, ಮಾಲಗಾರನಹಳ್ಳಿ, ಕೆ. ಎಂ.ದೊಡ್ಡಿ ಸುತ್ತಮುತ್ತ ಚಿತ್ರೀಕರಣ ನಡೆಸಲಾಗಿದೆ. ಸುಳಿ ಚಿತ್ರದ ಹಾಡುಗಳಿಗೆ ಎನ್. ರಾಜು ಸಂಗೀತ ಸಂಯೋಜಿಸಿದ್ದಾರೆ. ಅಕ್ಟೋಬರ್‌ನಲ್ಲಿ ಸುಳಿ ತೆರೆಗೆ ಬರುವ ಸಾಧ್ಯತೆ ಇದೆ.

ಈ ಸಿನಿಮಾದಲ್ಲಿ ನಾನು ಮಂಡ್ಯ ಹಿನ್ನೆಲೆಯ ಹಳ್ಳಿ ಹುಡುಗನಾಗಿ ಕಾಣಿಸಿಕೊಂಡಿದ್ದೇನೆ. ಹಳ್ಳಿಯ ಬಡ ಹುಡುಗನ ಜೀವನದಲ್ಲಿ ಯಾವೆಲ್ಲಾ ಸಮಸ್ಯೆಗಳು ಎದಿರಾಗುತ್ತವೆ, ಅದರಿಂದ ಆತನ ಬದುಕು ಹೇಗೆ ಹೊಸ ತಿರುವು ಪಡೆದುಕೊಳ್ಳುತ್ತದೆ ಎಂಬುದನ್ನು ನನ್ನ ಪಾತ್ರದ ಮೂಲಕ ಹೇಳಲಾಗಿದೆ ಎಂದು ನಟ ಸನತ್ ತಿಳಿಸಿದರು.

ನಾನು ಮೊದಲ ಬಾರಿಗೆ ಗ್ರಾಮೀಣ ಸೊಗಡಿನ ಮಹಿಳೆಯ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ. ಮಂಡ್ಯದ ಜೀವನ ಶೈಲಿ, ಭಾಷೆಯ ಬಳಕೆ ನನ್ನ ಪಾತ್ರದಲ್ಲಿದ್ದು, ನನಗೆ ಇದೊಂದು ಹೊಸ ಅನುಭವ. ಈ ಸಿನಿಮಾದಲ್ಲಿ ಸಾಕಷ್ಟು ಕಲಿತಿದ್ದೇನೆ. ನನ್ನ ಪಾತ್ರ ಪ್ರೇಕ್ಷಕರಿಗೆ ಇಷ್ಟವಾಗುತ್ತದೆ ಎಂದು ನಟಿ ಚೈತ್ರಾ ಸಂತಸದಿಂದ ನುಡಿದರು.

ಇದೊಂದು ಸಾಮಾಜಿಕ ಕಥಾಹಂದರದ ಸಿನಿಮಾಗಿದ್ದು, ಎಂಬತ್ತರ ಕಾಲಘಟ್ಟದ ಕಥೆ ಸಾಗುತ್ತದೆ. ಸಾಕ್ಷಾತ್ಕಾರ ಸಿನಿಮಾದ ಘೋಷಣೆಯೊಂದಿಗೆ ಸಿನಿಮಾ ಶುರುವಾಗುತ್ತದೆ. ಸಾಕ್ಷಾತ್ಕಾರ ಸಿನಿಮಾದಲ್ಲಿನ ಅಣ್ಣಾವ್ರ ಪಾತ್ರದ ಮಾನವೀಯ ಮೌಲ್ಯ ಮತ್ತು ಪ್ರೀತಿಯ ಆಳದ ಬಗ್ಗೆ ಹೇಳುತ್ತಾ ಸುಳಿ ಚಿತ್ರವೂ ತನ್ನ ಕಥೆಯೊಳಗೆ ನೋಡುಗರನ್ನು ಸೆಳೆದುಕೊಳ್ಳುತ್ತದೆ. ಹೆಣ್ಣಿನ ಅಂತರಂಗದ ಭಾವನೆಗಳು, ಸಾಮಾಜಿಕ ಮೌಲ್ಯಗಳು ಎಲ್ಲವನ್ನೂ ತೆರೆಯ ಮೇಲೆ ತರುವ ಪ್ರಯತ್ನ ಮಾಡಿದ್ದೇವೆ.

–ಎಸ್.ರಶ್ಮಿ ನಿರ್ದೇಶಕಿ

ನಾನು ಸಾಮಾಜಿಕ ಹೋರಾಟಗಾರ, ಈ ಸಿನಿಮಾದಲ್ಲಿಯೂ ಸಾಮಾಜಿಕ ಕಳಕಳಿ ಇರುವುದರಿಂದ ಚಿತ್ರ ನಿರ್ಮಾಣಕ್ಕೆ ಸಮ್ಮತಿಸಿದೆ. ಅಂದುಕೊಂಡಂತೆ ಸಿನಿಮಾ ಅದ್ಭುತವಾಗಿ ಮೂಡಿಬಂದಿದೆ. ಗ್ರಾಮೀಣ ಸೊಗಡಿನ ಜತೆಗೆ ಮನರಂಜನೆ, ಒಳ್ಳೆ ಸಂದೇಶ ಹೀಗೆ ಎಲ್ಲವೂ ಸುಳಿ ಸಿನಿಮಾದಲ್ಲಿದೆ.

–ಬೆಟ್ಟಸ್ವಾಮಿ ಗೌಡ ನಿರ್ಮಾಪಕ